ಮಂಗಳವಾರ, ಜುಲೈ 22, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 202 | ಪುಟ 14
prajavani.net prajavani • www.prajavani.net



ಸೆಮಿಗೆ ದಿವ್ಯಾ
ಭಾರತದ ದಿವ್ಯಾ ದೇಶಮುಖ್ ಅವರು ಫಿಡೆ ಮಹಿಳಾ ಚೆಸ್ ವಿಶ್ವಕಪ್‌ನಲ್ಲಿ ಸ್ವದೇಶದ ಡಿ.ಹಾರಿಕಾ ಅವರನ್ನು ಮಣಿಸಿ ಸೆಮಿಫೈನಲ್‌ಗೆ ಲಗ್ಗೆ ಹಾಕಿದರು

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಪಕ್ಷಿ ಸಂರಕ್ಷಣಾ ಕೇಂದ್ರ
ಅಣ್ಣಾಮಲೈ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಮಂಗಟ್ಟೆ (ಹಾರ್ನ್‌ಬಿಲ್) ಸಂರಕ್ಷಣಾ ಕೇಂದ್ರ ಸ್ಥಾಪಿಸಲು ತಮಿಳುನಾಡು ಸರ್ಕಾರ ನಿರ್ಧರಿಸಿದೆ

ಸೆನ್ಸೆಕ್ಸ್ 82,200 | ನಿಫ್ಟಿ 25,090 | $/₹ 86.31 | ಚಿನ್ನ (Std. 10g) ₹1.03 ಲಕ್ಷ (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1.19 ಲಕ್ಷ (ಬೆಂಗಳೂರು)

ಇ.ಡಿ.ಗೆ 'ಸುಪ್ರೀಂ' ತಪರಾಕಿ

ಮುಡಾ ಪ್ರಕರಣ: ಸಿದ್ದರಾಮಯ್ಯ ಪತ್ನಿ ಪಾರ್ವತಿ, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ನಿರಾಳ



ಪ್ರಜಾವಾಣಿ ವಾರ್ತೆ

ನವದೆಹಲಿ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಅಕ್ರಮ ಹಂಚಿಕೆ ಆರೋಪದ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಮತ್ತು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರಿಗೆ ನೀಡಲಾದ ಸಮನ್ಸ್ ರದ್ದುಗೊಳಿಸಿದ ಕರ್ನಾಟಕ ಹೈಕೋರ್ಟ್ ತೀರ್ಪಿನ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ.

ರಾಜಕೀಯ ಸೂಕ್ಷ್ಮ ಪ್ರಕರಣಗಳಲ್ಲಿ, ಕೇಂದ್ರ ತನಿಖಾ ಸಂಸ್ಥೆಯಾದ ಇ.ಡಿಯ ಕಾರ್ಯ ವೈಖರಿ ಬಗ್ಗೆ ತೀವ್ರ ಅಸಮಾಧಾನವನ್ನೂ ಸುಪ್ರೀಂಕೋರ್ಟ್ ವ್ಯಕ್ತಪಡಿಸಿದೆ. ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರಿದ್ದ ಪೀಠವು, 'ನ್ಯಾಯಾಲಯದ ಹೊರಗೆ ರಾಜಕೀಯ ಹೋರಾಟಗಳನ್ನು ನಡೆಸಬೇಕು. ಅದು ಬಿಟ್ಟು ಇಂತಹ ವಿಷಯಗಳಲ್ಲಿ ಇ.ಡಿಯನ್ನು ಏಕೆ ಬಳಸಲಾಗುತ್ತಿದೆ' ಎಂದು ಕಟುವಾಗಿ ಪ್ರಶ್ನಿಸಿದೆ.

ಪೀಠದ ಆಕ್ಷೇಪಗಳಿಗೆ ಪ್ರತಿಕ್ರಿಯಿಸಿದ ಇ.ಡಿ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು, ಮೇಲ್ಮನವಿ ವಾಪಸ್ ಪಡೆಯುವುದಾಗಿ ಹೇಳಿದರು. ನಂತರ ಪೀಠವು ಅರ್ಜಿ ತಿರಸ್ಕರಿಸಿತು.

'ಹೈಕೋರ್ಟ್ ಏಕಸದಸ್ಯ ನ್ಯಾಯಪೀಠದ ಆದೇಶದಲ್ಲಿ ನಮಗೆ ಯಾವುದೇ ದೋಷ ಕಂಡು ಬಂದಿಲ್ಲ. ಕೆಲವು ಕಠಿಣ ಶಬ್ದಗಳ ಬಳಕೆಯನ್ನು ಉಳಿಸಿದ್ದಕ್ಕಾಗಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಅವರಿಗೆ ಧನ್ಯವಾದ ಹೇಳಬೇಕು' ಎಂದಿತು.

▶10

ದುರದೃಷ್ಟವಶಾತ್, ಮಹಾರಾಷ್ಟ್ರದಲ್ಲಿ ಈ ರೀತಿಯ ಪ್ರಕರಣಗಳ ಬಗ್ಗೆ ನನಗೆ ಸ್ವಲ್ಪ ಅನುಭವ ಇದೆ. ದಯವಿಟ್ಟು ನಮ್ಮನ್ನು ಏನಾದರೂ ಹೇಳಲು ಒತ್ತಾಯಿಸಬೇಡಿ. ಇಲ್ಲದಿದ್ದರೆ ನಾವು ಜಾರಿ ನಿರ್ದೇಶನಾಲಯದ ಬಗ್ಗೆ ತುಂಬಾ ಕಟುವಾದ ಟೀಕೆಗಳನ್ನು ಮಾಡಬೇಕಾಗುತ್ತದೆ. ಮತದಾರರ ನಡುವೆ ರಾಜಕೀಯ ಹೋರಾಟಗಳು ನಡೆಯಲಿ. ಅದಕ್ಕಾಗಿ ನಿಮ್ಮನ್ನು ಏಕೆ ಬಳಸಲಾಗುತ್ತಿದೆ?
ಬಿ.ಆರ್. ಗವಾಯಿ, ಮುಖ್ಯ ನ್ಯಾಯಮೂರ್ತಿ

ಸರಿ, ಮೇಲ್ಮನವಿಯಿಂದ ನಾವು ಹಿಂದೆ ಸರಿಯುತ್ತೇವೆ. ಆದರೆ, ಅದನ್ನು ಪೂರ್ವನಿದರ್ಶನವೆಂದು ಪರಿಗಣಿಸಬೇಡಿ
ಎಸ್.ವಿ. ರಾಜು, ಹೆಚ್ಚುವರಿ ಸಾಲಿಸಿಟರ್ ಜನರಲ್

'ಮೋದಿ, ಶಾ ಪಾಪ ತೊಳೆದುಕೊಳ್ಳಲಿ'



ಬೆಂಗಳೂರು: 'ಮುಡಾ ವಿಚಾರದಲ್ಲಿ ಜಾರಿ ನಿರ್ದೇಶನಾಲಯದ ಕಣ್ಣು ತೆರೆಸುವಂತೆ ಸುಪ್ರೀಂ ಕೋರ್ಟ್ ಕ್ರಮ ಕೈಗೊಂಡಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಇನ್ನಾದರೂ ಎಚ್ಚೆತ್ತುಕೊಂಡು ಸಾಂವಿಧಾನಿಕ ಸಂಸ್ಥೆಗಳಿಗೆ ಇರಬೇಕಾಗಿರುವ ಸ್ವಾಯತ್ತತೆಯನ್ನು ಕೊಟ್ಟು ತಮ್ಮ ಪಾಪ ತೊಳೆದುಕೊಳ್ಳಲಿ' ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

'ಕಳೆದ 10-11 ವರ್ಷಗಳಿಂದ ಕೇಂದ್ರ ಸರ್ಕಾರ ಮತ್ತು ಬಿಜೆಪಿಯು ಐಟಿ, ಸಿಬಿಐ ಮತ್ತು ಇ.ಡಿಯ ದುರ್ಬಳಕೆ ಮೂಲಕ ಸಾಧಿಸುತ್ತಿರುವ ರಾಜಕೀಯ ದ್ವೇಷಕ್ಕೆ ಬಲಿಯಾದ ಎಲ್ಲರಿಗೂ ಈ ತೀರ್ಪು ಸಮಾಧಾನ ಉಂಟು ಮಾಡಿದೆ ಮತ್ತು ನ್ಯಾಯ ವ್ಯವಸ್ಥೆಯ ಮೇಲೆ ಭರವಸೆ ಮೂಡಿಸಿದೆ' ಎಂದು ತಮ್ಮ 'ಎಕ್ಸ್' ಖಾತೆಯಲ್ಲಿ ಪ್ರತಿಪಾದಿಸಿದ್ದಾರೆ.

▶10

ನಮ್ಮ ಹೋರಾಟದ ಫಲವಾಗಿ ಸಿದ್ದರಾಮಯ್ಯ ಅವರು ನಿವೇಶನಗಳನ್ನು ವಾಪಸ್ ಮಾಡಿದ್ದರು. ತಪ್ಪು ನಡೆದಿದ್ದಕ್ಕಾಗಿ ಈ ರೀತಿ ಮಾಡಿದ್ದರು. ಮುಡಾ ಹಗರಣದ ವಿರುದ್ಧದ ಹೋರಾಟ ನಿಲ್ಲದು
ಆರ್.ಅಶೋಕ, ವಿರೋಧಪಕ್ಷದ ನಾಯಕ

ನನ್ನ ಮತ್ತು ಮುಖ್ಯಮಂತ್ರಿ ಅವರ ಪತ್ನಿ ಪಾರ್ವತಿ ಅವರ ಪಾತ್ರ ಇಲ್ಲ ಎಂದು ಹೇಳುತ್ತಲೇ ಬಂದಿದ್ದೇನೆ. ಆದರೆ, ಬಿಜೆಪಿ, ಜೆಡಿಎಸ್ ನಾಯಕರು ಕ್ಷುಲ್ಲಕ ಆರೋಪಗಳನ್ನು ಮಾಡಿದ್ದರು. ಈಗ ನ್ಯಾಯಕ್ಕೆ ಜಯ ಸಿಕ್ಕಿದೆ
ಬೈರತಿ ಸುರೇಶ, ನಗರಾಭಿವೃದ್ಧಿ ಸಚಿವ

ಸಂಸದ ತೇಜಸ್ವಿ ಸೂರ್ಯ ವಿರುದ್ಧ ಪ್ರಕರಣ ರದ್ದು


ತೇಜಸ್ವಿ ಸೂರ್ಯ

ಬಿಜೆಪಿ ಸಂಸದ ತೇಜಸ್ವಿ ಸೂರ್ಯ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಿದ ಹೈಕೋರ್ಟ್ ಆದೇಶದ ವಿರುದ್ಧ ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ.

'ಜಮೀನಿನ ಪಹಣಿಯಲ್ಲಿ ವಕ್ಫ್ ಎಂದು ತೋರಿಸಿದ ಪರಿಣಾಮ ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಹರನಗಿರಿ ರೈತ ಚನ್ನಪ್ಪ ಸಿ.ಬಾಳಿಕಾಯಿ (24) ಉರುಫ್ ರುದ್ರಪ್ಪ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂಬ ಮಾಹಿತಿಯನ್ನು ಸಾಮಾಜಿಕ ಜಾಲತಾಣದಲ್ಲಿ ಬಿತ್ತರಿಸಿದ ಆರೋಪಕ್ಕೆ ಸಂಬಂಧಿಸಿದಂತೆ ತೇಜಸ್ವಿ ಸೂರ್ಯ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿತ್ತು.

'ಇದೇನು? ಈ ವಿಷಯವನ್ನು ರಾಜಕೀಯಗೊಳಿಸಬೇಡಿ. ಮತದಾರರ ಮುಂದೆ ನಿಮ್ಮ ಹೋರಾಟಗಳನ್ನು ಮಾಡಿ' ಎಂದು ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ಕೆ. ವಿನೋದ್ ಚಂದ್ರನ್ ಅವರನ್ನೊಳಗೊಂಡ ಪೀಠ ಹೇಳಿತು.

ರಾಜ್ಯ ಸರ್ಕಾರದ ಮೇಲ್ಮನವಿಯನ್ನು ಪೀಠ ವಜಾಗೊಳಿಸಿತು ಮತ್ತು ಕಾನೂನು ಕ್ರಮಗಳನ್ನು ರಾಜಕೀಯಗೊಳಿಸದಂತೆ ಎಚ್ಚರಿಕೆ ನೀಡಿತು.

ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಸುದ್ದಿಯನ್ನು ತೇಜಸ್ವಿಸೂರ್ಯ 'ಎಕ್ಸ್'ನಲ್ಲಿ ಟ್ಯಾಗ್ ಮಾಡಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಹಾವೇರಿಯ ಸೆನ್ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತೆ–2023ರ (ಬಿಎನ್‌ಎಸ್) ಕಲಂ 353ರ (2) (ವಿವಿಧ ಗುಂಪುಗಳ ನಡುವೆ ದ್ವೇಷ ಬಿತ್ತುವ ಮತ್ತು ದ್ವೇಷಕ್ಕೆ ಪ್ರಚೋದನೆ ನೀಡುವ ಸುಳ್ಳು ಸುದ್ದಿ ಹರಡಿದ ಆರೋಪ) ಅಡಿ ಎಫ್‌ಐಆರ್ ದಾಖಲಿಸಲಾಗಿತ್ತು.

ಹಸಿರು ಪ್ರೀತಿ...

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್



ವನಮಹೋತ್ಸವ ನಿಮಿತ್ತ ಕಲಬುರಗಿಯ ಜಗತ್ ವೃತ್ತದಲ್ಲಿ ಸೋಮವಾರ ನಡೆದ ಜಾಗೃತಿ ಜಾಥಾದಲ್ಲಿ ಸೇಂಟ್ ಮೇರಿ ಶಾಲೆ ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆ ಘೋಷಣೆಗಳುಳ್ಳ ನಾಮಫಲಕ ಪ್ರದರ್ಶಿಸಿದರು

ಕೊಳವೆಬಾವಿ ನೀರಿಗೆ ಶುಲ್ಕ

ಕೇಂದ್ರದ ಮಾರ್ಗಸೂಚಿ ಒಪ್ಪಿಕೊಂಡ ರಾಜ್ಯ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಅಂತರ್ಜಲ ದುರ್ಬಳಕೆಯನ್ನು ತಡೆಯುವುದಕ್ಕೆ ನಗರ ಪ್ರದೇಶಗಳಲ್ಲಿ ಕೊಳವೆಬಾವಿಯಿಂದ ತೆಗೆಯುವ ನೀರಿನ ಬಳಕೆ ಪ್ರಮಾಣವನ್ನು ಅಳೆಯಲು 'ಡಿಜಿಟಲ್ ಟೆಲಿಮೆಟ್ರಿ' ಅಳವಡಿಸಿ, ದರ ನಿಗದಿ ಮಾಡಲು ಸರ್ಕಾರ ಮುಂದಾಗಿದೆ.

ಅಂತರ್ಜಲ ಬಳಕೆಯನ್ನು ನಿರ್ಬಂಧಿಸಲು ಕೇಂದ್ರ ಸರ್ಕಾರದ, ಕೇಂದ್ರ ಅಂತರ್ಜಲ ಪ್ರಾಧಿಕಾರ ಹೊರಡಿಸಿರುವ ಮಾರ್ಗಸೂಚಿಯನ್ನು ರಾಜ್ಯ ಸರ್ಕಾರ ಒಪ್ಪಿಕೊಂಡಿದೆ. ಈ ಸಂಬಂಧ, ಸಣ್ಣ ನೀರಾವರಿ ಇಲಾಖೆ ಮಂಡಿಸಿದ್ದ ಪ್ರಸ್ತಾವಕ್ಕೆ ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ. ಪ್ರಾಧಿಕಾರದ ಮಾರ್ಗಸೂಚಿಗೆ ತಿದ್ದುಪಡಿಗಳನ್ನು ತರಲು ರಾಜ್ಯ ಮುಂದಾಗಿದ್ದು, ಅದು ಸಿದ್ಧಗೊಂಡ ಬಳಿಕವಷ್ಟೆ ದರ ನಿಗದಿಯಾಗಲಿದೆ.

▶6



ಟ್ಯಾಂಕರ್‌ಗಳಿಗೆ ಶುಲ್ಕ

ಟ್ಯಾಂಕರ್‌ಗಳಲ್ಲಿ ನೀರು ಸರಬರಾಜು ಮಾಡುವವರ ಮೇಲೆ ಅತಿ ಬಳಕೆ ಮತ್ತು ಅತಿ ಬಳಕೆಯಲ್ಲದ ಪ್ರದೇಶಗಳಲ್ಲಿ ಅಂತರ್ಜಲ ಬಳಕೆಯ ಶುಲ್ಕ

ವರ್ಗ	ಪ್ರತಿ ಕ್ಯುಬಿಕ್ ಮೀಟರ್(₹)	ನೀರು ತೆಗೆಯುವ ಮಿತಿ (ಕ್ಯುಬಿಕ್ ದಿನವೊಂದಕ್ಕೆ)
ಸುರಕ್ಷಿತ	10	150
ಅರೆ ಸಮಸ್ಯಾತ್ಮಕ	20	100
ಸಮಸ್ಯಾತ್ಮಕ	25	100
ಮಿತಿ ಮೀರಿದ ಬಳಕೆ	35	50

*ರಾಜ್ಯದಲ್ಲಿ ನೀರಿನ ಲಭ್ಯತೆ ಮತ್ತು ಕೊರತೆ ಇರುವ ಪ್ರದೇಶಗಳನ್ನು ನಾಲ್ಕು ವಿಭಾಗಗಳಲ್ಲಿ ವಿಂಗಡಿಸಿದ್ದು, ಸ್ವಲ್ಪ ಮಟ್ಟಿನ ಕೊರತೆ ಇರುವ ಪ್ರದೇಶಗಳನ್ನು ಅರೆ ಸಮಸ್ಯಾತ್ಮಕ ಎಂದು ಗುರುತಿಸಲಾಗಿದೆ.

ನಿರಾಕ್ಷೇಪಣಾ ಪತ್ರ ಪಡೆಯಲು ಅರ್ಜಿ ಶುಲ್ಕ

ಯೂಸರ್ ಐಡಿ ಬದಲಿಸಲು	₹5,000
ಕಂಪನಿ ಹೆಸರು ಬದಲಿಸಲು	₹5,000
ಎನ್‌ಒಸಿ ಅವಧಿ ವಿಸ್ತರಣೆ	₹5,000
ಎನ್‌ಒಸಿ ನಕಲು ಪ್ರತಿ	₹5,000
ಎನ್‌ಒಸಿ ತಿದ್ದುಪಡಿಗಾಗಿ	₹5,000
ಇತರ ತಿದ್ದುಪಡಿ	₹5,000
ಅರ್ಜಿ ಶುಲ್ಕ	₹10,000
ನವೀಕರಣ ಶುಲ್ಕ	₹5,000

ಯಾರಿಗೆಲ್ಲ ವಿನಾಯಿತಿ...

- ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ವೈಯಕ್ತಿಕ ಗೃಹೋಪಯೋಗಿ ಅಂತರ್ಜಲ ಬಳಕೆ
- ಗ್ರಾಮೀಣ ನೀರು ಸರಬರಾಜು
- ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರುವ ಸೇನೆ ಮತ್ತು ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳ ಕಟ್ಟಡಗಳು, ಸಂಸ್ಥೆಗಳು
- ಕೃಷಿ ಚಟುವಟಿಕೆಗಳು
- ಸಣ್ಣ ಮತ್ತು ಅತಿ ಸಣ್ಣ ಉದ್ಯಮಗಳು (ದಿನಕ್ಕೆ 10 ಕ್ಯುಬಿಕ್‌ಗಿಂತ ಕಡಿಮೆ ಬಳಕೆ)
- ಗೃಹೋಪಯೋಗಿ ಉದ್ದೇಶಕ್ಕಾಗಿ ಅಂತರ್ಜಲ ಬಳಸುವ ಕೈಗಾರಿಕೆ, ಗಣಿಗಾರಿಕೆ ಯೋಜನೆಗಳು, ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಗಳು (5 ಕೆಎಲ್‌ಡಿ)
- ಕುಡಿಯುವ ನೀರಿಗೆ ಮತ್ತು ಗೃಹೋಪಯೋಗಿ ಬಳಕೆಗೆ 20 ಕೆಎಲ್‌ಡಿವರೆಗೆ ಬಳಸುವ ವಸತಿ ಅಪಾರ್ಟ್‌ಮೆಂಟ್ ಮತ್ತು ಸಮೂಹ ವಸತಿ ಸಹಕಾರ ಸಂಘಗಳು, ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಸರ್ಕಾರಿ ಯೋಜನೆಗಳಲ್ಲಿ ನಿರ್ಮಿಸಿದ ವಸತಿ ಘಟಕಗಳು

'ಸಿಂಧೂರ' ಗದ್ದಲಕ್ಕೆ ಲೋಕಸಭೆ ಕಲಾಪ ಬಲಿ

ನವದೆಹಲಿ: 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ಮತ್ತು ಇತರ ವಿಷಯಗಳ ಕುರಿತು ಕೂಡಲೇ ಚರ್ಚೆ ನಡೆಯಬೇಕು ಎಂದು ಒತ್ತಾಯಿಸಿ 'ಇಂಡಿಯಾ' ಮೈತ್ರಿಕೂಟಗಳ ಪಕ್ಷಗಳು ಪ್ರತಿಭಟನೆ ನಡೆಸಿ ಗದ್ದಲ ಎಬ್ಬಿಸಿದ್ದರಿಂದ ಲೋಕಸಭೆಯ ಕಲಾಪ ಸೋಮವಾರ ಬಲಿಯಾಯಿತು. ರಾಜ್ಯಸಭೆಯ ಕಲಾಪವನ್ನು ಪ್ರತಿಪಕ್ಷಗಳು ಬಹಿಷ್ಕರಿಸಿದವು.

ಸುದ್ದಿ ▶7

ಉಪ ರಾಷ್ಟ್ರಪತಿ ಧನಕರ್ ರಾಜೀನಾಮೆ

ನವದೆಹಲಿ (ಪಿಟಿಐ): ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರು ವೈದ್ಯಕೀಯ ಕಾರಣಗಳನ್ನು ನೀಡಿ ಸೋಮವಾರ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ.

ತಮ್ಮ ರಾಜೀನಾಮೆ ಪತ್ರವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಕಳುಹಿಸಿದ್ದು, 'ತಕ್ಷಣದಿಂದಲೇ ಜಾರಿಗೆ ಬರುವಂತೆ ರಾಜೀನಾಮೆ ನೀಡುತ್ತಿದ್ದೇನೆ' ಎಂದು ತಿಳಿಸಿದ್ದಾರೆ.

'ಆರೋಗ್ಯದ ಮೇಲೆ ಹೆಚ್ಚಿನ ಗಮನಹರಿಸಲು ಮತ್ತು ವೈದ್ಯಕೀಯ ಸಲಹೆಯನ್ನು ಪಾಲಿಸಲು ಈ ನಿರ್ಧಾರ ತೆಗೆದುಕೊಂಡಿದ್ದೇನೆ. ಸಂವಿಧಾನದ 67(ಎ) ವಿಧಿಗೆ ಅನುಗುಣವಾಗಿ ತಕ್ಷಣವೇ ಜಾರಿಗೆ ಬರುವಂತೆ ಭಾರತದ ಉಪ ರಾಷ್ಟ್ರಪತಿ ಹುದ್ದೆಗೆ ರಾಜೀನಾಮೆ ನೀಡುತ್ತಿದ್ದೇನೆ' ಎಂದು ರಾಷ್ಟ್ರಪತಿ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

74 ವರ್ಷದ ಧನಕರ್ ಅವರು 2022ರ ಆಗಸ್ಟ್‌ನಲ್ಲಿ ಅಧಿಕಾರ ವಹಿಸಿಕೊಂಡಿದ್ದರು. ಅವರ ಅಧಿಕಾರದ ಅವಧಿ 2027ರ ವರೆಗೂ ಇತ್ತು. ರಾಜ್ಯಸಭೆಯ ಸಭಾಪತಿಯೂ ಆಗಿರುವ ಅವರು ಸೋಮವಾರ ಆರಂಭವಾದ ಸಂಸತ್ತಿನ ಮುಂಗಾರು ಅಧಿವೇಶನದ ಮೊದಲ ದಿನ ಕಲಾಪದಲ್ಲಿ ಪಾಲ್ಗೊಂಡಿದ್ದರು.

ರಾಜ್ಯಸಭೆಯ ಸಭಾಪತಿಯೂ ಆಗಿದ್ದ ಧನಕರ್ ಅವರು ವಿರೋಧ ಪಕ್ಷಗಳೊಂದಿಗೆ ಅನೇಕ ಬಾರಿ ಸಂಘರ್ಷಕ್ಕಿಳಿದಿದ್ದರು. ಸದನವನ್ನು ಪಕ್ಷಪಾತಿಯಾಗಿ ನಡೆಸುತ್ತಿರುವ ಆರೋಪದಡಿ ಜಗದೀಪ್ ಧನಕರ್ ಅವರನ್ನು ಪದಚ್ಯುತಗೊಳಿಸುವ ಗೊತ್ತುವಳಿ ಮಂಡಿಸಲು ವಿರೋಧ ಪಕ್ಷಗಳು ನೋಟಿಸ್ ನೀಡಿದ್ದವು. ಇದನ್ನು ರಾಜ್ಯಸಭೆಯ ಉಪ ಸಭಾಪತಿ ಹರಿವಂಶ್ ತಿರಸ್ಕರಿಸಿದ್ದರು.

ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರನ್ನು ಪದಚ್ಯುತಗೊಳಿಸುವುದಕ್ಕೆ ಸಂಬಂಧಿಸಿದ ನೋಟಿಸ್ ಅನ್ನು ವಿರೋಧ ಪಕ್ಷಗಳು ಧನಕರ್ ಅವರಿಗೆ ಸಲ್ಲಿಸಿದ್ದವು. ಅವರು ಅದನ್ನು ಸದನದಲ್ಲಿ ಪ್ರಸ್ತಾಪಿಸಿದ್ದರು.

ತಮ್ಮ ಅಧಿಕಾರದ ಅವಧಿಯಲ್ಲಿ ಅಚಲ ಬೆಂಬಲ ನೀಡಿದ್ದಕ್ಕೆ ಮತ್ತು ಪರಸ್ಪರ ಸಹಕಾರದೊಂದಿಗೆ ಕೆಲಸ ನಿರ್ವಹಿಸಲು ಅವಕಾಶ ಮಾಡಿಕೊಟ್ಟದ್ದಕ್ಕೆ ರಾಷ್ಟ್ರಪತಿಯವರಿಗೆ ಜಗದೀಪ್ ಧನಕರ್ ಅವರು ಧನ್ಯವಾದ ಅರ್ಪಿಸಿದ್ದಾರೆ.

▶7

ಮೂರನೇ ಉಪ ರಾಷ್ಟ್ರಪತಿ


ಜಗದೀಪ್ ಧನಕರ್

ಧನಕರ್ ಅವರು ಅಧಿಕಾರದಲ್ಲಿದ್ದಾಗಲೇ ರಾಜೀನಾಮೆ ನೀಡಿದ ಮೂರನೇ ಉಪ ರಾಷ್ಟ್ರಪತಿ ಎನಿಸಿದ್ದಾರೆ. ಈ ಹಿಂದೆ ವಿ.ವಿ.ಗಿರಿ ಹಾಗೂ ಆರ್. ವೆಂಕಟರಾಮನ್ ಅವರು ರಾಷ್ಟ್ರಪತಿ ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ಸ್ಪರ್ಧಿಸಲು ರಾಜೀನಾಮೆ ನಿರ್ಧಾರ ತೆಗೆದುಕೊಂಡಿದ್ದರು. ವಿ.ವಿ.ಗಿರಿ ಅವರು ಅಧಿಕಾರದಲ್ಲಿ ಇದ್ದಾಗ 1969ರ ಜುಲೈ 2ರಂದು ರಾಜೀನಾಮೆ ನೀಡಿದ್ದರು.

ಎಲ್ಲಾ 12 ಆರೋಪಿಗಳು ಖುಲಾಸೆ

2006ರ ಮುಂಬೈ ರೈಲು ಸ್ಫೋಟ ಪ್ರಕರಣ: ಸಾಕ್ಷ್ಯಾಧಾರ ಕೊರತೆ – ಕೋರ್ಟ್


ಮುಂಬೈ (ಪಿಟಿಐ): ಮುಂಬೈನ ಲೋಕಲ್ ರೈಲುಗಳಲ್ಲಿ 2006ರ ಜುಲೈ 11ರಂದು ನಡೆದಿದ್ದ ಸರಣಿ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ಬಾಂಬೆ ಹೈಕೋರ್ಟ್‌ನ ಅನಿಲ್ ಕಿಲೋರ್ ಹಾಗೂ ಶ್ಯಾಮ್ ಚಾಂದಕ್ ನೇತೃತ್ವದ ನ್ಯಾಯಪೀಠವು, ಎಲ್ಲಾ 12 ಮಂದಿ ಆರೋಪಿಗಳನ್ನು ದೋಷಮುಕ್ತಗೊಳಿಸಿ ಸೋಮವಾರ ತೀರ್ಪು ನೀಡಿದೆ.

'ಆರೋಪಿಗಳೆಲ್ಲರೂ ಅಪರಾಧ ಎಸಗಿದ್ದಾರೆ ಎಂದು ನಂಬಲು ಕಷ್ಟವಾಗಿತ್ತು, ಆರೋಪವನ್ನು ಸಾಬೀತುಪಡಿಸಲು ಪ್ರಾಸಿಕ್ಯೂಷನ್ ಸಂಪೂರ್ಣವಾಗಿ ವಿಫಲವಾಗಿದೆ' ಎಂದು ತಿಳಿಸಿದ ನ್ಯಾಯಪೀಠ, 2015ರಲ್ಲಿ ವಿಶೇಷ ನ್ಯಾಯಾಲಯವು 12 ಮಂದಿಗೆ ವಿಧಿಸಿದ್ದ ಶಿಕ್ಷೆಯನ್ನು ರದ್ದುಗೊಳಿಸಿದೆ.

'ಅಪರಾಧ ಕೃತ್ಯಕ್ಕೆ ಬಳಸಿದ್ದ ಬಾಂಬ್‌ನ ಮಾದರಿಗಳನ್ನು ಮುಂದಿಡಲು ಪ್ರಾಸಿಕ್ಯೂಷನ್ ಸಂಪೂರ್ಣವಾಗಿ ವಿಫಲವಾಗಿದೆ. ಈಗ ಪ್ರಸ್ತುತಪಡಿಸಿರುವ ಸಾಕ್ಷ್ಯಗಳು ಆರೋಪಿಗಳನ್ನು ಶಿಕ್ಷಿಸಲು ನಿರ್ಣಾಯಕವಾಗಿಲ್ಲ. ಸಾಕ್ಷಿ ಹೇಳಿಕೆಗಳು ಹಾಗೂ ಆರೋಪಿಗಳಿಂದ ವಶಕ್ಕೆ ಪಡೆಯಲಾದ ವಸ್ತುಗಳಿಗೂ ಸಾಕ್ಷ್ಯ ಮೌಲ್ಯವಿಲ್ಲ' ಎಂದು ಹೈಕೋರ್ಟ್ ತನ್ನ ತೀರ್ಪಿನಲ್ಲಿ ತಿಳಿಸಿದೆ.

'ನ್ಯಾಯಮೂರ್ತಿಗಳಾಗಿ ನಮ್ಮ ಕರ್ತವ್ಯ ನಿರ್ವಹಿಸಿದ್ದೇವೆ. ಅದು ನಮ್ಮ ಮೇಲಿರುವ ಜವಾಬ್ದಾರಿ' ಎಂದು ನ್ಯಾಯಪೀಠವು ಹೇಳಿದೆ.

▶7



'ಪರಿಶೀಲಿಸಿ ನಿರ್ಧಾರ'

ಸರಣಿ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ, ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುವ ಮೊದಲು ಬಾಂಬೆ ಹೈಕೋರ್ಟ್ ನೀಡಿದ ತೀರ್ಪಿನ ಕುರಿತು ರಾಜ್ಯ ಸರ್ಕಾರ ಸಮಗ್ರವಾಗಿ ಪರಿಶೀಲಿಸಲಿದೆ
ಚಂದ್ರಶೇಖರ್ ಬಾವಂಕುಲೆ, ಮಹಾರಾಷ್ಟ್ರ ಕಂದಾಯ ಸಚಿವ

'ಖುಲಾಸೆ: ವಿಶ್ವಾಸವಿತ್ತು'

ಭಯೋತ್ಪಾದನಾ ನಿಗ್ರಹ ಪಡೆ (ಎಟಿಎಸ್) ಯು ಉದ್ದೇಶಪೂರ್ವಕವಾಗಿ ಈ ಪ್ರಕರಣದಲ್ಲಿ ಬಂಧಿಸಿತ್ತು, ನಾವೆಲ್ಲರೂ ದೋಷಮುಕ್ತರಾಗಿ ಹೊರಬರುವ ವಿಶ್ವಾಸ ಹೊಂದಿದ್ದೆವು
ಮೊಹಮ್ಮದ್ ಸಾಜೀದ್ ಅನ್ಸಾರಿ, ಖುಲಾಸೆಯಾದ ವ್ಯಕ್ತಿ

ಕೈಕೊಟ್ಟ ಎಚ್‌ಆರ್‌ಎಂಎಸ್–2 • 20 ದಿನದಿಂದ ವೇತನಕ್ಕಾಗಿ ಕಾದಿರುವ ಸಿಬ್ಬಂದಿ

ತಂತ್ರಾಂಶ ಅಡ್ಡಿ; ವೇತನ ವಿಳಂಬ

• ವಿಕ್ರಂ ಕಾಂತಿಕೆರೆ

ಮಂಗಳೂರು: ಸರ್ಕಾರಿ ನೌಕರರ ಮಾನವ ಸಂಪನ್ಮೂಲ ನಿರ್ವಹಣೆ ತಂತ್ರಾಂಶದ ಪರಿಷ್ಕೃತ ಆವೃತ್ತಿ 'ಎಚ್‌ಆರ್‌ಎಂಎಸ್ 2.0' ಪ್ರಾಯೋಗಿಕವಾಗಿ ಅಳವಡಿಸಿರುವ ಇಲಾಖೆಗಳ ಪೈಕಿ ಕೆಲ ಇಲಾಖೆಗಳ ಸಿಬ್ಬಂದಿಗೆ 20 ದಿನ ಕಳೆದರೂ ಜೂನ್ ತಿಂಗಳ ವೇತನ ಜಮೆ ಆಗಿಲ್ಲ.

ಕೆಜಿಐಡಿ (ಕರ್ನಾಟಕ ಗವರ್ನ್‌ಮೆಂಟ್ ಇನ್ಶೂರೆನ್ಸ್ ಡಿಪಾರ್ಟ್‌ಮೆಂಟ್) ಕ್ರಮಸಂಖ್ಯೆ ಇರುವ ಉದ್ಯೋಗಿಗಳ ಎಲ್ಲ ವಿವರ ಎಚ್‌ಆರ್‌ಎಂಎಸ್ (ಹ್ಯೂಮನ್ ರಿಸೋರ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಂ) ತಂತ್ರಾಂಶದಲ್ಲಿ ಇರುತ್ತದೆ. ವೇತನ ಪಾವತಿ ಪ್ರಕ್ರಿಯೆ ಇದರ ಮೂಲಕವೇ ಆಗುತ್ತದೆ.

ಈ ತಂತ್ರಾಂಶದ ಪರಿಷ್ಕೃತ ಆವೃತ್ತಿಯನ್ನು ಜೂನ್ ತಿಂಗಳಿಂದ ಕೆಲವು ಇಲಾಖೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ವೇತನ ಪಾವತಿ ಆಗದೇ ಇರುವ ಕುರಿತು ಕೊಡಗು ಮತ್ತು ದಕ್ಷಿಣ ಕನ್ನಡ ಸೇರಿದಂತೆ ಕೆಲವು ಜಿಲ್ಲೆಗಳಿಂದ ಈಗಾಗಲೇ ಈ ಸಂಬಂಧ ನೋಡಲ್ ಅಧಿಕಾರಿಗಳಿಗೆ ಲಿಖಿತ ದೂರು ಸಲ್ಲಿಕೆಯಾಗಿದೆ.


ವೇತನದ ಮಾಹಿತಿ ಆಯಾ ಇಲಾಖೆಯ ಮುಖ್ಯಸ್ಥರಿಗೆ (ಡಿಡಿಒ–ಡ್ರಾಯಿಂಗ್ ಆ್ಯಂಡ್ ಡಿಸ್ಬರ್ಸಿಂಗ್ ಆಫೀಸರ್) ಹೋಗುತ್ತದೆ. ಅವರು ಅಧೀನ ಸಿಬ್ಬಂದಿಯ ವೇತನದ ಬಿಲ್ ಸಿದ್ಧಗೊಳಿಸಿ ಖಜಾನೆ–2ಗೆ ಕಳುಹಿಸುತ್ತಾರೆ. ಖಜಾನೆಯಿಂದ ಕೆಜಿಐಡಿಗಳಿರುವ ಖಾತೆಗಳಿಗೆ ವೇತನ ಜಮೆ ಮಾಡಲಾಗುತ್ತದೆ. ಆದರೆ ಎಚ್‌ಆರ್‌ಎಂಎಸ್–2.0ದಲ್ಲಿ ಹಲವು ಡಿಡಿಒ ಸಂಖ್ಯೆ ತಪ್ಪಾಗಿ ನಮೂದಾಗಿದ್ದು ಕೆಲವು ಕಡೆ ಹೆಸರೇ ತಪ್ಪಾಗಿದೆ. ಹೀಗಾಗಿ ಡ್ರಾಫ್ಟ್ ಬಿಲ್ ಸಿದ್ಧಪಡಿಸಲು ಆಗುತ್ತಿಲ್ಲ. ಕೆಲವೆಡೆ ಯೂಸರ್ ನೇಮ್/ಪಾಸ್‌ವರ್ಡ್ ಇನ್‌ವ್ಯಾಲಿಡ್ ಎಂಬ ಸಂದೇಶ ಬರುತ್ತಿದೆ ಎಂದು ನೋಡಲ್ ಅಧಿಕಾರಿಗೆ ಸಲ್ಲಿಸಿರುವ ದೂರಿನಲ್ಲಿ ತಿಳಿಸಲಾಗಿದೆ. ರಾಜ್ಯಮಟ್ಟದಲ್ಲಿ ಎಚ್‌ಆರ್‌ಎಂಎಸ್ ತಂತ್ರಾಂಶವನ್ನು ನಿರ್ವಹಿಸುವ ಹಿರಿಯ ಅಧಿಕಾರಿ ಮತ್ತು ಖಜಾನೆಯ ಆಯುಕ್ತರು ಪ್ರತಿಕ್ರಿಯೆಗೆ ಸಿಗಲಿಲ್ಲ.

ಪ್ರಾಯೋಗಿಕವಾಗಿ ಹೊಸ ತಂತ್ರಾಂಶ ಬಳಸಲಾಗುತ್ತಿದೆ. ವೇತನ ವಿಳಂಬವಾಗಿರುವ ಇಲಾಖೆಯವರು ಮಾಹಿತಿ ನೀಡಿದರೆ ಸಂಬಂಧಿತ ಅಧಿಕಾರಿಗಳ ಸಂಪರ್ಕಿಸಿ ಸಮಸ್ಯೆ ನಿವಾರಣೆಗೆ ಪ್ರಯತ್ನಿಸಲಾಗುವುದು
ಸಿ.ಎಸ್.ಷಡಾಕ್ಷರಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ

'ಖಜಾನೆಯಲ್ಲಿ ಸಮಸ್ಯೆ ಇಲ್ಲ'

'ವೇತನ ಜಮೆ ಕುರಿತು ಖಜಾನೆಯಲ್ಲಿ ಸಮಸ್ಯೆ ಇಲ್ಲ. ಡಿಡಿಒ ಕಳುಹಿಸಿದ ಬಿಲ್‌ಗೆ ಅನುಗುಣವಾಗಿ ಖಾತೆಗಳಿಗೆ ವೇತನ ಜಮೆ ಮಾಡುವುದಷ್ಟೇ ನಮ್ಮ ಕೆಲಸ. ಇದು ಒಂದೆರಡು ದಿನಗಳಲ್ಲಿ ಆಗುತ್ತದೆ. ವೇತನದ ಬಿಲ್ ಎಷ್ಟು ಬೇಗ ಸಿದ್ಧವಾದರೂ ಆರ್‌ಬಿಐ ನಿಯಮಗಳ ಪ್ರಕಾರ ವೇತನ ಪಾವತಿ ಆಯಾ ತಿಂಗಳ ಕೊನೆಯಲ್ಲೇ ಆಗುವುದು' ಎಂದು ದಕ್ಷಿಣ ಕನ್ನಡ ಜಿಲ್ಲಾ ಖಜಾನೆ ಅಧಿಕಾರಿ ರಮೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ



‘ಹೆಬ್ಬಾಳ ಜಂಕ್ಷನ್ ಅಭಿವೃದ್ಧಿಗೆ ವಿನ್ಯಾಸ ರೂಪಿಸಿ’

ಕೆ.ಆರ್. ಪುರದಿಂದ ನಗರದೊಳಗೆ ಸಾಗುವ ಮೇಲ್ಸೇತುವೆ ಪೂರ್ಣ: ಮಹೇಶ್ವರ್ ರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಜಂಕ್ಷನ್‌ನಲ್ಲಿ ಸಮಗ್ರ ಅಭಿವೃದ್ಧಿಗಾಗಿ ವಿನ್ಯಾಸ ರೂಪಿಸಿ, ನಿಗದಿತ ಅವಧಿಯಲ್ಲಿ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಹೆಬ್ಬಾಳ ಜಂಕ್ಷನ್ ಅಭಿವೃದ್ಧಿಗೆ ಸಂಬಂಧಿಸಿದಂತೆ ಪಾಲಿಕೆ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳೊಂದಿಗೆ ಜಂಟಿ ಪರಿಶೀಲನೆ ನಡೆಸಿದ ಮಹೇಶ್ವರ್ ರಾವ್, ‘ಹೆಬ್ಬಾಳ ಜಂಕ್ಷನ್‌ನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮೊದಲನೇ ಹಂತದ ಮೇಲ್ಸೇತುವೆ ಕಾಮಗಾರಿ ನಡೆಯುತ್ತಿದೆ. ಕೆ.ಆರ್ ಪುರ ಕಡೆಯಿಂದ ನಗರದೊಳಗೆ ಬರುವ ಮೇಲ್ಸೇತುವೆ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಉದ್ಘಾಟನೆಗೆ ಸಿದ್ಧವಿದೆ’ ಎಂದರು.

ಹೆಬ್ಬಾಳ ಜಂಕ್ಷನ್‌ನಲ್ಲಿ ನಮ್ಮ ಮೆಟ್ರೊ ಕಾಮಗಾರಿ, ಕೆ-ರೈಡ್‌ನಿಂದ ಸಬ್ ಅರ್ಬನ್ ರೈಲ್ವೆ ಕಾಮಗಾರಿ, ಪಾಲಿಕೆಯಿಂದ ಸುರಂಗ ರಸ್ತೆ ಸೇರಿದಂತೆ ಇನ್ನಿತರ ಕಾಮಗಾರಿಗಳು ನಡೆಯಲಿದ್ದು, ಇವುಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಜಂಕ್ಷನ್ ಅಭಿವೃದ್ಧಿಗೆ ವಿನ್ಯಾಸ ರೂಪಿಸಬೇಕು ಎಂದು ಸೂಚಿಸಿದರು.

ಹೆಬ್ಬಾಳ ಜಂಕ್ಷನ್‌ನಲ್ಲಿ ಹಲವು ಕಾಮಗಾರಿಗಳು ನಡೆಯುತ್ತಿರುವುದರಿಂದ ಪಾದಚಾರಿಗಳಿಗೆ ಸಮಸ್ಯೆಯಾಗುತ್ತಿದೆ. ಸರಿಯಾದ ಪಾದಚಾರಿ ಮಾರ್ಗಗಳನ್ನು ನಿರ್ಮಿಸಿ, ಒಂದೆಡೆಯಿಂದ ಮತ್ತೊಂದೆಡೆಗೆ ಸುಗಮವಾಗಿ ನಡೆದಾಡಲು ವ್ಯವಸ್ಥೆ ಕಲ್ಪಿಸಬೇಕು ಎಂದರು.

ನಾಗವಾರ ಜಂಕ್ಷನ್‌ನಲ್ಲಿ ಮೆಟ್ರೊ ನಿಲ್ದಾಣ ಕಾಮಗಾರಿ ಪ್ರಗತಿಯಲ್ಲಿದ್ದು, ಮಳೆ ಬಂದರೆ ಜಲಾವೃತವಾಗುತ್ತದೆ. ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು. [illegible] ಪೈಪ್‌ಲೈನ್ ಕಾಮಗಾರಿ ನಡೆಸಿ ನೀರು ನಿಲ್ಲದಂತೆ ಕ್ರಮ ವಹಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೆ.ಆರ್. ಪುರ ಮೆಟ್ರೊ ನಿಲ್ದಾಣದ ಬಳಿಯೂ ಸುಗಮ ಪಾದಚಾರಿ ಮಾರ್ಗಗಳನ್ನು ನಿರ್ಮಾಣ ಮಾಡಬೇಕು. ಮೇಲ್ಸೇತುವೆ ಕೆಳಭಾಗದಲ್ಲಿ ಸ್ವಚ್ಛತೆ ಕಾಪಾಡಬೇಕು ಎಂದರು. ಬೆಂಗಳೂರು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಮಾತನಾಡಿ, ಹೆಬ್ಬಾಳ ಜಂಕ್ಷನ್‌ನಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ವೇಳೆ ಸಂಚಾರ ಪೊಲೀಸ್ ವಿಭಾಗದಿಂದ ಎಲ್ಲಾ ಸಹಕಾರ ನೀಡಲಾಗುವುದು ಎಂದರು.



ಮಹೇಶ್ವರ್ ರಾವ್ ಹಾಗೂ ಸೀಮಂತ್ ಕುಮಾರ್ ಸಿಂಗ್ ಅವರು ಹೆಬ್ಬಾಳ ಜಂಕ್ಷನ್‌ನಲ್ಲಿ ಕಾಮಗಾರಿಯನ್ನು ಪರಿಶೀಲಿಸಿದರು

6.5 ಲಕ್ಷ ಇ-ಖಾತಾ ವಿತರಣೆ

ಬಿಬಿಎಂಪಿ ವ್ಯಾಪ್ತಿಯಲ್ಲಿರುವ 25 ಲಕ್ಷ ಸ್ವತ್ತುಗಳ ಪೈಕಿ 6.5 ಲಕ್ಷ ಸ್ವತ್ತುಗಳಿಗೆ ಅಂತಿಮ ಇ-ಖಾತಾ ವಿತರಿಸಲಾಗಿದೆ. ಪೂರ್ವ ವಲಯದಲ್ಲಿ ಒಟ್ಟು 3,45,858 ಸ್ವತ್ತುಗಳ ಪೈಕಿ 55,917 ಸ್ವತ್ತುಗಳಿಗೆ ಅಂತಿಮ ಇ-ಖಾತಾ ನೀಡಿದ್ದು, ಹೆಬ್ಬಾಳ ವಿಭಾಗದಲ್ಲಿ ಒಟ್ಟು 50 ಸಾವಿರ ಸ್ವತ್ತುಗಳ ಪೈಕಿ 13 ಸ್ವತ್ತುಗಳಿಗೆ ಇ-ಖಾತಾ ನೀಡಲಾಗಿದೆ ಎಂದು ಬಿಬಿಎಂಪಿ ಕಂದಾಯ ವಿಭಾಗದ ಪ್ರಕಟಣೆ ತಿಳಿಸಿದೆ.

ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಆರ್.ಟಿ.ನಗರದ ಎಚ್‌ಎಂಟಿ ಮೈದಾನದಲ್ಲಿ ಜುಲೈ 22 ಹಾಗೂ 23ರಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ‘ಬೃಹತ್ ಇ-ಖಾತಾ ಮೇಳ’ ಆಯೋಜಿಸಲಾಗಿದೆ ಎಂದು ತಿಳಿಸಿದೆ.

ನೆಲಮಾಳಿಗೆಯಲ್ಲಿ ಮಳಿಗೆ: ನೋಟಿಸ್

ಮಹದೇವಪುರ ವಲಯ ವ್ಯಾಪ್ತಿಯಲ್ಲಿ ನೆಲಮಹಡಿಗಳಲ್ಲಿ (ಬೆಸ್ಮೆಂಟ್) ಅನಧಿಕೃತವಾಗಿ ನಿರ್ಮಿಸಿರುವ ಮಳಿಗೆಗಳಿಗೆ ನೋಟಿಸ್ ನೀಡಿ ಕಾನೂನು ಕ್ರಮ ಕೈಗೊಳ್ಳಲು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚಿಸಿದರು.

ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ವಾಹನ ಪಾರ್ಕಿಂಗ್‌ಗೆ ಸೀಮಿತ ‘ಇರುವಂತಹ ನೆಲಮಾಳಿಗೆಗಳಲ್ಲಿ ಯಾರೂ ಮಳಿಗೆಗಳನ್ನು ನಿರ್ಮಿಸುವಂತಿಲ್ಲ’ ಎಂದರು.

ಮಹದೇವಪುರ ವಲಯದಲ್ಲಿ 52 ಕೆರೆಗಳಿದ್ದು, ಎಲ್ಲ ಕೆರೆಗಳ ಸಮಗ್ರ ಅಭಿವೃದ್ಧಿಗೆ ಪ್ರತ್ಯೇಕ ಯೋಜನೆ ರೂಪಿಸಬೇಕು. ಕಾಮಗಾರಿಗಳ ನಿರ್ವಹಣೆಗಾಗಿ ಜಂಟಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಬೇಕು ಎಂದು ಸೂಚಿಸಿದರು.

ಪಹಲ್ಗಾಮ್‌ನಲ್ಲಿ ರಾಜ್ಯೋತ್ಸವ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಕಾಶ್ಮೀರದ ಪಹಲ್ಗಾಮ್‌ನಲ್ಲಿ ರಾಜ್ಯೋತ್ಸವ ಮತ್ತು ಹುತಾತ್ಮರಿಗೆ ನುಡಿ ನಮನ ಕಾರ್ಯಕ್ರಮ ಆಯೋಜಿಸಲಾಗಿದೆ.

‘ಕಳೆದ ವರ್ಷ ನಮ್ಮ ಸಂಘವು ನೇಪಾಳದಲ್ಲಿ ಅಂತರರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಆಯೋಜಿಸಿತ್ತು. ಈ ವರ್ಷ ಪಹಲ್ಗಾಮ್‌ನಲ್ಲಿ ನ.22ರಂದು ರಾಜ್ಯೋತ್ಸವ ನಡೆಯಲಿದೆ. ಉಗ್ರವಾದದ ವಿರುದ್ಧ ಹೋರಾಟ, ಉಗ್ರರ ಗುಂಡಿಗೆ ಹತರಾದವರಿಗೆ ನುಡಿನಮನ ಸಲ್ಲಿಸಲಾಗುತ್ತದೆ’ ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಸುದ್ದಿಗಾರರಿಗೆ ತಿಳಿಸಿದರು. ‘ನಮ್ಮ ಸಂಘದ ಪದಾಧಿಕಾರಿಗಳು, ಸದಸ್ಯರು, ಆಹ್ವಾನಿತರು ಪಾಲ್ಗೊಳ್ಳಲಿದ್ದಾರೆ. ಸುತ್ತಮುತ್ತಲ ಪವಿತ್ರ ಸ್ಥಳಗಳಾದ ಶಂಕರಾಚಾರ್ಯ ದೇವಸ್ಥಾನ, ಭೂತೇಶ್ವರ ದೇವಸ್ಥಾನ, ಮಹಾಜ್ವಾಲಾ ಮಂದಿರ, ಮಾಮಲೇಶ್ವರ ದೇವಸ್ಥಾನ, ಶಂಕರದೇವಿ ದೇವಸ್ಥಾನ, ಶಾರದಾದೇವಿ ದೇವಸ್ಥಾನ, ಪಾರ್ಕ್ ಉಮಾರೋಹ, ಸ್ವರ್ಗ ಪ್ಯಾಲೆಸ್, ಸ್ಟ್ರೀಟ್ ವ್ಯೂ ದರ್ಶನ ಮಾಡಲಿದ್ದಾರೆ’ ಎಂದು ಹೇಳಿದರು. ಮಾಹಿತಿಗೆ 8105314213, 7619543217.

ಸಂಕ್ಷಿಪ್ತ ಸುದ್ದಿ

ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನ

ಬೆಂಗಳೂರು: ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವ ವಿದ್ಯಾಲಯದಲ್ಲಿ 2025–26ನೇ ಸಾಲಿನ ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಷನ್ ಎಂಜಿನಿಯರಿಂಗ್ ಹಾಗೂ ಕಂಪ್ಯೂಟರ್ ಸೈನ್ಸ್ ಆ್ಯಂಡ್ ಎಂಜಿನಿಯರಿಂಗ್ ವಿಭಾಗದ ಅತಿಥಿ ಉಪನ್ಯಾಸಕರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ವಿಶ್ವವಿದ್ಯಾಲಯದ ವೆಬ್‌ಸೈಟ್ www.uvce.karnataka.gov.in ನಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು, ವಿವಿಧ ದಾಖಲೆಗಳೊಂದಿಗೆ ‘ಕುಲಸಚಿವರು, ಯುವಿಸಿ, ಕೆ.ಆರ್.ವೃತ್ತ, ಬೆಂಗಳೂರು– 560001 ಈ ವಿಳಾಸಕ್ಕೆ ಸಲ್ಲಿಸಬೇಕು. ಜುಲೈ 30 ಅರ್ಜಿ ಸಲ್ಲಿಕೆಗೆ ಕೊನೆಯ ದಿನವಾಗಿದೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ

ಬೆಂಗಳೂರು: ಬಸವನಗುಡಿ ಕ್ಷೇತ್ರ ಬ್ರಾಹ್ಮಣ ಸಂಘದಿಂದ 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ 95ಕ್ಕಿಂತ ಹೆಚ್ಚು ಅಂಕ ಪಡೆದ ಬಸವನಗುಡಿ ಕ್ಷೇತ್ರ ವ್ಯಾಪ್ತಿಯ ವಿಪ್ರ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಆಸಕ್ತರು ಅರ್ಜಿಯ ಜೊತೆಗೆ, ಆಧಾರ್ ಕಾರ್ಡ್ ಪ್ರತಿ, ಅಂಕಪಟ್ಟಿ ಪ್ರತಿ, ಎರಡು ಭಾವಚಿತ್ರಗಳನ್ನು ಸಲ್ಲಿಸಬೇಕು. ಆಗಸ್ಟ್ 15 ಅರ್ಜಿ ಸಲ್ಲಿಸಲು ಕೊನೆ ದಿನಾಂಕವಾಗಿದೆ.

ಹೆಚ್ಚಿನ ಮಾಹಿತಿಗೆ ಮೊ: 94494 56645 / 98455 48592 – ಈ ಸಂಖ್ಯೆಗಳಿಗೆ ಸಂಪರ್ಕಿಸಬಹುದು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಎಲ್.ಎಸ್.ಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೀತಗಾಯನ ಸ್ಪರ್ಧೆ

ಬೆಂಗಳೂರು: ಬಿಎಂಶ್ರೀ ಪ್ರತಿಷ್ಠಾನವು ಮಹಾಮಾನವ ಆಗೋಳಿ ಮಂಜಣ್ಣ ದತ್ತಿ, ಬೆಸುನಾ ಮಲ್ಯ ದತ್ತಿ, ಸತ್ಯಪುತ್ರ ಬಲಿ ಚಕ್ರವರ್ತಿ ದತ್ತಿ, ಗುಮ್ಮಡಿ ವಿಠಲರಾವ್ ಗದ್ದಾರ್ ದತ್ತಿ ಮತ್ತು ರಾಜಾ ಸರ್ ಮುತ್ತಯ್ಯ ಚೆಟ್ಟಿಯಾರ್ ದತ್ತಿಗಳ ಆಶ್ರಯದಲ್ಲಿ ‘ಭಕ್ತಿಗೀತೆ ಗಾಯನ ಮತ್ತು ವೈಚಾರಿಕ ಗೀತೆ ಗಾಯನ ಸ್ಪರ್ಧೆ’ಯನ್ನು ಏರ್ಪಡಿಸಿದೆ.

10ರಿಂದ 16 ವರ್ಷದೊಳಗಿನವರು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಕೆ.ಮೋಹನ್‌ದೇವ್ ಆಳ್ವ ಮತ್ತು ಎಂ.ಕೆ. ಶೈಲಜಾ ಆಳ್ವ ಅವರು ಈ ದತ್ತಿಗಳನ್ನು ಸ್ಥಾಪಿಸಿದ್ದಾರೆ.

ಸ್ಪರ್ಧೆಯು ಆಗಸ್ಟ್ 31ರಂದು ನಡೆಯಲಿದೆ. ವಿಜೇತರಿಗೆ ಪ್ರಥಮ ಬಹುಮಾನ ₹4 ಸಾವಿರ, ದ್ವಿತೀಯ ಬಹುಮಾನ ₹3 ಸಾವಿರ ಮತ್ತು ತೃತೀಯ ಬಹುಮಾನವಾಗಿ ₹2 ಸಾವಿರ ನಗದು ಮತ್ತು ಪ್ರಶಸ್ತಿ ಪತ್ರ ನೀಡಲಾಗುತ್ತದೆ.

ಆಸಕ್ತರು ಆಗಸ್ಟ್ 25ರ ಸಂಜೆ 5 ಗಂಟೆಯೊಳಗೆ ಎನ್.ಆರ್. ಕಾಲೊನಿಯ ಬಿ.ಎಂ.ಶ್ರೀ. ಪ್ರತಿಷ್ಠಾನದ ಕಚೇರಿಯಲ್ಲಿ ಹೆಸರು ನೋಂದಾಯಿಸಿ. ಅರ್ಜಿಗಳು ಕಚೇರಿಯಲ್ಲಿ ದೊರೆಯುತ್ತವೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ತಿಳಿಸಿದ್ದಾರೆ. ಮಾಹಿತಿಗೆ: 9972812127 ಸಂಪರ್ಕಿಸಿ.

ಬಿಎಂಟಿಸಿ ಹೊಸ ಮಾರ್ಗ

ಬೆಂಗಳೂರು: ಸರ್ ಎಂ. ವಿಶ್ವೇಶ್ವರಯ್ಯ ರೈಲು ನಿಲ್ದಾಣ ಹಾಗೂ ಅತ್ತಿಬೆಲೆ ನಡುವೆ ಹೊಸ ಮಾರ್ಗದಲ್ಲಿ ಹವಾನಿಯಂತ್ರಿತ ಬಸ್ ಸಂಚಾರ ಇದೇ 24ರಿಂದ ಆರಂಭವಾಗಲಿದೆ. ಮಾರ್ಗ ಸಂಖ್ಯೆ ವಿ–500ಎಎ ಆಗಿದ್ದು, ಟಿನ್ ಫ್ಯಾಕ್ಟರಿ, ಮಾರತ್‌ಹಳ್ಳಿ ಬ್ರಿಡ್ಜ್, ಸರ್ಜಾಪುರ ಸಿಗ್ನಲ್, ದೊಮ್ಮಸಂದ್ರ, ಸರ್ಜಾಪುರ, ಬಿದರಗುಪ್ಪೆ ಮಾರ್ಗವಾಗಿ ಸಂಚರಿಸಲಿವೆ ಎಂದು ಬಿಎಂಟಿಸಿ ತಿಳಿಸಿದೆ.

ಮಕ್ಕಳ ಚಿಕಿತ್ಸೆಗೆ ಹೈಟೆಕ್ ಕಟ್ಟಡ, ಅಂಗಾಂಗ ಅಸ್ಥಿಮಜ್ಜೆ ಕಸಿ ಘಟಕ



ಸಂಸ್ಥೆಯ ಆವರಣದಲ್ಲಿ ನಿರ್ಮಾಣವಾಗಿರುವ ಎಂಟು ಮಹಡಿಗಳ ಸೂಪರ್ ಸ್ಪೆಷಾಲಿಟಿ ಬ್ಲಾಕ್ ಕಟ್ಟಡದ ಹೊರನೋಟ
ಪ್ರಜಾವಾಣಿ ಚಿತ್ರಗಳು: ರಂಜು ಪಿ.

ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ನಿರ್ಮಾಣ
8 ಮಹಡಿಗಳ ಕಟ್ಟಡದಲ್ಲಿ 450 ಹಾಸಿಗೆಗಳು ಚಿಕಿತ್ಸೆಗೆ ಲಭ್ಯ

• ವರುಣ ಹೆಗಡೆ

ಬೆಂಗಳೂರು: ಇಲ್ಲಿನ ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ (ಐಜಿಐಸಿಎಚ್) ಆವರಣದಲ್ಲಿ ಎಂಟು ಮಹಡಿಗಳ ಸೂಪರ್ ಸ್ಪೆಷಾಲಿಟಿ ಕಟ್ಟಡ ತಲೆಯೆತ್ತಿದೆ. ಈ ಕಟ್ಟಡವು ಮಕ್ಕಳ ಚಿಕಿತ್ಸೆಗೆ ಹಾಸಿಗೆಗಳ ಕೊರತೆಯನ್ನು ನೀಗಿಸುವ ಜತೆಗೆ, ಅಂಗಾಂಗ ಕಸಿ, ಅಸ್ಥಿಮಜ್ಜೆ ಕಸಿಯಂತಹ ಅತ್ಯಾಧುನಿಕ ಸೌಲಭ್ಯ ಒಳಗೊಂಡ ಘಟಕಗಳನ್ನು ಒಳಗೊಂಡಿದೆ.

ವೈದ್ಯಕೀಯ ಶಿಕ್ಷಣ ಇಲಾಖೆಯಡಿ ಕಾರ್ಯನಿರ್ವ-ಹಿಸುತ್ತಿರುವ ಐಜಿಐಸಿಎಚ್, ಸ್ವಾಯತ್ತ ಸಂಸ್ಥೆಯಾಗಿದೆ. ಈ ಸಂಸ್ಥೆಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ರಾಜ್ಯದ ವಿವಿಧೆಡೆಯಿಂದ ಶಿಫಾರಸು ಆಧಾರದಲ್ಲಿ ಮಕ್ಕಳು ಚಿಕಿತ್ಸೆಗೆ ಬರುತ್ತಾರೆ. ಇಲ್ಲಿಗೆ ಬರುವ ಬಹುತೇಕ ಮಕ್ಕಳು ಒಳರೋಗಿಗಳಾಗಿ ದಾಖಲಾಗುವುದರಿಂದ ಹಾಸಿಗೆಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಆದ್ದರಿಂದಲೇ 450 ಹಾಸಿಗೆಗಳನ್ನು ಒಳಗೊಂಡ ಎಂಟು ಮಹಡಿಗಳ ಕಟ್ಟಡವನ್ನು ನಿರ್ಮಿಸಲಾಗಿದೆ. ಈ ಕಟ್ಟಡ ಕಾರ್ಯಾರಂಭವಾದ ಬಳಿಕ ಸಂಸ್ಥೆಯಲ್ಲಿ ಒಟ್ಟು ಹಾಸಿಗೆಗಳ ಸಂಖ್ಯೆ 900ಕ್ಕೆ ಏರಿಕೆಯಾಗಲಿದೆ.



ಕಟ್ಟಡದ ಒಳಾಂಗಣದಲ್ಲಿ ಚಾವಣಿಗೆ ಬಣ್ಣ ಬಳಿಯುತ್ತಿರುವುದು

ದುಬಾರಿ ವೆಚ್ಚದ ಅಸ್ಥಿಮಜ್ಜೆ ಕಸಿ

ವಾಯುಮಾಲಿನ್ಯ, ಪಾಶ್ಚಾತ್ಯ ಆಹಾರ ಪದ್ಧತಿ ಸೇರಿ ವಿವಿಧ ಕಾರಣಗಳಿಂದ ಮಕ್ಕಳೂ ಕ್ಯಾನ್ಸರ್ ಪೀಡಿತರಾಗುತ್ತಿದ್ದಾರೆ. ದೃಢಪಟ್ಟ ಕ್ಯಾನ್ಸರ್ ಪ್ರಕರಣಗಳಲ್ಲಿ ಹೆಚ್ಚಿನವರು ರಕ್ತದ ಕ್ಯಾನ್ಸರ್‌ಗೆ ಒಳಗಾಗಿದ್ದಾರೆ. ರಕ್ತದ ಕ್ಯಾನ್ಸರ್ ಎದುರಿಸುತ್ತಿರುವ ಮಕ್ಕಳ ಚೇತರಿಕೆಗೆ ಅಸ್ಥಿಮಜ್ಜೆ ಕಸಿ ಚಿಕಿತ್ಸೆ ಸಹಕಾರಿ. ಆದ್ದರಿಂದ ಸಂಸ್ಥೆಯ ಸೂಪರ್ ಸ್ಪೆಷಾಲಿಟಿ ಕಟ್ಟಡವು ಅಸ್ಥಿಮಜ್ಜೆ ಕಸಿ ಘಟಕ ಹಾಗೂ ಮಕ್ಕಳ ಆಂಕೊಲಾಜಿ ವಿಭಾಗವನ್ನೂ ಒಳಗೊಂಡಿದೆ.

ಖಾಸಗಿ ವ್ಯವಸ್ಥೆಯಡಿ ಅಸ್ಥಿಮಜ್ಜೆ ಕಸಿಗೆ ₹40 ಲಕ್ಷದವರೆಗೂ ವೆಚ್ಚವಾಗಲಿದೆ. ಈ ಕಸಿಯನ್ನು ರಾಜ್ಯದಲ್ಲಿ 'ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ' (ಎಬಿ–ಎಆರ್‌ಕೆ) ಯೋಜನೆಯಡಿ ಸೇರ್ಪಡೆ ಮಾಡಲಾಗಿದೆ. ಇದರಿಂದಾಗಿ ಇಲ್ಲಿ ಅಸ್ಥಿಮಜ್ಜೆ ಕಸಿ ಪ್ರಕ್ರಿಯೆಯೂ ಯೋಜನೆಯಡಿ ಬಿಪಿಎಲ್ ಕುಟುಂಬದ ಮಕ್ಕಳಿಗೆ ಬಹುತೇಕ ಉಚಿತವಾಗಿ ನಡೆಸಲಾಗುತ್ತದೆ.

ಈ ಕಟ್ಟಡವನ್ನು ಒಟ್ಟು ₹138 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ರಾಜ್ಯ ಸರ್ಕಾರವು 2019ರಲ್ಲಿ ಸೂಪರ್ ಸ್ಪೆಷಾಲಿಟಿ ಬ್ಲಾಕ್ ನಿರ್ಮಾಣಕ್ಕೆ ಅನುಮೋದನೆ ನೀಡಿತ್ತು. 2021ರ ಸೆಪ್ಟೆಂಬರ್‌ನಲ್ಲಿ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಲಾಗಿತ್ತು. ಆದರೆ, ಕೋವಿಡ್-ಲಾಕ್‌ಡೌನ್‌ನಿಂದಾಗಿ ಕಾಮಗಾರಿಗೆ ಹಿನ್ನ-ಡೆಯಾಗಿತ್ತು. ಈಗ ಕಟ್ಟಡ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, ಬೆಡ್, ವೈದ್ಯಕೀಯ ಉಪಕರಣಗಳ ಅಳವಡಿಕೆ ಮಾತ್ರ ಬಾಕಿ ಉಳಿದಿವೆ. ಇನ್ನೊಂದು ತಿಂಗಳಲ್ಲಿ ಈ ಕಟ್ಟಡವು ಮಕ್ಕಳ ಸೇವೆಗೆ ತೆರೆದುಕೊಳ್ಳುವ ಸಾಧ್ಯತೆಯಿದೆ.

ಅಂಗಾಂಗ ಕಸಿ: ವಿರಳ ಕಾಯಿಲೆಗಳಿಂದ ಬಳಲುತ್ತಿರುವ ಮಕ್ಕಳಿಗೂ ಸಂಸ್ಥೆಯಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿದೆ. ಥಲಸ್ಸೇಮಿಯಾ ಪೀಡಿತ ಮಕ್ಕಳೂ ಇಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆದ್ದರಿಂದ ನೂತನ ಕಟ್ಟಡವು 50 ಹಾಸಿಗೆಗಳ ತುರ್ತು ಚಿಕಿತ್ಸಾ ಘಟಕವನ್ನೂ ಒಳಗೊಂಡಿದೆ. ಈ ಕಟ್ಟಡದಲ್ಲಿ ಅಂಗಾಂಗ ಕಸಿ ಘಟಕವೂ ಕಾರ್ಯನಿರ್ವಹಿಸಲಿದೆ. ರಾಜ್ಯದಲ್ಲಿ ಸರ್ಕಾರಿ ವ್ಯವಸ್ಥೆಯಡಿ ಕಾರ್ಯಾರಂಭಿಸಲಿರುವ ಮಕ್ಕಳ ಪ್ರಥಮ ಕಸಿ ಕೇಂದ್ರವೂ ಇದಾಗಲಿದೆ. ಖಾಸಗಿ ವ್ಯವಸ್ಥೆಯಡಿ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ನಡೆಸಲಾಗುತ್ತಿರುವ ಅಂಗಾಂಗ ಕಸಿಗಳನ್ನು ಈ ಕಟ್ಟಡದಲ್ಲಿ ಬಿಪಿಎಲ್ ಕುಟುಂಬದ ಮಕ್ಕಳಿಗೆ ಬಹುತೇಕ ಉಚಿತವಾಗಿ ನಡೆಸಲಾಗುತ್ತದೆ.

'ಸೂಪರ್ ಸ್ಪೆಷಾಲಿಟಿ ಬ್ಲಾಕ್‌ನ ಕಟ್ಟಡಕ್ಕೆ ಅಗತ್ಯವಿರುವ ವೈದ್ಯಕೀಯ ಉಪಕರಣಗಳ ಅಳವಡಿಕೆಗೆ ಹಾಗೂ ಅಗತ್ಯ ವೈದ್ಯಕೀಯ ಸಿಬ್ಬಂದಿ ನೇಮಕಾತಿಗೆ ಸಂಬಂಧಿಸಿದಂತೆ ಈಗಾಗಲೇ ಸರ್ಕಾರಕ್ಕೆ ಸಂಸ್ಥೆಯು ಪ್ರಸ್ತಾವ ಸಲ್ಲಿಸಿದೆ. ಇದಕ್ಕೆ ಅನುಮತಿ ದೊರೆತ ಬಳಿಕ ವೈದ್ಯಕೀಯ ಉಪಕರಣಗಳ ಖರೀದಿ ಹಾಗೂ ಸಿಬ್ಬಂದಿ ನೇಮಕಾತಿ ನಡೆಯಲಿದೆ. ಅಂಗಾಂಗ ಕಸಿಯಂತಹ ಪ್ರಕ್ರಿಯೆಗಳಿಗೆ ರೊಬೋಟಿಕ್ ತಂತ್ರಜ್ಞಾನಗಳನ್ನೂ ಅಳವಡಿಸಿಕೊಳ್ಳಲಾಗುವುದು' ಎಂದು ಸಂಸ್ಥೆಯ ವೈದ್ಯಾಧಿಕಾರಿಗಳು ತಿಳಿಸಿದರು.

ಅಂಕಿ ಅಂಶಗಳು

450
ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿರುವ ಹಾಸಿಗೆಗಳು

500ರಿಂದ 600
ಸಂಸ್ಥೆಗೆ ಪ್ರತಿನಿತ್ಯ ಭೇಟಿ ನೀಡುವ ಹೊರರೋಗಿಗಳು

ಎಂಟು ಮಹಡಿಗಳಲ್ಲಿ ಏನೆಲ್ಲ ವ್ಯವಸ್ಥೆ?

ತಳ ಮಹಡಿ	ದಾಸ್ತಾನು ಹಾಗೂ ವಾಹನ ಪಾರ್ಕಿಂಗ್
ನೆಲ ಮಹಡಿ	ತುರ್ತು ಚಿಕಿತ್ಸೆ, ಹೊರ ರೋಗಿ ವಿಭಾಗ
1ನೇ ಮಹಡಿ	ವಿಕಿರಣ ವಿಜ್ಞಾನ ವಿಭಾಗ, ಆಡಳಿತಾತ್ಮಕ ಬ್ಲಾಕ್
2,3 ಮತ್ತು 4ನೇ ಮಹಡಿ	ಮಕ್ಕಳ ವಾರ್ಡ್
5ನೇ ಮಹಡಿ	ಮಕ್ಕಳ ತೀವ್ರ ನಿಗಾ ಘಟಕ
6ನೇ ಮಹಡಿ	ಸೇವಾ ವಲಯ
7ನೇ ಮಹಡಿ	ಅಂಗಾಂಗ ಕಸಿ ಘಟಕ
8ನೇ ಮಹಡಿ	ಅಸ್ಥಿಮಜ್ಜೆ (ಬಿಎಂಟಿ) ಕಸಿ ಘಟಕ



ಸೂಪರ್ ಸ್ಪೆಷಾಲಿಟಿ ಬ್ಲಾಕ್ ಶೀಘ್ರದಲ್ಲಿಯೇ ಕಾರ್ಯಾರಂಭಿಸಲಿದೆ. ಇಲ್ಲಿ ಅತ್ಯಾಧುನಿಕ ಸೌಲಭ್ಯಗಳು ಲಭ್ಯವಾಗಲಿದ್ದು, ಇನ್ನಷ್ಟು ಗುಣಮಟ್ಟದ ವೈದ್ಯಕೀಯ ಸೇವೆಯನ್ನು ಮಕ್ಕಳಿಗೆ ಒದಗಿಸಲು ಸಾಧ್ಯವಾಗುತ್ತದೆ
ಡಾ. ಸಂಜಯ್ ಕೆ.ಎಸ್.
ಐಜಿಐಸಿಎಚ್ ನಿರ್ದೇಶಕ

ಚಿಟಿಕೆ ಸುದ್ದಿ

ಸಿ.ಎಂ ನಿವಾಸದ ಮುಂದೆ ಸಂಭ್ರಮಾಚರಣೆ

ಬೆಂಗಳೂರು: ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಇ.ಡಿ ಮೇಲ್ಮನವಿಯನ್ನು ವಜಾ ಮಾಡಿ ಸುಪ್ರೀಂ ಕೋರ್ಟ್ ಆದೇಶ ನೀಡಿರುವ ಕಾರಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸ 'ಕಾವೇರಿ'ಯ ಮುಂಭಾಗದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸೋಮವಾರ ಸಂಜೆ ಸಿಹಿ ಹಂಚಿ ಸಂಭ್ರಮಿಸಿದರು.

ತುಮಕೂರು ಪ್ರವಾಸ ಮುಗಿಸಿ ಸಿದ್ದರಾಮಯ್ಯ ಅವರು ತಮ್ಮ ನಿವಾಸಕ್ಕೆ ಬರುತ್ತಿದ್ದಂತೆ, ಅವರ ಕಾರು ತಡೆದ ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿ ಮತ್ತು ಇ.ಡಿ ವಿರುದ್ಧ ಘೋಷಣೆ ಕೂಗಿದರು. ಸಿದ್ದರಾಮಯ್ಯ ಅವರ ಭಾವಚಿತ್ರ ಹಿಡಿದುಕೊಂಡು ಜೈಕಾರ ಹಾಕಿದರು.

ಸಂಭ್ರಮಾಚರಣೆ ನೋಡಿ ಕಾರಿನಿಂದ ಇಳಿದ ಸಿದ್ದರಾಮಯ್ಯ ಅವರಿಗೆ ಕಾರ್ಯಕರ್ತರು ಸಿಹಿ ಹಂಚಿದರು. ಕಾಂಗ್ರೆಸ್ ಮುಖಂಡ ಎಸ್. ಮನೋಹರ್ ಮತ್ತಿತರರು ಇದ್ದರು.

ಸಿ.ಎಂ, ಡಿಸಿಎಂ 25ರಂದು ದೆಹಲಿಗೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೈಕಮಾಂಡ್ ನಾಯಕರ ಭೇಟಿಗೆ ಇದೇ 25ರಂದು ಮತ್ತೆ ದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ.

ವಿಧಾನ ಪರಿಷತ್‌ನ ನಾಲ್ಕು ಖಾಲಿ ಸ್ಥಾನಗಳಿಗೆ ನಾಮನಿರ್ದೇಶನ ಪಟ್ಟಿ ಅಂತಿಮ-ಗೊಳಿಸುವುದು, ನಿಗಮ- ಮಂಡಳಿಗಳಿಗೆ ಅಧ್ಯಕ್ಷರ ನೇಮಕ ಸೇರಿದಂತೆ ಹಲವು ವಿಚಾರಗಳ ಕುರಿತು ಪಕ್ಷದ ವರಿಷ್ಠರ ಜೊತೆ ಉಭಯ ನಾಯಕರು ಚರ್ಚೆ ನಡೆಸಲಿದ್ದಾರೆ.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಇದೇ 23ರಂದು ರಾಜ್ಯಕ್ಕೆ ಭೇಟಿ ನೀಡುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಡಿ.ಕೆ. ಶಿವಕುಮಾರ್, '25ರಂದು ನಾನು ಹಾಗೂ ಮುಖ್ಯಮಂತ್ರಿ ದೆಹಲಿ ಪ್ರವಾಸ ಮಾಡುತ್ತಿದ್ದೇವೆ. ಅಲ್ಲಿ ಸಂಸತ್ ಅಧಿವೇಶನ ನಡೆಯುತ್ತಿದೆ. ನನಗೆ ಗೊತ್ತಿರುವ ಮಾಹಿತಿ ಇಷ್ಟೆ' ಎಂದರು.

15 ಕುಟುಂಬ ಮರಳಿ ಹಿಂದೂ ಧರ್ಮಕ್ಕೆ

ಗೌರಿಬಿದನೂರು: ಹಲವು ವರ್ಷಗಳ ಹಿಂದೆ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿದ್ದ 15 ಕುಟುಂಬಗಳ ಸದಸ್ಯರನ್ನು ತಾಲ್ಲೂಕಿನ ವಿದುರಾಶ್ವತ್ಥದಲ್ಲಿ ಭಾನುವಾರ ಮರಳಿ ಹಿಂದೂ ಧರ್ಮಕ್ಕೆ ಕರೆ ತರಲಾಯಿತು.

ನಾಗಸಂದ್ರ, ಗಾಂಧಿನಗರ, ಕದಿರೇನಹಳ್ಳಿ ಹಾಗೂ ಮಧುಗಿರಿ ತಾಲ್ಲೂಕಿನ ಕೊಡಿಗೇನಹಳ್ಳಿಯಲ್ಲಿ ಹಿಂದೂ ಧರ್ಮದಿಂದ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಗೊಂಡಿದ್ದರು.

ಅನ್ಯ ಧರ್ಮಗಳಿಗೆ ಮತಾಂತರ ಹೊಂದಿದವರನ್ನು ಗುರುತಿಸಿ, ಮನವೊಲಿಸಿ ಮತ್ತೆ ಮೂಲ ಧರ್ಮಕ್ಕೆ ಕರೆ ತರುವ ಕೆಲಸ ನಿರಂತರವಾಗಿ ನಡೆದಿದೆ ಎಂದು ರವಿ ನಾರಾಯಣ ರೆಡ್ಡಿ ಹೇಳಿದರು.

ಧರೆಗುರುಳಿದ ಮರ • ವಾಹನ ಸಂಚಾರ ಅಸ್ತವ್ಯಸ್ತ

ನಗರದಲ್ಲಿ ಹಲವೆಡೆ ಮಳೆ ಅಬ್ಬರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸೋಮವಾರ ಮಧ್ಯಾಹ್ನದಿಂದ ತಡರಾತ್ರಿವರೆಗೆ ಹಲವು ಪ್ರದೇಶಗಳಲ್ಲಿ ಮಳೆ ಅಬ್ಬರ ಹೆಚ್ಚಾಗಿತ್ತು.

ನಗರದ ಬಹುತೇಕ ಪ್ರದೇಶಗಳಲ್ಲಿ ಮಳೆ ಸುರಿಯಿತು. ಮಧ್ಯಾಹ್ನ ಶಾಲೆ ಬಿಡುವ ಸಂದರ್ಭದಲ್ಲಿ ಮಳೆ ಬಿರುಸಾಗಿದ್ದರಿಂದ ಮಕ್ಕಳು ಮನೆ ತಲುಪಲು ವಿಳಂಬವಾಯಿತು. ಪ್ರಮುಖ ರಸ್ತೆಗಳಲ್ಲಿ ನೀರು ನಿಂತು ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು.

ಮರಿಗೌಡ ರಸ್ತೆಯಿಂದ ಡೇರಿ ವೃತ್ತ, ಮಾರತ್ ಹಳ್ಳಿಯಿಂದ ಬೆಳ್ಳಂದೂರು, ಬಿಟಿಎಂ ಲೇಔಟ್ 29ನೇ ಮುಖ್ಯರಸ್ತೆ-ಯಿಂದ ಸಿಲ್ಕ್ ಬೋರ್ಡ್, ಗುಂಜೂರು ರಸ್ತೆಯಿಂದ ವರ್ತೂರು, ಐಟಿಪಿಎಲ್ ಮುಖ್ಯರಸ್ತೆಯಿಂದ ಹೂಡಿ, ಆಡುಗೋಡಿ ಜಂಕ್ಷನ್‌ನಿಂದ ಆನೆಪಾಳ್ಯ, ರೂಪೇನ ಅಗ್ರಹಾರದಿಂದ ಬೊಮ್ಮನಹಳ್ಳಿ, ಪಣತ್ತೂರು ಜಂಕ್ಷನ್‌ನಿಂದ ಬೋಗನಹಳ್ಳಿ, ಮೈಸೂರು ರಸ್ತೆ ಟೋಲ್‌ಗೇಟ್‌ನಿಂದ ಹೊಸ ಗುಡ್ಡದಹಳ್ಳಿ, ವಿಪ್ರೊ ಜಂಕ್ಷನ್‌ನಿಂದ ಕೈಕೊಂಡನಹಳ್ಳಿ, ಎಸ್‌ಜೆಪಿ ಮಾರುಕಟ್ಟೆಯಿಂದ ಪುರಭವನ, ಓಕಳಿಪುರಂ ಕೆಳಸೇತುವೆಯಿಂದ ಮೆಜೆಸ್ಟಿಕ್‌ವರೆಗಿನ ರಸ್ತೆಗಳಲ್ಲಿ ನೀರು ನಿಂತು ವಾಹನ ಸಂಚಾರ ನಿಧಾನಗತಿಯಲ್ಲಿತ್ತು.

ಮಡಿವಾಳ ಅಯ್ಯಪ್ಪ ಅಂಡರ್‌ಪಾಸ್‌ನಲ್ಲಿ ಮಳೆ ನೀರು ತುಂಬಿಕೊಂಡು ವಾಹನಗಳ ಸಂಚಾರ ಸಾಧ್ಯವಾಗಲಿಲ್ಲ. ಆರ್‌.ಟಿ ನಗರದ ಸಮೀಪದ ರಾಧಾಕೃಷ್ಣ ಚಿತ್ರಮಂದಿರದ ಬಳಿ ಹಾಗೂ ವೀರಣ್ಣ ಪಾಳ್ಯ ರೈಲ್ವೆ ಗೇಟ್ ಬಳಿ ಮರ ಧರೆಗುರುಳಿ ವಾಹನ ಸಂಚಾರಕ್ಕೆ ತಡೆಯಾಗಿತ್ತು.

ಕೆಇಬಿ ಜಂಕ್ಷನ್‌ನಿಂದ ಹೆಣ್ಣೂರು, ಹೆಣ್ಣೂರು ಬಾಗಲೂರು ಮುಖ್ಯರಸ್ತೆ, ಕೊತ್ತನೂರು ಮುಖ್ಯರಸ್ತೆಯಿಂದ ಕೆ. ನಾರಾಯಣಪುರ, ಹೆಬ್ಬಾಳ ಅಪ್ಪರ್ ರ್‍ಯಾಂಪ್‌ನಲ್ಲಿ ಮಳೆ ನೀರು ನಿಂತು ವಾಹನ ಸಂಚಾರಕ್ಕೆ ಅಡಚಣೆಯಾಗಿತ್ತು.

ಅತಿ ಹೆಚ್ಚು ಮಳೆ: ವಿದ್ಯಾಪೀಠದಲ್ಲಿ 4.6 ಸೆಂ.ಮೀ, ರಾಜರಾಜೇಶ್ವರಿ ನಗರದಲ್ಲಿ 3 ಸೆಂ.ಮೀ, ಬೊಮ್ಮನಹಳ್ಳಿ, ಕೋರಮಂಗಲ, ನಾಯಂಡಹಳ್ಳಿ, ಹಂಪಿನಗರ, ಪಟ್ಟಾಭಿರಾಮನಗರದಲ್ಲಿ ತಲಾ 2.8 ಸೆಂ.ಮೀ, ಬಿಟಿಎಂ ಲೇಔಟ್‌ನಲ್ಲಿ 2.2 ಸೆಂ.ಮೀ, ಎಚ್‌ಎಸ್‌ಆರ್ ಲೇಔಟ್, ಜಕ್ಕೂರು, ಎಚ್‌ಎಎಲ್ ವಿಮಾನ ನಿಲ್ದಾಣ, ವಿಶ್ವೇಶಪುರ, ಮಾರುತಿ ಮಂದಿರ, ವಿದ್ಯಾರಣ್ಯ ಪುರದಲ್ಲಿ ತಲಾ 2 ಸೆಂ.ಮೀ, ಜಕ್ಕೂರಿನಲ್ಲಿ 1.6 ಸೆಂ.ಮೀ, ಹೇರೋಹಳ್ಳಿ, ದೊರೆಸಾನಿ ಪಾಳ್ಯ, ವಿ. ನಾಗೇನಹಳ್ಳಿ, ಹೊರಮಾವು, ವನ್ನಾರಪೇಟೆ, ಬಾಣಸವಾಡಿಯಲ್ಲಿ ತಲಾ 1.5 ಸೆಂ.ಮೀ, ಕಾಟನ್‌ಪೇಟೆ, ಚಾಮರಾಜಪೇಟೆ, ಮಾರತ್‌ಹಳ್ಳಿ, ಬಸವೇಶ್ವರನಗರ, ಬೆಳ್ಳಂದೂರು, ರಾಮಮೂರ್ತಿನಗರ, ಶೆಟ್ಟಿಹಳ್ಳಿ ಸುತ್ತಮುತ್ತಲಿನ ಪ್ರದೇಶದಲ್ಲಿ 1.2 ಸೆಂ.ಮೀ ಮಳೆಯಾಗಿದೆ.



ಎಚ್‌ಎಎಲ್ ಕಾರ್ಪೊರೇಟ್ ಕಚೇರಿ ಬಳಿಯ ಮಿನ್ಸ್ಕ್ ಚೌಕದಲ್ಲಿ ಸೋಮವಾರ ಮಧ್ಯಾಹ್ನದಿಂದ ಸುರಿದ ಮಳೆಯಲ್ಲೂ ಜನರು ಸಾಗಿದರು
–ಪ್ರಜಾವಾಣಿ ಚಿತ್ರ: ರಂಜು ಪಿ

ಆನೇಕಲ್‌ನಲ್ಲಿ ಭರ್ಜರಿ ಮಳೆ

ಆನೇಕಲ್: ತಾಲ್ಲೂಕಿನಾದ್ಯಂತ ಕಳೆದ ಮೂರು ದಿನಗಳಿಂದ ಭರ್ಜರಿ ಮಳೆ ಸುರಿಯುತ್ತಿದೆ. ಹೆಬ್ಬಗೋಡಿ, ಬೊಮ್ಮಸಂದ್ರ, ಜಿಗಣಿ ಕೈಗಾರಿಕಾ ಪ್ರದೇಶಗಳಲ್ಲಿ ಭಾರಿ ಮಳೆಯಿಂದ ಗಿ ರಸ್ತೆಗಳು ಮಳೆಯ ಕಾಲುವೆಗಳಾಗಿದ್ದವು. ಆನೇಕಲ್- ಚಂದಾಪುರ ರಸ್ತೆ, ಆನೇಕಲ್–ಜಿಗಣಿಯ ರ ಮರಸೂರು ಗೇಟ್–ಚಂದಾಪುರ ರಸ್ತೆಯಲ್ಲಿ ಭಾರಿ ಗುಂಡಿಗಳಲ್ಲಿ ನೀರು ತುಂಬಿಕೊಂಡು ರಸ್ತೆ ಕಾಣದಂತೆ ಆಗಿತು. ಹೆನ್ನಾಗರ ಕೆರೆಯು ಮಳೆಯಿಂದ ಕೋಡಿ ಬಿದ್ದಿದೆ. ಕೋಡಿ ಹೋದ ನೀರು ತೋಟಗಳಿಗೆ ನುಗ್ಗುತ್ತಿದೆ.

ಡಿ.ಕೆ. ಶಿವಕುಮಾರ್‌ಗೆ ಡೆಂಗಿ: 3ದಿನ ವಿಶ್ರಾಂತಿ

ಪ್ರಜಾವಾಣಿ ವಾರ್ತೆ

ಕನಕಪುರ (ರಾಮನಗರ): ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಡೆಂಗಿ ಜ್ವರದಿಂದ ಬಳಲುತ್ತಿದ್ದು, ಮೂರು ದಿನ ವಿಶ್ರಾಂತಿ ಪಡೆಯಲು ವೈದ್ಯರು ಸಲಹೆ ಮಾಡಿದ್ದಾರೆ.

ಪೂರ್ವ ನಿಗದಿತ ಕಾರ್ಯಕ್ರಮ ಸೇರಿದಂತೆ ಮೂರು ದಿನ ಎಲ್ಲಾ ಕಾರ್ಯಕ್ರಮಗಳನ್ನು ಅವರು ಮುಂದೂಡಿದ್ದಾರೆ.

ಕೋಡಿಹಳ್ಳಿಯಲ್ಲಿ ಸೋಮವಾರ ನಡೆದ ಜನಸ್ಪಂದನ ಸಮಾವೇಶದಲ್ಲಿ ಈ ವಿಷಯ ತಿಳಿಸಿದ ಅವರು, 'ನಾಳೆಯಿಂದ ಯಾರ ಕೈಗೂ ಸಿಗುವುದಿಲ್ಲ' ಎಂದು ಹೇಳಿದರು.

'ಸಾರ್ವಜನಿಕರು, ಪಕ್ಷದ ಮುಖಂಡರು, ಕಾರ್ಯಕರ್ತರು ಸೇರಿದಂತೆ ಯಾರನ್ನೂ ಭೇಟಿ ಮಾಡಲು ಸಾಧ್ಯವಾಗುವುದಿಲ್ಲ. ಅದಕ್ಕಾಗಿ ವಿಷಾದಿಸುತ್ತೇನೆ. ಯಾರೂ ತಪ್ಪು ತಿಳಿಯಬಾರದು' ಎಂದು ಅವರು ಮನವಿ ಮಾಡಿದ್ದಾರೆ.

ತೆರಿಗೆ: ನೋಟಿಸ್ ಹಿಂಪಡೆಯುವಂತೆ ಆಗ್ರಹಿಸಿ 25ಕ್ಕೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಕರಿ, ಕಾಂಡಿಮೆಂಟ್ಸ್ ಸೇರಿದಂತೆ ಸಣ್ಣ ವ್ಯಾಪಾರಿಗಳಿಗೆ ತೆರಿಗೆ ಪಾವತಿ ಸಂಬಂಧ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ನೀಡಿರುವ ನೋಟಿಸ್‌ಗಳನ್ನು ಕೂಡಲೇ ಹಿಂಪಡೆಯುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಜುಲೈ 25ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ ಕಾರ್ಮಿಕ ಪರಿಷತ್ ತಿಳಿಸಿದೆ.

ಸೋಮವಾರ ಸುದ್ದಿಗೋಷ್ಠಿ-ಯಲ್ಲಿ ಮಾತನಾಡಿದ ಪರಿಷತ್ತಿನ ರಾಜ್ಯ ಘಟಕದ ಅಧಕ್ಷ ರವಿ ಶೆಟ್ಟಿ ಬೈಂದೂರು, 'ತೆರಿಗೆ ವ್ಯಾಪ್ತಿಯಿಂದ ಹೊರಗೆ ಇರುವ ಸಣ್ಣ ವ್ಯಾಪಾರಿಗಳಿಗೆ ತೆರಿಗೆ ಪಾವತಿಸುವಂತೆ ಅಧಿಕಾರಿಗಳು ನೋಟಿಸ್ ನೀಡುತ್ತಿರುವುದು ಅವೈಜ್ಞಾನಿಕವಾಗಿದೆ. ವ್ಯಾಪಾರ-ವಹಿವಾಟಿನ ಮೌಲ್ಯಮಾಪನ ಮಾಡದೇ 2021ರಿಂದ ಇದುವರೆಗೆ ನಡೆದಿರುವ ಬ್ಯಾಂಕಿನ ವಹಿವಾಟು ಆಧರಿಸಿ ನೋಟಿಸ್ ನೀಡಿರುವುದು ಖಂಡನೀಯ. ಜೀವನೋಪಾಯಕ್ಕಾಗಿ ಹಾಲು, ಹೂವು, ಹಣ್ಣು-ತರಕಾರಿ ಮಾರಾಟ ಮಾಡುವ ಬೀದಿಬದಿಯ ವ್ಯಾಪಾರಿಗಳಿಗೆ ಲಕ್ಷಾಂತರ ರೂಪಾಯಿ ತೆರಿಗೆ ಪಾವತಿಸುವಂತೆ ಒತ್ತಾಯಿಸುತ್ತಿರುವುದು ಸರಿಯಲ್ಲ' ಎಂದು ಹೇಳಿದರು.

'ವ್ಯಾಪಾರಿಗಳಿಗೆ ನೀಡಿರುವ ನೋಟಿಸ್‌ಗಳನ್ನು ಇದೇ 22ರ ಒಳಗೆ ಹಿಂಪಡೆಯಬೇಕು. ಇಲ್ಲದಿದ್ದರೆ ಜುಲೈ 23ರಿಂದ 24ರವರೆಗೆ ಕಪ್ಪು ಪಟ್ಟಿ ಧರಿಸಿ ವ್ಯಾಪಾರ ವಹಿವಾಟು ಮಾಡಲಾಗುತ್ತದೆ. ಜುಲೈ 25ರಂದು ರಾಜ್ಯದಾದ್ಯಂತ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು' ಎಂದು ಅವರು ಎಚ್ಚರಿಕೆ ನೀಡಿದರು.

9ನೇ ಹವ್ಯಕ ಬ್ಯಾಡ್ಮಿಂಟನ್ ಟೂರ್ನಿ

ಅಖಿಲ್, ವರ್ಷಾಗೆ ಸಿಂಗಲ್ಸ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೇಯಾಂಕಿತರಾದ ಅಖಿಲ್ ಹೆಗಡೆ ಮತ್ತು ವರ್ಷಾ ಭಟ್ ಅವರು ಭಾನುವಾರ ಇಲ್ಲಿ ಮುಕ್ತಾಯಗೊಂಡ 9ನೇ ಹವ್ಯಕ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಓಪನ್ ವಿಭಾಗದ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಹವ್ಯಕ ಬ್ಯಾಡ್ಮಿಂಟ್ ಸಂಸ್ಥೆ ಆಶ್ರಯದಲ್ಲಿ ಅಂಜನಾಪುರದ ಸಿಲಿಕಾನ್ ಸಿಟಿ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ನಡೆದ ಎರಡು ದಿನಗಳ ಟೂರ್ನಿಯ ಫೈನಲ್‌ನಲ್ಲಿ ಅಖಿಲ್, ಸಾತ್ವಿಕ್ ಭಟ್ ಅವರನ್ನು ಸೋಲಿಸಿದರು. ಡಬಲ್ಸ್‌ನಲ್ಲಿ ಮುರಳಿ ಹೆಗಡೆ ಜೊತೆಗೂಡಿದ ಅಖಿಲ್, ಎದುರಾಳಿ ಪ್ರಜ್ವಲ್ ಜಿ.ಭಟ್- ಸಮಿತ್ ಹೆಗಡೆ ಜೋಡಿಯನ್ನು ಸೋಲಿಸಿ ಪ್ರಶಸ್ತಿ ಡಬಲ್ ಪೂರೈಸಿದರು. ಶ್ರೇಯಾಂಕರಹಿತ ಪುರುಷರ ಓಪನ್ ಸಿಂಗಲ್ಸ್ ಫೈನಲ್‌ನಲ್ಲಿ ಪ್ರಜ್ವಲ್ ಭಟ್, ದಿಗಂತ್ ಹೆಗಡೆ ಅವರನ್ನು ಸೋಲಿಸಿದರು.

ವರ್ಷಾ ಭಟ್, ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ರಕ್ಷಾ ದಿನೇಶ್ ಹೆಗಡೆ ವಿರುದ್ಧ ಜಯಗಳಿಸಿದರು. ಮಹಿಳಾ ಡಬಲ್ಸ್‌ನಲ್ಲಿ ರಕ್ಷಾ ದಿನೇಶ್- ತ್ರಿಷಾ ಜೋಡಿ ಫೈನಲ್‌ನಲ್ಲಿ ಸುನೀತಾ ಮತ್ತು ವರ್ಷಾ ಭಟ್ ಜೋಡಿಯನ್ನು ಮಣಿಸಿತು.

16 ವರ್ಷದೊಳಗಿನವರ ಬಾಲಕರ ಸಿಂಗಲ್ಸ್‌ನಲ್ಲಿ ದಿಗಂತ್ ಹೆಗಡೆ, ಅವಿಕ್ ವಿರುದ್ಧ, ಬಾಲಕಿಯರ ಸಿಂಗಲ್ಸ್ ಫೈನಲ್‌ನಲ್ಲಿ ತ್ರಿಷಾ ಹೆಗಡೆ, ಚಾರ್ವಿ ಗಣೇಶ್ ವಿರುದ್ಧ ಜಯಗಳಿಸಿ ಪ್ರಶಸ್ತಿ ವಿಜೇತರಾದರು. ಈ ವಯೋವರ್ಗದ ಮಿಶ್ರ ಡಬಲ್ಸ್ ಫೈನಲ್‌ನಲ್ಲಿ ತ್ರಿಷಾ–ದಿಗಂತ್ ಹೆಗಡೆ ಜೋಡಿ, ಸಚಿನ್ ಹೆಗಡೆ– ಮಾನ್ವಿ ಹೆಬ್ಬಾರ್ ಜೋಡಿಯನ್ನು ಸೋಲಿಸಿತು.

35 ವರ್ಷ ಮೇಲ್ಪಟ್ಟವರ ವಿಭಾಗದಲ್ಲಿ ಅಶ್ವಿನಿ ಕುಮಾರ್ ಭಟ್ ಫೈನಲ್‌ನಲ್ಲಿ ಸಂದೇಶ್ ಕುಮಾರ್ ಎಚ್.ಕೆ. ವಿರುದ್ಧ, ಇದೇ ವಯೋವರ್ಗದ ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಅಕ್ಷತಾ ಎಂ.ಕೆ., ಶಾಂತಾ ಹೆಗಡೆ ವಿರುದ್ಧ ಜಯಶಾಲಿಯಾದರು. 50 ವರ್ಷ ಮೇಲ್ಪಟ್ಟ ಪುರುಷರ ಸಿಂಗಲ್ಸ್‌ನಲ್ಲಿ ಮೋಹನ್ ಶ್ರೀನಿವಾಸ್ ಫೈನಲ್‌ನಲ್ಲಿ ಶ್ರೀರಂಗ ಆರ್.ಹೆಗಡೆ ವಿರುದ್ಧ, ಮಹಿಳೆಯರ ವಿಭಾಗದ ಸಿಂಗಲ್ಸ್ ಫೈನಲ್‌ನಲ್ಲಿ ಅನ್ನಪೂರ್ಣಾ ಭಟ್, ಶೋಭಾ ಜಿ.ಹೆಗಡೆ ವಿರುದ್ಧ ಗೆಲುವು ಪಡೆದರು.

60 ವರ್ಷ ಮೇಲ್ಪಟ್ಟವರ ಸಿಂಗಲ್ಸ್ ಫೈನಲ್‌ನಲ್ಲಿ ಗಂಗಾಧರ ಸಿ.ಹೆಗಡೆ, ರಾಘವೇಂದ್ರ ಎಂ.ಎಸ್. ಅವರನ್ನು ಸೋಲಿಸಿ ವಿಜೇತರಾದರು.

ಅಂತರರಾಷ್ಟ್ರೀಯ ಆಟಗಾರ ಅರವಿಂದ ಭಟ್ ಮತ್ತು ಲೆಕ್ಕ ಪರಿಶೋಧಕ ಪ್ರಕಾಶ ಹೆಗಡೆ ಅವರು ವಿಜೇತರಿಗೆ ಬಹುಮಾನ ವಿತರಿಸಿದರು.

ವಿಐಪಿ ಸಂಚಾರ: ಸೈರನ್‌ಗೆ ಕಡಿವಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತಿ ಗಣ್ಯ ವ್ಯಕ್ತಿಗಳ (ವಿಐಪಿ) ಸಂಚಾರದ ವೇಳೆ ವಾಹನಗಳು ಸೈರನ್ ಬಳಸದಂತೆ ಆದೇಶ ಹೊರಡಿಸಲಾಗಿದೆ.

ಸಾರ್ವಜನಿಕರ ಸುರಕ್ಷತೆ ಹಾಗೂ ಶಬ್ದ ಮಾಲಿನ್ಯ ನಿಯಂತ್ರಿಸುವ ಉದ್ದೇಶದಿಂದ ಹೊರಡಿಸಲಾಗಿರುವ ಈ ಆದೇಶವನ್ನು ಎಲ್ಲಾ ಘಟಕಾಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ ಅವರು ಸೂಚಿಸಿದ್ದಾರೆ.

ಗಣ್ಯ ವ್ಯಕ್ತಿಗಳ ಸಂಚಾರದ ಸಮಯದಲ್ಲಿ ಅನವಶ್ಯಕವಾಗಿ ಸೈರನ್ ಬಳಕೆ ಮಾಡುವುದರಿಂದ ಗಣ್ಯರು ಯಾವ ರಸ್ತೆಯಲ್ಲಿ ಚಲಿಸುತ್ತಿದ್ದಾರೆ ಎಂಬ ಬಗ್ಗೆ ಅನಧಿಕೃತ ವ್ಯಕ್ತಿಗಳಿಗೆ ಮಾಹಿತಿ ರವಾನೆಯಾಗಲಿದೆ. ಗಣ್ಯ ವ್ಯಕ್ತಿಗಳಿಗೆ ಅಪಾಯ ಉಂಟಾಗುವ ಸಾಧ್ಯತೆ ಇರುತ್ತದೆ. ಸೈರನ್ ಬಳಕೆಯಿಂದ ಸಾರ್ವಜನಿಕರಿಗೆ ತೊಂದರೆ ಆಗುವುದಲ್ಲದೇ ಶಬ್ದ ಮಾಲಿನ್ಯವೂ ಆಗುತ್ತದೆ. ಸಾರ್ವಜನಿಕ ರಸ್ತೆಗಳಲ್ಲಿ ಹಠಾತ್ತಾಗಿ ಸೈರನ್ ಬಸುವುದರಿಂದ ಇತರೆ ವಾಹನಗಳ ಚಾಲಕರಿಗೆ ದ್ವಂದ್ವ ಉಂಟಾಗಿ, ಯಾವ ಕಡೆಗೆ ಚಲಿಸಬೇಕೆಂದು ತಿಳಿಯದೇ ವಾಹನವನ್ನು ಅಡ್ಡಾದಿಡ್ಡಿಯಾಗಿ ಚಲಾಯಿಸಿ ಬೆಂಗಾವಲು ಮತ್ತು ಇತರೆ ವಾಹನಗಳಿಗೆ ಗೊಂದಲ ಉಂಟು ಮಾಡುವ ಸಾಧ್ಯತೆ ಇರುತ್ತದೆ ಎಂದು ವಿವರಿಸಿದ್ದಾರೆ.



ಎಂ.ಎ. ಸಲೀಂ

ಅತಿ ಗಣ್ಯರ ಸಂಚಾರದ ವೇಳೆ ವಾಹನಗಳ ತುರ್ತು ಚಲನವಲನದ ಅವಶ್ಯಕತೆಗೆ ಅನುಗುಣವಾಗಿ ದೂರಸಂಪರ್ಕ ಸಾಧನಗಳಾದ 'ವೈರ್‌ಲೆಸ್ ಕಮ್ಯುನಿಕೇಶನ್ ವ್ಯವಸ್ಥೆ'ಯನ್ನು ಪರಿಣಾಮಕಾರಿಯಾಗಿ ಉಪಯೋಗಿಸುವುದು ಹೆಚ್ಚು ಶಿಸ್ತಿನ ಹಾಗೂ ಸುರಕ್ಷತೆಯ ಮಾರ್ಗವಾಗಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಸೈರನ್‌ಗಳನ್ನು ಕೇವಲ ತುರ್ತು ಸೇವಾ ವಾಹನಗಳಾದ ಆಂಬುಲೆನ್ಸ್, ಪೊಲೀಸ್ ವಾಹನಗಳು ಹಾಗೂ ಅಗ್ನಿಶಾಮಕ ವಾಹನಗಳು ಅನಿವಾರ್ಯ ಪರಿಸ್ಥಿತಿಗಳಲ್ಲಿ ಮಾತ್ರ ಬಳಸಬೇಕು. ಈ ಆದೇಶವನ್ನು ಪಾಲಿಸುವಂತೆ ಅಧಿಕಾರಿಗಳು, ಸಿಬ್ಬಂದಿಗೆ ಎಲ್ಲ ಘಟಕಾಧಿಕಾರಿಗಳು ಸೂಚನೆ ನೀಡಬೇಕು ಎಂದು ಸಲೀಂ ಅವರು ತಿಳಿಸಿದ್ದಾರೆ.

'ವಿಜಯೇಂದ್ರ ಕುರ್ಚಿ ಅಲುಗಾಡುತ್ತಿದೆ'

ಪಾವಗಡ(ತುಮಕೂರು): ಮಾತೆತ್ತಿದರೆ ಚುನಾವಣೆಗೆ ಬರುವಂತೆ ಆಹ್ವಾನ ನೀಡುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಕುರ್ಚಿಯೇ ಅಲುಗಾಡುತ್ತಿದೆ. ಮುಂದಿನ ವಿಧಾನಸಭೆ ಚುನಾವಣೆವರೆಗೂ ಅಧ್ಯಕ್ಷರಾಗಿ ಇರುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ಕುಟುಕಿದರು. ಜತೆಗೆ 2028ರ ವರೆಗೆ ನಾವು ಅಧಿಕಾರದಲ್ಲಿ ಇರುತ್ತೇವೆ. ಮುಂದೆಯೂ ಅಧಿಕಾರಕ್ಕೆ ಬರುತ್ತೇವೆ ಎಂದರು.

ವರಿಷ್ಠರ ಕಾಣಲು ಬಂದ ಬಿಜೆಪಿ ಭಿನ್ನರು

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ರಾಜ್ಯ ಘಟಕ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಬದಲಾವಣೆಗೆ ಪಟ್ಟು ಹಿಡಿದಿರುವ ಪಕ್ಷದ ಭಿನ್ನಮತೀಯ ನಾಯಕರು ರಾಷ್ಟ್ರ ರಾಜಧಾನಿಗೆ ಸೋಮವಾರ ಬಂದಿದ್ದಾರೆ.

ಕರ್ನಾಟಕದಲ್ಲಿ ನೆಲಸಿರುವ ಬಾಂಗ್ಲಾದೇಶದ ಅಕ್ರಮ ವಲಸಿಗರ ಬಗ್ಗೆ ಸಿದ್ಧಪಡಿಸಿರುವ ವರದಿಯನ್ನು ವರಿಷ್ಠರಿಗೆ ಮಂಗಳವಾರ ಸಲ್ಲಿಸಲಾಗುವುದು. ಇದೇ ವೇಳೆ, ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆಗೆ ಮತ್ತೊಮ್ಮೆ ಒತ್ತಡ ಹೇರುವ ಪ್ರಯತ್ನ ನಡೆಸಲಾಗುವುದು ಎಂದು ಭಿನ್ನರ ಬಣದ ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು


ಜಿಕೆವಿಕೆ ಜಾತ್ರೆ–50 ಹೇಗಿರುತ್ತೆ ಗೊತ್ತಾ?: ಅತಿಥಿ: ಎಸ್.ವಿ. ಸುರೇಶ, ಆಯೋಜನೆ: ಜಿಕೆವಿಕೆ ಕ್ಯಾಂಪಸ್‌ನ ಮೊದಲ ಬ್ಯಾಚ್ ವಿದ್ಯಾರ್ಥಿಗಳು, ಸ್ಥಳ: ಜಿಕೆವಿಕೆ ಹೆಬ್ಬಾಗಿಲು, ಬಳ್ಳಾರಿ ರಸ್ತೆ, ಬೆಳಿಗ್ಗೆ 8ರಿಂದ

ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳು, ಗರ್ಭಿಣಿಯರು ಮತ್ತು ಬಾಣಂತಿಯರಿಗೆ ಪೌಷ್ಟಿಕ ಆಹಾರ ವಿತರಿಸಲು ಮುಖಚರ್ಯೆ ಗುರುತಿನ ತಂತ್ರಜ್ಞಾನದ ಕುರಿತು ದುಂಡು ಮೇಜಿನ ಸಭೆ: ಭಾಗವಹಿಸುವವರು: ಎಸ್. ವರಲಕ್ಷ್ಮಿ, ವಿನಯ್ ಶ್ರೀನಿವಾಸ್, ರಾಜೇಂದ್ರ ನಾರಾಯಣನ್, ದೀಪ ಸಿನ್ಹಾ, ಶುಭಂಕರ್ ಚಕ್ರವರ್ತಿ, ಆಯೋಜನೆ: ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ, ಭಾರತ ಜ್ಞಾನ ವಿಜ್ಞಾನ ಸಮಿತಿ, ಸ್ಥಳ: ಗಾಂಧಿ ಭವನ, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ 11

ಪದವಿ ದಿನ: ಅತಿಥಿಗಳು: ಯು.ಟಿ. ಖಾದರ್, ರಾಜೇಶ್ ಶೆಣೈ, ಅಧ್ಯಕ್ಷತೆ: ಎಂ.ವಿ. ಮುನಿರಾಜ್, ಆಯೋಜನೆ: ಎಂವಿಎಂ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಅರಮನೆ ರಸ್ತೆ, ಬೆಳಿಗ್ಗೆ 11

ಗಂಧದ ಗುಡಿ ರಥ ಯಾತ್ರೆಗೆ ಚಾಲನೆ: ಎನ್. ಸಂತೋಷ್ ಹೆಗ್ಡೆ, ಆಯೋಜನೆ: ರೈತಪರ ಸಂಘಟನೆಗಳು, ಕನ್ನಡಪರ ಸಂಘಟನೆಗಳು, ರಥ ಯಾತ್ರೆ ಪ್ರಾರಂಭವಾಗುವ ಸ್ಥಳ: ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರನಿಂದ ವಿಧಾನಸೌಧದವರೆಗೆ, ಬೆಳಿಗ್ಗೆ 11

ಪ್ರತಿಭಾ ಪುರಸ್ಕಾರ ಕಾರ್ಯಕ್ರಮ: ಸಾನ್ನಿಧ್ಯ: ನಿರಂಜನಾನಂದಪುರಿ ಸ್ವಾಮೀಜಿ, ಶಿವಾನಂದಪುರಿ ಸ್ವಾಮೀಜಿ, ಸಿದ್ಧರಾಮಾನಂದಪುರಿ ಸ್ವಾಮೀಜಿ, ಈಶ್ವರಾನಂದಪುರಿ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಪ್ರತಿಭಾ ಪುರಸ್ಕಾರ ಪ್ರದಾನ: ಬೈರತಿ ಸುರೇಶ್, ಅಧ್ಯಕ್ಷತೆ: ಎಚ್.ಎಂ. ರೇವಣ್ಣ, ಆಯೋಜನೆ: ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ, ಸ್ಥಳ: ಬಂಟರ ಸಂಘ, ವಿಜಯನಗರ, ಬೆಳಿಗ್ಗೆ 11



ಬಾಯಿಯಲ್ಲಿ ಹುಣ್ಣುಗಳಾಗಿದ್ದರೆ, ಶುದ್ಧ ತೆಂಗಿನೆಣ್ಣೆಯ ಎರಡು ಹನಿಗಳನ್ನು ಹುಣ್ಣಾಗಿರುವ ಭಾಗಕ್ಕೆ ಹಚ್ಚಬಹುದು. ಇದರಿಂದ ನೋವು ಸ್ವಲ್ಪ ಉಪಶಮನವಾಗುತ್ತದೆ

ಬ್ಯಾಕ್ಟೀರಿಯಾ ವೈರಸ್ ಸೋಂಕುಗಳು

ಒಂದೇ ಆ್ಯಂಟಿಬಯಾಟಿಕ್ ಎಲ್ಲ ರೀತಿಯ ಬ್ಯಾಕ್ಟೀರಿಯಾಗಳ ಮೇಲೂ ಪರಿಣಾಮಕಾರಿ ಆಗಲಾರದು. ಒಂದೊಂದು ಬಗೆಯ ಬ್ಯಾಕ್ಟೀರಿಯಾಗೆ ಒಂದೊಂದು ಬಗೆಯ ಆ್ಯಂಟಿಬಯಾಟಿಕ್ ಕೆಲಸ ಮಾಡುತ್ತದೆ. ಆ್ಯಂಟಿಬಯಾಟಿಕ್‌ಗಳು ಶರೀರದ ಜೀವಕೋಶಗಳ ಮೇಲೆಯೂ ದಾಳಿ ಮಾಡಿ, ಅಡ್ಡಪರಿಣಾಮಗಳನ್ನು ಉಂಟುಮಾಡುತ್ತವೆ.

• ಡಾ. ಕಿರಣ್ ವಿ. ಎಸ್.

ಇಂದಿನ ಜಂಜಾಟದ ಜೀವನದಲ್ಲಿ ಬದುಕಿನ ಆದ್ಯತೆಗಳು ಏರುಪೇರಾಗಿವೆ. ಆಹಾರ, ಆರೋಗ್ಯ, ವ್ಯಾಯಾಮ, ನಿದ್ರೆಯಂತಹ ಮೂಲಭೂತ ಅಗತ್ಯಗಳನ್ನು ಜನರು ನಿರ್ಲಕ್ಷಿಸುತ್ತಿದ್ದಾರೆ. ಇದರಿಂದ ದೈಹಿಕ ಹಾಗೂ ಮಾನಸಿಕ ಒತ್ತಡಗಳು ಹೆಚ್ಚಾಗುತ್ತಿವೆ. ಪರಿಣಾಮವಾಗಿ ಶರೀರವನ್ನು ಕಾಡುವ ಸೋಂಕುಗಳು ಏರುತ್ತಿವೆ. ಹಲವಾರು ಪರೋಪಜೀವಿಗಳು ದೇಹವನ್ನು ಕಾಡಬಹುದಾದರೂ, ಇದರ ಬಹುಭಾಗ ಬ್ಯಾಕ್ಟೀರಿಯಾ ಮತ್ತು ವೈರಲ್ ಸೋಂಕುಗಳು. ಇವೆರಡರ ನಡುವೆ ಇರುವ ವ್ಯತ್ಯಾಸಗಳನ್ನು ತಿಳಿದರೆ, ಅವುಗಳ ನಿರ್ವಹಣೆ ಸಮಂಜಸವಾಗುತ್ತದೆ.

ಬ್ಯಾಕ್ಟೀರಿಯಾ ಸ್ವತಂತ್ರ ಪರೋಪಜೀವಿ. ಅಂದರೆ, ಅದು ತನ್ನ ಬೆಳವಣಿಗೆಗಾಗಿ ಅಗತ್ಯವಾದ ಪೋಷಕಾಂಶಗಳು ದೊರೆತರೆ ಸ್ವತಂತ್ರವಾಗಿ ಬದುಕಬಲ್ಲದು. ಇಂತಹ ಪೋಷಕಾಂಶಗಳನ್ನು ನೀಡಿ ಅವುಗಳನ್ನು ಪ್ರಯೋಗಶಾಲೆಯಲ್ಲಿ ಬೆಳೆಸಬಹುದು. ಹೀಗಾಗಿ ಅವು ಅಭಿವೃದ್ಧಿಗೊಳ್ಳಲು ಜೀವಕೋಶಗಳೇ ಬೇಕು ಎನ್ನುವ ಕಡ್ಡಾಯವಿಲ್ಲ. ಜಗತ್ತಿನಲ್ಲಿ ಸಾವಿರಾರು ಬಗೆಯ ಬ್ಯಾಕ್ಟೀರಿಯಾಗಳು ಇವೆಯಾದರೂ, ಅವುಗಳಲ್ಲಿ ಕೆಲವು ಮಾತ್ರ ಮಾನವರಲ್ಲಿ ಸೋಂಕು ಉಂಟುಮಾಡುತ್ತವೆ. ಸೋಂಕು ಉಂಟುಮಾಡದ ಕೋಟ್ಯಂತರ ಬ್ಯಾಕ್ಟೀರಿಯಾಗಳು ನಮ್ಮ ಕರುಳಿನೊಳಗೇ ವಾಸಮಾಡುತ್ತಾ, ನಮ್ಮೊಡನೆ ಸಹಜೀವನವನ್ನು ನಡೆಸುತ್ತಾ, ನಮ್ಮ ದೇಹದ ಕಾರ್ಯಗಳನ್ನು ನಿಯಂತ್ರಿಸುತ್ತಿರುತ್ತವೆ. ನಮ್ಮೊಳಗಿನ ಒಡನಾಡಿ ಬ್ಯಾಕ್ಟೀರಿಯಾಗಳ ಸಂಖ್ಯೆ ನಮ್ಮ ಶರೀರದ ಒಟ್ಟಾರೆ ಎಲ್ಲ ಜೀವಕೋಶಗಳಿಗಿಂತಲೂ ಹೆಚ್ಚು.

ಇದರ ಹೊರತಾಗಿ, ನಮ್ಮ ದೇಹಕ್ಕೆ ಸೋಂಕು ಉಂಟುಮಾಡುವ ಬ್ಯಾಕ್ಟೀರಿಯಾಗಳೂ ನೂರಾರು ಬಗೆಯವು. ಇವುಗಳಲ್ಲಿ ಕೆಲವು ತೀವ್ರ ಪ್ರಮಾಣದ ಸೋಂಕು ಉಂಟುಮಾಡಿ, ಶರೀರವನ್ನು ಅಪಾಯಕ್ಕೆ ಸಿಲುಕಿಸಬಲ್ಲವು. ಶರೀರವನ್ನು ಸೇರಿದ ಬ್ಯಾಕ್ಟೀರಿಯಾಗಳು ಮೊದಲು ದೇಹದ ಜೀವಕೋಶಗಳನ್ನು ಹಿಡಿದು, ಪೋಷಕಾಂಶಗಳನ್ನು ಸೆಳೆಯುತ್ತವೆ. ಆನಂತರ ತಮ್ಮ ಸಂಖ್ಯೆಯನ್ನು ವೃದ್ಧಿಸುತ್ತವೆ. ಕೆಲವೇ ಕಾಲದಲ್ಲಿ ಇಂತಹ ಸೋಂಕುಕಾರಕ ಬ್ಯಾಕ್ಟೀರಿಯಾಗಳ ಸಂಖ್ಯೆ ವಿಪರೀತವಾಗುತ್ತದೆ. ಶರೀರದಲ್ಲಿ ಲಭ್ಯವಿರುವ ಪೋಷಕಾಂಶಗಳನ್ನು ಬ್ಯಾಕ್ಟೀರಿಯಾಗಳು ಬಳಸಿಕೊಳ್ಳುವುದರಿಂದ, ಶರೀರಕ್ಕೆ ಸಹಜವಾಗಿ ದೊರೆಯಬೇಕಿದ್ದ ಪೋಷಕಾಂಶಗಳು ತಲುಪದೆ ಅಂಗಗಳು ಸೊರಗುತ್ತವೆ; ಅವುಗಳ ಕೆಲಸಗಳು ಕುಂಠಿತವಾಗುತ್ತವೆ. ಬ್ಯಾಕ್ಟೀರಿಯಾ ಉತ್ಪಾದಿಸುವ ವಿಷಕಾರಿವಸ್ತುಗಳಿಂದ ದೇಹಕ್ಕೆ ಬಾಧೆಯಾಗುತ್ತದೆ. ಅಪಾಯಕಾರಿ ಪರೋಪಜೀವಿಯೊಂದು ದೇಹವನ್ನು ಕಂಗೆಡಿಸುತ್ತಿದೆ ಎನ್ನುವ ಸೂಚನೆ ಬಂದ ಕೂಡಲೇ ಶರೀರದ ರಕ್ಷಕವ್ಯವಸ್ಥೆ ಜಾಗೃತವಾಗಿ, ಬ್ಯಾಕ್ಟೀರಿಯಾ ವಿರುದ್ಧ ಹೊಡೆದಾಟಕ್ಕೆ ಸಜ್ಜಾಗುತ್ತದೆ. ಕೆಲವೊಮ್ಮೆ ಬ್ಯಾಕ್ಟೀರಿಯಾ ಸೋಂಕಿನ ತೀವ್ರತೆಗಿಂತಲೂ ರಕ್ಷಕವ್ಯವಸ್ಥೆಯ ಪ್ರತಿಕ್ರಿಯೆ ದೇಹದ ಪಾಲಿಗೆ ಹೆಚ್ಚು ಭಯಂಕರವಾಗಿರುತ್ತದೆ. ರಕ್ಷಕವ್ಯವಸ್ಥೆಯ ಹುಚ್ಚಾಪಟ್ಟೆ ಕಾದಾಟದಲ್ಲಿ ಶರೀರ ಹೆಚ್ಚು ನಷ್ಟ ಅನುಭವಿಸುವ ಪ್ರಸಂಗಗಳೂ ಇವೆ. ಬ್ಯಾಕ್ಟೀರಿಯಾ ನಿಗ್ರಹದಲ್ಲಿ ದೇಹದ ರಕ್ಷಕವ್ಯವಸ್ಥೆ ಬಹುತೇಕ ಯಶಸ್ವಿಯಾಗಬಲ್ಲದಾದರೂ, ಕೆಲವೊಮ್ಮೆ ಈ ಸಂಗ್ರಾಮದಲ್ಲಿ ಬ್ಯಾಕ್ಟೀರಿಯಾದ್ದೇ ಮೇಲುಗೈ ಆಗಬಹುದು. ಇಂತಹ ಸಂದರ್ಭಗಳಲ್ಲಿ ಬ್ಯಾಕ್ಟೀರಿಯಾಗಳನ್ನು ಕೊಲ್ಲಬಲ್ಲ ಆ್ಯಂಟಿಬಯಾಟಿಕ್ ಔಷಧಗಳ ನೆರವು ಬೇಕಾಗುತ್ತದೆ.



ಒಂದೇ ಆ್ಯಂಟಿಬಯಾಟಿಕ್ ಎಲ್ಲ ರೀತಿಯ ಬ್ಯಾಕ್ಟೀರಿಯಾಗಳ ಮೇಲೂ ಪರಿಣಾಮಕಾರಿ ಆಗಲಾರದು. ಒಂದೊಂದು ಬಗೆಯ ಬ್ಯಾಕ್ಟೀರಿಯಾಗೆ ಒಂದೊಂದು ಬಗೆಯ ಆ್ಯಂಟಿಬಯಾಟಿಕ್ ಕೆಲಸ ಮಾಡುತ್ತದೆ. ಆ್ಯಂಟಿಬಯಾಟಿಕ್‌ಗಳು ಶರೀರದ ಇತರ ಜೀವಕೋಶಗಳ ಮೇಲೆಯೂ ದಾಳಿ ಮಾಡಿ, ಅಡ್ಡಪರಿಣಾಮಗಳನ್ನು ಉಂಟುಮಾಡುತ್ತವೆ. ರೋಗದ ಲಕ್ಷಣಗಳನ್ನು ಗಮನಿಸಿ ವೈದ್ಯರು ಸೂಕ್ತವಾದ ಆ್ಯಂಟಿಬಯಾಟಿಕ್‌ನ ಅಂದಾಜನ್ನು ಮಾಡಬಹುದು. ತೀವ್ರ ಸೋಂಕುಗಳಲ್ಲಿ ಈ ಅಂದಾಜು ಕೆಲಸಕ್ಕೆ ಬಾರದು. ಆಗ ಮೊದಲು ರೋಗಕಾರಕ ಬ್ಯಾಕ್ಟೀರಿಯಾ ಯಾವುದೆಂದು ಗುರುತಿಸಿ, ಅದಕ್ಕೆ ಯಾವ ಆ್ಯಂಟಿಬಯಾಟಿಕ್ ಕೆಲಸ ಮಾಡುತ್ತದೆ ಎಂಬುದನ್ನು ಪ್ರಯೋಗಾಲಯದ ದುಬಾರಿ ಪರೀಕ್ಷೆಗಳ ಮೂಲಕ ತಿಳಿಯಬೇಕು. ಇದಕ್ಕೆ ಎರಡು-ಮೂರು ದಿನಗಳ ಕಾಲಾವಧಿ ಹಿಡಿಯುತ್ತದೆ. ಬಹಳಷ್ಟು ಬಾರಿ ಚಿಕಿತ್ಸೆಗಿಂತಲೂ ಪರೀಕ್ಷೆಗಳೇ ದುಬಾರಿ. 'ನಾಲ್ಕಾಣೆ ಕೋತಿಗೆ ಹನ್ನೆರಡಾಣೆ ಬೆಲ್ಲ' ಎನ್ನುವ ಮಾತಿನಂತಾಗುತ್ತದೆ.

ವೈರಸ್ ಸೋಂಕು ಬ್ಯಾಕ್ಟೀರಿಯಾಗಿಂತ ಭಿನ್ನ. ವೈರಸ್ ಎಂಬುದು ಸ್ವತಂತ್ರ ಜೀವಿಯಲ್ಲ; ಅದು ಜೀವ-ನಿರ್ಜೀವಗಳ ಗಡಿಯಲ್ಲಿರುವುದು. ವೈರಸ್ ಮೂಲತಃ ಪ್ರೋಟೀನ್ ಕೋಟೆಯೊಳಗಿನ ಡಿ.ಎನ್.ಎ., ಇಲ್ಲವೇ ಆರ್.ಎನ್.ಎ. ಎನ್ನುವ ಜೀವದ್ರವ್ಯ. ಪರಕೀಯ ಜೀವಕೋಶದೊಳಗೆ ಪ್ರವೇಶಿಸುವ ವೈರಸ್, ಅಲ್ಲಿಯ ಪೋಷಕಾಂಶಗಳಿಂದ ನೇರವಾಗಿ ಬೆಳೆಯುವುದಿಲ್ಲ. ಬದಲಿಗೆ ತನ್ನ ಪ್ರೋಟೀನ್ ಆವರಣವನ್ನು ಕಳಚಿ, ಡಿ.ಎನ್.ಎ., ಇಲ್ಲವೇ ಆರ್.ಎನ್.ಎ. ಎನ್ನುವ ತನ್ನ ಜೆನೆಟಿಕ್ ದ್ರವ್ಯವನ್ನು ಪರಕೀಯ ಜೀವಕೋಶದ ನ್ಯೂಕ್ಲಿಯಸ್‌ನ ಒಳಗೆ ಸೇರಿಸಿ, ಇಡೀ ಕೋಶವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡು, ತನ್ನ ಪ್ರಭೇದದ ಹೊಸ ವೈರಸ್‌ಗಳನ್ನು ಉತ್ಪಾದಿಸುವ ಕಾರ್ಖಾನೆ ಆಗುತ್ತದೆ. ಹೀಗೆ ಉತ್ಪತ್ತಿಯಾದ ಹೊಸ ವೈರಸ್‌ಗಳು ಅಕ್ಕಪಕ್ಕದ ಕೋಶಗಳಿಗೆ ಲಗ್ಗೆ ಇಟ್ಟು ಅದೇ ಪ್ರಕ್ರಿಯೆಯನ್ನು ಮುಂದುವರೆಸುತ್ತವೆ.

ವೈರಸ್‌ನ ದಾಳಿಗೂ ಶರೀರದ ರಕ್ಷಕವ್ಯವಸ್ಥೆ ಸ್ಪಂದಿಸುತ್ತದೆ; ಬಹುತೇಕ ವೈರಸ್‌ಗಳನ್ನು ನಿರ್ಮೂಲನ ಮಾಡಿ ಪರಿಸ್ಥಿತಿಯನ್ನು ಹತೋಟಿಗೆ ತರಬಲ್ಲದು. ವೈರಸ್ ಸೋಂಕಿನ ವಿರುದ್ಧ ಆ್ಯಂಟಿಬಯಾಟಿಕ್ ಔಷಧಗಳು ಯಾವುದೇ ಪರಿಣಾಮ ಉಂಟುಮಾಡಲಾರವು. ಬಹಳ ತೀವ್ರವಾದ ವೈರಸ್ ಸೋಂಕಿನಲ್ಲಿ ಮಾತ್ರ ಆ್ಯಂಟಿ-ವೈರಲ್ ಔಷಧಗಳನ್ನು ನೀಡಬೇಕಾಗುತ್ತದೆ. ಬ್ಯಾಕ್ಟೀರಿಯಾಗಳನ್ನು ಪ್ರಯೋಗಾಲಯದಲ್ಲಿ ನೇರವಾಗಿ ಪತ್ತೆ ಮಾಡುವಂತೆ ವೈರಸ್‌ಗಳನ್ನು ಪತ್ತೆ ಮಾಡಲು ಸಾಧ್ಯವಿಲ್ಲ. ಅದಕ್ಕೆ ಕೆಲವು ಪರೋಕ್ಷ ವಿಧಾನಗಳು ಮಾತ್ರ ಇವೆ. ಕೆಲವೇ ನಿರ್ದಿಷ್ಟ ಸಂದರ್ಭಗಳಲ್ಲಿ ಮಾತ್ರ ಅವನ್ನು ಬಳಸಬೇಕು.

ಸೋಂಕು ಎಂದ ಕೂಡಲೇ ಆ್ಯಂಟಿಬಯಾಟಿಕ್ ಎನ್ನುವುದು ಸರಿಯಲ್ಲ. ವೈರಸ್ ಕಾಯಿಲೆಗಳಲ್ಲಿ ಆ್ಯಂಟಿಬಯಾಟಿಕ್‌ಗಳ ಪಾತ್ರವೇ ಇಲ್ಲ. ಅಕಾರಣವಾಗಿ ಆ್ಯಂಟಿಬಯಾಟಿಕ್‌ಗಳನ್ನು ಬಳಸುತ್ತಿದ್ದರೆ ಬ್ಯಾಕ್ಟೀರಿಯಾಗಳು ಅವುಗಳ ವಿರುದ್ಧ ಪ್ರತಿರೋಧ ಬೆಳೆಸಿಕೊಳ್ಳುತ್ತವೆ; ಅದರಿಂದ ಮುಂದೆ ಆ್ಯಂಟಿಬಯಾಟಿಕ್ ಪರಿಣಾಮ ಕಡಿಮೆಯಾಗಿ, ಕಾಯಿಲೆಯ ಚಿಕಿತ್ಸೆಗಳು ಮತ್ತಷ್ಟು ದುಬಾರಿಯೂ, ಕೆಲವೊಮ್ಮೆ ನಿಷ್ಫಲವೂ ಆಗುತ್ತವೆ. ಈ ಎಚ್ಚರವನ್ನು ಮೀರಿದರೆ ಇಡೀ ಮನುಕುಲ ದೊಡ್ಡ ಬೆಲೆಯನ್ನು ತೆರುವಂತಾಗುತ್ತದೆ. ❖

ನಳನಳಿಸುತ್ತಿರಲಿ ಬಾಂಧವ್ಯ...



• ರಮ್ಯಾ ಶ್ರೀಹರಿ

ಮನುಷ್ಯಸಂಬಂಧಗಳಲ್ಲಿ ಸಂಘರ್ಷಗಳೇನೂ ಹೊಸತಲ್ಲ; ಅವು ಮಾನವ ಸಮಾಜದೊಟ್ಟಿಗೇ ರೂಪಾಂತರಗಳನ್ನು ಹೊಂದುತ್ತಾ ಪ್ರತಿ ಕಾಲಘಟ್ಟದಲ್ಲಿಯೂ ಅನೇಕ ರೀತಿಗಳಲ್ಲಿ ಪ್ರಕಟಗೊಳ್ಳುತ್ತಾ, ವ್ಯಾಖ್ಯಾನಗೊಳ್ಳುತ್ತಾ ಮನುಷ್ಯನ ಬುದ್ಧಿಶಕ್ತಿಯನ್ನು ಭಾವನಾಪ್ರಪಂಚವನ್ನು ಕೆಣಕುತ್ತಾ ಮನುಷ್ಯ-ಸಮೂಹವನ್ನು ತಬ್ಬಿಬ್ಬುಗೊಳಿಸುತ್ತಲೇ ಬಂದಿವೆ. ಸಂಘರ್ಷಗಳನ್ನು ನಾವು ಸಮಸ್ಯೆ ಎನ್ನುವ ರೀತಿಯಲ್ಲಿ ನೋಡುತ್ತಾ ಪರಿಹಾರಗಳನ್ನು ಹುಡುಕುವುದು ಸಂಘರ್ಷ ನಿರ್ವಹಣೆಯ ಒಂದು ಅತಿ ಸಣ್ಣ ಭಾಗ ಮಾತ್ರ. ಮುಖ್ಯವಾಗಿ ಮನುಷ್ಯ ಮನುಷ್ಯನ ನಡುವಿನ ಆಂತರಿಕ ಘರ್ಷಣೆಗಳು ನಮ್ಮನ್ನು ನಾವು ಆಳವಾಗಿ ಅರಿಯುವ ಅವಕಾಶಗಳನ್ನು ನಮ್ಮ ಮುಂದಿಡುತ್ತವೆ. ಮಾನವ ಸಂಬಂಧಗಳ ಆಳವಾದ ಅರಿವು ಸಮಾಜವನ್ನೂ ರಾಜಕೀಯವನ್ನ, ಕಲೆಯನ್ನೂ ಆಳವಾಗಿ ಅರಿಯುವ ಅವಕಾಶವನ್ನು ಮಾಡಿಕೊಡುತ್ತದೆ. ಹಾಗಾಗಿ ಸಂಘರ್ಷಗಳೇನೇ ಇರಲಿ, ಅವುಗಳು ತಂದಿಡುವ ಸಂಕಟದ ಕಡೆಗಷ್ಟೇ ಗಮನಹರಿಸದೆ ಸಂಘರ್ಷಗಳನ್ನು ಹೇಗೆ ರಚನಾತ್ಮಕವಾಗಿ ಉಪಯೋಗಿಸಿಕೊಂಡು ಬಾಂಧವ್ಯವನ್ನು ಸೃಜನಶೀಲವಾಗಿ ನಿರ್ಮಿಸಿಕೊಳ್ಳಬಹುದು ಎಂದು ಯೋಚಿಸುವುದು ಸಹಾಯಕವಾಗುತ್ತದೆ.

ಸೃಜನಶೀಲತೆಯೆನ್ನುವುದು ಕೇವಲ ಕಲೆಗಷ್ಟೇ ಸೀಮಿತವಾದುದಲ್ಲ; ಬದುಕನ್ನು ಬಾಂಧವ್ಯವನ್ನು ಹೊಸ ಹೊಸದಾಗಿ ಕಟ್ಟಿಕೊಳ್ಳುವುದು, ನವೀಕರಿಸಿಕೊಳ್ಳುವುದು, ಬೇರೆ ಬೇರೆ ಆಯಾಮಗಳಲ್ಲಿ ನಮ್ಮನ್ನು ಕಂಡುಕೊಳ್ಳುವುದು, ನಮ್ಮ ಅನುಭವಗಳು ಹೇಗೆ ನಮ್ಮನ್ನು ರೂಪಿಸುತ್ತಿವೆ, ಅನುಭವಗಳೊಟ್ಟಿಗೆ ಬದುಕಿನ ವಿವಿಧ ಅರ್ಥಗಳು ಹೇಗೆ ಅನಾವರಣಗೊಳ್ಳುತ್ತಿವೆ - ಎನ್ನುವುದನ್ನೆಲ್ಲಾ ಸೂಕ್ಷ್ಮವಾಗಿ ಅವಲೋಕಿಸುವುದು ಕೂಡ ಸೃಜನಶೀಲತೆಯೇ ಅಲ್ಲವೇ? ಯಾವುದೆಲ್ಲಾ ಬದುಕಿಗೆ ಜೀವಂತಿಕೆಯ ಸೌಂದರ್ಯವನ್ನು ತಂದುಕೊಡುವುದೋ, ಯಾವುದು ಬದುಕನ್ನು ರಸಮಯವಾಗಿ ಸಾಕಾರಗೊಳಿಸಿಕೊಳ್ಳುವುದಕ್ಕೆ ಪ್ರೇರಕವೋ ಅವೆಲ್ಲವೂ ಸೃಜನಶೀಲವೆ ಹೌದು.

ಎಲ್ಲರ ಬದುಕಿನಲ್ಲಿಯೂ ಯಾವ ಕಾರಣಕ್ಕಾಗಿಯಾದರೂ ಆತ್ಮೀಯ ಎನಿಸಿಕೊಳ್ಳಬಹುದಾದ ಒಂದಾದರೂ ಸಂಬಂಧವಿರುತ್ತದೆ. ಅದು ಒಂದು ಸಂಬಂಧದಲ್ಲಿನ ಸಾಂತ್ವನದ ಗುಣವಿರಬಹುದು, ಇನ್ನೊಂದರಲ್ಲಿನ ಸಮಾನ ಆಸಕ್ತಿಗಳಿರಬಹುದು, ಆಕರ್ಷಣೆಯಿರಬಹುದು, ಕರ್ತವಪ್ರಜ್ಞೆ, ಜೀವನಪ್ರೀತಿ, ನಿಷ್ಕಾರಣ ಸಹೃದಯತೆ - ಹೀಗೆ ಹಲವು ಕಾರಣಗಳಿಗಾಗಿ ಒಂದು ಸಂಬಂಧ ಮಧುರವಾಗಿರುತ್ತದೆ. ಬಾಂಧವ್ಯದಲ್ಲಿನ ಈ ಮಾಧುರ್ಯವು ಸಂಘರ್ಷ ನಿರ್ವಹಣೆಯನ್ನು ಸರಾಗವಾಗಿಸುತ್ತದೆ; ಬಾಂಧವ್ಯವನ್ನು ಮುಂದುವರೆಸಲು ಬೇಕಾದ ಬದಲಾವಣೆಗಳನ್ನು ಮಾಡಿಕೊಳ್ಳಲು ಪ್ರೇರೇಪಿಸುತ್ತದೆ.

ಸಂಘರ್ಷಗಳ ನಿರ್ವಹಣೆ ಸುಲಭವಲ್ಲ, ಎರಡು ಭಿನ್ನ ವ್ಯಕ್ತಿತ್ವಗಳ ನಡುವಿನ ಸಾಮರಸ್ಯವೆಂದರೆ ಸಾಮಾನ್ಯವಲ್ಲ, ಅದೊಂದು ಸುದೀರ್ಘ ಪ್ರಕ್ರಿಯೆ; ಅದಕ್ಕೆ ಸುಲಭವಾದ ನೇರವಾದ ಇಂಥದ್ದೇ ಎಂಬ ಸೂತ್ರವಿಲ್ಲ. ಆದರೆ ಕೆಲವು ಅಭ್ಯಾಸಗಳು ಸಂಘರ್ಷ ನಿರ್ವಹಣೆಯನ್ನು ಸ್ವಲ್ಪಮಟ್ಟಿಗೆ ಸುಲಲಿತಗೊಳಿಸಿ ಬಾಂಧವ್ಯವನ್ನು ಅರಳಿಸಬಹುದು. ಅಂತಹ ಕೆಲವು ಅಭ್ಯಾಸಗಳ ಹಿಂದಿನ ಒಳನೋಟಗಳು ಇಲ್ಲಿವೆ:

- ಪ್ರತಿಯೊಂದು ಸಂಬಂಧಕ್ಕೂ ಒಂದು ಭೂತಕಾಲವಿರುತ್ತದೆ, ಒಂದು ಚರಿತ್ರೆ ಇರುತ್ತದೆ. ಇಂದಿನ ನಮ್ಮ ಸಂಬಂಧ ಹೀಗಿರುವುದಕ್ಕೆ 'ನಮ್ಮ ಭೂತಕಾಲ ಹೇಗಿತ್ತು' ಎನ್ನುವುದೂ ಕಾರಣವಾಗುತ್ತದೆ. ಹಿಂದೆ ನಡೆದ ಕಹಿಘಟನೆಗಳು ಇಂದು ನಮ್ಮ ಆತ್ಮೀಯತೆಯ ಆಳವನ್ನು ನಿರ್ಧರಿಸಬಾರದೆಂದು ಬಯಸಿದರೆ ಅದಕ್ಕಾಗಿ ಸಾಕಷ್ಟು ಪರಿಶ್ರಮವನ್ನು ಪಡಬೇಕಾಗಿರುವುದು ನ್ಯಾಯವಲ್ಲವೇ? ಭೂತಕಾಲದ ಕಹಿಯನ್ನು ಮರೆಸುವಂತೆ ವರ್ತಮಾನದಲ್ಲಿ ನಮ್ಮ ವರ್ತನೆಯಿರಬೇಕು. ನಂಬಿಕೆ, ವಿಶ್ವಾಸಗಳೇ ಬಾಂಧವ್ಯದ ಅಡಿಪಾಯ, ವಿಶ್ವಾಸಾರ್ಹತೆಯಿಲ್ಲದ ಪ್ರೀತಿಗೆ ಯಾವ ಬೆಲೆಯೂ ಇಲ್ಲವಷ್ಟೇ. ಬಾಂಧವ್ಯವು ಒಂದು ಚಿಕ್ಕ ಮಗುವಿನಂತೆ, ಒಂದು ಎಳೆಯ ಸಸಿಯಂತೆ, ಅದು ಸಮಯ, ತಾಳ್ಮೆ ಮತ್ತು ಪ್ರೇಮಭರಿತ ಆರೈಕೆಯನ್ನು ಬೇಡುತ್ತದೆ. ಭೂತದಲ್ಲಿ ಸಂಬಂಧ ಹಳಸಿದ್ದು ಈಗ ಅದು ಚೇತರಿಸಿಕೊಳ್ಳುತ್ತಿದ್ದರೆ ನಮ್ಮ ನಿರೀಕ್ಷೆಗಳನ್ನು ವಾಸ್ತವಕ್ಕೆ ಸರಿಹೊಂದುವಂತೆ ಇರಿಸಿಕೊಳ್ಳುವುದು ಕ್ಷೇಮ.
- ಒಂದು ಸಂಬಂಧದಲ್ಲಿ ನಮ್ಮನ್ನು ನಾವಿರುವಂತೆ ತೆರೆದಿಟ್ಟುಕೊಳ್ಳಲು, ನಮ್ಮ ಭಾವನಾತ್ಮಕ ಅವಶ್ಯಕತೆ ಅವಲಂಬನೆಗಳ ಬಗ್ಗೆ ನಿಸ್ಸಂಕೋಚವಾಗಿ ಹೇಳಿಕೊಳ್ಳಲು, ನಮ್ಮ ಆಸೆ-ಆಕಾಂಕ್ಷೆಗಳ ಬಗ್ಗೆ ಸಹಜವಾಗಿ ಮಾತನಾಡಲು ಸಾಕಷ್ಟು ಧೈರ್ಯ ಬೇಕು. ನಮ್ಮ ಅಂತರಾಳವನ್ನು ತೆರೆದಿಟ್ಟಾಗ ಎದುರಿನವರು ನಮ್ಮನ್ನು ತಿರಸ್ಕರಿಸಬಹುದು, ನಮ್ಮಿಂದ ದೂರವಾಗಬಹುದು, ನಮ್ಮನ್ನು ನಿಕೃಷ್ಟವಾಗಿ ಕಾಣಬಹುದು, ನಮಗೆ ಹಣೆಪಟ್ಟಿಗಳನ್ನಂಟಿಸಬಹುದು. ನಮ್ಮನ್ನು ನಾವು ತೋರ್ಪಡಿಸಿಕೊಳ್ಳುವುದು ಭಾವನಾತ್ಮಕವಾಗಿ ನಮ್ಮನ್ನು ಭಗ್ನಗೊಳಿಸಿ ನಮ್ಮನ್ನು ದುರ್ಬಲರನ್ನಾಗಿ ಕಾಣಿಸುವ ಸಾಧ್ಯತೆಗಳಿದ್ದರೂ ಅಂತರ್ಯವನ್ನು ಬಿಚ್ಚಿಡದೇ ಬಾಂಧವ್ಯವನ್ನು ನಿಜದ ನೆಲೆಯಲ್ಲಿ ಕಟ್ಟಲಾಗುವುದಿಲ್ಲ.
- ಪ್ರತಿಯೊಬ್ಬರೂ ಪ್ರತಿದಿನವೂ ಬದಲಾಗುತ್ತಲೇ ಇರುತ್ತಾರೆ. ಅಂತಹ ಬದಲಾವಣೆಗಳನ್ನು ನಾವು ಗುರುತಿಸದೇ ವರ್ಷಗಳ ಹಿಂದೆ ಅವರು ಹೇಗಿದ್ದರೋ ಹಾಗೇ ಅವರ ಒಂದು ಪುರಾತನ ಚಹರೆಯನ್ನು ಮಾತ್ರ ಮನಸ್ಸಿನಲ್ಲಿಟ್ಟುಕೊಂಡು ಆ ಚಹರೆಯೇ ನಿಜದ ಅವರೆಂದು ಭ್ರಮಿಸುತ್ತಾ ಇಂದಿನ ಸತ್ಯಕ್ಕೆ ಕುರುಡರಾಗಿ ವ್ಯವಹರಿಸುವುದರಿಂದ ಸಂಬಂಧಗಳು ನಿಂತನೀರಿನಂತೆ ಬೇಸರ ತರಿಸುತ್ತವೆ. ಪ್ರತಿಯೊಬ್ಬ ವ್ಯಕ್ತಿಯ ಒಳಗೂ ವೈರುಧ್ಯಗಳಿರುವಂತೆ ಪ್ರತಿಯೊಂದು ಸಂಬಂಧದ ಬಗೆಗೂ ವಿರುದ್ಧ ಭಾವನೆಗಳಿರಬಹುದು. ಉದಾಹರಣೆಗೆ ನಾವು ಅತಿಯಾಗಿ ಪ್ರೀತಿಸುವವರನ್ನೂ ಕೆಲವು ಸಂದರ್ಭ-ಗಳಲ್ಲಿ ಕೆಲವು ಗುಣ ಸ್ವಭಾವಗಳಿಗಾಗಿ ಅವರ ಬಗೆಗೆ ಕ್ರೋಧವಿರಬಹುದು. ವಿರೋಧಾಭಾಸಗಳನ್ನು ಒಂದೇ ವ್ಯಕ್ತಿಯಲ್ಲಿ ಕಾಣುವುದನ್ನು, ಒಂದೇ ವ್ಯಕ್ತಿಯ ಬಗೆಗೆ ನಮ್ಮಲ್ಲಿ ವಿರುದ್ಧ ಭಾವನೆಗಳಿರುವುದನ್ನು ಸ್ವೀಕರಿಸಲು ಮಾನಸಿಕ ಪ್ರಬುದ್ಧತೆ ಬೇಕು.
- ಯಾವ ಬಾಂಧವ್ಯದಲ್ಲಿ ಆತ್ಮೀಯತೆಯನ್ನು ಸಾಧಿಸಬೇಕು, ಯಾವುದರಲ್ಲಿ ಕೇವಲ ಸಾಮಾಜಿಕ ಸಾಮರಸ್ಯ ಸಾಕು, ಯಾವ ಬಾಂಧವ್ಯಕ್ಕೆ ನಮ್ಮ ಜೀವನದಲ್ಲಿ ನಮ್ಮ ಹೃದಯದಲ್ಲಿ ಎಂತಹ ಸ್ಥಾನ ನೀಡಬೇಕೆನ್ನುವುದೆಲ್ಲಾ ನಮ್ಮದೇ ಆಯ್ಕೆ. ಯಾವುದಕ್ಕೆ ಎಷ್ಟು ಆದ್ಯತೆ, ಏಕೆ ಎನ್ನುವುದೆಲ್ಲಾ ಸ್ಪಷ್ಟವಿದ್ದರೆ ನಮ್ಮ ಮನಸ್ಸನ್ನು, ಸಮಯವನ್ನು ಎಲ್ಲಿ ತೊಡಗಿಸಿಕೊಳ್ಳಬೇಕು ಎನ್ನುವುದನ್ನು ನಿರ್ಧರಿಸಬಹುದು. 'ಈ ಬಾಂಧವ್ಯದಲ್ಲಿ ನನಗೆ ಮುಖ್ಯವಾದದ್ದು ಏನು' ಎನ್ನುವುದು ತಿಳಿಯಾಗಿದ್ದಾಗ ಮುಖ್ಯವಲ್ಲದ ಓರೆಕೋರೆಗಳನ್ನು ನಿರ್ಲಕ್ಷಿಸಿ ಮುನ್ನಡೆಯಬಹುದು.
- 'ಸುಮ್ಮನೆ ಜಗಳವೇಕೆ' ಎಂದು ಸಂಘರ್ಷಗಳನ್ನು ಮುಚ್ಚಿಹಾಕಿ ತೋರಿಕೆಯ ಆತ್ಮೀಯ-ತೆಯನ್ನು ನಟಿಸುವವರು, ನನಗೆ ಯಾರ ಮೇಲೂ ಭಾವನಾತ್ಮಕ ಅವಲಂಬನೆಯಿಲ್ಲ ಎಂದು ತಮ್ಮನ್ನು ತಾವೇ ವಂಚಿಸಿಕೊಳ್ಳುವವರು, ಸಂಬಂಧಗಳಲ್ಲಿ ಸದಾ ಘರ್ಷಣೆಯೇ ಇಲ್ಲದ ಶಾಂತಿಯಿರಬೇಕೆಂಬ ಭ್ರಮೆಯಿರುವವರು ಬದುಕೆಂಬ ಮರದಲ್ಲಿ ನಳನಳಿಸು-ತ್ತಿರುವ ಬಾಂಧವ್ಯವೆಂಬ ಹಣ್ಣಿನ ರುಚಿಯನ್ನು ಕಂಡುಕೊಳ್ಳಲಾರರು. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ದಿಕ್ಸೂಚಿ ನಿಮಗಿಷ್ಟ ಆಗಿದೆಯೇ?
ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಗಣಿತ

ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು

ಅಭ್ಯಾಸ 3.2

3. ಕೆಳಗಿನ ಸಮಸ್ಯೆಗಳಿಗೆ ರೇಖಾತ್ಮಕ ಸಮೀಕರಣಗಳ ಜೋಡಿಗಳನ್ನು ರಚಿಸಿರಿ ಮತ್ತು ಆದೇಶ ವಿಧಾನದಿಂದ ಅವುಗಳ ಪರಿಹಾರಗಳನ್ನು ಕಂಡುಹಿಡಿಯಿರಿ.

(*i*) ಎರಡು ಸಂಖ್ಯೆಗಳ ವ್ಯತ್ಯಾಸ 26 ಮತ್ತು ಒಂದು ಸಂಖ್ಯೆಯು ಇನ್ನೊಂದರ ಮೂರರಷ್ಟಿದೆ. ಅವುಗಳನ್ನು ಕಂಡುಹಿಡಿಯಿರಿ.

(*ii*) ಎರಡು ಪರಿಪೂರಕ ಕೋನಗಳಲ್ಲಿ ದೊಡ್ಡ ಕೋನವು ಚಿಕ್ಕ ಕೋನಕ್ಕಿಂತ 18 ಡಿಗ್ರಿ ಅಧಿಕವಾಗಿದೆ. ಅವುಗಳನ್ನು ಕಂಡುಹಿಡಿಯಿರಿ.

(*iii*) ಕ್ರಿಕೆಟ್ ತಂಡವೊಂದರ ತರಬೇತುಗಾರ್ತಿಯು 7 ಬ್ಯಾಟ್‌ಗಳು ಮತ್ತು 6 ಚೆಂಡುಗಳನ್ನು ₹ 3800 ಕ್ಕೆ ಕೊಳ್ಳುತ್ತಾರೆ. ಆ ಬಳಿಕ 3 ಬ್ಯಾಟ್‌ಗಳು ಮತ್ತು 5 ಚೆಂಡುಗಳನ್ನು ಅವರು ₹ 1750 ಕ್ಕೆ ಕೊಳ್ಳುತ್ತಾರೆ. ಪ್ರತಿಯೊಂದು ಬ್ಯಾಟ್ ಮತ್ತು ಪ್ರತಿಯೊಂದು ಚೆಂಡಿನ ಬೆಲೆಗಳನ್ನು ಕಂಡುಹಿಡಿಯಿರಿ.

(*iv*) ಒಂದು ನಗರದಲ್ಲಿ ಟ್ಯಾಕ್ಸಿ ಬಾಡಿಗೆಯು ಎರಡು ಭಾಗಗಳಿಂದ ಕೂಡಿದೆ. ಮೊದಲನೆಯದು ನಿಗದಿತ ಬಾಡಿಗೆ ಮತ್ತು ಎರಡನೆಯದು ಚಲಿಸಿದ ದೂರಕ್ಕೆ ಅನುಗುಣವಾಗಿ ಬಾಡಿಗೆ. ಇವೆರಡನ್ನು ಸೇರಿಸಿ ಒಟ್ಟು ಬಾಡಿಗೆ ಎನ್ನುತ್ತೇವೆ. ಒಟ್ಟು ಬಾಡಿಗೆಯು $10\,km$ ಪ್ರಯಾಣಕ್ಕೆ ₹ 105 ಮತ್ತು $15\,km$ ಪ್ರಯಾಣಕ್ಕೆ ₹ 155. ಹಾಗಾದರೆ ನಿಗದಿತ ಬಾಡಿಗೆ ಮತ್ತು ಪ್ರತಿ ಕಿಲೋಮೀಟರ್‌ನ ಪ್ರಯಾಣಕ್ಕೆ ಬಾಡಿಗೆ ದರಗಳನ್ನು ಕಂಡುಹಿಡಿಯಿರಿ. ಒಬ್ಬ ವ್ಯಕ್ತಿಯು $25\,km$ ದೂರವನ್ನು ಪ್ರಯಾಣಿಸಿದರೆ ನೀಡಬೇಕಾದ ಒಟ್ಟು ಬಾಡಿಗೆಯನ್ನು ಕಂಡುಹಿಡಿಯಿರಿ.

(*v*) ಒಂದು ಭಿನ್ನರಾಶಿಯ ಅಂಶ ಮತ್ತು ಛೇದಗಳೆರಡಕ್ಕೂ 2ನ್ನು ಸೇರಿಸಿದರೆ, ಆ ಭಿನ್ನರಾಶಿಯು 911 ಆಗುತ್ತದೆ. ಅದೇ ಅಂಶ ಮತ್ತು ಛೇದಗಳೆರಡಕ್ಕೂ 3ನ್ನು ಸೇರಿಸಿದರೆ ಅದು 56 ಆಗುತ್ತದೆ. ಆ ಭಿನ್ನರಾಶಿಯನ್ನು ಕಂಡುಹಿಡಿಯಿರಿ.

(*vi*) ಐದು ವರ್ಷಗಳ ಬಳಿಕ ಜೇಕಬ್‌ರ ವಯಸ್ಸು ಅವರ ಮಗನ ವಯಸ್ಸಿನ ಮೂರರಷ್ಟಾಗುತ್ತದೆ. ಐದು ವರ್ಷಗಳ ಹಿಂದೆ ಜೇಕಬ್‌ರ ವಯಸ್ಸು ಅವರ ಮಗನ ವಯಸ್ಸಿನ ಏಳರಷ್ಟಿತ್ತು ಅವರಿಬ್ಬರ ಈಗಿನ ವಯಸ್ಸು ಎಷ್ಟು?

ಪರಿಹರ:–(1) $y > x$ ಆಗುವಂತೆ ಆ ಎರಡು ಸಂಖ್ಯೆಗಳು x ಮತ್ತು y ಆಗಿರಲಿ
ಪ್ರಶ್ನೆಯಲ್ಲಿರುವಂತೆ ಈ ಕೆಳಗಿನ ಸಮೀಕರಣ ಮೂಡಿಬರುತ್ತದೆ

$y = 3x$ .... (1)
$y - x = 26$ ....(2)

ಸಮೀಕರಣ 2ರಲ್ಲಿ ಸಮೀಕರಣ 1ರ ಮೌಲ್ಯ/ಬೆಲೆಯನ್ನು ಆದೇಶಿಸಿದಾಗ(ಹಾಕಿದಾಗ)

$3x - x = 26$
$x = 13$ .... (3)

x ನ ಬೆಲೆಯನ್ನು ಸಮೀಕರಣ 1ರಲ್ಲಿ ಆದೇಶಿಸಿದಾಗ
$y = 39$
ಆದ್ದರಿಂದ ಆ ಎರಡು ಸಂಖ್ಯೆಗಳು 13 ಮತ್ತು 39ಆಗಿದೆ

(ii) ಆ ಎರಡು ಕೋನಗಳು x ಮತ್ತು y ಆಗಿರಲಿ
ದೊಡ್ಡ ಕೋನಗಳು x ಮತ್ತು ಚಿಕ್ಕ ಕೋನಗಳು y ಆಗಿರಲಿ
ಪೂರಕ ಕೋನಗಳ ಮೊತ್ತವು 180^0 ಆಗಿರುತ್ತದೆ
ಆದ್ದರಿಂದ

$x + y = 180^o$............. (1)
$x - y = 18^o$ ....(2)

ಸಮೀಕರಣ 1ರಿಂದ
$x = 180^o - y$ .... (3)
x ನ ಬೆಲೆಯನ್ನು ಸಮೀಕರಣ 2ರಲ್ಲಿ ಆದೇಶಿಸಿದಾಗ
$180^o - y - y = 18^o$
$162^o = 2y$
$y = 81^o$ .... (4)
y ನ ಬೆಲೆಯನ್ನು ಸಮೀಕರಣ 3ರಲ್ಲಿ ಆದೇಶಿಸಿದಾಗ
$x = 180^o - 81^o$
$= 99^o$
ಆದ್ದರಿಂದ ಕೋನಗಳು **99^o ಮತ್ತು 81^o.**

(iii) ಒಂದು ಬ್ಯಾಟ್‌ನ x ಬೆಲೆ ಮತ್ತು ಒಂದು ಚೆಂಡಿನ ಬೆಲೆ y ಆಗಿರಲಿ
ದತ್ತ $7x + 6y = 3800$ .... (I)
$3x + 5y = 1750$ .... (II)
ಸಮೀಕರಣ 1ರಿಂದ
$y = (3800-7x)/6$...................(III)
y ನ ಬೆಲೆಯನ್ನು ಸಮೀಕರಣ 2ರಲ್ಲಿ ಆದೇಶಿಸಿದಾಗ

$3x+5(3800-7x)/6 =1750$
$\Rightarrow 3x+ 9500/3 - 35x/6 = 1750$
$\Rightarrow 3x- 35x/6 = 1750 - 9500/3$
$\Rightarrow (18x-35x)/6 = (5250 - 9500)/3$
$\Rightarrow -17x/6 = -4250/3$
$\Rightarrow -17x = -8500$
$x = 500$ .... (IV)

x ನ ಬೆಲೆಯನ್ನು ಸಮೀಕರಣ 3ರಲ್ಲಿ ಆದೇಶಿಸಿದಾಗ
$y = (3800-7 \times 500)/6 = 300/6 = 50$
ಆದ್ದರಿಂದ ಒಂದು ಬ್ಯಾಟ್‌ನ ಬೆಲೆಯು ರೂ 500/– ಮತ್ತು ಒಂದು ಚೆಂಡಿನ ಬೆಲೆಯು ರೂ 50/– ಆಗಿದೆ

(iv) ನಿಗದಿತ ಬಾಡಿಗೆ x ಬೆಲೆ ಮತ್ತು ಪ್ರತಿ ಕಿ.ಮೀ. ಗೆ ಬಾಡಿಗೆ ಬೆಲೆ y ಆಗಿರಲಿ
10 ಕಿ.ಮೀ ಪ್ರಯಾಣಕ್ಕೆ ಬಾಡಿಗೆ
$x + 10y = 105$ .... (1)
15 ಕಿ.ಮೀ ಪ್ರಯಾಣಕ್ಕೆ ಬಾಡಿಗೆ
$x + 15y = 155$ .... (2)
ಸಮೀಕರಣ 1ರಿಂದ
$x = 105 - 10y$ .... (3)
x ನ ಬೆಲೆಯನ್ನು ಸಮೀಕರಣ 2ರಲ್ಲಿ ಆದೇಶಿಸಿದಾಗ
$105 - 10y + 15y = 155$
$5y = 50$
$y = 10$ .... (4)
y ನ ಬೆಲೆಯನ್ನು ಸಮೀಕರಣ 3ರಲ್ಲಿ ಆದೇಶಿಸಿದಾಗ
$x = 105 - 10 \times 10 = 5$
ಆದ್ದರಿಂದ ನಿಗದಿತ ಬಾಡಿಗೆ= ರೂ 5/– ಮತ್ತು ಪ್ರತಿ ಕಿ.ಮೀ ಗೆ ಬಾಡಿಗೆ= ರೂ 10/–
ಆದ್ದರಿಂದ 25 ಕಿ.ಮೀ ಗೆ ಬಾಡಿಗೆ = **$x + 25y = 5 + 250$ = Rs 255**

(v) ಭಿನ್ನರಾಶಿಯ ಅಂಶವು x ಮತ್ತು y ಆಗಿರಲಿ
ಅಂಶ ಮತ್ತು ಛೇದಗಳೆರಡಕ್ಕೂ 2ನ್ನು ಸೇರಿಸಿದಾಗ
ದತ್ತ

$(x+2) /(y+2) = 9/11$
$11x + 22 = 9y + 18$
$11x - 9y = -4$ .... (1)
$(x+3) /(y+3) = 5/6$
$6x + 18 = 5y +15$
$6x - 5y = -3$ .... (2)

ಸಮೀಕರಣ 1ರಿಂದ $x = (-4+9y)/11$ .... (3)
x ನ ಬೆಲೆಯನ್ನು ಸಮೀಕರಣ 2ರಲ್ಲಿ ಆದೇಶಿಸಿದಾಗ
$6(-4+9y)/11 -5y = -3$
$-24 + 54y - 55y = -33$
$-y = -9$
$y = 9$ .... (4)
yನ ಬೆಲೆಯನ್ನು ಸಮೀಕರಣ 3ರಲ್ಲಿ ಆದೇಶಿಸಿದಾಗ
$x = (-4+9\times 9)/11 = 7$
ಆದ್ದರಿಂದ ಆ ಭಿನ್ನರಾಶಿ **7/9** *(ಮುಂದುವರೆಯುವುದು)*

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾ ರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

PHYSICS


Chapter – 1
ELECTRIC CHARGES AND FIELDS

c) At a point inside a solid sphere

Let P be the point inside a solid sphere at a distance r ($r < R$) from the centre O.

(......Contd)

Draw a *Gaussian surface* in the form of a sphere of radius r with O as the centre.



Charge enclosed by the Gaussian surface,
q' = volume charge density ρ x volume of Gaussian sphere

$$\text{(or)}\ q' = \frac{q}{\frac{4}{3}\pi R^3} = \frac{4}{3}\pi r^3 = \frac{qr^3}{R^3}$$

According to Gauss' theorem,

$$\oint_S \vec{E}.d\vec{S} = \frac{q'}{\epsilon_0} = \frac{qr^3}{\epsilon_0 R^3}$$

(or)

$$\oint_S E\,ds\cos\theta = \frac{qr^3}{\epsilon_0 R^3} \quad \text{..........(i)}$$

Since $\vec{E}$ and $d\vec{S}$ are in the same direction,
so $\theta = 0^0$

$$\therefore \oint_S E\,ds\cos 0^0 = \frac{qr^3}{\epsilon_0 R^3}\ \text{(or)}$$

$$\oint_S E\,ds = \frac{qr^3}{\epsilon_0 R^3}$$

$$\therefore E\oint_S ds = \frac{qr^3}{\epsilon_0 R^3} \quad \text{............(ii)}$$

(Since E is constant at every point on the Gaussian surface)

$$\text{But } \oint_S ds = 4\pi r^2$$

(Surface area of a spherical Gaussian surface)

$$\therefore E \times 4\pi r^2 = \frac{qr^3}{\epsilon_0 R^3}$$

$$\text{(or) } E = \frac{1}{4\pi\epsilon_0}\left(\frac{qr}{R^3}\right)$$

$$\Rightarrow E \propto r$$

Thus, electric field intensity at a point inside the solid sphere in directly proportional to the distance of the point form the centre of the sphere.

d) At the centre of the solid sphere.


Here, r = 0, therefore, from eqn.

$$E \times 4\pi r^2 = \frac{qr^3}{\epsilon_0 R^3}$$

$$E = 0$$

Thus, electric field intensity at the centre of a solid sphere is zero.


Variation of Electric Field Intensity (E) with the distance (r) from the centre (O) of the solid sphere.



(i) Electric field intensity at the centre of the charged solid sphere is **zero.**
(ii) As the distance(r) from the centre of solid sphere increases, electric field intensity also increases along OA ($\because E \propto r$) and becomes **maximum** at the surface of the solid sphere.
(iii) As the distance (r) further increases beyond the surface of the solid sphere, electric field intensity varies inversely with r^2 and hence decreases.

Problems:-

1. A sphere of radius 10 cm has an unknown charge. If the electric field 20 cm from the centre of the sphere is $2.0 \times 10^4\ NC^{-1}$ and points radially inward. What is the net charge on the sphere?



Soln:- Given, radius of Gaussian sphere,
$r = 20\ cm = 0.20\ m$
Electric field, $E = 2.0 \times 10^4\ NC^{-1}$

$$\text{But } E = \frac{1}{4\pi\epsilon_0}\frac{q}{r^2}\ \text{(for a sphere)}$$

$$\text{(or) } q = E \times 4\pi\epsilon_0 \times r^2$$

$$= 2.0 \times 10^4 \frac{1}{9 \times 10^9} \times (0.2)^2$$

$$= \frac{2.0 \times 0.04 \times 10^{-5}}{9}$$

$$= 8.89 \times 10^{-8}\ C$$

Since the field points radially inward so the charge is negative.

Hence, $q = -8.89 \times 10^{-8}\ C = -88.9\ nC$

2. The electric field intensity at a distance of 4 cm due to infinite line charge is $18 \times 10^4\ NC^{-1}$. Calculate the linear charge density. *(Contd)*

ಬೈರತಿ ಬಸವರಾಜ್ ಸಂಬಂಧಿ ವಶಕ್ಕೆ

ರೌಡಿ ಶೀಟರ್ ಕೊಲೆ • ಕೃತ್ಯಕ್ಕಾಗಿ 45 ದಿನ ಚಲನವಲನ ವೀಕ್ಷಿಸಿದ್ದ ಆರೋಪಿಗಳು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ



ಅನಿಲ್

ಬೆಂಗಳೂರು: ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಅವರ ಕೊಲೆ ಪ್ರಕರಣದಲ್ಲಿ ಕೆ.ಆರ್. ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ್ ಅವರ ಸಂಬಂಧಿ ಅನಿಲ್ ಅವರನ್ನು ಭಾರತಿನಗರ ಠಾಣೆಯ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕೃತ್ಯ ಎಸಗಲು ಆರೋಪಿಗಳು ಬಳಸಿದ್ದ ಬಿಳಿ ಬಣ್ಣದ ಸ್ಕಾರ್ಪಿಯೊ ಅನಿಲ್‌ಗೆ ಸೇರಿದ್ದು, ಅನಿಲ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಕೊಲೆ ಪ್ರಕರಣದಲ್ಲಿ ಅನಿಲ್ ಅವರ ಪಾತ್ರ ಇರುವುದು ಸಾಬೀತಾದರೆ ಬಂಧಿಸಲಾಗುವುದು ಎಂದು ಪೊಲೀಸರು ಹೇಳಿದರು.

'ಮನೆಯ ಎದುರು ಬಿಕ್ಲು ಶಿವ ನಿಂತಿದ್ದಾಗ 9 ಮಂದಿಯ ತಂಡವು ಬಂದು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಕೊಲೆ ಮಾಡಿ ಪರಾರಿ ಆಗಿತ್ತು. ಆ ಪೈಕಿ ಇದುವರೆಗೂ ಏಳು ಮಂದಿಯನ್ನು ಬಂಧಿಸಲಾಗಿದೆ. ಭಾನುವಾರ ಬಂಧಿಸಿರುವ ಅರುಣ್ ಹಾಗೂ ನವೀನ್ ಅವರನ್ನು ಪೊಲೀಸ್ ಕಸ್ಟಡಿಗೆ ಪಡೆದುಕೊಂಡು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಪ್ರಕರಣದಲ್ಲಿ ಈ ಹಿಂದೆ ಕಿರಣ್, ವಿಮಲ್, ಪ್ರದೀಪ್, ಮದನ್ ಹಾಗೂ ಸ್ಯಾಮ್ಯುವೆಲ್ ಎಂಬುವರನ್ನು ಬಂಧಿಸಲಾಗಿತ್ತು. ಅವರ ವಿಚಾರಣೆ ನಡೆಸಲಾಗುತ್ತಿದೆ. ಬೈರತಿ ಬಸವರಾಜ್ ಅವರನ್ನೂ ವಿಚಾರಣೆ ನಡೆಸಿ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ. ಬುಧವಾರ ಮತ್ತೆ ವಿಚಾರಣೆಗೆ ಬರುವಂತೆ ಸೂಚನೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಬಿಕ್ಲು ಕೊಲೆಗೆ ಕಾರಣ ಕಿತ್ತಗನೂರು ಗ್ರಾಮದಲ್ಲಿರುವ ಒಂದೂವರೆ ಎಕರೆ ಜಮೀನು ಎಂಬುದು ಇದುವರೆಗೂ ನಡೆದಿರುವ ತನಿಖೆಯಿಂದ ಗೊತ್ತಾಗಿದೆ. ಆ ಜಮೀನಿಗೆ ಮೂವರು ಮಾಲೀಕರಿದ್ದು, ಈ ಪೈಕಿ ನದಾಫ್ ಬಳಿ ಬಿಕ್ಲು ಶಿವ ಜಮೀನು ಖರೀದಿ ಒಪ್ಪಂದ ಮಾಡಿಸಿಕೊಂಡಿದ್ದರು. ಮತ್ತೊಬ್ಬ ಮಾಲೀಕರಿಂದ ರವಿ ಒಪ್ಪಂದ ಮಾಡಿಸಿಕೊಂಡು ಕಾಂಪೌಂಡ್ ಹಾಕುತ್ತಿದ್ದರು. ಇದರಿಂದ ಕೆರಳಿದ ಶಿವ ಕಾಂಪೌಂಡ್ ತೆರವು ಮಾಡಿದ್ದರು. ಈ ವಿಷಯವನ್ನು ರವಿ ಅವರು ಜಗದೀಶ್ ಹಾಗೂ ಕಿರಣ್‌ಗೆ ಹೇಳಿದ್ದರು. ಶಿವಗೆ ಜಗದೀಶ್ ಹಾಗೂ ಸಹಚರರು ಪ್ರಾಣ ಬೆದರಿಕೆ ಹಾಕಿದ್ದರು' ಎಂದು ಮೂಲಗಳು ತಿಳಿಸಿವೆ.

'ಶಿವ ಅವರನ್ನು ಕೊಲೆ ಮಾಡಲು ಆರೋಪಿಗಳು ಸಂಚು ರೂಪಿಸಿದ್ದರು. ಆರೋಪಿ ಸ್ಯಾಮ್ಯುವೆಲ್ 45 ದಿನ ಬಿಕ್ಲು ಶಿವ ಅವರ ಚಲನವಲನವನ್ನು ವೀಕ್ಷಿಸಿದ್ದರು. ಅದಕ್ಕೆ ಸಂಬಂಧಿಸಿದ ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿಗಳು ಸಿಕ್ಕಿವೆ' ಎಂದು ಮೂಲಗಳು ತಿಳಿಸಿವೆ.

ನಟಿಗೆ ನೋಟಿಸ್ ಕೊಡಲು ಸಿದ್ಧತೆ

ಪ್ರಕರಣದ ಮೊದಲನೇ ಆರೋಪಿ ಜಗದೀಶ್ ಅಲಿಯಾಸ್ ಜಗ್ಗ ತಲೆಮರೆಸಿಕೊಂಡಿದ್ದಾರೆ. ಅವರ ಪತ್ತೆಗೆ ವಿಶೇಷ ಪೊಲೀಸ್ ತಂಡವು ವಿವಿಧೆಡೆ ಹುಡುಕಾಟ ನಡೆಸುತ್ತಿದೆ. ಆದರೆ, ಸುಳಿವು ಮಾತ್ರ ಲಭಿಸಿಲ್ಲ.

'ಜಗದೀಶ್ ಅವರಿಗೆ ಸೇರಿದ ಮನೆಯ ಮೇಲೆ ಭಾನುವಾರ ರಾತ್ರಿ ತನಿಖಾ ತಂಡವು ದಾಳಿ ನಡೆಸಿ ಶೋಧ ನಡೆಸಿತು. ದಾಳಿಯ ವೇಳೆ ಆಸ್ತಿಗೆ ಸಂಬಂಧಿಸಿದ ದಾಖಲೆ ಪತ್ರಗಳು ಹಾಗೂ ಪಿಸ್ತೂಲ್ ಪರವಾನಗಿ ಸಿಕ್ಕಿದೆ. ಅವುಗಳನ್ನು ಜಪ್ತಿ ಮಾಡಲಾಗಿದೆ. ಪಿಸ್ತೂಲ್ ಸಿಕ್ಕಿಲ್ಲ. ಪಿಸ್ತೂಲ್ ಜತೆಗೆ ಆರೋಪಿ ಪರಾರಿ ಆಗಿರುವ ಶಂಕೆಯಿದೆ' ಎಂದು ಮೂಲಗಳು ತಿಳಿಸಿವೆ.

'ಚಿತ್ರ ನಟ–ನಟಿಯರ ಜತೆಗೆ ಆರೋಪಿ ಜಗದೀಶ್ ಅವರು ತೆಗೆಸಿಕೊಂಡಿರುವ ಫೋಟೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ನಟಿಯೊಬ್ಬರಿಗೆ ಸೀರೆ ಹಾಗೂ ಆಭರಣ ನೀಡುತ್ತಿರುವ ಫೋಟೊ ಸಿಕ್ಕಿದೆ. ಆದರೆ, ಕೊಲೆ ಪ್ರಕರಣಕ್ಕೂ ನಟ–ನಟಿಯರಿಗೂ ಯಾವುದೇ ಸಂಬಂಧ ಇಲ್ಲ. ಚಿತ್ರರಂಗದ ಗಣ್ಯರ ಜತೆಗೆ ಜಗದೀಶ್ ಅವರಿಗೆ ಫೋಟೊ ತೆಗೆಸಿಕೊಳ್ಳುವ ಹವ್ಯಾಸವಿತ್ತು. ಆ ಫೋಟೊಗಳು ಈಗ ಹರಿದಾಡುತ್ತಿವೆ. ಆದರೆ, ನಟಿಗೆ ಉಡುಗೊರೆ ನೀಡಿರುವ ಸಂಬಂಧ ತನಿಖೆ ನಡೆಸಲಾಗುವುದು. ನಟಿಗೆ ನೋಟಿಸ್ ಜಾರಿ ಮಾಡಲು ಸಿದ್ಧತೆ ನಡೆದಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಶಾಸಕ ಬೈರತಿ ಬಸವರಾಜ ಬಂಧನಕ್ಕೆ ಆಗ್ರಹ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ



ಶಾಸಕ ಬೈರತಿ ಬಸವರಾಜ ವಿರುದ್ಧ ಕ್ರಮ ಜರುಗಿಸುವಂತೆ ಒತ್ತಾಯಿಸಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

ಕೆ.ಆರ್.ಪುರ: ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಕೊಲೆ ಪ್ರಕರಣದಲ್ಲಿ ಐದನೇ ಆರೋಪಿಯಾಗಿರುವ ಕೆ.ಆರ್. ಪುರ ಕ್ಷೇತ್ರದ ಶಾಸಕ ಬೈರತಿ ಬಸವರಾಜ ಅವರ ವಿರುದ್ಧ ಸೂಕ್ತ ಕ್ರಮ ಜರುಗಿಸುವಂತೆ ಆಗ್ರಹಿಸಿ ರಾಷ್ಟ್ರೀಯ ಹೆದ್ದಾರಿ ಬಳಿಯ ಬಿಬಿಎಂಪಿ ಕಚೇರಿ ಮುಂಭಾಗದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ.ಕೆ. ಮೋಹನ್ ಮಾತನಾಡಿ, ಶಾಸಕ ಬೈರತಿ ಬಸವರಾಜ ಅವರು ಶಿವಪ್ರಕಾಶ್ ಕೊಲೆ ಪ್ರಕರಣದಲ್ಲಿ ಐದನೇ ಆರೋಪಿಯಾಗಿದ್ದು ಈ ಕೂಡಲೇ ರಾಜೀನಾಮೆ ನೀಡಬೇಕು. ಈ ಪ್ರಕರಣದಲ್ಲಿ ಶಾಸಕರನ್ನು ಬಂಧಿಸಿ ಅವರ ವಿರುದ್ಧ ಸೂಕ್ತ ರೀತಿಯಲ್ಲಿ ವಿಚಾರಣೆ ನಡೆಯಬೇಕು ಎಂದು ಆಗ್ರಹಿಸಿದರು.

'ಜನಸಾಮಾನ್ಯರ ಮೇಲೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾದರೆ ತಕ್ಷಣವೇ ಬಂಧಿಸಿ ಕ್ರಮ ಕೈಗೊಳ್ಳುತ್ತಾರೆ. ಆದರೆ ಶಾಸಕರ ಮೇಲೆ ಎಫ್‌ಐಆರ್ ದಾಖಲಾದರೂ ಅವರನ್ನು ಬಂಧಿಸಿ ಕ್ರಮ ಕೈಗೊಳ್ಳುತ್ತಿಲ್ಲ' ಎಂದು ಅಕ್ರೋಶ ವ್ಯಕ್ತಪಡಿಸಿದರು.

ಬೆಂಗಳೂರು ಪೂರ್ವ ಜಿಲ್ಲಾಧ್ಯಕ್ಷ ನಂದಕುಮಾರ್, ಮುಖಂಡರಾದ ಎಂ.ನಾರಾಯಣಸ್ವಾಮಿ, ಡಿ.ಎ.ಗೋಪಾಲ್, ಡಿ.ಕೆ.ದೇವೇಂದ್ರ, ಕಲ್ಕೆರೆ ನಾರಾಯಣಸ್ವಾಮಿ, ಬಂಡೆ ರಾಜು, ಜಯರಾಮ್, ಮೇಡಹಳ್ಳಿ ರಾಕಿ, ಅಗರ ಪ್ರಕಾಶ್, ಗಗನ್ ಯಾದವ್, ಮಂಜುನಾಥ್ ಇದ್ದರು.

ನಾಲ್ವರ ಸೆರೆ • ಆರ್‌ಎಂಸಿ ಯಾರ್ಡ್ ಠಾಣೆಯಲ್ಲಿ ಪ್ರಕರಣ ದಾಖಲು

ಒಳಚರಂಡಿಗೆ ಇಳಿದ ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ



ಪುಟ್ಟ

ಬೆಂಗಳೂರು: ಆರ್‌ಎಂಸಿ ಯಾರ್ಡ್ ಠಾಣಾ ವ್ಯಾಪ್ತಿಯ ಆಶ್ರಯ ನಗರದ ಆರಿಗ ಕಂಪನಿ ಎದುರು ಒಳಚರಂಡಿಗೆ ಇಳಿದು ಅಸ್ವಸ್ಥಗೊಂಡಿದ್ದ ಕಾರ್ಮಿಕರೊಬ್ಬರು ಮೃತಪಟ್ಟಿದ್ದಾರೆ. ಮತ್ತೊಬ್ಬ ಕಾರ್ಮಿಕನ ಸ್ಥಿತಿ ಗಂಭೀರವಾಗಿದೆ.

ಪುಟ್ಟ (32) ಮೃತಪಟ್ಟವರು.

ಆಶ್ರಯನಗರದಲ್ಲಿ ಒಳಚರಂಡಿ ಶುಚಿಗೊಳಿಸಲು ಭಾನುವಾರ ಸಂಜೆ ಪುಟ್ಟ ಅವರು ಇಳಿದಿದ್ದರು. ಶುಚಿಗೊಳಿಸುವ ವೇಳೆ ಇಬ್ಬರು ಕಾರ್ಮಿಕರು ಉಸಿರುಗಟ್ಟಿ ಅಸ್ವಸ್ಥರಾಗಿದ್ದರು. ಇಬ್ಬರನ್ನೂ ಹೊರಕ್ಕೆ ಕರೆತಂದು ಮಜ್ಜಿಗೆ ಹಾಗೂ ನೀರು ಕುಡಿಸಿ ಮನೆಗೆ ಕಳುಹಿಸಲಾಗಿತ್ತು. ಆದರೆ, ರಾತ್ರಿ ಮನೆಯಲ್ಲಿ ಮಲಗಿದ್ದ ಸ್ಥಳದಲ್ಲೇ ಪುಟ್ಟ ಅವರು ಮೃತಪಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಘಟನಾ ಸ್ಥಳಕ್ಕೆ ಆರ್‌ಎಂಸಿ ಯಾರ್ಡ್ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪುಟ್ಟ ಅವರ ತಂದೆ ಲಕ್ಷ್ಮಣ್ ಅವರು ನೀಡಿದ ದೂರು ಆಧರಿಸಿ ನಾಗರಾಜ್, ಆಂಥೋಣಿ, ಆನಂದಕುಮಾರ್ ಹಾಗೂ ದೇವರಾಜ್ ಎಂಬುವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಒಳಚರಂಡಿಗೆ ಇಳಿಸಿ ಸ್ವಚ್ಛಗೊಳಿಸಿದ ನಂತರ ಪುಟ್ಟ ಅವರು ಅನಾರೋಗ್ಯ ಕ್ಕೀಡಾಗಿದ್ದರು. ಆರೋಪಿಗಳು ಚಿಕಿತ್ಸೆ ಕೊಡಿಸದೇ ಮನೆಗೆ ಕರೆತಂದು ಬಿಟ್ಟು ಹೋಗಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಿದ್ದರು.

'ಪುಟ್ಟ ಅವರು ಕೂಲಿ ಕೆಲಸ ಮಾಡುತ್ತಿದ್ದರು. ಹಣದ ಆಮಿಷವೊಡ್ಡಿ ಇಬ್ಬರನ್ನೂ ಒಳಚರಂಡಿಗೆ ಇಳಿಸಿರುವುದು ತನಿಖೆಯಿಂದ ಗೊತ್ತಾಗಿದೆ. ಸದ್ಯ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದೆ' ಎಂದು ಉತ್ತರ ವಿಭಾಗದ ಡಿಸಿಪಿ ನೇಮಗೌಡ ತಿಳಿಸಿದ್ದಾರೆ.

'ಒಳಚರಂಡಿಗೆ ಮನುಷ್ಯರನ್ನು ಇಳಿಸಿ ಸ್ವಚ್ಛಗೊಳಿಸುವುದಕ್ಕೆ ನಿರ್ಬಂಧ ಇದೆ. ನಿಯಮ ಉಲ್ಲಂಘಿಸಿರುವುದು ಕಂಡುಬಂದಿದೆ. ಬಂಧಿತರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸರು ಹೇಳಿದರು.

ಮಾರಕಾಸ್ತ್ರದಿಂದ ಹಲ್ಲೆ: ಎಗ್‌ರೈಸ್ ರವಿ ಸೇರಿ ಆರು ಮಂದಿ ಬಂಧನ

ಬೆಂಗಳೂರು: ಯುವತಿಯೊಂದಿಗೆ ಮದುವೆ ಮಾಡಿಕೊಳ್ಳುವ ವಿಚಾರಕ್ಕೆ ಸೋದರ ಸಂಬಂಧಿಯನ್ನು ಹೆದರಿಸಲು ಹೋಗಿ ಸಾರ್ವಜನಿಕರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರು ಮಂದಿಯನ್ನು ನಂದಿನಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಎಗ್‌ರೈಸ್' ರವಿ ಸೇರಿ ಆರು ಮಂದಿಯನ್ನು ಬಂಧಿಸಲಾಗಿದೆ. ಮಹಾಲಕ್ಷ್ಮಿ ಠಾಣೆ ರೌಡಿಶೀಟರ್ ಆಗಿರುವ ವಿನಯ್‌ಗಾಗಿ ಶೋಧ ಕಾರ್ಯ ನಡೆಯುತ್ತಿದೆ. ಆರೋಪಿಗಳ ವಿರುದ್ಧ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದು, ತನಿಖೆ ಮುಂದುವರಿದಿದೆ ಎಂದು ಪೊಲೀಸರು ಹೇಳಿದರು.

'ಎಗ್‌ರೈಸ್' ರವಿ, ತನ್ನ ಸ್ನೇಹಿತ ವಿನಯ್ ಮತ್ತಿತರ ಜತೆಗೆ ಸೇರಿಕೊಂಡು ಸಂಬಂಧಿ ಜಗದೀಶ್ ಹಾಗೂ ಸಾರ್ವಜನಿಕರ ಮೇಲೆ ಹಲ್ಲೆ ನಡೆಸಿದ್ದ. ಈ ವೇಳೆ ಫುಡ್ ಡೆಲಿವರಿ ಬಾಯ್ ಪವನ್ ಕುಮಾರ್ ಮೇಲೂ ಹಲ್ಲೆ ನಡೆಸಲಾಗಿತ್ತು. ಪವನ್ ದೂರು ನೀಡಿದ ಮೇರೆಗೆ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು ಎಂದು ಪೊಲೀಸರು ಹೇಳಿದರು.

ನಂದಿನಿ ಲೇಔಟ್‌ನ ಕಂಠೀರವ ನಗರದಲ್ಲಿ ಜಗದೀಶ್ ಅವರು ಫೋಟೊ ಪ್ರೇಮ್ ಅಂಗಡಿ ಇಟ್ಟುಕೊಂಡಿದ್ದಾರೆ. ಅವರ ಸಹೋದರಿಯ ಪುತ್ರಿಯನ್ನು ಮದುವೆ ಆಗಲು ಆರೋಪಿ ರವಿ ಮುಂದಾಗಿದ್ದ. ಮದುವೆ ಜಗದೀಶ್‌ಗೆ ಇಷ್ಟ ಇರಲಿಲ್ಲ. ಕುಪಿತಗೊಂಡಿದ್ದ ಆರೋಪಿ ರವಿ ಫೋಟೊ ಪ್ರೇಮ್ ಅಂಗಡಿ ಬಳಿಗೆ ಬಂದು ಗಲಾಟೆ ನಡೆಸಿದ್ದ. ಆಗ ಮಾರಕಾಸ್ತ್ರಗಳನ್ನು ಬೀಸುವಾಗ ಸಾರ್ವಜನಿಕರಿಗೆ ತಗುಲಿತ್ತು ಎಂದು ಹೇಳಿದರು.

ರ್‍ಯಾಗಿಂಗ್‌ಗೆ ಹೆದರಿ ವಿದ್ಯಾರ್ಥಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ



ಸಿ.ಅರುಣ್

ನೆಲಮಂಗಲ: ಎಂಜಿನಿಯರಿಂಗ್ ಕಾಲೇಜೊಂದರ ವಿದ್ಯಾರ್ಥಿ ರ್‍ಯಾಗಿಂಗ್‌ನಿಂದ ಮನನೊಂದು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬೆಂಗಳೂರು ಉತ್ತರ ತಾಲ್ಲೂಕು ನಂದರಾಮಯ್ಯನ ಪಾಳ್ಯದ ನಿವಾಸಿಗಳಾದ ಚನ್ನಕೇಶವ– ತುಳಸಿ ದಂಪತಿ ಪುತ್ರ ಸಿ.ಅರುಣ್(21) ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿ. ಅರುಣ್ ಅವರು ವಾಸ್ತುಶಿಲ್ಪ ವಿಭಾಗದಲ್ಲಿ 4ನೇ ಸೆಮಿಸ್ಟರ್ ಓದುತ್ತಿದ್ದರು.

ಹಾಸನದ ಚನ್ನಕೇಶವ ಹಾಗೂ ತುಳಸಿ ದಂಪತಿ, ಮಗನ ವಿದ್ಯಾಭ್ಯಾಸ ಹಾಗೂ ಉದ್ಯೋಗಕ್ಕಾಗಿ ನಂದರಾಮಯ್ಯನ ಪಾಳ್ಯಕ್ಕೆ ಬಂದು ನೆಲಸಿದ್ದರು. ದಂಪತಿ ಕೂಲಿ ಕೆಲಸ ಮಾಡಿಕೊಂಡಿದ್ದರು.

ಶಾಲಾ– ಕಾಲೇಜಿನಲ್ಲೂ ಅತ್ಯುತ್ತಮ ಅಂಕ ಗಳಿಸಿ ಪ್ರತಿಭಾನ್ವಿತರಾಗಿದ್ದ ಅರುಣ್ ಅವರಿಗೆ ಬಾಗಲೂರಿನ ಎಂಜಿನಿಯರಿಂಗ್ ಕಾಲೇಜಿನಲ್ಲಿ ಉಚಿತ ಪ್ರವೇಶ ದೊರಕಿತ್ತು. ಜುಲೈ 11ರಂದು ಮಧ್ಯಾಹ್ನ ಮನೆಯಲ್ಲಿ ಯಾರೂ ಇಲ್ಲದ ಸಂದರ್ಭದಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ವಿದ್ಯಾರ್ಥಿಯು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೂ ಮುನ್ನ ವಿಡಿಯೊ ಮಾಡಿ, ಸ್ನೇಹಿತರಿಗೆ ಕಳುಹಿಸಿದ್ದರು. ವಿಡಿಯೊವನ್ನು ಸ್ನೇಹಿತರು ಸೋಮವಾರ ಅರುಣ್ ಪೋಷಕರಿಗೆ ಕಳುಹಿಸಿದ್ದರು. ಪೋಷಕರು ಪೊಲೀಸರಿಗೆ ಮಾಹಿತಿ ನೀಡಿದ್ದರು. ವಿಡಿಯೊದಲ್ಲಿ ಸ್ನೇಹಿತರ ಕಿರುಕುಳ, ಕೆಟ್ಟದಾಗಿ ಮಾತನಾಡಿಕೊಳ್ಳುವ ಹಾಗೂ ರ್‍ಯಾಗಿಂಗ್ ಕುರಿತು ಹೇಳಿಕೊಂಡಿದ್ದಾರೆ. ವಿಡಿಯೊ ಕಾಲೇಜು ಸ್ನೇಹಿತರ ವಾಟ್ಸ್‌ಆ್ಯಪ್ ಗುಂಪಿನಲ್ಲಿ ಹರಿದಾಡುತ್ತಿದೆ' ಎಂದು ಪೊಲೀಸರು ಹೇಳಿದರು.

ಅರುಣ್ ಅವರು ಐದೇ ನಿಮಿಷದಲ್ಲಿ ಭಾವಚಿತ್ರ, ವಿಭಿನ್ನ ಪಾರಂಪರಿಕ ಚಿತ್ರಗಳನ್ನು ಬಿಡಿಸುತ್ತಿದ್ದರು. ಸಿನಿಮಾ ತಾರೆಯರ ಭಾವಚಿತ್ರ ಬಿಡಿಸಿ ಮೆಚ್ಚುಗೆ ಗಳಿಸಿದ್ದರು.

'ಮಾದನಾಯಕನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ರ್‍ಯಾಗಿಂಗ್ ಮಾಡಿದವರ ವಿಚಾರಣೆ ನಡೆಸಲಾಗುವುದು' ಎಂದು ಪೊಲೀಸರು ಹೇಳಿದರು.

₹1.25 ಲಕ್ಷ ಲಂಚ: ಸಿಕ್ಕಿಬಿದ್ದ ಪಿಎಸ್‌ಐ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಪ್ರಕರಣವೊಂದರಲ್ಲಿ ಬಿ ರಿಪೋರ್ಟ್ ಸಲ್ಲಿಸಲು ಲಂಚ ಪಡೆಯುತ್ತಿದ್ದ ಗೋವಿಂದಪುರ ಪೊಲೀಸ್ ಠಾಣೆಯ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಸಾವಿತ್ರಿ ಬಾಯಿ ಅವರು ಲೋಕಾಯುಕ್ತ ಬಲೆಗೆ ಬಿದಿದ್ದಾರೆ.

ಎಚ್‌ಬಿಆರ್ ಲೇಔಟ್‌ನ ಮೊಹಮದ್ ಯೂನಸ್ ವಿರುದ್ಧ ದಾಖಲಾಗಿದ್ದ ಪ್ರಕರಣದಲ್ಲಿ ಬಿ ರಿಪೋರ್ಟ್ ಸಲ್ಲಿಸುವ ಸಲುವಾಗಿ ₹1.25 ಲಕ್ಷ ಲಂಚಕ್ಕೆ ಪಿಎಸ್‌ಐ ಬೇಡಿಕೆ ಇಟ್ಟಿದ್ದರು. ದೂರುದಾರನಿಂದ ಹಣ ಪಡೆಯುತ್ತಿದ್ದ ವೇಳೆ ಡಿಎಸ್‌ಪಿ ಪೂವಯ್ಯ ನೇತೃತ್ವದ ತಂಡ ಅಧಿಕಾರಿಯನ್ನು ಹಣದ ಸಮೇತ ಬಂಧಿಸಿತು. ಅಧಿಕಾರಿಯ ವಿಚಾರಣೆ ನಡೆಯುತ್ತಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಹಿನ್ನೆಲೆ: ಮದುವೆಯಾಗಿದ್ದರೂ ಮೊಹಮದ್ ಯೂನಸ್ ವಿಷಯ ತಿಳಿಸದೆ ಮತ್ತೊಂದು ಯುವತಿಯ ಜತೆ ಸಹಜೀವನ ನಡೆಸುತ್ತಿದ್ದರು. ವಿಷಯ ಗೊತ್ತಾಗಿ ಯುವತಿ ಆರೋಪಿಯನ್ನು ಪ್ರಶ್ನಿಸಲು ಹೋದಾಗ ಗಲಾಟೆ ನಡೆದು, ಆಕೆಯ ಮೇಲೆ ಹಲ್ಲೆ ನಡೆಸಿದ್ದ. ಮತ್ತೆ ಮೇ 5ರಂದು ದೂರುದಾರೆಯನ್ನು ಕರೆಸಿಕೊಂಡ ಆರೋಪಿ, ದೂರು ವಾಪಸ್ ಪಡೆಯುವಂತೆ ಒತ್ತಡ ಹೇರಿದ್ದ. ಆಕೆ ನಿರಾಕರಿಸಿದಾಗ ಹಲ್ಲೆ ನಡೆಸಿದ್ದ. ಹಾಗಾಗಿ ಈತನ ವಿರುದ್ಧ ಪ್ರಕರಣ ದಾಖಲಾಗಿತ್ತು. ಈ ಪ್ರಕರಣ ಸಂಬಂಧ ಬಿ ರಿಪೋರ್ಟ್ ಸಲ್ಲಿಸಲು ಸಾವಿತ್ರಿ ಬಾಯಿ ಹಣಕ್ಕೆ ಬೇಡಿಕೆ ಇರಿಸಿದ್ದರು.

ಹೈದರಾಬಾದ್ ರೇಸ್

ಶಿ ಕ್ಯಾನ್ ಗೆಲ್ಲುವ ನಿರೀಕ್ಷೆ

ಕೆ.ಶ್ರೀನಿವಾಸ್ ರೆಡ್ಡಿ ಮೆಮೋರಿಯಲ್ ಕಪ್ ಮಂಗಳವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಶಿ ಕ್ಯಾನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಅಥಾರಿಟೇರಿಯನ್ 1, ಅರಬೆಸ್ಕ 4, ಪ್ರೈಡ್ ಅಸ್ಸೈಡ್ 10
2ನೇ ರೇಸ್: ಗೋಲ್ಡನ್ ಯೂನಿಕಾರ್ನ್ 8, ಶೂಟಿಂಗ್ ಸ್ಟಾರ್ 6, ಸ್ಮಾರ್ಟ್ ಬಾಯ್ 7
3ನೇ ರೇಸ್: ಎಂಪರರ್ಸ್ ಚಾರ್ಮ್ 7, ಲಿಂಡಾ 6, ಸ್ಟಾರ್ ಫಾರೆವರ್ 5
4ನೇ ರೇಸ್: ಪೆಟಾಲುಮಾ 2, ಬೆವರ್ಲಿ 5, ಮಿಸ್ಟಿಕಲ್ ಡಾನ್ 8
5ನೇ ರೇಸ್: ಗೆಟ್ ಲಕ್ಕಿ 2, ಬ್ಲ್ಯಾಕ್ ಡಸ್ಟ್ 6, ಎನ್‌ಆರ್‌ಐ ಅಲ್ಟ್ರಾಪವರ್ 8
6ನೇ ರೇಸ್: ಶಿ ಕ್ಯಾನ್ 3, ರೊಮ್ಯಾಂಟಿಕ್ ಗ್ರೇ 8, ಕ್ಯಾಲಿಸ್ಟ ಗರ್ಲ್ 4
7ನೇ ರೇಸ್: ಪೆಟ್ರಾ ಆರ್ಕ್ಟ್ 4, ವೈಟಲ್ ಸೈನ್ 1, ಸ್ಟಾರ್ ಮೆಡಲ್ 7
8ನೇ ರೇಸ್: ಕಂಟ್ರೆಸ್ ಮ್ಯಾಕ್ಸಿಮಸ್ 1, ಜಿನೀ 4, ಎಕ್ಸ್‌ಪೊನೆಂಟ್ 2

ಉತ್ತಮ ಬೆಟ್: ಪೆಟಾಲುಮ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಹೈಕೋರ್ಟ್ ಮಧ್ಯಪ್ರವೇಶಕ್ಕೆ ಮನವಿ

ಧರ್ಮಸ್ಥಳದಲ್ಲಿ ನಡೆದಿವೆ ಎನ್ನಲಾದ ಅಸಹಜ ಸಾವು ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧರ್ಮಸ್ಥಳದ ಸುತ್ತಮುತ್ತ ನಡೆದಿವೆ ಎನ್ನಲಾದ ಅಸಹಜ ಸಾವುಗಳ ಕುರಿತಂತೆ ನಡೆಯುತ್ತಿರುವ ತನಿಖೆ ಹೈಕೋರ್ಟ್ ಮೇಲ್ವಿಚಾರಣೆಯಲ್ಲಿ ನಡೆಯಬೇಕು' ಎಂದು ಕೋರಿ ಹೈಕೋರ್ಟ್ ವಕೀಲರಾದ ಟಿ.ಶ್ರೀರಾಮ್ ಟಿ.ನಾಯಕ್, ಬಿ.ಎಸ್.ಗಣೇಶ್ ಪ್ರಸಾದ್, ವಿ.ಗಣೇಶ ಮತ್ತು ಕೆ.ಎ.ಪೊನ್ನಣ್ಣ ಮನವಿ ಮಾಡಿದ್ದಾರೆ.

ಈ ಸಂಬಂಧ ಸೋಮವಾರ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ಐದು ಪುಟಗಳ ಪತ್ರ ಸಲ್ಲಿಸಿರುವ ಅವರು, 'ಪ್ರಕರಣದ ತನಿಖೆ ನಿಧಾನಗತಿಯಲ್ಲಿ ಸಾಗುತ್ತಿದೆ. ಹಾಗಾಗಿ, ಹೈಕೋರ್ಟ್ ತಕ್ಷಣವೇ ಮಧ್ಯಪ್ರವೇಶಿಸಬೇಕಾದ ಅವಶ್ಯಕತೆ ಇದೆ' ಎಂದು ಕೋರಿದ್ದಾರೆ. 'ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ಜೂನ್ 3ರಂದೇ ದೂರು ದಾಖಲಾಗಿದೆ. 17 ದಿನ ಕಳೆದಿದ್ದರೂ ಆರೋಪಿಗಳನ್ನು ಬಂಧಿಸದಿರುವುದು ಆಘಾತಕಾರಿ ಸಂಗತಿ' ಎಂದು ವಿವರಿಸಿದ್ದಾರೆ.

'ತನಿಖೆಯ ಉದ್ದೇಶ ಅನುಮಾನ ಹುಟ್ಟಿಸಿದೆ'

'ಎಸ್‌ಐಟಿ ತನಿಖೆಗೆ ಸ್ವಾಗತ. ಆದರೆ ಹಿಂದೂಗಳ ಶ್ರದ್ಧಾ ಕೇಂದ್ರಗಳ ಮೇಲೆ ಗುರಿ ಮಾಡಿ ದಾಳಿ ನಡೆಸುವ ಪ್ರಯತ್ನ ನಡೆದಿದೆ. ತನಿಖೆಯ ಉದ್ದೇಶ ಅನುಮಾನ ಹುಟ್ಟಿಸಿದೆ' ಎಂದು ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದ್ದಾರೆ.

'ಹಿಂದೂ ವಿರೋಧಿ ನೀತಿ ಅನುಸರಿಸುತ್ತಿರುವ ಸರ್ಕಾರ ತನ್ನ ತಪ್ಪುಗಳು, ಹಗರಣಗಳನ್ನು ಮುಚ್ಚಿ ಹಾಕಲು ಹಿಂದೂ ಧಾರ್ಮಿಕ ಕೇಂದ್ರಗಳ ಮೇಲೆ ಅಪನಂಬಿಕೆ ಹುಟ್ಟಿಸುವ ಕೆಲಸ ಮಾಡುತ್ತಿದೆ. ಇದು ರಾಜಕೀಯ ಪ್ರೇರಿತ' ಎಂದು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

'ತನಿಖೆಗೆ ಸ್ವಾಗತ; ಅಪಪ್ರಚಾರ ನಿಲ್ಲಲಿ'

ಬೆಂಗಳೂರು: 'ಧರ್ಮಸ್ಥಳದ ಬಳಿ ನೂರಾರು ಶವಗಳನ್ನು ಹೂತಿದ್ದೇನೆ ಎಂದು ಅಪರಿಚಿತ ವ್ಯಕ್ತಿ ಹೇಳಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಎಸ್‌ಐಟಿ ರಚಿಸಿರುವುದು ಸ್ವಾಗತಾರ್ಹ. ಆದರೆ, ಧರ್ಮಸ್ಥಳ ಮಂಜುನಾಥಸ್ವಾಮಿಯ ದೇವಾಲಯದ ಬಗ್ಗೆ ಅಪಪ್ರಚಾರ ಮಾಡುವುದು ತಪ್ಪು' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

'ಅನಾಮಧೇಯ ವ್ಯಕ್ತಿ ಹೇಳಿರುವ ಹಿನ್ನೆಲೆಯಲ್ಲಿ ಎಸ್‌ಐಟಿ ರಚನೆಯಾಗಿದೆ. ಈ ಪ್ರಕರಣಗಳಲ್ಲಿ ನಿಷ್ಪಕ್ಷಪಾತ ತನಿಖೆಯಾಗಲಿ. ಯಾರನ್ನೂ ಸಿಕ್ಕಿ ಹಾಕಿಸುವ ಉದ್ದೇಶದಿಂದ ತನಿಖೆ ನಡೆಯಬಾರದು' ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ದಕ್ಷಿಣ ಭಾರತದಲ್ಲಿ ತಿರುಪತಿ ಹಾಗೂ ಧರ್ಮಸ್ಥಳ ಕೋಟ್ಯಂತರ ಹಿಂದೂಗಳ ಶ್ರದ್ಧಾಕೇಂದ್ರವಾಗಿದೆ. ಧರ್ಮಸ್ಥಳದ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮುಸ್ಲಿಂ ಯುವಕನೊಬ್ಬ ವಿಡಿಯೊಗಳನ್ನು ಹರಿಬಿಡುತ್ತಿದ್ದಾನೆ. ಈ ಮಧ್ಯೆ ಕೇರಳ ಸರ್ಕಾರವೂ ಮಧ್ಯಪ್ರವೇಶ ಮಾಡಿದೆ. ಕೇರಳದ ಮಧ್ಯ ಪ್ರವೇಶ ಅನಗತ್ಯ. ಬಾಹ್ಯ ಶಕ್ತಿಗಳ ಪ್ರವೇಶಕ್ಕೆ ಅವಕಾಶ ನೀಡಬಾರದು. ಕೊಲೆ ಆಗಿದ್ದರೆ ಸ್ಥಳೀಯ ಪೊಲೀಸರೇ ತನಿಖೆ ಮಾಡಬೇಕು' ಎಂದರು.

'ದೇವಾಲಯ ಮಾತ್ರವಲ್ಲದೆ ಚರ್ಚ್, ಮಸೀದಿ ಮೊದಲಾದ ಧಾರ್ಮಿಕ ಕೇಂದ್ರಗಳ ಬಳಿ ಅನೇಕರು ಸಾಯುತ್ತಾರೆ. ಇಂತಹ ಸಂದರ್ಭಗಳಲ್ಲಿ ಪೊಲೀಸರು ತನಿಖೆ ಮಾಡುತ್ತಾರೆ. ಯಾರೋ ಒಬ್ಬರಿಗೆ 20 ವರ್ಷಗಳ ಬಳಿಕ ಜ್ಞಾನೋದಯವಾಗಿದ್ದು ಹೇಗೆ ಎಂಬ ಪ್ರಶ್ನೆ ಮೂಡುತ್ತದೆ. ಒಂದು ಧರ್ಮಕ್ಕೆ ಅಪಮಾನ ಮಾಡಲು ವಿವಾದ ಮಾಡುವುದು ಸರಿಯಲ್ಲ. ಇದರಲ್ಲಿ ಧರ್ಮಸ್ಥಳದ ಮಂಜುನಾಥಸ್ವಾಮಿಯ ವಿಚಾರವೇ ಬರುವುದಿಲ್ಲ. ಆದರೂ ಪದೇ ಪದೇ ಧಾರ್ಮಿಕ ಕೇಂದ್ರದ ಬಗ್ಗೆ ಅಪಪ್ರಚಾರ ಮಾಡಲಾಗುತ್ತಿದೆ' ಎಂದು ಹೇಳಿದರು.

ಇದು ವ್ಯಕ್ತಿಗಳಿಗೆ ಸಂಬಂಧಿಸಿದ ವಿಚಾರವೇ ಹೊರತು, ಧರ್ಮಸ್ಥಳದ ದೇವಾಲಯವನ್ನು ಗುರಿ ಮಾಡಬಾರದು ಎಂದು ಅವರು ಒತ್ತಾಯಿಸಿದರು.

ಕಾಲಮಿತಿಯಲ್ಲಿ ತನಿಖೆ ನಡೆಯಲಿ: ಸಂಸದ ಬಸವರಾಜ ಬೊಮ್ಮಾಯಿ

ಬೆಂಗಳೂರು: 'ಧರ್ಮಸ್ಥಳ ಪ್ರಕರಣದ ಕುರಿತು ಎಸ್‌ಐಟಿ ತನಿಖೆಗೆ ನೀಡಿರುವುದನ್ನು ಸ್ವಾಗತ ಮಾಡುತ್ತೇವೆ. ಕಾಲಮಿತಿಯಲ್ಲಿ ಕಾನೂನು ಬದ್ಧವಾಗಿ ಎಸ್‌ಐಟಿ ತನಿಖೆ ಆಗಬೇಕು. ಯಾರನ್ನೋ ಗುರಿಯಾಗಿಸಿಕೊಂಡು ತನಿಖೆ ನಡೆಯಬಾರದು' ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

'ಧರ್ಮಸ್ಥಳದ ಬಗ್ಗೆ ಸ್ಥಳೀಯರು ಹಾಗೂ ಅಲ್ಲಿ ಬಹಳ ದಿನಗಳವರೆಗೆ ಕೆಲಸ ಮಾಡಿರುವ ಪೊಲೀಸರಿಗೆ ಗೊತ್ತಿದೆ. ದೂರು ಕೊಟ್ಟವರು ತಮ್ಮ ಮೇಲೆ ಒತ್ತಡ ಇದೆ ಎಂದು ಹೇಳಿದ್ದಾರೆ. ದೂರು ಕೊಟ್ಟವರಿಗೆ ಯಾರು ಒತ್ತಡ ಹಾಕಿದ್ದಾರೆ ಎಂದು ಹೇಳಬೇಕು. ಈ ಬಗ್ಗೆ ತನಿಖೆಯಾಗಬೇಕು' ಎಂದು ಆಗ್ರಹಿಸಿದರು.

ವಿ.ಗೋಪಾಲಗೌಡರ ನೇತೃತ್ವದಲ್ಲಿ ಸಮಾನ ಮನಸ್ಕರ ಸಭೆ

'ಸುಪ್ರೀಂ' ಮೇಲ್ವಿಚಾರಣೆಯಲ್ಲಿ ತನಿಖೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮಸ್ಥಳದ ಸುತ್ತಮುತ್ತ ನಡೆದಿದೆ ಎನ್ನಲಾದ ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳ ತನಿಖೆಯನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಮೇಲ್ವಿಚಾರಣೆಯಲ್ಲಿ ನಡೆಸುವಂತೆ ಸಮಾನ ಮನಸ್ಕರ ವೇದಿಕೆ ಒತ್ತಾಯಿಸಿದೆ.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ನೇತೃತ್ವದಲ್ಲಿ ಸೋಮವಾರ ಇಲ್ಲಿ ನಡೆದ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಯಿತು. ಈ ವಿಷಯದಲ್ಲಿ ನ್ಯಾಯ ಸಿಗುವವರೆಗೂ ಪಕ್ಷಾತೀತವಾಗಿ ಹೋರಾಟ ನಡೆಸಬೇಕು. ಅಗತ್ಯ ಬಿದ್ದರೆ ವಿಧಾನಸೌಧ ಚಲೋ ನಡೆಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಸರ್ಕಾರ ಮತ್ತು ಎಸ್‌ಐಟಿ ಮೇಲೆ ಒತ್ತಡ ತರದಿದ್ದರೆ ಈ ಪ್ರಕರಣದಲ್ಲಿ ನ್ಯಾಯ ಸಿಗುವುದಿಲ್ಲ. ಈ ವಿಷಯದಲ್ಲಿ ತನಿಖೆ ನಡೆಸಲು ಸರ್ಕಾರಕ್ಕೆ ಮುಕ್ತ ಮನಸ್ಸಿಲ್ಲ. ಜನಾಭಿಪ್ರಾಯಕ್ಕೆ ಮಣಿದು ಎಸ್‌ಐಟಿ ರಚಿಸಿದೆ. ನ್ಯಾಯ ಸಿಗುವವರೆಗೂ ನಮ್ಮ ಹೋರಾಟವನ್ನು ಮುಂದುವರಿಸಲು ತೀರ್ಮಾನಿಸಲಾಯಿತು. ನಿರ್ಭಯ ಪ್ರಕರಣದಲ್ಲಿ ದೇಶದಾದ್ಯಂತ ದೊಡ್ಡ ಮಟ್ಟದಲ್ಲಿ ಆಂದೋಲನ ನಡೆಯಿತು. ಅದೇ ಮಾದರಿಯಲ್ಲಿ ಹೋರಾಟ ಮಾಡಬೇಕೆಂದು ಸಭೆಯಲ್ಲಿ ಭಾಗಹಿಸಿದ್ದವರು ಸಲಹೆ ನೀಡಿದರು.



ಸಮಾನ ಮನಸ್ಕರ ಸಭೆಯಲ್ಲಿ ವಿ.ಗೋಪಾಲಗೌಡ ಮಾತನಾಡಿದರು

ಈ ಸಂದರ್ಭದಲ್ಲಿ ಮಾತನಾಡಿದ ಹಿರಿಯ ವಕೀಲ ಡಾ.ಸಿ.ಎಸ್. ದ್ವಾರಕಾನಾಥ್, 'ಗೌರಿ ಲಂಕೇಶ್ ಹತ್ಯೆ ನಡೆದು ಸುಮಾರು 7 ವರ್ಷಗಳಾಗಿವೆ. ಆರೋಪಿಗಳು ಹೊರಗಡೆಯೇ ಇದ್ದಾರೆ. ಇನ್ನೂ ವಿಚಾರಣೆ ಮುಗಿದಿಲ್ಲ. ಧರ್ಮಸ್ಥಳ ಪ್ರಕರಣದ ವಿಚಾರಣೆಗಾಗಿ ವಿಶೇಷ ತ್ವರಿತ ನ್ಯಾಯಾಲಯ ರಚಿಸಬೇಕು ಎಂದು ಆಗ್ರಹಿಸಿದರು.

ಉಗ್ರಪ್ಪ ನೇತೃತ್ವದ ಆಯೋಗದ ವರದಿಯ ಪ್ರಕಾರ 467 ಹೆಣ್ಣುಮಕ್ಕಳು ಕಾಣೆಯಾಗಿದ್ದಾರೆ. 2018ರಲ್ಲೇ ಈ ವರದಿಯನ್ನು ಸರಕಾರಕ್ಕೆ ಸಲ್ಲಿಸಲಾಗಿದೆ. ಅದರಲ್ಲಿ ಕೇರಳ, ಆಂಧ್ರಪ್ರದೇಶ, ತಮಿಳುನಾಡು ರಾಜ್ಯದವರೂ ಇರಬಹುದು. ಆದರೆ ಕರ್ನಾಟಕದವರು ಹೆಚ್ಚು ಜನರು ಇದ್ದಾರೆ ಎಂದರು.

ಅಂಕಣಕಾರ ಶಿವಸುಂದರ್, ಪ್ರಾಧ್ಯಾಪಕ ಎ.ನಾರಾಯಣ, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ರಾಜ್ಯಾಧ್ಯಕ್ಷ ರವಿಕೃಷ್ಣಾರೆಡ್ಡಿ, ಹೋರಾಟಗಾರರಾದ ಎಚ್.ಎಂ.ವೆಂಕಟೇಶ್, ಚೇತನ್ ಅಹಿಂಸಾ, ಬಿ.ಆರ್.ಭಾಸ್ಕರ್ ಪ್ರಸಾದ್, ಬೆಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಎ.ಪಿ. ರಂಗನಾಥ ಉಪಸ್ಥಿತರಿದ್ದರು.

> **ಸೌಜನ್ಯ, ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ಯೂಟ್ಯೂಬ್ ಚಾನೆಲ್‌ಗಳಿಗೆ ನೀಡಿರುವ ನೋಟಿಸ್‌ಗಳನ್ನು ವಜಾಗೊಳಿಸಲು ವಕೀಲರ ತಂಡ ಕಟ್ಟಿ ಕೆಲಸ ಮಾಡಲಾಗುವುದು.**
> **ವಿ.ಗೋಪಾಲಗೌಡ,** ವಿಶ್ರಾಂತ ನ್ಯಾಯಮೂರ್ತಿ

> **ಧರ್ಮಸ್ಥಳ ಪ್ರಕರಣದ ತನಿಖೆ ವಿಡಿಯೊ ದಾಖಲೀಕರಣ ಮಾಡಬೇಕು. ತನಿಖೆಯಿಂದ ಹೊರಬಂದ ಮೂಳೆ ಮತ್ತು ದೇಹದ ಇತರ ಭಾಗಗಳ ಬಗ್ಗೆ ಅಧ್ಯಯನ ಮಾಡಲು ಎಫ್‌ಎಸ್‌ಎಲ್ ಅಧಿಕಾರಿ ಇರಬೇಕು.**
> **ಡಾ.ಸಿ.ಎಸ್.ದ್ವಾರಕಾನಾಥ್,** ಹಿರಿಯ ವಕೀಲ

ಪಾದಯಾತ್ರಿಗಳಿಗೆ ತಡೆ, ವಾಗ್ವಾದ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ಸೌಜನ್ಯ ಸಾವಿಗೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿ ಬೆಂಗಳೂರಿನಿಂದ ಪಾದಯಾತ್ರೆಯಲ್ಲಿ ಬಂದ ಯಲಹಂಕದ ಶರಣಬಸಪ್ಪ ಕಬ್ಬ ಮತ್ತು ತಂಡದವರನ್ನು ಧರ್ಮಸ್ಥಳದ ಮುಖ್ಯ ಪ್ರವೇಶದ್ವಾರದ ಬಳಿ ಗ್ರಾಮಸ್ಥರು ಮತ್ತು ವ್ಯಾಪಾರಿಗಳು ಸೋಮವಾರ ತಡೆದರು.

ಪಾದಯಾತ್ರಿಗಳ ಹಾಗೂ ಗ್ರಾಮಸ್ಥರ ನಡುವೆ ಮಾತಿನ ಚಕಮಕಿ ನಡೆದು, ಕೆಲಕಾಲ ಗೊಂದಲದ ವಾತಾವರಣ ಉಂಟಾಯಿತು.

ಪಾದಯಾತ್ರಿಗಳು ಧರ್ಮಸ್ಥಳಕ್ಕೆ ಬರುವ ಮಾಹಿತಿ ಪಡೆದು ಊರಿನವರು ಹಾಗೂ ಕ್ಷೇತ್ರದ ಭಕ್ತರು ಪ್ರವೇಶದ್ವಾರದ ಬಳಿ ಸೇರಿದ್ದರು. 'ಈ ಪಾದಯಾತ್ರಿಗಳು ಎರಡು ದಿನಗಳ ಹಿಂದೆ ಸಾಮಾಜಿಕ ಜಾಲತಾಣಗಳಲ್ಲಿ ಧರ್ಮಸ್ಥಳ ಕ್ಷೇತ್ರದ ಮತ್ತು ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರ ಕುರಿತು ಆಕ್ಷೇಪಾರ್ಹವಾದ ಮಾತುಗಳನ್ನು ಬಳಸಿ ನಿಂದಿಸಿದ್ದಾರೆ' ಎಂದು ಆರೋಪಿಸಿದ ಗ್ರಾಮಸ್ಥರು ಶರಣಬಸಪ್ಪ ಅವರನ್ನು ತರಾಟೆಗೆ ತೆಗೆದುಕೊಂಡರು.



ಧರ್ಮಸ್ಥಳದಲ್ಲಿ ಪಾದಯಾತ್ರಿಗಳು ಹಾಗೂ ಗ್ರಾಮಸ್ಥರ ನಡುವೆ ಸೋಮವಾರ ಮಾತಿನ ಚಕಮಕಿ ನಡೆಯಿತು

ಕ್ಷೇತ್ರದ ಕುರಿತು ಆಕ್ಷೇಪಾರ್ಹ ಮಾತುಗಳನ್ನು ಬಳಸಿದ ಬಗ್ಗೆ 'ಲೈವ್ ವಿಡಿಯೊ' ಮೂಲಕ ಕ್ಷಮೆ ಕೇಳಬೇಕು ಎಂದು ಗ್ರಾಮಸ್ಥರು ಪಟ್ಟು ಹಿಡಿದರು. ಪಾದಯಾತ್ರಿಗಳು ಮತ್ತು ಗ್ರಾಮಸ್ಥರ ನಡುವೆ ಮಾತಿನ ಚಕಮಕಿ ನಡೆಯುತ್ತಿರುವ ಮಾಹಿತಿ ಪಡೆದ ಪೊಲೀಸರು ಸ್ಥಳಕ್ಕೆ ಧಾವಿಸಿದರು. ಪಾದಯಾತ್ರಿಗಳನ್ನು ಠಾಣೆಗೆ ಕರೆದೊಯ್ದರು.

ಈ ಘಟನೆ ಬಗ್ಗೆ ಯಾವುದೇ ಪ್ರಕರಣ ದಾಖಲಾಗಿಲ್ಲ.

'ದೂರುದಾರನಿಗೆ ರಕ್ಷಣೆ, ಭದ್ರತೆ ನೀಡಿ'

ಬೆಂಗಳೂರು: ಧರ್ಮಸ್ಥಳದ ಸುತ್ತಮುತ್ತ ನಡೆದಿದೆ ಎನ್ನಲಾದ ಅತ್ಯಾಚಾರ ಮತ್ತು ಹತ್ಯೆ ಪ್ರಕರಣಗಳ ತನಿಖೆಗೆ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿರುವುದನ್ನು ಸ್ವಾಗತಿಸಿರುವ ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ವುಮೆನ್ (ಎನ್‌ಎಫ್‌ಐಡಬ್ಲ್ಯು) ರಾಜ್ಯ ಸಮಿತಿ, ಈ ಪ್ರಕರಣದಲ್ಲಿ ಏಕೈಕ ಸಾಕ್ಷಿದಾರ ಮತ್ತು ದೂರುದಾರರೂ ಆಗಿರುವ ವ್ಯಕ್ತಿಗೆ ಸೂಕ್ತ ರಕ್ಷಣೆ ಮತ್ತು ಭದ್ರತೆ ಒದಗಿಸಬೇಕು ಎಂದು ಆಗ್ರಹಿಸಿದೆ.

ವ್ಯಕ್ತಿಯ ಜೀವಕ್ಕೆ ಹಾನಿಯಾದರೆ, ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಅಲ್ಲಿಯ ಬಲಾಢ್ಯ ವ್ಯಕ್ತಿಗಳೇ ಹೊಣೆಯಾಗಬೇಕು. ಬಲಾಢ್ಯ ವ್ಯಕ್ತಿಗಳ, ಶಕ್ತಿಗಳ ಒತ್ತಡಕ್ಕೆ ಪೊಲೀಸ್ ಅಧಿಕಾರಿಗಳು ಮಣಿಯದೇ ವಸ್ತುನಿಷ್ಠ ವರದಿ ನೀಡಿ ಸಾರ್ವಜನಿಕರ ನಂಬಿಕೆ ಉಳಿಸಿಕೊಳ್ಳಲಿದ್ದಾರೆ ಎಂದು ಸಮಿತಿ ಅಧ್ಯಕ್ಷೆ ಎ.ಜ್ಯೋತಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಬಿಡದಿ ಸಮಗ್ರ ಉಪನಗರ ಯೋಜನೆ: ರೈತರ ಪ್ರತಿಭಟನೆ

ಭೂಸ್ವಾಧೀನ ವಿರೋಧಿಸಿ ಭೈರಮಂಗಲ ಬಂದ್

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ಬಿಡದಿ ಸಮಗ್ರ ಉಪನಗರ ಯೋಜನೆಗಾಗಿ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಜಿಬಿಡಿಎ) ಭೂ ಸ್ವಾಧೀನಕ್ಕೆ ಮುಂದಾಗಿರುವುದನ್ನು ವಿರೋಧಿಸಿ ರೈತರು ಸೋಮವಾರ ಭೈರಮಂಗಲ ಗ್ರಾಮವನ್ನು ಬಂದ್ ಮಾಡಿದರು.

ಭೈರಮಂಗಲ-ಕಂಚುಗಾರನಹಳ್ಳಿ ರೈತರ ಹಿತರಕ್ಷಣಾ ಸಂಘ ನೀಡಿದ್ದ ಬಂದ್‌ನಲ್ಲಿ ಉಪನಗರ ಯೋಜನೆ ವ್ಯಾಪ್ತಿಯ ರೈತರು, ರೈತ ಸಂಘದ ಸದಸ್ಯರು, ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಸೇರಿದಂತೆ ಹಲವರು ಭಾಗವಹಿಸಿದ್ದರು.

ಚಿತ್ರನಟ ಚೇತನ್ ಅಹಿಂಸಾ ರೈತರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಯೋಜನೆ ಕೈ ಬಿಟ್ಟು ಭೂ ಸ್ವಾಧೀನ ಅಧಿಸೂಚನೆ ರದ್ದುಪಡಿಸುವಂತೆ ಪ್ರತಿಭಟನಕಾರರು ಆಗ್ರಹಿಸಿದರು.



ಬಿಡದಿ ಸಮಗ್ರ ಉಪನಗರ ಯೋಜನೆಗೆ ಭೂ ಸ್ವಾಧೀನ ವಿರೋಧಿಸಿ, ರಾಮನಗರ ತಾಲ್ಲೂಕಿನ ಬಿಡದಿ ಹೋಬಳಿಯ ಭೈರಮಂಗಲದಲ್ಲಿ ಭೈರಮಂಗಲ ಕಂಚುಗಾರನಹಳ್ಳಿ ರೈತರ ಹಿತರಕ್ಷಣಾ ಸಂಘ ಬಂದ್ ಆಚರಿಸಿ ರಸ್ತೆ ತಡೆ ನಡೆಸಿತು

ಗ್ರಾಮದಲ್ಲಿ ಹಾದು ಹೋಗಿರುವ ಮುಖ್ಯರಸ್ತೆಯನ್ನು ತಡೆದ ಪ್ರತಿಭಟನಕಾರರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸ್ಥಳೀಯ ಶಾಸಕ ಎಚ್.ಸಿ. ಬಾಲಕೃಷ್ಣ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

> **ಬಿಡದಿ ಉಪನಗರಕ್ಕೆ ಗುರುತಿಸಿರುವ ಭೂಮಿ ಪೈಕಿ ಸಾವಿರ ಎಕರೆಯನ್ನು ಕೆಐಎಡಿಬಿ ಕೊಟ್ಟಾಗ ಯಾಕೆ ಹೋರಾಡಲಿಲ್ಲ? ಈಗ ಉಪನಗರ ಆಗ್ತಿರೋದ್ರಿಂದ ಈ ಹೋರಾಟವೇ?**
> **ಡಿ.ಕೆ.ಶಿವಕುಮಾರ್,** ಉಪ ಮುಖ್ಯಮಂತ್ರಿ

ಉಪನಗರಕ್ಕೆ ಶೇ 75ರಷ್ಟು ರೈತರ ಒಪ್ಪಿಗೆ: ಡಿಸಿಎಂ

'ಬಿಡದಿ ಸಮಗ್ರ ಉಪನಗರ ಯೋಜನೆಗೆ ಶೇ 75ರಷ್ಟು ರೈತರು ಒಪ್ಪಿಗೆ ನೀಡಿ ಪರಿಹಾರ ಕೊಡಿ ಎಂದಿದ್ದಾರೆ. ನಮ್ಮ ರೈತರೊಂದಿಗೆ ಚರ್ಚಿಸಿ ಮನವರಿಕೆ ಮಾಡಿಕೊಡುವೆ. ಅವರಿಗೆ ಅನ್ಯಾಯವಾಗದಂತೆ ಯಾವ ರೀತಿ ನ್ಯಾಯ ಒದಗಿಸಬೇಕು ಎಂಬುದು ಗೊತ್ತಿದೆ' ಎಂದು ಭೂ ಸ್ವಾಧೀನ ವಿರೋಧಿಸಿ ಭೈರಮಂಗಲದಲ್ಲಿ ನಡೆದ ಬಂದ್ ಕುರಿತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೋಡಿಹಳ್ಳಿಯಲ್ಲಿ ಪ್ರತಿಕ್ರಿಯಿಸಿದರು.

ಸೋಲಾರ್ ಪಾರ್ಕ್ ಸಾಮರ್ಥ್ಯ ವೃದ್ಧಿ

ಪಾವಗಡ: ಹೆಚ್ಚುವರಿ ಎರಡು ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದನೆ– ಸಿ.ಎಂ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಪಾವಗಡಕ್ಕೆ 200 ಕಿ.ಮೀ ದೂರದಿಂದ ನೀರು ಪೂರೈಕೆ
- ತುಂಗಭದ್ರಾ ಜಲಾಶಯದ ಹಿನ್ನೀರಿನಿಂದ ಆರು ತಾಲ್ಲೂಕುಗಳಿಗೆ ನೀರು
- ಒಟ್ಟು 1,161 ಗ್ರಾಮಗಳಿಗೆ ತುಂಗಭದ್ರಾ ನೀರು

ಪಾವಗಡ (ತುಮಕೂರು): 'ಪಾವಗಡ ತಾಲ್ಲೂಕಿನ ಸೋಲಾರ್ ಪಾರ್ಕ್ ಪ್ರದೇಶದಲ್ಲಿ ಮತ್ತೆ ಹೆಚ್ಚುವರಿಯಾಗಿ ಎರಡು ಸಾವಿರ ಮೆಗಾವಾಟ್ ಸೌರ ವಿದ್ಯುತ್ ಉತ್ಪಾದನೆ ಮಾಡಲು ಉದ್ದೇಶಿಸಲಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದರು.

ಪಾವಗಡದಲ್ಲಿ ಸೋಮವಾರ ತುಂಗಭದ್ರಾ ಯೋಜನೆಯಿಂದ ಕುಡಿಯುವ ನೀರು ಪೂರೈಸುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದರು.

ಈಗಾಗಲೇ ಸೋಲಾರ್ ಪಾರ್ಕ್‌ನಲ್ಲಿ 2,050 ಮೆಗಾವಾಟ್ ಸೌರ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಈ ಯೋಜನೆಯನ್ನು ಹೊಸದಾಗಿ ಹತ್ತು ಹಳ್ಳಿಗಳಿಗೆ ವ್ಯಾಪ್ತಿಗೆ ವಿಸ್ತರಿಸಿ ಮತ್ತೆ ಎರಡು ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದಿಸಲಾಗುವುದು. ಈ ಯೋಜನೆ ಸಾಕಾರಗೊಂಡರೆ ಏಷ್ಯಾದಲ್ಲೇ ಅತಿ ದೊಡ್ಡ ಸೌರ ವಿದ್ಯುತ್ ಉತ್ಪಾದನಾ ಘಟಕವಾಗಲಿದೆ. ಇದರಿಂದ ಪಾವಗಡ ತಾಲ್ಲೂಕಿನ ಚಿತ್ರಣವೇ ಬದಲಾಗಲಿದೆ ಎಂದು ಹೇಳಿದರು.

ತುಂಗಭದ್ರಾ ಜಲಾಶಯದ ಹಿನ್ನೀರಿನಿಂದ ₹2,529 ಕೋಟಿ ವೆಚ್ಚದಲ್ಲಿ ಆರು ತಾಲ್ಲೂಕುಗಳಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಯೋಜನೆ ಜಾರಿ ಮಾಡಲಾಗಿದೆ. ಪಾವಗಡಕ್ಕೆ 200 ಕಿ.ಮೀ ದೂರದಿಂದ ನೀರು ಹರಿಸಲಾಗಿದೆ. ಪಾವಗಡ ಸೇರಿದಂತೆ ಮೊಳಕಾಲ್ಮುರು, ಚಳ್ಳಕೆರೆ, ಕೂಡ್ಲಿಗಿ, ಹೊಸಪೇಟೆ, ಚಿತ್ರದುರ್ಗ ತಾಲ್ಲೂಕಿನ 1,161 ಹಳ್ಳಿಗಳಿಗೆ ನೀರು ಕೊಡಲಾಗಿದೆ. ಇದರಿಂದ 17.50 ಲಕ್ಷ ಜನರಿಗೆ ಶುದ್ಧ ನೀರು ಲಭ್ಯವಾಗಲಿದೆ ಎಂದು ತಿಳಿಸಿದರು.

'ಬರಪೀಡಿತ ಭಾಗದಲ್ಲಿರುವ ಆರು ತಾಲ್ಲೂಕಿನ ಜನರು ಫ್ಲೋರೈಡ್‌ಯುಕ್ತ ನೀರು ಕುಡಿದು ಹಲವು ರೋಗಗಳಿಗೆ ತುತ್ತಾಗುತ್ತಿದ್ದರು, ಅಂಗವಿಕಲರಾಗುತ್ತಿದ್ದರು. ಹಿಂದೆ ನಾನು ಮುಖ್ಯಮಂತ್ರಿ ಆಗಿದ್ದಾಗ ಯೋಜನೆಗೆ ಚಾಲನೆ ನೀಡಲಾಗಿದ್ದು, ಈಗ ನಾನೇ ಉದ್ಘಾಟನೆ ಮಾಡಿದ್ದೇನೆ. ಬೃಹತ್ ನೀರಾವರಿ ಯೋಜನೆಗಳಲ್ಲಿ ಇದು ಒಂದಾಗಿದೆ' ಎಂದರು.



ಪಾವಗಡದಲ್ಲಿ ಸೋಮವಾರ ತುಂಗಾಭದ್ರಾ ಯೋಜನೆಯಿಂದ ಕುಡಿಯುವ ನೀರು ಪೂರೈಸುವ ಕಾರ್ಯಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಲ್ಲಿಯಲ್ಲಿ ನೀರು ಹರಿಸುವ ಮೂಲಕ ಚಾಲನೆ ನೀಡಿದರು. ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ಸಚಿವರಾದ ಎಚ್‌.ಸಿ.ಮಹದೇವಪ್ಪ, ಜಿ.ಪರಮೇಶ್ವರ, ಪ್ರಿಯಾಂಕ್ ಖರ್ಗೆ, ಶಾಸಕ ಎಚ್‌.ವಿ.ವೆಂಕಟೇಶ್, ಜಿ.ಪಂ ಸಿಇಒ ಜಿ.ಪ್ರಭು ಉಪಸ್ಥಿತರಿದ್ದರು

ಪ್ರಕರಣ ದಾಖಲಿಸಲು ಹಿಂದೇಟು: ಠಾಣೆ ಎದುರೇ ವಿಷ ಕುಡಿದಿದ್ದ ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಹೊಳಲ್ಕೆರೆ: '18 ವರ್ಷ ಪೂರೈಸದ ಮಗಳನ್ನು ಪುಸಲಾಯಿಸಿ, ಅಂತರ್ಜಾತಿ ವಿವಾಹ ಆಗಿರುವ ಯುವಕನ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಲಿಲ್ಲ' ಎಂದು ಆರೋಪಿಸಿ ಭಾನುವಾರ ಪಟ್ಟಣ ಪೊಲೀಸ್ ಠಾಣೆ ಎದುರೇ ವಿಷ ಸೇವಿಸಿದ್ದ ಹುಡುಗಿಯ ತಂದೆ ಸೋಮವಾರ ಮೃತಪಟ್ಟಿದ್ದಾರೆ.

ಗಿಲಿಕೇನಹಳ್ಳಿ ಗ್ರಾಮದ ಅಜ್ಜಯ್ಯ (40) ಮೃತ ವ್ಯಕ್ತಿ. ಮಗಳು ಕಾಣೆಯಾಗಿರುವ ಬಗ್ಗೆ ಅಜ್ಜಯ್ಯ ಅವರು ಜುಲೈ 13ರಂದು ಪಟ್ಟಣದ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

'ಮಗಳಿಗೆ 18 ವರ್ಷ ತುಂಬಿಲ್ಲ. ಅವಳನ್ನು ಕರೆದೊಯ್ದಿದ್ದ ಯುವಕನ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿದ್ದರು. ದೂರು ದಾಖಲಿಸಲು ವಿಳಂಬ ಮಾಡಿದ್ದರಿಂದ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಸಿ ಅಜ್ಜಯ್ಯ ವಿಷ ಸೇವಿಸಿದ್ದರು.

ಅಜ್ಜಯ್ಯ ಅವರ ಸಾವಿನಿಂದ ಆಕ್ರೋಶಗೊಂಡ ಗ್ರಾಮಸ್ಥರು ಠಾಣೆಯ ಮುಂದೆ, ನಂತರ ಮುಖ್ಯವೃತ್ತದಲ್ಲಿ ಶವ ಇಟ್ಟು ಪ್ರತಿಭಟನೆ ನಡೆಸಿದರು. ಸಂಚಾರ ದಟ್ಟಣೆ ಉಂಟಾಗುತ್ತಿದ್ದಂತೆಯೇ ಪೊಲೀಸಲು ಲಾಠಿ ಪ್ರಹಾರ ನಡೆಸಿ ಜನರನ್ನು ಚದುರಿಸಿ ಶವವನ್ನು ಆಂಬುಲೆನ್ಸ್‌ಗೆ ಇಟ್ಟು ಕಳುಹಿಸಿದರು.

'ಜಿಎಸ್‌ಟಿ ನೋಟಿಸ್ ವ್ಯಾಪಾರಿಗಳಿಗೆ ಭಯಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೆರಿಗೆ ಪಾವತಿಗೆ ಸಂಬಂಧಿಸಿದಂತೆ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ನೀಡಿರುವ ನೋಟಿಸ್‌ಗೆ ಸಣ್ಣ ವ್ಯಾಪಾರಿಗಳು ಭಯ ಪಡಬೇಕಾಗಿಲ್ಲ. ವಹಿವಾಟಿಗೆ ಸಂಬಂಧಿಸಿದ ದಾಖಲೆಗಳೊಂದಿಗೆ ಅಧಿಕಾರಿಗಳನ್ನು ಭೇಟಿ ಮಾಡಿ ಪ್ರಕರಣ ಇತ್ಯರ್ಥ ಪಡಿಸಿಕೊಳ್ಳಬಹುದು ಎಂದು ಇಲಾಖೆಯ ಜಂಟಿ ಆಯುಕ್ತ ಮೀರಾ ಸುರೇಶ್ ಪಂಡಿತ್ ಸ್ಪಷ್ಟಪಡಿಸಿದರು.

ನಗರದಲ್ಲಿ ಸೋಮವಾರ ವಾಣಿಜ್ಯ ತೆರಿಗೆ ಇಲಾಖೆ ಆಯೋಜಿಸಿದ್ದ 'ಜಿಎಸ್‌ಟಿ ಅರಿವು' ಕಾರ್ಯಾಗಾರದಲ್ಲಿ ಮಾತನಾಡಿದ ಅವರು, '2020–21 ರಿಂದ 2024–25ರ (ಜನವರಿವರೆಗೆ) ಅವಧಿಯಲ್ಲಿ ಯುಪಿಐ ಮೂಲಕ ವಾರ್ಷಿಕ ₹40 ಲಕ್ಷಕ್ಕಿಂತ ಹೆಚ್ಚು ವಹಿವಾಟು ನಡೆಸಿರುವ ವ್ಯಾಪಾರಿಗಳಿಗೆ ನೋಟಿಸ್ ನೀಡಲಾಗಿದೆ. ನೋಟಿಸ್‌ಗೆ ಉತ್ತರಿಸಲು ಸಾಕಷ್ಟು ಕಾಲಾವಕಾಶ ನೀಡಲಾಗಿದೆ' ಎಂದರು.

ಪ್ರಸ್ತುತ ಫೋನ್ ಪೇ, ಪೇಟಿಎಂನಲ್ಲಿ ನಡೆಸಿರುವ ವಹಿವಾಟನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಗೂಗಲ್ ಪೇ, ಬ್ಯಾಂಕ್ ವಹಿವಾಟಿನ ಮಾಹಿತಿ ಇನ್ನೂ ದೊರೆತಿಲ್ಲ. ಕೆಲವರು ವಾರ್ಷಿಕ ₹1 ಕೋಟಿ, ₹2 ಕೋಟಿ ಮತ್ತು ₹6 ಕೋಟಿವರೆಗೂ ವಹಿವಾಟು ನಡೆಸಿದ್ದಾರೆ. ವಾರ್ಷಿಕ ವಹಿವಾಟಿನ ಮಿತಿ ಮೀರಿದ ವರ್ತಕರಿಗೆ ನೋಟಿಸ್ ನೀಡುವ ಪ್ರಕ್ರಿಯೆ ಮುಂದುವರಿಯಲಿದೆ ಎಂದು ವಿವರಿಸಿದರು.

ಇಲಾಖೆಯ ನೋಟಿಸ್ ನಂತರ ಕೆಲ ವರ್ತಕರು ಯುಪಿಐ ಮೂಲಕ ಹಣ ಪಡೆಯುವುದನ್ನು ನಿಲ್ಲಿಸಿ, ಗ್ರಾಹಕರಿಂದ ನಗದು ಸ್ವೀಕರಿಸುತ್ತಿದ್ದಾರೆ. ಯುಪಿಐ ವಹಿವಾಟು ನಿಲ್ಲಿಸಿದರೆ ನಿಮಗೆ (ಸಣ್ಣ ವ್ಯಾಪಾರಿಗಳಿಗೆ) ನಷ್ಟ. ಇದರಿಂದ ಸೂಪರ್ ಬಜಾರ್‌ಗಳಿಗೆ ಅನುಕೂಲ ಮಾಡಿಕೊಟ್ಟಂತೆ ಆಗುತ್ತದೆ. ವರ್ತಕರು ಯಾವುದೇ ರೂಪದಲ್ಲಿ ವಹಿವಾಟು ನಡೆಸಿದ್ದರೂ ಅಂತಹ ವರ್ತಕರಿಂದ ತೆರಿಗೆಯನ್ನು ಸಂಗ್ರಹಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಜಿಎಸ್‌ಟಿ ಕಾಯಿದೆ–2017ರ ಪ್ರಕರಣ 22ರ ನಿಯಮಗಳನ್ನು ಉಲ್ಲೇಖಿಸಿ ನೋಟಿಸ್ ನೀಡಲಾಗಿದೆ. ಸರಕುಗಳ ಪೂರೈಕೆದಾರರ ಒಟ್ಟು ವಾರ್ಷಿಕ ವಹಿವಾಟು ₹40 ಲಕ್ಷ ಮತ್ತು ಸೇವೆಗಳ ಪೂರೈಕೆದಾರರ ವಾರ್ಷಿಕ ವಹಿವಾಟು ₹20 ಲಕ್ಷ ಮೀರಿದರೆ ಜಿಎಸ್‌ಟಿ ನೋಂದಣಿ ಕಡ್ಡಾಯ. ಶೇ 18ರಷ್ಟು ತೆರಿಗೆ ಹಾಕಲಾಗಿದ್ದು, ದಾಖಲೆಗಳ ಪರಿಶೀಲನೆ ಬಳಿಕ ಕಡಿಮೆ ಮಾಡಲು ಅವಕಾಶ ಇದೆ. ಈ ವಹಿವಾಟಿನಲ್ಲಿ ನಗದು, ಯುಪಿಐ, ಪಿಓಎಸ್ ಮಷಿನ್, ಬ್ಯಾಂಕ್ ಖಾತೆ ಸೇರಿದಂತೆ ಎಲ್ಲ ವಿಧಾನದ ವಹಿವಾಟು ಕೂಡ ಸೇರುತ್ತದೆ ಎಂದರು.

ಕಳೆದ ವರ್ಷ ವಾರ್ಷಿಕ ವಹಿವಾಟು ₹1.50 ಕೋಟಿ ಗಿಂತ ಕಡಿಮೆ ಇರುವ ವ್ಯಾಪಾರಿಗಳು ಜಿಎಸ್‌ಟಿ ಅಡಿ ನೋಂದಣಿ ಪಡೆದು ರಾಜಿ ತೆರಿಗೆ ಪದ್ಧತಿ ಆಯ್ಕೆ ಮಾಡಿಕೊಳ್ಳಬಹುದು. ಈ ಪದ್ಧತಿಯಡಿ ಶೇ 0.5ರಷ್ಟು ಎಸ್‌ಜಿಎಸ್‌ಟಿ ಮತ್ತು ಶೇ 0.5ರಷ್ಟು ಸಿಜಿಎಸ್‌ಟಿ ಪಾವತಿಸಬೇಕು. ಆದರೆ, ನೋಂದಣಿ ಪಡೆಯದೆ ನಡೆಸಿರುವ ವಹಿವಾಟಿಗೆ ರಾಜಿ ತೆರಿಗೆ ಪದ್ಧತಿ ಅನ್ವಯವಾಗುವುದಿಲ್ಲ ಎಂದು ಮೀರಾ ತಿಳಿಸಿದರು.

ನೋಟಿಸ್ ಬಂದಿರುವ ವರ್ತಕರು ಕಚೇರಿಗೆ ತೆರಳಿ ಸೂಕ್ತ ದಾಖಲೆಗಳೊಂದಿಗೆ ವಿವರಣೆ ನೀಡಿದರೆ, ಅಧಿಕಾರಿಗಳು ನಿಯಮ ಮತ್ತು ಪರಿಹಾರಗಳ ಬಗ್ಗೆ ಮಾಹಿತಿ ನೀಡುತ್ತಾರೆ. ಉದಾಹರಣೆಗೆ ಕೆಲವು ಶಾಲೆಗಳಿಗೆ ನೋಟಿಸ್ ನೀಡಲಾಗಿದೆ. ಕೇವಲ ಶುಲ್ಕ ಪಡೆದಿದ್ದರೆ ತೆರಿಗೆ ಅನ್ವಯವಾಗದು. ಆದರೆ, ಸಮವಸ್ತ್ರ, ಬ್ಯಾಗ್ ಮಾರಾಟ ಮಾಡಿದರೆ ತೆರಿಗೆ ಕಟ್ಟಬೇಕು ಎಂದು ಹೇಳಿದರು.

ತೆರಿಗೆ ವಿನಾಯಿತಿ ಸರಕು



ತರಕಾರಿ, ಹಣ್ಣು, ಹೂವು, ಬ್ರ್ಯಾಂಡ್ ಇಲ್ಲದ ಅಕ್ಕಿ, ಬೇಳೆ ಇತ್ಯಾದಿ, ತಾಜಾ ಮಾಂಸ, ಎಂಆರ್‌ಪಿ ದರದ ವೈನ್, ಕರಕುಶಲ ವಸ್ತುಗಳು

ತೆರಿಗೆಗೆ ಒಳಪಡುವ ವಸ್ತು/ಸೇವೆ: ಕಬ್ಬಿಣ, ಸಿಮೆಂಟ್, ಉಕ್ಕು, ಕೆಫೆ, ರೆಸ್ಟೋರೆಂಟ್, ಫರ್ನಿಚರ್ ಶಾಪ್, ಆಭರಣ, ಪಾನ್, ಬೇಕರಿ, ಪೇಯಿಂಗ್ ಗೆಸ್ಟ್, ವಾಣಿಜ್ಯ ಮಳಿಗೆಗಳ ಬಾಡಿಗೆ, ಕೊರಿಯರ್ ಸೇವೆ



ಸಹಾಯವಾಣಿ ಕೇಂದ್ರ ಆರಂಭ

ಜಿಎಸ್‌ಟಿ ಪಾವತಿಸುವಲ್ಲಿ ನೆರವು ನೀಡುವುದಾಗಿ ಮಧ್ಯವರ್ತಿಗಳು, ವರ್ತಕರಿಂದ ಹಣ ಕೇಳಿದರೆ ಅಧಿಕಾರಿಗಳ ಗಮನಕ್ಕೆ ತರಬೇಕು. ವರ್ತಕರ ಅನುಕೂಲಕ್ಕಾಗಿಯೇ ಸಹಾಯವಾಣಿ ಕೇಂದ್ರ ಆರಂಭಿಸಲಾಗಿದೆ. ದೂ. 9845370404, 080–25714833 ಸಂಪರ್ಕಿಸಬಹುದು. ಖಾಸಗಿ ವ್ಯಕ್ತಿಗಳಿರಲಿ ಅಥವಾ ಇಲಾಖೆಯ ಸಿಬ್ಬಂದಿ, ಅಧಿಕಾರಿಗಳು.. ಹೀಗೆ ಯಾರೇ ಹಣ ಕೇಳಿದರೆ ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತದೆ. 1800 425 6300 ಸಂಖ್ಯೆಗೆ ಕರೆ ಮಾಡಿ, ದೂರು ನೀಡಬಹುದು ಎಂದು ಇಲಾಖೆ ತಿಳಿಸಿದೆ.

ಚಳವಳಿ ಕೈಬಿಡಲು ಮನವಿ

ಪ್ರಜಾವಾಣಿ ವಾರ್ತೆ

> ಒಳಮೀಸಲಾತಿ ವಿಷಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತಿಗೆ ತಪ್ಪಿದ್ದಾರೆ. ಆಗಸ್ಟ್ 15ರೊಳಗೆ ಒಳಮೀಸಲಾತಿ ಜಾರಿಗೊಳಿಸದಿದ್ದರೆ ರಾಜ್ಯ ಬಂದ್ ನಿಶ್ಚಿತ
> **ಎ.ನಾರಾಯಣಸ್ವಾಮಿ,** ಕೇಂದ್ರದ ಮಾಜಿ ಸಚಿವ



ಆಂಜನೇಯ

ಚಿತ್ರದುರ್ಗ: 'ಒಳಮೀಸಲಾತಿ ಜಾರಿಗೆ ದಿನಗಣನೆ ಆರಂಭವಾಗಿದ್ದು, ಆಗಸ್ಟ್‌ನಲ್ಲಿ ಜಾರಿಯಾಗುವುದು ನಿಶ್ಚಿತ. ತ್ವರಿತ ಜಾರಿಗೆ ಆಗ್ರಹಿಸಿ ಯಾರೂ ಚಳವಳಿ ಹಾದಿ ತುಳಿಯುವುದು ಬೇಡ' ಎಂದು ಕೆಪಿಸಿಸಿ ಉಪಾಧ್ಯಕ್ಷ ಎಚ್.ಆಂಜನೇಯ ಮನವಿ ಮಾಡಿದರು.

'ಆಗಸ್ಟ್‌ನಲ್ಲಿ ಮಾದಿಗ ಸಮುದಾಯಕ್ಕೆ ನಿಜವಾದ ಸ್ವಾತಂತ್ರ್ಯ ದೊರೆಯಲಿದೆ. ಸಾಮಾಜಿಕ, ಆರ್ಥಿಕ, ರಾಜಕೀಯ ಸ್ವಾತಂತ್ರ್ಯ ಸಿಗಲಿದೆ. ಮೂರು ದಶಕಗಳಿಂದ ಕನಸಾಗಿದ್ದ ಮೀಸಲಾತಿ, ಸೌಲಭ್ಯ, ಅವಕಾಶ ಸಿಗಲಿವೆ' ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಸಮೀಕ್ಷೆ ಪೂರ್ಣಗೊಂಡಿದ್ದು, ಶೀಘ್ರ ಅಂತಿಮ ವರದಿ ಸಲ್ಲಿಕೆಯಾಗಲಿದೆ. ಬಂದ್‌ನಿಂದ ಯಾವ ಉಪಯೋಗವೂ ಇಲ್ಲ. ಮಾದಿಗರ ಒಳಮೀಸಲಾತಿ ವಿಷಯದಿಂದ ಸಾರ್ವಜನಿಕರಿಗೆ ಏಕೆ ತೊಂದರೆ ಕೊಡಬೇಕು?' ಎಂದು ಪ್ರಶ್ನಿಸಿದರು.

'ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಹೆಸರಿನಲ್ಲಿ ಎರಡು ಸಮುದಾಯಗಳ ಜನರು ಪ್ರಮಾಣಪತ್ರ ಪಡೆಯುತ್ತಿದ್ದ ಕಾರಣ ಗೊಂದಲವಿತ್ತು. ಸಮಸ್ಯೆಯನ್ನು ಶಾಶ್ವತವಾಗಿ ನಿವಾರಿಸಲು ಕ್ರಮ ವಹಿಸಲಾಗಿದೆ. ಸಮುದಾಯಗಳ ಹಿಂದುಳಿದಿರುವಿಕೆ ಸಂಬಂಧ ಅಧ್ಯಯನ ನಡೆಯುತ್ತಿದ್ದು, ಈ ತಿಂಗಳೊಳಗೆ ವರದಿ ಸಲ್ಲಿಕೆಯಾಗಲಿದೆ' ಎಂದರು.

'ಒಳಮೀಸಲಾತಿ ಜಾರಿಗೊಳಿಸುವ ಅನಿವಾರ್ಯತೆ ಇದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಕಾಳಜಿ ಇದೆ. ವಯಸ್ಸು ಮೀರಿದ ಉದ್ಯೋಗಾಕಾಂಕ್ಷಿಗಳಿಗೆ ಒಂದು ವರ್ಷ ಸಡಿಲಿಕೆ ನೀಡುವಂತೆ ಮನವಿ ಮಾಡಿದ್ದೇವೆ' ಎಂದರು.

ಚಟಕೆ ಸುದ್ದಿ

ಕಾಲುವೆಗೆ ಬಿದ್ದ ಕಾರು: ಯುವಕ ಸಾವು



ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಕೌತಾಳಂ ಸಮೀಪದ ಕಾಲುವೆಗೆ ಬಿದ್ದಿದ್ದ ಕಾರನ್ನು ಕ್ರೇನ್ ನೆರವಿನಿಂದ ಹೊರಗೆ ತೆಗೆಯಲಾಯಿತು

ರಾಯಚೂರು: ಮಂತ್ರಾಲಯಕ್ಕೆ ಬಂದು ಹುಬ್ಬಳ್ಳಿಗೆ ಮರಳುವಾಗ ಆಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆ ಕೌತಾಳಂ ಮಂಡಲದ ಎಂಗೇರಿ ಗ್ರಾಮದ ಬಳಿ ತುಂಗಭದ್ರಾ ಕಾಲುವೆಗೆ ಕಾರು ಉರುಳಿ ಒಬ್ಬರು ಮೃತಪಟ್ಟಿದ್ದಾರೆ. ಇನ್ನೊಬ್ಬರು ನಾಪತ್ತೆಯಾಗಿದ್ದಾರೆ.

ಹುಬ್ಬಳ್ಳಿಯ ಸುನಿಲ್ (21) ಮೃತರು. ಮಣಿಕಂಠ (22) ಅವರು ಮುಳುಗಿರುವ ಶಂಕೆ ಇದೆ. ಅಭಿಷೇಕ, ಅಂಜಾಯ, ಹೈದರ್ ಹಾಗೂ ಮಂಜುನಾಥ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ರಸ್ತೆ ಮಧ್ಯ ನಾಯಿ ಅಡ್ಡ ಬಂದಿದೆ. ಅಪಘಾತ ತಪ್ಪಿಸುವ ಯತ್ನದಲ್ಲಿ ಕಾರು ಕಾಲುವೆಗೆ ಬಿದ್ದಿದೆ ಎನ್ನಲಾಗಿದೆ. ಕ್ರೇನ್ ನೆರವಿನಿಂದ ಕಾರು ಹೊರಗೆ ತೆಗೆದು ನಾಲ್ವರ ರಕ್ಷಣೆ ಮಾಡಲಾಯಿತು. ಕೌತಾಳಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಧ್ಯವರ್ತಿ ಜನ್ಮದಿನ ಆಚರಣೆ: ಮೂವರ ಅಮಾನತು

ಸಕಲೇಶಪುರ (ಹಾಸನ ಜಿಲ್ಲೆ): ಇಲ್ಲಿನ ಎಆರ್‌ಟಿಒ ಕಚೇರಿಯಲ್ಲಿ ಮಧ್ಯವರ್ತಿಯೊಬ್ಬರ ಜನ್ಮದಿನವನ್ನು ಆಚರಿಸಿದ ಪ್ರಕರಣಕ್ಕೆ ಸಂಬಂಧಿಸಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಎಸ್.ಎನ್. ಮಧುರಾ, ಮೋಟಾರು ವಾಹನ ನಿರೀಕ್ಷಕಿ ಎನ್.ಆರ್. ಆಶಾ ಹಾಗೂ ಕಚೇರಿ ಅಧೀಕ್ಷಕ ಎಂ.ಕೆ. ಗಿರೀಶ್ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.

ಜುಲೈ 11ರಂದು ಮಧ್ಯವರ್ತಿ ಮೋಹನ್ ಜನ್ಮದಿನ ಆಚರಿಸಲಾಗಿತ್ತು. ಪ್ರಕರಣದ ಪರಿಶೀಲನೆ ಬಳಿಕ ಸಾರಿಗೆ ಇಲಾಖೆಯ ಆಯುಕ್ತ ಯೋಗೀಶ್ ಅವರು ಅಮಾನತು ಆದೇಶ ಹೊರಡಿಸಿದ್ದಾರೆ.

ಹಳ್ಳಕ್ಕೆ ಬಿದ್ದ ಬಸ್ ವ್ಯಕ್ತಿ ಸಾವು

ಅಂಕೋಲಾ (ಉತ್ತರ ಕನ್ನಡ ಜಿಲ್ಲೆ): ಬೆಳಗಾವಿಯಿಂದ ಮಂಗಳೂರಿಗೆ ಹೊರಟಿದ್ದ ಖಾಸಗಿ ಬಸ್ ತಾಲ್ಲೂಕಿನ ಅಗಸೂರು ಬಳಿ ಸೋಮವಾರ ನಸುಕಿನಲ್ಲಿ ಹಳ್ಳಕ್ಕೆ ಮಗುಚಿ ಬಿದ್ದು, ಪ್ರಯಾಣಿಕ ಹುಬ್ಬಳ್ಳಿಯ ವಿನಾಯಕ ಶಿಂದೆ (32) ಮೃತಪಟ್ಟಿದ್ದಾರೆ.

'18 ಪ್ರಯಾಣಿಕರಿಗೆ ಗಾಯಗಳಾಗಿವೆ. ಐವರ ಸ್ಥಿತಿ ಗಂಭೀರವಾಗಿದೆ. ಬೆಳಗಾವಿ, ಮಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಅಂಕೋಲಾ ಪೊಲೀಸರು ತಿಳಿಸಿದ್ದಾರೆ.

ಜಾತಿಗಣತಿ: ಚದುರದಿರುವ ಸಂಕಲ್ಪ

ದಾವಣಗೆರೆಯಲ್ಲಿ ಸಮ್ಮೇಳನ • 16 ವರ್ಷದ ಬಳಿಕ ಪಂಚಾಚಾರ್ಯರ ಸಮಾಗಮ

ಪ್ರಜಾವಾಣಿ ವಾರ್ತೆ

ದಾವಣಗೆರೆ: ವೀರಶೈವ ಲಿಂಗಾಯತ ಒಳಪಂಗಡಗಳು ಭೇದ ಮರೆತು ಒಗ್ಗೂಡಬೇಕು. ಗುರು, ವಿರಕ್ತ ಹಾಗೂ ಶರಣ ಪರಂಪರೆ ಸಮಾಗಮಗೊಳ್ಳಬೇಕು. ಜಾತಿ ಗಣತಿ ಸಂದರ್ಭದಲ್ಲಿ ಭಿನ್ನ ಹೆಸರಿನಿಂದ ಚದುರಿ ಹೋಗಬಾರದು ಎಂದು ವೀರಶೈವ ಪೀಠಾಚಾರ್ಯ, ಶಿವಾಚಾರ್ಯರ ಶೃಂಗವು ಸೋಮವಾರ ಇಲ್ಲಿ ಭಕ್ತರಿಗೆ ಸಂದೇಶ ರವಾನಿಸಿತು.

ಇಲ್ಲಿನ ಅಭಿನವ ರೇಣುಕ ಮಂದಿರದಲ್ಲಿ ಅಖಿಲ ಭಾರತ ವೀರಶೈವ ಶಿವಾಚಾರ್ಯ ಸಂಸ್ಥೆ ಆಯೋಜಿಸಿದ್ದ ಶೃಂಗದಲ್ಲಿ ಪಂಚಪೀಠಾಧೀಶರು 16 ವರ್ಷಗಳ ಬಳಿಕ ಒಂದೆಡೆ ಸೇರಿ ಭಕ್ತರಿಗೆ ದರ್ಶನ ನೀಡಿದರು.

ರಾಜ್ಯ ಸರ್ಕಾರ ನಡೆಸಿದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಲ್ಲಿ ಸಮುದಾಯದ [illegible] ಬಗ್ಗೆ ತೀವ್ರ ಆಕ್ಷೇಪ ವ್ಯಕ್ತವಾಯಿತು. ಇಂತಹ ತಪ್ಪುಗಳು ಮರುಕಳಿಸದಂತೆ ಜಾಗೃತರಾಗಿ ಸಲಹೆ ಕೇಳಿಬಂತು. ಜಾತಿ ಕಾಲಂನಲ್ಲಿ ನಮೂದಿಸಬಹುದಾದ ಏಕರೂಪ ಹೆಸರು ಸೂಚಿಸಲು ವೀರಶೈವ ಲಿಂಗಾಯತ ಮಹಾಸಭಾಗೆ ಕೋರಿಕೆ ಸಲ್ಲಿಸಲಾಯಿತು.

'ಜನಗಣತಿ ಜೊತೆಗೆ ಜಾತಿ ಗಣತಿಗೆ ಕೇಂದ್ರ ಸರ್ಕಾರ ಮುಂದಾಗಿದೆ. ವೀರಶೈವ ಸಮುದಾಯವು ಯಾವ ಹೆಸರಿನಿಂದ ಗುರುತಿಸಿಕೊಳ್ಳಬೇಕು ಎಂಬ ವಿಚಾರದಲ್ಲಿ ತೀರ್ಮಾನ ಕೈಗೊಳ್ಳುವ ಅಗತ್ಯವಿದೆ. ಇದಕ್ಕೆ ವೀರಶೈವ ಮಹಾಸಭಾ ಸಮಿತಿ ರಚಿಸಬೇಕು. ಗಣತಿಯ ಅರ್ಜಿ ನಮೂನೆಯ ಅಧ್ಯಯನ ನಡೆಸಿ ತೀರ್ಮಾನ ಕೈಗೊಳ್ಳಬೇಕು' ಎಂದು ಕೇದಾರ ಪೀಠದ ಭೀಮಾಶಂಕರ ಲಿಂಗ ಶಿವಾಚಾರ್ಯ ಸ್ವಾಮೀಜಿ ಸಲಹೆ ನೀಡಿದರು.

> ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಲ್ಲಿ ಆಗಿರುವ ಲೋಪಕ್ಕೆ ಸರ್ಕಾರ ಹೊಣೆಯಲ್ಲ. ಭಿನ್ನ ಹೆಸರುಗಳಿಂದ ಜಾತಿ ನಮೂದಿಸಿದ್ದು ನಾವೇ ತಪ್ಪು ಮಾಡಿದ್ದೇವೆ. ಜಾತಿಗಣತಿಯಲ್ಲಿ ಬರೆಸುವ ಹೆಸರು ನಿರ್ಧಾರವಾಗಬೇಕು
> **ಈಶ್ವರ ಖಂಡ್ರೆ,** ಅರಣ್ಯ ಸಚಿವ

> ವೀರಶೈವ ಲಿಂಗಾಯತ ಸಮುದಾಯ ದುರ್ಬಲಗೊಳಿಸುವ ಪ್ರಯತ್ನಕ್ಕೆ ತಕ್ಕ ಪ್ರತಿಕ್ರಿಯೆ ನೀಡಬೇಕು. ಮೀಸಲಾತಿ, ಜಾತಿ ಗಣತಿ ವಿಚಾರದಲ್ಲಿ ಸಮಗ್ರ ಚಿಂತನೆ ನಡೆಸಿ ಏಕರೂಪ ನಿರ್ಧಾರ ತೆಗೆದುಕೊಳ್ಳಬೇಕು
> **ಬಿ.ಎಸ್.ಯಡಿಯೂರಪ್ಪ,** ಮಾಜಿ ಮುಖ್ಯಮಂತ್ರಿ

'ಮೀಸಲಾತಿ ಅಮಿಷಕ್ಕೆ ಜೋತುಬಿದ್ದ ಕೆಲ ಒಳಪಂಗಡಗಳು ಹಿಂದೂ ಧರ್ಮದಲ್ಲಿ ಗುರುತಿಸಿಕೊಳ್ಳುತ್ತಿವೆ. ಹಿಂದೂ ಹಾಗೂ ವೀರಶೈವ ಮೂಲದಿಂದ ದೂರವಾಗುವ ಉಪಪಂಗಡಗಳಿಗೆ ಮೀಸಲಾತಿಯಲ್ಲಿ ಇರುವ ತಾರತಮ್ಯವೇ ಇದಕ್ಕೆ ಪ್ರೇರಣೆ. ಹಿಂದೂ ಮತ್ತು ವೀರಶೈವ ಉಪಜಾತಿಗೆ ಒಂದೇ ರೀತಿಯ ಮೀಸಲಾತಿ ಸೌಲಭ್ಯ ಕಲ್ಪಿಸಬೇಕು' ಎಂದು ಶ್ರೀಶೈಲ ಮಠದ ಚನ್ನಸಿದ್ಧರಾಮ ಪಂಡಿತಾರಾಧ್ಯ ಸ್ವಾಮೀಜಿ ಒತ್ತಾಯಿಸಿದರು.

'ಜಾತಿ ಗಣತಿಯ ಅರ್ಜಿ ನಮೂನೆಯಲ್ಲಿ ಧರ್ಮ, ಜಾತಿ ಹಾಗೂ ಉಪಜಾತಿ ನಮೂದಿಸಲು ಅವಕಾಶ ಕಲ್ಪಿಸಬೇಕು. ವೃತ್ತಿ ಆಧಾರಿತ ಒಳಪಂಗಡಗಳು ಜಾತಿ ಗಣತಿಯಲ್ಲಿ ಚದುರಿ ಹೋಗದಿರಲು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು. ಅಗತ್ಯಬಿದ್ದರೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಲು ಪಂಚ ಪೀಠಾಚಾರ್ಯರು ಜೊತೆಗೂಡಲಿದ್ದೇವೆ' ಎಂದು ಉಜ್ಜಯಿನಿಯ ಸಿದ್ಧಲಿಂಗ ರಾಜದೇಶಿಕೇಂದ್ರ ಸ್ವಾಮೀಜಿ ಭರವಸೆ ನೀಡಿದರು. ಕಾಶಿ ಪೀಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ, ಅರಣ್ಯ ಸಚಿವ ಈಶ್ವರ ಖಂಡ್ರೆ, ಗಣಿ ಮತ್ತು ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದ ಜಗದೀಶ ಶೆಟ್ಟರ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವೀರಶೈವ ಲಿಂಗಾಯತ ಅಭಿವೃದ್ಧಿ ನಿಗದಮ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ್, ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಹಾಜರಿದ್ದರು.



ದಾವಣಗೆರೆಯಲ್ಲಿ ಆಯೋಜಿಸಿರುವ ವೀರಶೈವ ಪೀಠಾಚಾರ್ಯರು, ಶಿವಾಚಾರ್ಯರ ಶೃಂಗವನ್ನು ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಉದ್ಘಾಟಿಸಿದರು. ಸಂಸದೆ ಪ್ರಭಾ ಮಲ್ಲಿಕಾರ್ಜುನ್, ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ, ಉಜ್ಜಿನಿಯ ಸಿದ್ಧಲಿಂಗ ರಾಜದೇಶಿಕೇಂದ್ರ ಸ್ವಾಮೀಜಿ, ಕೇದಾರ ಪೀಠದ ಭೀಮಾಶಂಕರ ಲಿಂಗ ಶಿವಾಚಾರ್ಯ ಸ್ವಾಮೀಜಿ, ಶ್ರೀಶೈಲ ಮಠದ ಚನ್ನಸಿದ್ಧರಾಮ ಪಂಡಿತಾರಾಧ್ಯ ಸ್ವಾಮೀಜಿ, ಕಾಶಿ ಪೀಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಅರಣ್ಯ ಸಚಿವ ಈಶ್ವರ ಖಂಡ್ರೆ, ಸಂಸದ ಜಗದೀಶ ಶೆಟ್ಟರ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಇದ್ದರು
ಪ್ರಜಾವಾಣಿ ಚಿತ್ರ: ಸತೀಶ್ ಬಡಿಗೇರ

'ಬಸವಣ್ಣನ ಅನುಯಾಯಿಗಳಿಂದ ಕಂದಕ'

'ವೀರಶೈವ ಧರ್ಮದಲ್ಲಿ ಪಂಚಪೀಠಗಳಿಗೆ ಇರುವಷ್ಟು ಮಹತ್ವ, ಪಾವಿತ್ರ್ಯ ಬೇರೆ ಮಠಗಳಿಗಿಲ್ಲ. ಪಂಚಾಚಾರ್ಯರ ತತ್ವಗಳಿಗೆ ಮಾರುಹೋದ ಬಸವಣ್ಣ 12ನೇ ಶತಮಾನದಲ್ಲಿ ಈ ಧರ್ಮ ಸ್ವೀಕರಿಸಿದರು. ಬಸವ ತತ್ವ ಪಾಲನೆ ಮಾಡುತ್ತಿರುವ ಕೆಲ ಮಠಾಧೀಶರು ಸಮುದಾಯದಲ್ಲಿ ಕಂದಕ ಸೃಷ್ಟಿಸುತ್ತಿದ್ದಾರೆ' ಎಂದು ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

'ಬಸವಣ್ಣ ಹೊಸ ಪಂಗಡ, ಪಂಥವನ್ನು ಸೃಷ್ಟಿಸಲಿಲ್ಲ. ಬಸವ ತತ್ವಗಳನ್ನು ಪಂಚಪೀಠಗಳು ಪ್ರಚಾರ ಮಾಡುತ್ತಿವೆ. ಆದರೆ, ಬಸವ ತತ್ವ ಅನುಯಾಯಿಗಳು ರೇಣುಕಾಚಾರ್ಯರ ತತ್ವ ಪ್ರಸಾರ ಮಾಡುವುದಿಲ್ಲ. ಇದು ದೊಡ್ಡ ತಪ್ಪು' ಎಂದು ಹೇಳಿದರು.

ಸುದ್ದಿ 2 ನಿಮಿಷ


ಸೌಹಾರ್ದ ಸೇತುವೆ ನಿರ್ಮಿಸೋಣ ಅಬೂಬಕರ್ ಮುಸ್ಲಿಯಾರ್

ಉಳ್ಳಾಲ (ದಕ್ಷಿಣ ಕನ್ನಡ): 'ಸೌಹಾರ್ದಕ್ಕೆ ಹೆಸರಾಗಿರುವ ಕರಾವಳಿ ಪ್ರದೇಶದಲ್ಲಿ ಪರಸ್ಪರ ದ್ವೇಷಿಸುವ ಬದಲು, ಭಿನ್ನಾಭಿಪ್ರಾಯಗಳನ್ನು ಮರೆತು, ಪರಸ್ಪರ ಪ್ರೀತಿ- ಗೌರವದಿಂದ ಬದುಕುವುದು ನಮ್ಮೆಲ್ಲರ ಕರ್ತವ್ಯವಾಗಬೇಕು' ಎಂದು ಇಂಡಿಯನ್ ಗ್ರ್ಯಾಂಡ್ ಮುಫ್ತಿ ಹಾಗೂ ಉಳ್ಳಾಲ ಖಾಜಿ ಎ.ಪಿ. ಅಬೂಬಕರ್ ಮುಸ್ಲಿಯಾರ್ ಆಶಿಸಿದ್ದಾರೆ.

'ಪ್ರಜಾವಾಣಿ'ಯ ಜುಲೈ 20ರ ಸಂಚಿಕೆಯಲ್ಲಿ 'ಬದಲಾಗುತ್ತಿದೆಯೇ ಅವಿಭಜಿತ ದಕ್ಷಿಣ ಕನ್ನಡ' ಶೀರ್ಷಿಕೆಯಲ್ಲಿ ಪ್ರಕಟವಾದ ಒಳನೋಟ ವರದಿಗೆ ಸಂಬಂಧಿಸಿದಂತೆ ಹಾಗೂ ಕರಾವಳಿಯ ಸೌಹಾರ್ದತೆ ಕುರಿತು ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

'ಇತ್ತೀಚೆಗೆ ಕರಾವಳಿ ಕರ್ನಾಟಕದಲ್ಲಿ ಶಾಂತಿ ಮತ್ತು ಸೌಹಾರ್ದಕ್ಕೆ ಧಕ್ಕೆ ತರುವಂತಹ ಕೆಲ ಘಟನೆಗಳು ನಡೆದಿದ್ದು ದುಃಖಕರ. ಅಮಾಯಕರನ್ನು ಬಲಿ ತೆಗೆದುಕೊಳ್ಳುವುದು ಖಂಡನೀಯ. ಯಾವ ಧರ್ಮವೂ ಹಿಂಸೆಯನ್ನು ಸಮರ್ಥಿಸುವುದಿಲ್ಲ. ಎಲ್ಲಾ ಧರ್ಮಗಳೂ ಪ್ರೀತಿ, ಕರುಣೆ ಮತ್ತು ಸಹಬಾಳ್ವೆಯನ್ನು ಬೋಧಿಸುತ್ತವೆ' ಎಂದಿದ್ದಾರೆ.

'ದ್ವೇಷ ಕಾರುವ ಜನರನ್ನು ಕಾನೂನು ಪ್ರಕಾರ ಶಿಕ್ಷೆಗೊಳಪಡಿಸಿ, ಸೌಹಾರ್ದದ ಸೇತುವೆ ನಿರ್ಮಿಸಬೇಕು. ಆಚರಣೆಗಳು ನಮ್ಮನ್ನು ಒಗ್ಗೂಡಿಸುವ ಶಕ್ತಿಯಾಗಬೇಕೇ ಹೊರತು ಕೋಮು ಪ್ರಚೋದನೆಗೆ ದಾರಿಯಾಗಬಾರದು' ಎಂದು ಹೇಳಿದ್ದಾರೆ.



'ಯುವಜನರು ಪ್ರಚೋದನೆಗಳಿಗೆ ಬಲಿಯಾಗದೆ, ಸಮಾಜದಲ್ಲಿ ಶಾಂತಿ ಮತ್ತು ಭ್ರಾತೃತ್ವವನ್ನು ಗಟ್ಟಿಗೊಳಿಸಬೇಕು. ಎಲ್ಲ ಜನರ ಅಭಿವೃದ್ಧಿಗಾಗಿ ಕೆಲಸ ಮಾಡಬೇಕು. ಸಂವಿಧಾನದ ಆಶಯದಂತೆ ಸೌಹಾರ್ದದಿಂದ ಜೀವಿಸಿ ಕರಾವಳಿಯನ್ನು ಜೀವಗೊಳಿಸೋಣ' ಎಂದಿದ್ದಾರೆ.

'ಕಲ್ಲು ಗಣಿಗಾರಿಕೆಗೆ ಕಿರುಕುಳ'

ಬೆಂಗಳೂರು: 'ಕಲ್ಲು ಗಣಿಗಾರಿಕೆಗೆ ಪರವಾನಗಿ ಪಡೆದಿದ್ದರೂ ಹಲವು ಇಲಾಖೆಗಳು ಅನಗತ್ಯವಾಗಿ ಕಿರುಕುಳ ನೀಡುತ್ತಿವೆ' ರಾಜ್ಯ ಕಲ್ಲು ಗಣಿ ಮತ್ತು ಸ್ಟೋನ್ ಕ್ರಷರ್ ಮಾಲೀಕರ ಒಕ್ಕೂಟದ ಪದಾಧಿಕಾರಿಗಳು ಆರೋಪಿಸಿದರು.

ಒಕ್ಕೂಟದ ಮಹಾ ವಾರ್ಷಿಕ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಮಾತನಾಡಿ ಒಕ್ಕೂಟ ಅಧ್ಯಕ್ಷ ಡಿ. ಸಿದ್ದರಾಜು, 'ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಪರವಾನಗಿ ಪಡೆದು ಪಟ್ಟಾ ಜಮೀನಿನಲ್ಲಿ ಗಣಿಗಾರಿಕೆ ಮಾಡುವವರಿಗೆ ಐದು ಪಟ್ಟು ದಂಡ ವಿಧಿಸಲಾಗುತ್ತಿದೆ. ವಿದ್ಯುತ್ ಬಿಲ್‌ಗೆ ದಂಡ ವಿಧಿಸಿ, ಗಣಿಗಾರಿಕೆ ಮಾಲೀಕರಿಗೆ ನೋಟಿಸ್ ಜಾರಿ ಮಾಡಲಾಗುತ್ತಿದೆ' ಎಂದು ದೂರಿದರು.

'ಕಂದಾಯ ಅಧಿಕಾರಿಗಳು ಸುಖಾಸುಮ್ಮನೆ ನೋಟಿಸ್ ನೀಡುತ್ತಿರುವುದರಿಂದ ಮಾಲೀಕರು ಕಚೇರಿಗಳಿಗೆ ಅಲೆಯಬೇಕಾಗಿದೆ' ಎಂದು ತಿಳಿಸಿದರು.

'ರಾಜ್ಯದಲ್ಲಿ 3 ಸಾವಿರ ಕಲ್ಲು ಗಣಿಗಾರಿಕೆ ಕ್ರಷರ್ ಘಟಕಗಳಿವೆ. ಇದರಲ್ಲಿ 1200 ಜನರು ಈಗಾಗಲೇ ಸಮಸ್ಯೆಗಳನ್ನು ಎದುರಿಸಲಾಗದೆ ಕಾರ್ಯ ಸ್ಥಗಿತಗೊಳಿಸಿದ್ದಾರೆ. ಅನಗತ್ಯ ಕಿರುಕುಳ ಮುಂದುವರಿದರೆ ಎಲ್ಲ ಘಟಕಗಳನ್ನು ಸ್ಥಗಿತಗೊಳಿಸಿ ಹೋರಾಟ ನಡೆಸಲು ವಾರ್ಷಿಕ ಸಭೆಯಲ್ಲಿ ಭಾಗವಹಿಸಿದ್ದ ಒಕ್ಕೂಟ ಪದಾಧಿಕಾರಿಗಳು ಸೇರಿದಂತೆ, 31 ಜಿಲ್ಲೆಗಳ ಪದಾಧಿಕಾರಿಗಳೂ ನಿರ್ಧರಿಸಿದರು' ಎಂದು ಮಾಹಿತಿ ನೀಡಿದರು.

ಕೊಳವೆಬಾವಿ ನೀರಿಗೆ ಶುಲ್ಕ

ಒಂದನೇ ಪುಟದಿಂದ...

ಕೈಗಾರಿಕೆ, ವಾಣಿಜ್ಯ, ಗಣಿಗಾರಿಕೆ, ಮೂಲಸೌಕರ್ಯಗಳ ಅಭಿವೃದ್ಧಿ, ಟ್ಯಾಂಕರ್‌ಗಳಲ್ಲಿ ನೀರು ಪೂರೈಕೆ, ಸಮೂಹ ಗೃಹ ಸಹಕಾರ ಸಂಘಗಳು ಮತ್ತು ಅಪಾರ್ಟ್‌ಮೆಂಟ್ ಸಮುಚ್ಚಯಗಳ ಅಂತರ್ಜಲ ಬಳಕೆಯ ಮೇಲೆ ಪ್ರತಿ ಕ್ಯುಬಿಕ್ ಮೀಟರ್‌ಗೆ ₹1ರಿಂದ ₹35ರವರೆಗೆ ಶುಲ್ಕ ನಿಗದಿ ಮಾಡಲು ಪ್ರಸ್ತಾವ ಸರ್ಕಾರದ ಮುಂದಿದೆ.

ಅಂತರ್ಜಲ ಬಳಕೆಗೆ ನಿರಾಕ್ಷೇಪಣಾ ಪತ್ರ ಪಡೆಯುವುದನ್ನೂ ಕಡ್ಡಾಯಗೊಳಿಸಲಾಗಿದೆ.

ಕರ್ನಾಟಕ ಅಂತರ್ಜಲ ಅಧಿನಿಯಮ 2011 ಮತ್ತು ನಿಯಮಾವಳಿ 2012ರ ಅನ್ವಯ ನಿರಾಕ್ಷೇಪಣಾ ಪತ್ರವನ್ನು ಕಡ್ಡಾಯ ಮಾಡಲಾಗಿತ್ತು. ರಾಜ್ಯ ಸರ್ಕಾರ ಆ ನಿಯಮ ರೂಪಿಸಿದಾಗ, ಬಳಕೆ ದರವನ್ನು ನಿಗದಿ ಮಾಡಿರಲಿಲ್ಲ. ಮಾರ್ಗಸೂಚಿ ಉಲ್ಲಂಘಿಸುವವರಿಗೆ ₹10 ಸಾವಿರದವರೆಗೆ ಮಾತ್ರ ದಂಡ ವಿಧಿಸುವ ಅವಕಾಶ ಕಲ್ಪಿಸಲಾಗಿತ್ತು. ಕೇಂದ್ರ ಅಂತರ್ಜಲ ಪ್ರಾಧಿಕಾರದ ಮಾರ್ಗಸೂಚಿಯಂತೆ, ಈಗ ಅದನ್ನು ₹1 ಲಕ್ಷಕ್ಕೆ ಹೆಚ್ಚಿಸಲಾಗಿದೆ.

ನಗರ ಪ್ರದೇಶದ ಅಪಾರ್ಟ್‌ಮೆಂಟ್‌ಗಳು, ಸಮೂಹ ವಸತಿ ಸಹಕಾರ ಸಂಘಗಳು ಮತ್ತು ಸಾರ್ವಜನಿಕ ನೀರು ಸರಬರಾಜು ಮಾಡುವ ಸರ್ಕಾರದ ಸಂಸ್ಥೆಗಳಿಗೆ ದಿನಕ್ಕೆ ಪ್ರತಿ 25 ಕ್ಯುಬಿಕ್ ಮೀಟರ್‌ವರೆಗೆ ₹1, 25-200 ಕ್ಯುಬಿಕ್ ಮೀಟರ್ ಮತ್ತು 200 ಹಾಗೂ ಮೇಲ್ಪಟ್ಟು ಕ್ಯುಬಿಕ್ ಮೀಟರ್‌ಗೆ ₹2 ನಿಗದಿ ಮಾಡಲಾಗಿದೆ. ಸರ್ಕಾರಿ ನೀರು ಪೂರೈಕೆ ಸಂಸ್ಥೆಗಳಿಗೆ ನೀರು ತೆಗೆಯುವ ಶುಲ್ಕ ಪ್ರತಿ ಕ್ಯುಬಿಕ್ ಮೀಟರ್‌ಗೆ 50 ಪೈಸೆ ಮತ್ತು ವಾಟರ್ ಫ್ಲೋ ಮೀಟರ್ ಅಳವಡಿಸುವುದನ್ನು ಕಡ್ಡಾಯ ಮಾಡಲಾಗಿದೆ.

ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ

ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ಅಪಾರ್ಟ್‌ಮೆಂಟ್‌ಗಳಲ್ಲಿನ ಕೊಳವೆಬಾವಿಗಳಿಗೆ ಹಾಗೂ ಬೆಂಗಳೂರು ನಗರ ಪ್ರದೇಶದಲ್ಲಿ ಎಲ್ಲ ಸ್ವತಂತ್ರ ಮನೆಗಳು ಹೊಂದಿರುವ ಕೊಳವೆಬಾವಿಗಳಿಗೆ ಟೆಲಿಮೆಟ್ರಿ ಹೊಂದಿರುವ ಡಿಜಿಟಲ್ ವಾಟರ್ ಫ್ಲೋ ಮೀಟರ್ ಅಳವಡಿಸಬೇಕು. 20 ಕೆಎಲ್‌ಡಿ (ದಿನಕ್ಕೆ ಕಿಲೋ ಲೀಟರ್) ಬಳಸುವವರಿಗೆ ದರ ನಿಗದಿ ಮಾಡಿಲ್ಲ. ಒಂದು ಕಿಲೋ ಲೀಟರ್ ಎಂದರೆ 1000 ಲೀಟರ್.

ಕೈಗಾರಿಕೆಗಳಿಗೂ ಟ್ಯಾಂಕರ್ ನೀರು

ಸಾರ್ವಜನಿಕ ನೀರು ಸರಬರಾಜು ಕೊಳವೆಬಾವಿಗಳು, ಕೃಷಿ ಕೊಳವೆಬಾವಿಗಳು ಮತ್ತು ವೈಯಕ್ತಿಕ ಕುಡಿಯುವ ನೀರಿನ ಕೊಳವೆಬಾವಿಗಳಿಗೆ ಯಾವುದೇ ರೀತಿಯಲ್ಲಿ ತೊಂದರೆ ಆಗದಂತೆ ಕೈಗಾರಿಕೆ, ವಾಣಿಜ್ಯ, ಗಣಿಗಾರಿಕೆ ಮತ್ತು ಮೂಲ ಸೌಕರ್ಯ ಅಭಿವೃದ್ಧಿಯಲ್ಲಿ ತೊಡಗಿರುವ ಘಟಕಗಳಿಗೆ ಕುಡಿಯುವ ಹಾಗೂ ಗೃಹ ಬಳಕೆ ಉದ್ದೇಶಕ್ಕೆ ಬಳಸಲು ಟ್ಯಾಂಕರ್ ನೀರು ಪೂರೈಕೆಗೆ ಅವಕಾಶ ನೀಡಲಾಗಿದೆ.

ಪಿಡಿಒ ನಿಯೋಜನೆ ಅಧಿಕಾರ ಸಿಇಒಗಳಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು (ಪಿಡಿಒ) ಆಡಳಿತಾತ್ಮಕ ಕಾರಣಗಳಿಗಾಗಿ ಆಯಾ ಜಿಲ್ಲಾ ವ್ಯಾಪ್ತಿಯ ಒಳಗೆ ನಿಯೋಜನೆ ಮಾಡುವ ಅಧಿಕಾರವನ್ನು ಜಿಲ್ಲಾ ಪಂಚಾಯಿತಿ ಸಿಇಒಗಳಿಗೆ ನೀಡಿ ಪಂಚಾಯತ್ ರಾಜ್ ಇಲಾಖೆ ಆದೇಶ ಹೊರಡಿಸಿದೆ.

ಹೊಸ ಆದೇಶದ ಪ್ರಕಾರ ಸಿಇಒಗಳು ಆಯಾ ಜಿಲ್ಲೆಯ ವ್ಯಾಪ್ತಿಯಲ್ಲಿ ಕೆಲಸ ಮಾಡುವ ಪಿಡಿಒಗಳ ಒಟ್ಟು ಸಂಖ್ಯೆಯಲ್ಲಿ ಶೇ 4ರಷ್ಟು ಮಂದಿಯನ್ನು ಖಾಲಿ ಇರುವ ಹುದ್ದೆಗಳಿಗೆ ನಿಯೋಜನೆ ಮಾಡಬಹುದು. ನಿಯೋಜನೆಗೊಳ್ಳುವ ಪಿಡಿಒಗಳು ಒಂದು ಸ್ಥಳದಲ್ಲಿ ಮೂರು ವರ್ಷ ಪೂರೈಸಿರುವುದು ಕಡ್ಡಾಯ.

ಕೂಡಲಸಂಗಮದ ಪಂಚಮಸಾಲಿ ಮಠದ ವಿವಾದ • ವಾಗ್ವಾದ ಬಿರುಸು

ಸ್ವಾಮೀಜಿ ಆಹಾರದಲ್ಲಿ ವಿಷ ಶಂಕೆ: ಬೆಲ್ಲದ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರನ್ನು 'ಮುಗಿಸಿ'ದರೆ ಪಂಚಮಸಾಲಿ ಸಮಾಜದ 2ಎ ಮೀಸಲಾತಿ ಬೇಡಿಕೆ ಹೋರಾಟ ಅಂತ್ಯವಾಗಲಿದೆ ಎಂದು ಕಾಂಗ್ರೆಸ್ ಸರ್ಕಾರ ಭಾವಿಸಿದಂತಿದೆ' ಎಂದು ವಿಧಾನಸಭೆ ವಿರೋಧಪಕ್ಷದ ಉಪನಾಯಕ ಅರವಿಂದ ಬೆಲ್ಲದ ಆರೋಪಿಸಿದರು.



ಅರವಿಂದ ಬೆಲ್ಲದ

'ವಿಷಪೂರಿತ ಆಹಾರ ಸೇವನೆಯಿಂದ ಸ್ವಾಮೀಜಿ ಅವರು ಆಸ್ಪತ್ರೆಗೆ ದಾಖಲಾಗಿದ್ದರು. ತಿನ್ನುವ ಆಹಾರದಲ್ಲಿ ವಿಷ ಬೆರೆಸಲಾಗಿದೆ ಎಂದು ಸ್ವಾಮೀಜಿಯವರೇ ಶಂಕೆ ವ್ಯಕ್ತಪಡಿಸಿದ್ದಾರೆ. ಸತ್ಯವಾಗಿದ್ದರೆ ದೊಡ್ಡ ದುಷ್ಕೃತ್ಯ' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ಕೆಲ ದಿನದ ಹಿಂದೆ ಪಂಚಮಸಾಲಿ ಮಠಕ್ಕೆ ಬೀಗ ಹಾಕಲಾಗಿತ್ತು. ಭಕ್ತರು ಅಸಮಾಧಾನ ವ್ಯಕ್ತಪಡಿಸಿದ್ದ ಸ್ವಾಮೀಜಿ ಮಠಕ್ಕೆ ಮರಳಿದ್ದರು. ಅಲ್ಲಿ ನಡೆಯುವ ಬೆಳವಣಿಗೆ ಗಮನಿಸಲು ಕೆಲ ಮುಸ್ಲಿಂ ಯುವಕರನ್ನು ಬಿಟ್ಟಿದ್ದರು. ಅವರು ಅಡುಗೆ ಮನೆಗೆ ಹೋಗಿದ್ದ ದಿನವೇ, ಸ್ವಾಮೀಜಿ ಅವರ ಆರೋಗ್ಯ ಹದಗೆಟ್ಟಿತು' ಎಂದು ಆರೋಪಿಸಿದರು.

'2ಎ ಮೀಸಲಾತಿಗಾಗಿ ಸ್ವಾಮೀಜಿ ನಿರಂತರ ಹೋರಾಟ ನಡೆಸಿದ್ದಾರೆ. ಇತ್ತೀಚಿನ ಎಲ್ಲ ಬೆಳವಣಿಗೆಗಳನ್ನು ಲಿಂಗಾಯತ ಪಂಚಮಸಾಲಿ ಸಮಾಜ ಸೂಕ್ಷ್ಮವಾಗಿ ಗಮನಿಸುತ್ತಿದೆ. ಸ್ವಾಮೀಜಿಗೆ ತೊಂದರೆ ಕೊಟ್ಟು, ಹೋರಾಟ ಹತ್ತಿಕ್ಕುವ ಷಡ್ಯಂತ್ರ ನಡೆದಿದೆ. ಅದು ಅಸಾಧ್ಯ. ಸೂಕ್ತ ಸಮಯದಲ್ಲಿ ಸಮಾಜ ತಕ್ಕ ಉತ್ತರ ನೀಡಲಿದೆ' ಎಂದರು. 'ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರು ಯಾವ ಪಕ್ಷ, ಮಠಕ್ಕೂ ಸೀಮಿತವಾಗಿಲ್ಲ. ಅವರು ಸಮಾಜದ ಅಭ್ಯುದಯಕ್ಕೆ ಹಗಲಿರುಳು ಶ್ರಮಿಸುತ್ತಿದ್ದಾರೆ. ಹಿಂದೆ ನಮ್ಮ ಬಿಜೆಪಿ ಸರ್ಕಾರ 2ಎ ಮೀಸಲಾತಿ ನೀಡುವುದಾಗಿ ಘೋಷಿಸಿತ್ತು. ಈಗಿನ ಕಾಂಗ್ರೆಸ್ ಸರ್ಕಾರ ಅದನ್ನು ಜಾರಿಗೆ ತರುತ್ತಿಲ್ಲ' ಎಂದು ಬೆಲ್ಲದ ಆರೋಪಿಸಿದರು.

ವಿಜಯಾನಂದನೇ ಸ್ವಾಮೀಜಿ ಆಗಲಿ: ಯತ್ನಾಳ




ಬಸನಗೌಡ ಪಾಟೀಲ ಯತ್ನಾಳ

ವಿಜಯಪುರ: 'ಬಸವಜಯ ಮೃತ್ಯುಂಜಯ ಸ್ವಾಮೀಜಿ ಸ್ಥಾನಕ್ಕೆ ಪರ್ಯಾಯ ಸ್ವಾಮೀಜಿ ನೇಮಿಸುವ ಬದಲು, ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರೇ ಸ್ವಾಮೀಜಿಯಾಗಲಿ' ಎಂದು ವಿಜಯಪುರದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

'ಪರ್ಯಾಯ ಪೀಠ, ಮಠಗಳು ಮಾಡುವುದರಿಂದ ಭಕ್ತರಿಗೆ ಮತ್ತು ಸಮಾಜಕ್ಕೆ ತೊಂದರೆ ಹೆಚ್ಚಾಗಲಿದೆ. ಆ ಮಠಕ್ಕೆ ಹೋದರೆ, ಈ ಮಠದವರು ಮುನಿಸಿಕೊಳ್ಳುತ್ತಾರೆ' ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ಈ ಹಿಂದೆ ಒಬ್ಬರು ಕೂಡಲಸಂಗಮ ಪೀಠಕ್ಕೆ ಪರ್ಯಾಯವಾಗಿ ಜಮಖಂಡಿ ತಾಲ್ಲೂಕಿನಲ್ಲಿ ಪಂಚಮಸಾಲಿ ಸಮಾಜದ ಮೂರನೇ ಪೀಠ ಸ್ಥಾಪನೆ ಮಾಡಿ ಅಲ್ಲೊಂದು ಸ್ವಾಮೀಜಿಯನ್ನು ಕೂರಿಸಿದ್ದಾರೆ. ಇದರಿಂದ ಏನಾದರೂ ಸಮಾಜದಲ್ಲಿ ರಕ್ತಕ್ರಾಂತಿ ಆಗಿದೆಯಾ? ಏನೂ ಆಗಿಲ್ಲ' ಎಂದರು. 'ಆಹಾರದಲ್ಲಿ ವಿಷ ಮಿಶ್ರಣ ಕುರಿತ ಆರೋಪಕ್ಕೆ ಪ್ರತಿಕ್ರಿಯಿಸಿ, 'ಬೆಲ್ಲದ ಅವರ ಬಳಿ ಬಹಳ ಮಾಹಿತಿ ಇರುತ್ತದೆ. ನನಗೆ ಮಾಹಿತಿ ಇಲ್ಲ. ಸುಮ್ಮನೇ ಆರೋಪ ಮಾಡಲ್ಲ' ಎಂದರು.

'ಇಬ್ಬರೂ ಸಮಾಜದ ಹಿತ ಕಾಯಲಿ'



ಸಿ.ಸಿ.ಪಾಟೀಲ

ನರಗುಂದ (ಗದಗ ಜಿಲ್ಲೆ): 'ಶಾಸಕ ವಿಜಯಾನಂದ ಕಾಶಪ್ಪನವರ ಅಥವಾ ಬಸವಜಯ ಮೃತ್ಯುಂಜಯ ಶ್ರೀಗಳ ನಡುವೆ ಮುನಿಸು ಏಕಿದೆಯೊ ಗೊತ್ತಾಗುತ್ತಿಲ್ಲ. ಇಬ್ಬರು ಪಂಚಮಸಾಲಿ ಸಮಾಜದ ಹಿತ ಕಾಯಬೇಕು' ಎಂದು ಶಾಸಕ ಸಿ.ಸಿ.ಪಾಟೀಲ ಸುದ್ದಿಗೋಷ್ಠಿಯಲ್ಲಿ ಅಭಿಪ್ರಾಯಪಟ್ಟರು.

'ಈಗಿನ ಘಟನೆಗಳಿಂದ ಶ್ರೀಗಳಿಗೆ ಸ್ವಲ್ಪ ಹಿಂಸೆಯಾಗಿದೆ. ಸಂಧಾನದಲ್ಲಿ ಪರಿಹಾರ ಸಿಗದಿದ್ದರೆ ಅಥವಾ ಮೂಲಪೀಠದಲ್ಲಿ ತೊಂದರೆಯಾದರೆ, ಶ್ರೀಗಳು ಬಯಸಿದ ಸ್ಥಳದಲ್ಲೇ ಶಾಖಾ ಪೀಠ ನಿರ್ಮಿಸಲಾಗುವುದು. ಅವರಿಗೆ ನಮ್ಮ ಸಮಾಜದ ಎಲ್ಲರೂ ಬೆಂಗಾವಲಾಗಿ ನಿಲ್ಲುತ್ತೇವೆ' ಎಂದರು.

ವಿಷಪ್ರಾಶನ ಆರೋಪ: ತನಿಖೆ ನಡೆಯಲಿ



ವಿಜಯಾನಂದ ಕಾಶಪ್ಪನವರ

ದಾವಣಗೆರೆ: 'ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಅವರ ಆಹಾರದಲ್ಲಿ ವಿಷಪ್ರಾಶನ ಆರೋಪ ಕುರಿತು ತನಿಖೆ ನಡೆಯಲಿ' ಎಂದು ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಟ್ರಸ್ಟ್ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ್ ಒತ್ತಾಯಿಸಿದರು.

'ಸ್ವಾಮೀಜಿ ಅವರ ಊಟದಲ್ಲಿ ವಿಷ ಬೆರೆಸಿರುವ ಶಂಕೆ ಇದೆ' ಎಂದು ಶಾಸಕ ಅರವಿಂದ ಬೆಲ್ಲದ ಮಾಡಿರುವ ಆರೋಪಕ್ಕೆ ಸೋಮವಾರ ಪ್ರತಿಕ್ರಿಯಿಸಿದರು.

'ಬೆಲ್ಲದ ಅವರಿಗೆ ಬೇರೊಬ್ಬರ ಮೇಲೆ ಆರೋಪ ಮಾಡದೇ ಇದ್ದರೆ ತಿಂದಿದ್ದು ಜೀರ್ಣವಾಗುವುದಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ವರ್ಷ ಕಳೆದರೂ ಸಿಗದ ಬಹುಮಾನ • ಕೈಗಳಿಲ್ಲದ ಈಜುಪಟುವಿನ ಪರದಾಟ

ಸರ್ಕಾರಕ್ಕೆ ತಪರಾಕಿ: ₹2 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡೂ ಕೈಗಳನ್ನು ಕಳೆದುಕೊಂಡಿದ್ದರೂ ರಾಷ್ಟ್ರೀಯ ಪ್ಯಾರಾಲಿಂಪಿಕ್ ಈಜು ಸ್ಪರ್ಧೆಯಲ್ಲಿ ಬಂಗಾರದ ಪದಕ ಗೆದ್ದು ದೇಶದ ಕೀರ್ತಿ ಮೆರೆಸಿದ ನಗರದ ಈಜುಗಾರನಿಗೆ ನ್ಯಾಯಯುತವಾಗಿ ದಕ್ಕಬೇಕಾದ ₹6 ಲಕ್ಷ ನಗದು ಬಹುಮಾನದಲ್ಲಿ ಬಾಕಿ ₹1.26 ಲಕ್ಷ ಪಾವತಿ ಮಾಡದೆ ಕಂಬದಿಂದ ಕಂಬಕ್ಕೆ ಅಲೆದಾಡಿಸುತ್ತಿರುವ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ₹2 ಲಕ್ಷ ದಂಡ ಹಾಕುವ ಮೂಲಕ ತಪರಾಕಿ ಬೀಸಿದೆ.

ಈ ಸಂಬಂಧ ಕೆ.ಎಸ್.ವಿಶ್ವಾಸ್ (34) ಸಲ್ಲಿಸಿದ್ದ ಮನವಿಯನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ದಂಡದ ಮೊತ್ತವನ್ನು ದಾವೆಯ ಖರ್ಚಿನ ರೂಪದಲ್ಲಿ ಅರ್ಜಿದಾರರಿಗೆ ಎರಡು ವಾರಗಳಲ್ಲಿ ಪಾವತಿಸಬೇಕು' ಎಂದು ಸರ್ಕಾರಕ್ಕೆ ತಾಕೀತು ಮಾಡಿದೆ. ಅಂತೆಯೇ, 'ಅಂಗವಿಕಲ ಸಾಧಕನ ಬಗೆಗಿನ ಸರ್ಕಾರದ ಇಂತಹ ನಿರ್ದಯ ಉದಾಸೀನತೆ ಖಂಡನೀಯ' ಎಂದು ಕಿಡಿಕಾರಿದೆ.

'ಅರ್ಜಿದಾರ ವಿಶ್ವಾಸ್ 2016ರಿಂದ 2018ರವರೆಗಿನ ವಿವಿಧ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಹಲವು ಪದಕಗಳನ್ನು ಗಳಿಸಿರುವುದು ನಿಚ್ಚಳವಾಗಿದೆ. ಆದರೆ, ಇವರ ಸಾಧನೆಗೆ ಸರ್ಕಾರವೇ ಘೋಷಿಸಿದ ನಗದು ಬಹುಮಾನದ ಬಾಕಿಯನ್ನು ಆರು ವರ್ಷಗಳು ಕಳೆದರೂ ನೀಡಿಲ್ಲ. ಅದರಲ್ಲಿ ಒಂದು ರೂಪಾಯಿಯನ್ನೂ ಪಾವತಿ ಮಾಡದೆ ಅಲೆದಾಡಿಸುತ್ತಿರುವುದಕ್ಕೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಂಬಂಧಿಸಿದ ಅಧಿಕಾರಿಗಳನ್ನು ವೈಯಕ್ತಿಕವಾಗಿ ಹೊಣೆಗಾರರನ್ನಾಗಿ ಮಾಡಬೇಕು' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲೆ ಅಶ್ವಿನಿ ಓಬಳೇಶ್ ವಾದ ಮಂಡಿಸಿದ್ದರು.

ನಿರ್ದೇಶನ: 'ದಂಡದ ₹2 ಲಕ್ಷ ಮೊತ್ತವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಂಬಂಧಿಸಿದ ಅಧಿಕಾರಿ ತನ್ನ ಜೇಬಿನಿಂದಲೇ ಪಾವತಿಸಬೇಕು. ಅಂತೆಯೇ, ₹1.26 ಲಕ್ಷ ಬಾಕಿ ಮೊತ್ತವನ್ನು ಎರಡು ವಾರಗಳ ಒಳಗಾಗಿ ವಿಶ್ವಾಸ್ ಅವರಿಗೆ ಪಾವತಿಸಬೇಕು. ಒಂದು ವೇಳೆ ಪಾವತಿ ಮಾಡದೇ ಹೋದರೆ ಎರಡು ವಾರಗಳ ನಂತರದ ದಿನದಿಂದ ಪೂರ್ಣ ಮೊತ್ತವನ್ನು ಪಡೆಯುವತನಕ ದಿನಂಪ್ರತಿ ₹1 ಸಾವಿರ ಹೆಚ್ಚುವರಿ ದಂಡವನ್ನು ಅವರ ಮನೆ ಬಾಗಿಲಿಗೆ ತಲುಪಿಸುವ ವ್ಯವಸ್ಥೆಯಾಗಬೇಕು. ಇದೂ ನಾಲ್ಕು ವಾರಗಳ ಒಳಗಾಗಿ ಆಗತಕ್ಕದ್ದು' ಎಂದು ನ್ಯಾಯಪೀಠ ನಿರ್ದೇಶಿಸಿದೆ.

ಮುಖ್ಯಾಂಶಗಳು

- ಯುವ ಸಬಲೀಕರಣ–ಕ್ರೀಡಾ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯ
- ಆಡಳಿತಶಾಹಿ ಕಾರ್ಯವೈಖರಿ ದುಃಖಕರ



> ಸರ್ಕಾರದ ಕರ್ತವ್ಯ ಕೇವಲ ಆಡಳಿತಾತ್ಮಕ ಅಂಶ, ಅಧಿಕಾರಶಾಹಿ ತಾಂತ್ರಿಕ ಅಂಶಗಳಿಗೆ ಮಾತ್ರವೇ ಒತ್ತು ನೀಡತಕ್ಕದ್ದಲ್ಲ. ಅದು ನೈತಿಕ, ಸಾಂವಿಧಾನಿಕ ಕಮಂಡಲವಾಗಿರಬೇಕು
> **ಎಂ.ನಾಗಪ್ರಸನ್ನ,** ನ್ಯಾಯಮೂರ್ತಿ

ಬಡ್ತಿ ಮೀಸಲು ಅನ್ಯಾಯ: ಇಂದು ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ಯೇಷ್ಠತೆ ಸಂರಕ್ಷಣೆ ಕಾಯ್ದೆ ಜಾರಿಯಲ್ಲಿದ್ದರೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮುಂಬಡ್ತಿಯಲ್ಲಿ ಮೀಸಲಾತಿ ನೀಡದೆ ಸತಾಯಿಸುತ್ತಿರುವ ಆರೋಪದ ಕುರಿತು ವಿವಿಧ ಇಲಾಖೆಗಳ ಅಧಿಕಾರಿಗಳ ಜೊತೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಜುಲೈ 22ರಂದು ಸಭೆ ನಡೆಸಲಿದ್ದಾರೆ.

ಪರಿಶಿಷ್ಟ ಜಾತಿ, ವರ್ಗದ ಅಧಿಕಾರಿ, ನೌಕರರಿಗೆ ಮುಂಬಡ್ತಿ ನೀಡುವ ಬಗ್ಗೆ ಸರ್ಕಾರ ಈಗಾಗಲೇ ಹೊರಡಿಸಿರುವ ಆದೇಶ ಹಾಗೂ ಸುತ್ತೋಲೆಗಳನ್ನು ಜಾರಿಗೆ ತರಲು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಇತ್ತೀಚೆಗೆ ಪತ್ರ ಬರೆದು ಸೂಚನೆ ನೀಡಿದ್ದರು.

ಮುಂಬಡ್ತಿಯಲ್ಲಿ ಮೀಸಲಾತಿ ನೀಡದಿರುವ ಬಗ್ಗೆ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಡಿ. ಚಂದ್ರಶೇಖರಯ್ಯ ಅವರು ಸಲ್ಲಿಸಿರುವ ಮನವಿಗೆ ಸಂಬಂಧಿಸಿದಂತೆ ಚರ್ಚಿಸಲು ವಿಧಾನಸೌಧದಲ್ಲಿ ಮಧ್ಯಾಹ್ನ 3.30ಕ್ಕೆ ಆಯೋಜಿಸಿರುವ ಸಭೆಗೆ ಸಚಿವಾಲಯದ ಉಪ ಕಾರ್ಯದರ್ಶಿಗಿಂತ ಮೇಲಿನ ಶ್ರೇಣಿಯ ಅಧಿಕಾರಿಗಳು, ಈಗಾಗಲೇ ಕೋರಿರುವ ಮಾಹಿತಿಗಳ ಸಹಿತ ಹಾಜರಾಗಬೇಕು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಉಪ ಕಾರ್ಯದರ್ಶಿ ಸೂಚನೆ ನೀಡಿದ್ದಾರೆ.

ಶಾಲಾ ಶಿಕ್ಷಣ, ಗೃಹ, ಅರಣ್ಯ, ತೋಟಗಾರಿಕೆ, ಕೃಷಿ, ಸಾರಿಗೆ, ನಗರಾಭಿವೃದ್ಧಿ, ಡಿಪಿಎಆರ್, ಇಂಧನ ಈ ಒಂಬತ್ತು ಇಲಾಖೆ ಗಳಲ್ಲಿ ಮೀಸಲಾತಿ ರೋಸ್ಟರ್ ಬಿಂದು ಗಳನ್ನು (ವಿವಿಧ ಮೀಸಲು ವರ್ಗದ ಅಭ್ಯರ್ಥಿಗಳಿಗೆ ನಿಗದಿಪಡಿಸಿದ ಬಿಂದು) ಪಾಲಿಸುತ್ತಿಲ್ಲ ಎಂದು ಎಲ್ಲ ದಾಖಲೆಗಳ ಸಹಿತ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘವು ಮುಖ್ಯಮಂತ್ರಿ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರಿಗೆ ದೂರು ನೀಡಿತ್ತು.

ರೈತರ ಬಂಡಾಯ: ರೈತ ಸಂಘದ ಉಗಮ ನೆನಪಿಗೆ ನಿರ್ಮಾಣ • 45 ವರ್ಷಗಳ ಬೇಡಿಕೆ

ಹುತಾತ್ಮ ರೈತರ ಸ್ಮರಣೆ: ಸ್ಮಾರಕ ನಿರ್ಮಿಸಲು ಚಾಲನೆ

ಪ್ರಜಾವಾಣಿ ವಾರ್ತೆ

ಗದಗ: '1980ರ ಜುಲೈನಲ್ಲಿ ನಡೆದಿದ್ದ ರೈತರ ಬಂಡಾಯ, ರೈತ ಸಂಘದ ಉಗಮ ಕಾರಣವಾದ ನೆನಪಿನಲ್ಲಿ ರೈತರ ಸ್ಮಾರಕ ನಿರ್ಮಿಸಲು ರೈತ ಸಂಘಟನೆಗಳ 45 ವರ್ಷಗಳ ಬೇಡಿಕೆಗೆ ಇಂದು ಚಾಲನೆ ನೀಡಲಾಗಿದೆ' ಎಂದು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ನರಗುಂದದಲ್ಲಿ ಸೋಮವಾರ ನಡೆದ ಹುತಾತ್ಮ ರೈತ ದಿನಾಚರಣೆ ಕಾರ್ಯಕ್ರಮದಲ್ಲಿ ದಿ. ವೀರಪ್ಪ ಕಡ್ಲಿಕೊಪ್ಪ ಅವರ ವೀರಗಲ್ಲಿಗೆ ನಮನ ಸಲ್ಲಿಸಿ, ಅವರು ಮಾತನಾಡಿದರು.

'ರೈತ ಸ್ಮಾರಕ ನಿರ್ಮಾಣಕ್ಕೆ ಭೂಮಿ ದಾನ ಮಾಡಿದ ದೇಸಾಯಿಗೌಡ ಪಾಟೀಲ, ಸಲೀಂ ಮೇಗಲಮನಿ ಅಭಿನಂದನಾರ್ಹರು. 2026 ಜುಲೈ 21ರೊಳಗೆ ಸ್ಮಾರಕ ಪೂರ್ಣವಾಗಲಿದೆ. ಇದಕ್ಕೆ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಜಿಲ್ಲಾಧಿಕಾರಿಗೆ ಸೂಚಿಸಿದರು.

'ಕಳಸಾ ಬಂಡೂರಿ ಯೋಜನೆಗೆ ಕೇಂದ್ರದ ವನ್ಯಜೀವಿ ಇಲಾಖೆ ಅನುಮತಿ ಬೇಕು. ಸಿಕ್ಕ ತಕ್ಷಣ ಕಾಮಗಾರಿ ಆರಂಭಿಸಲಾಗುವುದು. ಕೃಷ್ಣಾ ನದಿ ಬಿ ಸ್ಕೀಂ ಯೋಜನೆಗೆ ಕೇಂದ್ರ ಗಮನ ಹರಿಸುತ್ತಿಲ್ಲ' ಎಂದು ಆರೋಪಿಸಿದರು.



ನರಗುಂದದಲ್ಲಿ ದಿ. ವೀರಪ್ಪ ಕಡ್ಲಿಕೊಪ್ಪರ ರೈತ ಸ್ಮಾರಕ ನಿರ್ಮಾಣಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಭೂಮಿಪೂಜೆ ನೆರವೇರಿಸಿದರು. ಶಾಸಕರಾದ ಸಿ.ಸಿ.ಪಾಟೀಲ, ಎನ್.ಎಚ್.ಕೋನರಡ್ಡಿ, ಬಿ.ಆರ್.ಪಾಟೀಲ, ಮಾಜಿ ಶಾಸಕ ಬಿ.ಆರ್.ಯಾವಗಲ್ ಇದ್ದರು

ಈ ಬಾರಿ ಆಗಲಿಲ್ಲ ಸಮಾವೇಶ

ವೀರಗಲ್ಲು ಇರುವ ಸ್ಥಳದಲ್ಲೇ ಶಂಕರ ಅಂಬಲಿ ನೇತೃತ್ವದಲ್ಲಿ ಒಂದು ವೇದಿಕೆ, ಅದರ ಹಿಂದುಗಡೆ ವಿರೇಶ ಸೊಬರದಮಠ ನೇತೃತ್ವದ ಮಹದಾಯಿ ಹೋರಾಟದ ವೇದಿಕೆ ಇದ್ದ ಕಾರಣ ಹುತಾತ್ಮ ರೈತ ದಿನಾಚರಣೆಗೆ ಬಂದ ರೈತರಿಗೆ ಗೊಂದಲವಾಯಿತು.

ಎರಡು ವೇದಿಕೆಯಲ್ಲೂ ರೈತ ಮುಖಂಡರ ಭಾಷಣ ಮಾಡಿದರು. ಇದರಿಂದ ಬೇರೆ ಬೇರೆ ಜಿಲ್ಲೆಗಳಿಂದ ಬಂದ ರೈತರು, ವಿವಿಧ ಸಂಘಟನೆಗಳಿಗೆ ರೈತ ಹೋರಾಟ, ವೇದಿಕೆ, ಆರೋಪ, ಪ್ರತ್ಯಾರೋಪಗಳು ಗೊಂದಲ, ಬೇಸರ ತರಿಸಿದವು. ಪ್ರತಿ ಸಲದಂತೆ ಬಹಿರಂಗ ಸಮಾವೇಶ, ಪಕ್ಷದ ಸಮಾವೇಶ ಈ ಬಾರಿ ನಡೆಯಲಿಲ್ಲ.

ಪ್ರತ್ಯೇಕ ವೇದಿಕೆಯಲ್ಲಿ ಆಳಂದ ಶಾಸಕ ಬಿ.ಆರ್.ಪಾಟೀಲ ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿ ಖಂಡಿಸಿದರು.

ಶಾಲಾ ಸ್ಥಿತಿಗತಿ: ಒಂದು ದಿನದ ಚರ್ಚೆಗೆ ಕೋರಿಕೆ

ಬೆಂಗಳೂರು: ಸರ್ಕಾರಿ ಶಾಲೆಗಳ ಸ್ಥಿತಿಗತಿ, ಅವುಗಳ ಅಭಿವೃದ್ಧಿ ಮತ್ತು ಕಾಯಕಲ್ಪ ಕುರಿತು ಆ.11ರಿಂದ ಆರಂಭವಾಗುವ ಅಧಿವೇಶನದಲ್ಲಿ ಒಂದು ದಿನದ ವಿಶೇಷ ಚರ್ಚೆಗೆ ಅವಕಾಶ ಕಲ್ಪಿಸಬೇಕು ಎಂದು ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ಕೋರಿದ್ದಾರೆ. ಈ ಕುರಿತು ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ಅವರಿಗೆ ಪತ್ರ ಬರೆದಿರುವ ಅವರು, ರಾಜ್ಯ ಸರ್ಕಾರ ಸಿದ್ಧಪಡಿಸುತ್ತಿರುವ ರಾಜ್ಯ ಶಿಕ್ಷಣ ನೀತಿ ಸರ್ಕಾರಿ ಶಾಲೆಗಳ ಕಾಯಕಲ್ಪಕ್ಕೆ ವರವಾಗಬೇಕಿದೆ. ಈ ಎಲ್ಲ ಅಂಶಗಳ ಕುರಿತು ಸದನದಲ್ಲಿ ಸಮಗ್ರ ಚರ್ಚೆ ನಡೆಸುವ ಅಗತ್ಯವಿದೆ ಎಂದಿದ್ದಾರೆ. 'ಶಿಕ್ಷಣ ಇಲಾಖೆಯ ಆಡಳಿತ ವ್ಯವಸ್ಥೆ ವಿದ್ಯಾರ್ಥಿ ಕೇಂದ್ರೀಕೃತವಾಗಿರುವ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಸಂಪೂರ್ಣ ವಿರೂಪಗೊಳಿಸಿದೆ' ಎಂದಿದ್ದಾರೆ.

ಚಿಟಿಕೆ ಸುದ್ದಿ

ಜಮ್ಮು: ಭೂಕುಸಿತ ವ್ಯಕ್ತಿ ಸಾವು



ಕುಸಿದ ಕಚೇರಿಯ ಅವಶೇಷಗಳನ್ನು ತೆರವುಗೊಳಿಸಲಾಯಿತು– ಪಿಟಿಐ ಚಿತ್ರ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ರಿಯಾಸಿ ಜಿಲ್ಲೆಯಲ್ಲಿ ಸಂಭವಿಸಿದ ಭೂಕುಸಿತದಲ್ಲಿ ಒಬ್ಬ ವ್ಯಕ್ತಿ ಸಾವಿಗೀಡಾಗಿದ್ದು, 10 ಮಂದಿ ಗಾಯಗೊಂಡಿದ್ದಾರೆ.

ಭಾರಿ ಮಳೆ ಸುರಿದಿದ್ದರಿಂದ ಬಂಗಾಂಗಾ ಸಮೀಪದ ಗುಲ್ಶನ್ ಕಾ ಲಂಗರ್‌ನಲ್ಲಿ ಸೋಮವಾರ ಮುಂಜಾನೆ 8.30ರ ಸುಮಾರಿಗೆ ಭೂಕುಸಿತ ಸಂಭವಿಸಿದೆ.

ಇಲ್ಲಿನ ತ್ರಿಕೂಟ ಪರ್ವತಕ್ಕೆ ತೆರಳಲು ಯಾತ್ರಾರ್ಥಿಗಳು ನೋಂದಾಯಿಸಿಕೊಳ್ಳುತ್ತಿದ್ದ ಕಚೇರಿ ಕುಸಿದಿದೆ. ವೈಷ್ಣೋದೇವಿ ದೇವಸ್ಥಾನಕ್ಕೆ ತೆರಳುವ ಹಳೆಯ ಮಾರ್ಗದಲ್ಲಿ ಈ ಕಚೇರಿ ಇತ್ತು.

ನಿಸಾರ್: ಉಡಾವಣೆ ಜುಲೈ 30ಕ್ಕೆ

ಬೆಂಗಳೂರು (ಪಿಟಿಐ): ನಾಸಾ ಮತ್ತು ಇಸ್ರೊ ಜಂಟಿಯಾಗಿ ಜುಲೈ 30ರಂದು ನಿಸಾರ್ ಉಪಗ್ರಹವನ್ನು ಉಡಾವಣೆಗೊಳಿಸಲಿವೆ.

ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಜಿಎಸ್‌ಎಲ್‌ವಿ–ಎಫ್16 ಉಡಾವಣಾ ವಾಹನವು ನಿಸಾರ್ ಉಪಗ್ರಹವನ್ನು ಹೊತ್ತೊಯ್ಯಲಿದೆ ಎಂದು ಇಸ್ರೊ ತಿಳಿಸಿದೆ.

ಇಡೀ ಭೂಮಿಯ ಮೇಲೆ ನಿಗಾ ಇಡಲಿರುವ ನಿಸಾರ್ ಉಪಗ್ರಹವು ಪ್ರತಿ 12 ದಿನಗಳಿಗೊಮ್ಮೆ ಹವಾಮಾನ, ಸೂರ್ಯೋದಯ ಮತ್ತು ಸೂರ್ಯಾಸ್ತಗಳ ಬಗ್ಗೆ ಮಾಹಿತಿ ನೀಡಲಿದೆ. ಸಣ್ಣ ಸಣ್ಣ ಬದಲಾವಣೆಗಳನ್ನು ಪತ್ತೆ ಹಚ್ಚಲಿದೆ ಎಂದು ಇಸ್ರೊ ತಿಳಿಸಿದೆ.

ನಕ್ಸಲ್ ನಾಯಕ ಹಜೀಜುಲ್ ನಿಧನ

ಕೋಲ್ಕತ್ತ (ಪಿಟಿಐ): ಕ್ರಾಂತಿಕಾರಿ ಕವಿ, ರಾಜಕೀಯ ಚಿಂತಕ, ನಕ್ಸಲ್ ನಾಯಕ ಅಜೀಜುಲ್ ಹಕ್ (83) ಸೋಮವಾರ ನಿಧನರಾದರು.

ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು, ಮನೆಯಲ್ಲಿ ಬಿದ್ದು ಕೈಮುರಿದುಕೊಂಡಿದ್ದರು. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮಧ್ಯಾಹ್ನ 2.28ಕ್ಕೆ ಕೊನೆಯುಸಿರೆಳೆದರು ಎಂದು ಮೂಲಗಳು ಹೇಳಿವೆ.

1942ರಲ್ಲಿ ಹೌರಾದಲ್ಲಿ ಜನಿಸಿದ್ದ ಹಕ್, ಭಾರತದ ನಕ್ಸಲ್ ದಂಗೆಯ ಕೊನೆಯ ನಾಯಕರಲ್ಲಿ ಒಬ್ಬರು. ಸಿಪಿಐ(ಎಂಎಲ್)ನ ಎರಡನೇ ಕೇಂದ್ರ ಸಮಿತಿ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದರು. ಅವರ ನಿಧನದಿಂದಾಗಿ 1960 ಹಾಗೂ 70ರ ದಶಕದಲ್ಲಿ ರಾಷ್ಟ್ರವನ್ನು ಬೆಚ್ಚಿ ಬೀಳಿಸಿದ್ದ, ಪಶ್ಚಿಮ ಬಂಗಾಳದ ಪ್ರಕ್ಷುಬ್ಧ, ರಕ್ತಸಿಕ್ತ ಅಧ್ಯಾಯದ ಇತಿಹಾಸ ಅಂತ್ಯಗೊಂಡಿದೆ.

'1.73 ಲಕ್ಷ ಹೆಕ್ಟೇರ್ ಅರಣ್ಯ ಜಮೀನು ಪರಿವರ್ತನೆ'

ನವದೆಹಲಿ (ಪಿಟಿಐ): ವಿವಿಧ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಿಗಾಗಿ 2014ರಿಂದ 2024ರ ಅವಧಿಯಲ್ಲಿ 1.73 ಲಕ್ಷ ಹೆಕ್ಟೇರ್ ಅರಣ್ಯ ಪ್ರದೇಶವನ್ನು ಪರಿವರ್ತಿಸಲಾಗಿದೆ. ಈ ಪೈಕಿ ಗಣಿಗಾರಿಕೆ ಹಾಗೂ ಜಲವಿದ್ಯುತ್ ಯೋಜನೆಗಳಿಗಾಗಿ ಅತಿ ಹೆಚ್ಚು ಅರಣ್ಯ ಜಮೀನು ಬಳಕೆಯಾಗಿದೆ ಎಂದು ಪರಿಸರ ಸಚಿವಾಲಯವು ಸಂಸತ್ತಿಗೆ ಸೋಮವಾರ ಮಾಹಿತಿ ನೀಡಿದೆ.

ಕಾಂಗ್ರೆಸ್ ಸಂಸದ ಸುಖದೇವ್ ಭಗತ್ ಅವರು ಕೇಳಿದ್ದ ಪ್ರಶ್ನೆಗೆ ಕೇಂದ್ರ ಸರ್ಕಾರ ಉತ್ತರಿಸಿದೆ.

'ಸಿಂಧೂರ' ಗದ್ದಲಕ್ಕೆ ಕಲಾಪ ಬಲಿ

ಅಧಿವೇಶನ: ಪ್ರಮುಖ ವಿಷಯಗಳ ಕುರಿತು ಕೂಡಲೇ ಚರ್ಚೆಗೆ ವಿಪಕ್ಷ ಪಟ್ಟು

ಪ್ರಜಾವಾಣಿ ವಾರ್ತೆ

ನವದೆಹಲಿ: 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ಮತ್ತು ಇತರ ವಿಷಯಗಳ ಕುರಿತು ಕೂಡಲೇ ಚರ್ಚೆ ನಡೆಯಬೇಕು ಎಂದು ಒತ್ತಾಯಿಸಿ 'ಇಂಡಿಯಾ' ಮೈತ್ರಿಕೂಟದ ಪಕ್ಷಗಳು ಪ್ರತಿಭಟನೆ ನಡೆಸಿ ಗದ್ದಲ ಎಬ್ಬಿಸಿದ್ದರಿಂದ ಲೋಕಸಭೆಯ ಕಲಾಪ ಸೋಮವಾರ ಬಲಿಯಾಯಿತು. ರಾಜ್ಯಸಭೆಯ ಕಲಾಪ ವನ್ನು ಪ್ರತಿಪಕ್ಷಗಳು ಬಹಿಷ್ಕರಿಸಿದವು.

ಕಲಾಪ ಬೆಳಿಗ್ಗೆ 11 ಗಂಟೆಗೆ ಆರಂಭವಾಗುತ್ತಿದ್ದಂತೆ ಮೃತರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಆ ಬಳಿಕ ಕಾಂಗ್ರೆಸ್ ನೇತೃತ್ವದಲ್ಲಿ ವಿಪಕ್ಷಗಳ ಸದಸ್ಯರು, 'ಆಪರೇಷನ್ ಸಿಂಧೂರ ಕಾರ್ಯಾಚರಣೆ ಬಗ್ಗೆ ಕೂಡಲೇ ಚರ್ಚೆ ಆರಂಭಿಸಬೇಕು' ಎಂದು ಪಟ್ಟು ಹಿಡಿದು ಪ್ರತಿಭಟನೆ ಆರಂಭಿಸಿದರು.

ಲೋಕಸಭಾಧ್ಯಕ್ಷ ಓಂ ಬಿರ್ಲಾ, 'ಪ್ರಶ್ನೋತ್ತರ ಅವಧಿ ಮುಗಿದ ಬಳಿಕ ಆಪರೇಷನ್ ಸಿಂಧೂರ ಸೇರಿದಂತೆ ಎಲ್ಲ ವಿಷಯಗಳ ಚರ್ಚೆಗೆ ಅವಕಾಶ ನೀಡಲು ಸಿದ್ಧನಿದ್ದೇನೆ' ಎಂದು ಭರವಸೆ ನೀಡಿದರು.

'ಪ್ರಶ್ನೋತ್ತರ ಅವಧಿಯ ನಂತರ ಎಲ್ಲ ವಿಷಯಗಳನ್ನು ಪ್ರಸ್ತಾಪಿಸಲು ನಿಮಗೆ ಅವಕಾಶ ನೀಡುತ್ತೇನೆ. ಸದನವು ನಿಯಮಗಳ ಪ್ರಕಾರ ಕಾರ್ಯನಿರ್ವಹಿಸುತ್ತದೆ. ಘೋಷಣೆಗಳನ್ನು ಕೂಗುವುದಕ್ಕೆ ಮತ್ತು ಫಲಕಗಳನ್ನು ಹಿಡಿಯುವುದಕ್ಕೆ ನಾನು ಅನುಮತಿ ನೀಡುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ನಾವು ಉನ್ನತ ಸಂಸದೀಯ ಗುಣಮಟ್ಟ ಕಾಯ್ದುಕೊಳ್ಳಲು ಪ್ರಯತ್ನಿಸಬೇಕು. ನಮ್ಮನ್ನು ಆಯ್ಕೆ ಮಾಡಿದ ಜನರ ಆಶಯಗಳು ಮತ್ತು ನಿರೀಕ್ಷೆಗಳನ್ನು ಈಡೇರಿಸಲು ಹಾಗೂ ದೇಶದ ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸಲು ಪ್ರಯತ್ನಿಸಬೇಕು' ಎಂದು ಅವರು ಸಲಹೆ ನೀಡಿದರು. ಘೋಷಣೆಗಳನ್ನು ಕೂಗುವವರು ಸದನದಿಂದ ಹೊರಹೋಗಬಹುದು ಎಂದರು.

'ಭಯೋತ್ಪಾದಕರ ದಾಳಿ ಹಾಗೂ ಸಿಂಧೂರ ಕಾರ್ಯಾಚರಣೆ ಬಗ್ಗೆ ಚರ್ಚೆಗೆ ಸರ್ಕಾರ ಸಿದ್ಧವಿದೆ. ವಿಪಕ್ಷಗಳ ಸದಸ್ಯರು ಸದನದಲ್ಲಿ ಗದ್ದಲ ಎಬ್ಬಿಸದೆ ಕಲಾಪ ನಡೆಸಲು ಸಹಕಾರ ನೀಡಬೇಕು' ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಹಾಗೂ ರಕ್ಷಣಾ ಸಚಿವ ರಾಜನಾಥ ಸಿಂಗ್ ಮನವಿ ಮಾಡಿದರು.

'ವಿರೋಧ ಪಕ್ಷಗಳು ಬಯಸುವ ಯಾವುದೇ ವಿಷಯ ಚರ್ಚಿಸಲು ಸರ್ಕಾರ ಸಿದ್ಧವಾಗಿದೆ. ಅವರು ಎಷ್ಟು ಸಮಯ ಬೇಕಾದರೂ ಚರ್ಚಿಸಬಹುದು' ಎಂದು ರಾಜನಾಥ ಸಿಂಗ್ ಹೇಳಿದರು. 'ಸೋಮವಾರ ಮಧ್ಯಾಹ್ನ 2.30ಕ್ಕೆ ನಿಗದಿಯಾಗಿರುವ ಕಲಾಪ ಸಲಹಾ ಸಮಿತಿ ಸಭೆಯಲ್ಲಿ ವಿರೋಧ ಪಕ್ಷಗಳ ಸದಸ್ಯರು ಈ ಬಗ್ಗೆ ಪ್ರಸ್ತಾಪಿಸಲಿ' ಎಂದರು. ಅಧಿವೇಶನದ ಮೊದಲ ದಿನವೇ ಕಲಾಪಕ್ಕೆ ಅಡ್ಡಿ ಪಡಿಸುವುದು ಸರಿಯಲ್ಲ ಎಂದು ಕಿವಿಮಾತು ಹೇಳಿದರು.

ವಿಪಕ್ಷಗಳ ಸದಸ್ಯರು ಲೋಕಸಭಾಧ್ಯಕ್ಷರ ಪೀಠದ ಎದುರು ನಿಂತು ಘೋಷಣೆಗಳನ್ನು ಕೂಗಿದರು. ನಂತರ ಕಲಾಪವನ್ನು ಮಧ್ಯಾಹ್ನ 12ಕ್ಕೆ ಮುಂದೂಡಲಾಯಿತು. ಆಗಲೂ ವಿಪಕ್ಷಗಳ ಸದಸ್ಯರು ಧರಣಿ ಮುಂದುವರಿಸಿದರು. ಸಭಾಧ್ಯಕ್ಷರ ಪೀಠದಲ್ಲಿದ್ದ ಜಗದಾಂಬಿಕಾ ಪಾಲ್, 'ವಿಪಕ್ಷಗಳ ಸದಸ್ಯರು ಧರಣಿ ಕೈಬಿಡಬೇಕು' ಎಂದು ವಿನಂತಿಸಿದರು. ಇದಕ್ಕೆ ಸದಸ್ಯರು ಒಪ್ಪಲಿಲ್ಲ. 'ದೇಶದ ಜನರು ಕಲಾಪ ವೀಕ್ಷಿಸುತ್ತಿದ್ದಾರೆ. ಈ ವಿಷಯದ ಬಗ್ಗೆ ಸಮಗ್ರ ಚರ್ಚೆಗೆ ಸಿದ್ಧವಿದ್ದರೂ ಸದಸ್ಯರು ಧರಣಿ ನಡೆಸುತ್ತಿರುವುದು ಸರಿಯಲ್ಲ' ಎಂದು ಪಾಲ್ ಹೇಳಿದರು. ಬಳಿಕ ಕಲಾಪವನ್ನು ಮಧ್ಯಾಹ್ನ 2 ಕ್ಕೆ ಮುಂದೂಡಿದರು. ಕಲಾಪ ಪುನರಾರಂಭ ಆಗುತ್ತಿದ್ದಂತೆ ವಿರೋಧ ಪಕ್ಷಗಳ ಸದಸ್ಯರು ಘೋಷಣೆಗಳನ್ನು ಕೂಗಿದರು. ಸಂಜೆ 4ಕ್ಕೆ ಕಲಾಪ ಮುಂದೂಡಲಾಯಿತು.

ಕಲಾಪ ಆರಂಭವಾಗುತ್ತಿದ್ದಂತೆ ಸಭಾಧ್ಯಕ್ಷರ ಪೀಠದಲ್ಲಿದ್ದ ದಿಲೀಪ್ ಸೈಕಿಯಾ, 'ಗೋವಾ ವಿಧಾನಸಭಾ ಸ್ಥಾನಗಳ ಕುರಿತ ಮಸೂದೆ ಮಂಡನೆಗೆ ಅವಕಾಶ ನೀಡಬೇಕು' ಎಂದು ಮನವಿ ಮಾಡಿದರು. ವಿಪಕ್ಷಗಳ ಸದಸ್ಯರು ಗದ್ದಲ ಮುಂದುವರಿಸಿದ್ದರಿಂದ ಕಲಾಪವನ್ನು ಮಂಗಳವಾರ ಬೆಳಿಗ್ಗೆ 11ಕ್ಕೆ ಮುಂದೂಡಿದರು.



ಪ್ರಧಾನಿ ಮೋದಿ ಅವರು ಸಂಸತ್ ಕಲಾಪಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದರು. ಕೇಂದ್ರದ ಸಚಿವರು ಜೊತೆಗಿದ್ದರು – ಪಿಟಿಐ ಚಿತ್ರ

'ಅಧಿವೇಶನ ವಿಜಯೋತ್ಸವದಂತಿದೆ'

'ಸಂಸತ್ತಿನ ಮಳೆಗಾಲದ ಅಧಿವೇಶನವು ವಿಜಯೋತ್ಸವದಂತಿದೆ. ಭಾರತದ ಸಶಸ್ತ್ರ ಪಡೆಗಳು ಆಪರೇಷನ್ ಸಿಂಧೂರ ಕಾರ್ಯಾಚರಣೆಯ ಸಂದರ್ಭದಲ್ಲಿ ಶೇ 100 ಗುರಿ ಸಾಧಿಸಿವೆ. ಇದರಿಂದಾಗಿ, ಸ್ವದೇಶಿ ನಿರ್ಮಿತ ಮಿಲಿಟರಿ ಉಪಕರಣಗಳ ಬಗ್ಗೆ ಜಾಗತಿಕ ಮಟ್ಟದಲ್ಲಿ ಆಸಕ್ತಿ ವ್ಯಕ್ತವಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಸಂಸತ್ ಅಧಿವೇಶನಕ್ಕೆ ಮುನ್ನ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಈ ಅಧಿವೇಶನವು ದೇಶಕ್ಕೆ ಬಹಳ ಹೆಮ್ಮೆಯ ಅಧಿವೇಶನವಾಗಿದೆ. ಇದು ರಾಷ್ಟ್ರಕ್ಕೆ 'ವಿಜಯ ಉತ್ಸವ'ದಂತಿದೆ. ನಮ್ಮ ಸಶಸ್ತ್ರ ಪಡೆಗಳ ಸಾಮರ್ಥ್ಯವನ್ನು ಜಗತ್ತು ಕಂಡಿತು. 22 ನಿಮಿಷಗಳಲ್ಲೇ ಭಯೋತ್ಪಾದಕರ ನೆಲೆಗಳನ್ನು ನಾಶ ಮಾಡಿದವು' ಎಂದರು.

'ಈ ಅಧಿವೇಶನದಲ್ಲಿ ಸಂಸದರು ಒಂದೇ ಧ್ವನಿಯಲ್ಲಿ ವಿಜಯದ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ. ಇದು ನಮ್ಮ ಸಶಸ್ತ್ರ ಪಡೆಗಳನ್ನು ಮತ್ತಷ್ಟು ಬಲಪಡಿಸುತ್ತದೆ ಮತ್ತು ಪ್ರೇರೇಪಿಸುತ್ತದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಇದರಿಂದ ರಕ್ಷಣಾ ವಲಯದಲ್ಲಿ ಸಂಶೋಧನೆ, ಆವಿಷ್ಕಾರ ಮತ್ತು ಉತ್ಪಾದನೆಗೆ ಉತ್ತೇಜನ ನೀಡುತ್ತದೆ. 'ಭಾರತದಲ್ಲಿ ತಯಾರಿಸಲಾದ ರಕ್ಷಣಾ ಉಪಕರಣಗಳಿಗೆ ಬೇಡಿಕೆ ಹೆಚ್ಚುತ್ತದೆ. ನಮ್ಮ ಯುವಕರಿಗೆ ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ' ಎಂದು ಅವರು ಹೇಳಿದರು.

16 ಗಂಟೆ ಚರ್ಚೆಗೆ ಒಪ್ಪಿದ ಸರ್ಕಾರ

'ಆಪರೇಷನ್ ಸಿಂಧೂರ' ಮತ್ತು ಪಹಲ್ಗಾಮ್ ಭಯೋತ್ಪಾದಕ ದಾಳಿಯ ಕುರಿತು ಲೋಕಸಭೆಯಲ್ಲಿ 16 ಗಂಟೆಗಳ ಚರ್ಚೆಗೆ ಕೇಂದ್ರ ಸರ್ಕಾರ ಸೋಮವಾರ ಒಪ್ಪಿಕೊಂಡಿದ್ದು, ಮುಂದಿನ ವಾರ ಚರ್ಚೆಗೆ ಬರುವ ಸಾಧ್ಯತೆಯಿದೆ.

ಸೋಮವಾರ ನಡೆದ ಕಲಾಪ ವ್ಯವಹಾರ ಸಲಹಾ ಸಮಿತಿಯಲ್ಲಿ, 'ಚರ್ಚೆ ಈ ವಾರವೇ ಆರಂಭವಾಗಬೇಕು ಹಾಗೂ ಪ್ರಧಾನಿ ನರೇಂದ್ರ ಮೋದಿ ಉತ್ತರಿಸಬೇಕು' ಎಂದು ವಿಪಕ್ಷಗಳ ನಾಯಕರು ಒತ್ತಾಯಿಸಿದರು. 'ಮೋದಿ ಅವರು ಈ ವಾರ ವಿದೇಶ ಪ್ರವಾಸಕ್ಕೆ ತೆರಳುತ್ತಿದ್ದಾರೆ. ಹೀಗಾಗಿ, ಈ ವಾರ ಚರ್ಚೆ ನಡೆಸುವುದು ಅಸಾಧ್ಯ' ಎಂದು ಕೇಂದ್ರ ಸಚಿವರು ಸ್ಪಷ್ಟಪಡಿಸಿದರು. ಚರ್ಚೆ ಸಂದರ್ಭದಲ್ಲಿ ಗೃಹ ಹಾಗೂ ರಕ್ಷಣಾ ಸಚಿವರು ಸದನದಲ್ಲಿ ಇರಬೇಕು' ಎಂದು ವಿಪಕ್ಷಗಳ ಸದಸ್ಯರು ಆಗ್ರಹಿಸಿದರು.

ಬಿಹಾರದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಮತ್ತು ಮಣಿಪುರದ ಪರಿಸ್ಥಿತಿಯ ಕುರಿತು ಚರ್ಚೆ ನಡೆಸಬೇಕು ಎಂದು ವಿಪಕ್ಷಗಳ ಕೆಲವು ಸದಸ್ಯರು ಒತ್ತಾಯಿಸಿದರು.

ಟ್ರಂಪ್ ಹೇಳಿಕೆ– ದೇಶಕ್ಕೆ ಮಾಡಿದ 'ಅವಮಾನ': ಖರ್ಗೆ

ನವದೆಹಲಿ (ಪಿಟಿಐ): ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷವನ್ನು ಕೊನೆಗೊಳಿಸಲು ತಾವು ಮಧ್ಯಸ್ಥಿಕೆ ವಹಿಸಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪದೇ ಪದೇ ಹೇಳಿಕೆ ನೀಡುತ್ತಿರುವುದು ದೇಶಕ್ಕೆ ಮಾಡಿದ 'ಅವಮಾನ' ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.



ಪಹಲ್ಗಾಮ್ ಭಯೋತ್ಪಾದಕ ದಾಳಿ ಮತ್ತು ಆಪರೇಷನ್ ಸಿಂಧೂರ ಸಂದರ್ಭದಲ್ಲಿ ಟ್ರಂಪ್ ನೀಡಿರುವ ಕದನ ವಿರಾಮದ ಹೇಳಿಕೆಗಳ ಬಗ್ಗೆ ತಾವು ಎತ್ತಿರುವ ಪ್ರಶ್ನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಉತ್ತರಿಸಬೇಕು ಎಂದು ಖರ್ಗೆ ಮತ್ತು ಕಾಂಗ್ರೆಸ್ ಪಕ್ಷದ ಇತರ ಸದಸ್ಯರು ಸೋಮವಾರ ಒತ್ತಾಯಿಸಿದರು.

ಮುಂಗಾರು ಅಧಿವೇಶನದ ಮೊದಲ ದಿನ ರಾಜ್ಯಸಭೆಯಲ್ಲಿ ಪ್ರತಿಪಕ್ಷಗಳ ಸದಸ್ಯರು, ತಾವು ಮುಂದಿಟ್ಟಿರುವ ವಿಷಯಗಳ ಬಗ್ಗೆ ತಕ್ಷಣ ಚರ್ಚೆಗೆ ಅವಕಾಶ ನೀಡಬೇಕೆಂದು ಆಗ್ರಹಿಸಿ ಗದ್ದಲ ಎಬ್ಬಿಸಿದ್ದರಿಂದ ಕಲಾಪವನ್ನು ಕೆಲಕಾಲ ಮುಂದೂಡಲಾಯಿತು.

ಪಹಲ್ಗಾಮ್ ಭಯೋತ್ಪಾದಕ ದಾಳಿ ಮತ್ತು ಆಪರೇಷನ್ ಸಿಂಧೂರ ಕುರಿತು ಚರ್ಚೆ ಕೈಗೆತ್ತಿಕೊಳ್ಳಲು ಖರ್ಗೆ ಹಾಗೂ ವಿರೋಧ ಪಕ್ಷಗಳ ಹಲವು ಸದಸ್ಯರು ನಿಯಮ 267ರ ಅಡಿಯಲ್ಲಿ ನೋಟಿಸ್ ಸಲ್ಲಿಸಿದ್ದರು.

ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಖರ್ಗೆ, ವಿರೋಧ ಪಕ್ಷಗಳು ಎತ್ತಿರುವ ಪ್ರಮುಖ ವಿಷಯಗಳ ಬಗ್ಗೆ ಎರಡು ದಿನಗಳ ಚರ್ಚೆಗೆ ಅವಕಾಶ ನೀಡಬೇಕು ಎಂದು ಆಗ್ರಹಿಸಿದರು.

ಪಹಲ್ಗಾಮ್ ದಾಳಿ ಏಪ್ರಿಲ್ 22ರಂದು ನಡೆದಿತ್ತು ಎಂಬುದನ್ನು ನೆನಪಿಸಿದ ಅವರು, ದಾಳಿ ನಡೆಸಿದ ಉಗ್ರರನ್ನು ಇದುವರೆಗೂ ಬಂಧಿಸಲು ಅಥವಾ ಹತ್ಯೆ ಮಾಡಲು ಸಾಧ್ಯವಾಗಿಲ್ಲ ಎಂದು ಸರ್ಕಾರದ ವಿರುದ್ಧ ಕಿಡಿಕಾರಿದರು.

ಖರ್ಗೆ ಮುಂದಿಟ್ಟ ಬೇಡಿಕೆಗಳಿಗೆ ಪ್ರತಿಕ್ರಿಯಿಸಿದ ಸದನದ ನಾಯಕ ಜೆ.ಪಿ ನಡ್ಡಾ, 'ಆಪರೇಷನ್ ಸಿಂಧೂರಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಚರ್ಚಿಸಲು ಸರ್ಕಾರ ಸಿದ್ಧ' ಎಂದು ಭರವಸೆ ನೀಡಿದರು.

ಈ ವಿಷಯಗಳ ಕುರಿತು ಪೂರ್ಣ ಪ್ರಮಾಣದ ಚರ್ಚೆಗೆ ಅವಕಾಶ ನೀಡುವುದಾಗಿ ಸಭಾಪತಿ ಜಗದೀಪ್ ಧನಕರ್ ಅವರು ವಿರೋಧ ಪಕ್ಷಗಳ ಸದಸ್ಯರಿಗೆ ಭರವಸೆ ನೀಡಿದರು.

ಆದರೆ, ಮಧ್ಯಾಹ್ನ 12ಕ್ಕೆ ಕಲಾಪ ಮತ್ತೆ ಆರಂಭವಾದಾಗಲೂ ಚರ್ಚೆಗೆ ಪಟ್ಟುಹಿಡಿದ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು.

ದ್ವೇಷ ಸಹಿಸಲಾಗದು: ಧನಕರ್

'ಅಭಿವೃದ್ಧಿ ಹೊಂದುತ್ತಿರುವ ಪ್ರಜಾಪ್ರಭುತ್ವವು ನಿರಂತರವಾಗಿ ರಾಜಕೀಯ ದ್ವೇಷವನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ' ಎಂದು ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್ ಹೇಳಿದರು.

ಸಂಘರ್ಷವಿಲ್ಲದ ಸಂವಾದ ಮತ್ತು ಚರ್ಚೆಯೇ ನಮ್ಮ ಮುಂದಿರುವ ದಾರಿ ಎಂದು ಹೇಳಿದ ಅವರು, ದೇಶದ ಅಭಿವೃದ್ಧಿಯ ನಿಟ್ಟಿನಲ್ಲಿ ರಚನಾತ್ಮಕ ರಾಜಕೀಯದಲ್ಲಿ ತೊಡಗಿಸಿಕೊಳ್ಳುವಂತೆ ರಾಜಕೀಯ ಪಕ್ಷಗಳಿಗೆ ಮನವಿ ಮಾಡಿದರು.

ಆಂತರಿಕ ಕಚ್ಚಾಟವು ನಮ್ಮ ಶತ್ರುಗಳಿಗೆ ಇನ್ನಷ್ಟು ಬಲ ನೀಡುತ್ತದೆ ಮತ್ತು ನಮ್ಮನ್ನು ವಿಭಜಿಸಲು ಅವರಿಗೆ ನೆರವಾಗುತ್ತದೆ

ಜಗದೀಪ್ ಧನಕರ್, ರಾಜ್ಯಸಭಾ ಸಭಾಪತಿ

ಅಚ್ಯುತಾನಂದನ್ ನಿಧನ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ಮಾಜಿ ಮುಖ್ಯಮಂತ್ರಿ ಮತ್ತು ದೇಶದ ಅತ್ಯಂತ ಹಿರಿಯ ಸಿಪಿಎಂ ನಾಯಕ, ಶತಾಯುಷಿ ವಿ.ಎಸ್.ಅಚ್ಯುತಾನಂದನ್ ಅವರು ಸೋಮವಾರ ನಿಧನರಾದರು. ಅವರಿಗೆ 101 ವರ್ಷ ವಯಸ್ಸಾಗಿತ್ತು.

ಕೆಲ ವರ್ಷಗಳಿಂದ ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದ ಅವರು, ಸಕ್ರಿಯ ರಾಜಕೀಯದಿಂದ ದೂರವಿದ್ದರು. ಜೂನ್ 23ರಂದು ಅವರಿಗೆ ಹೃದಯಾಘಾತವಾಗಿತ್ತು. ಅವರನ್ನು ತಿರುವನಂತರಪುರದ ಖಾಸಗಿ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಜೀವರಕ್ಷಕ ವ್ಯವಸ್ಥೆಯಲ್ಲಿಟ್ಟು ಆರೈಕೆ ಮಾಡಲಾಗುತ್ತಿತ್ತು. ಸೋಮವಾರ ಮಧ್ಯಾಹ್ನ ನಿಧನರಾದರು.

ಮೃತರಿಗೆ ಪತ್ನಿ ಕೆ. ವಸುಮತಿ, ಮಗಳು ವಿ.ವಿ.ಆಶಾ ಮತ್ತು ಮಗ ವಿ.ಎ.ಅರುಣ್ ಕುಮಾರ್ ಇದ್ದಾರೆ. ಅವಿಭಜಿತ ಕಮ್ಯುನಿಸ್ಟ್ ಪಕ್ಷದಿಂದ ಹೊರಬಂದು 1964ರಲ್ಲಿ ಸಿಪಿಎಂ ಸ್ಥಾಪಿಸಿದ 32 ಜನರಲ್ಲಿ ಅವರೂ ಒಬ್ಬರು.

ರಾಜಕೀಯ ಜೀವನ: ವಿ.ಎಸ್. ಎಂದೇ ಜನಪ್ರಿಯರಾಗಿದ್ದ ಅವರು, 2006ರಿಂದ 2011ರವರೆಗೆ ಕೇರಳದ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ್ದರು. 1992–1996, 2001ರಿಂದ 2006 ಮತ್ತು 2011ರಿಂದ 2016ರವರೆಗೂ ಅವರು ವಿರೋಧ ಪಕ್ಷದ ನಾಯಕರಾಗಿದ್ದರು. 1980ರಿಂದ 1992ರವರೆಗೆ ಅವರು ಸಿಪಿಎಂ ರಾಜ್ಯ ಮಂಡಳಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು. ತಮ್ಮ ರಾಜಕೀಯ ಜೀವನದಲ್ಲಿ ಎದುರಿಸಿದ 10 ಚುನಾವಣೆಗಳ ಪೈಕಿ ಅವರು ಕೇವಲ ಮೂರರಲ್ಲಿ ಸೋತಿದ್ದರು.

ಅಲಪ್ಪುಳ ಜಿಲ್ಲೆಯ ಪುನ್ನಪ್ರಾದಲ್ಲಿ 1923ರ ಅಕ್ಟೋಬರ್ 20ರಂದು ಅಚ್ಯುತಾನಂದನ್ ಜನಿಸಿದರು. ತಂದೆ ಶಂಕರನ್ ಮತ್ತು ತಾಯಿ ಅಕ್ಕಮ್ಮ ಅವರನ್ನು ಚಿಕ್ಕ ವಯಸ್ಸಿನಲ್ಲಿಯೇ ಅವರು ಕಳೆದುಕೊಂಡರು. ಏಳನೇ ತರಗತಿಯಲ್ಲಿದ್ದಾಗ ಅಧ್ಯಯನ ತ್ಯಜಿಸಿ ಅಣ್ಣನೊಂದಿಗೆ ಟೈಲರಿಂಗ್ ಅಂಗಡಿಯಲ್ಲಿ ಕೆಲಸ ಆರಂಭಿಸಿದರು.



ಬಳಿಕ ಕಾರ್ಮಿಕ ಸಂಘದ ಚಟುವಟಿಕೆಗಳ ಮೂಲಕ ರಾಜಕೀಯ ಪ್ರವೇಶಿಸಿದರು. 1940ರಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಿದ ಅವರು, 1946ರಲ್ಲಿ ಬ್ರಿಟಿಷ್ ಪ್ರಭುತ್ವದ ವಿರುದ್ಧದ ಪ್ರಮುಖ ಕಮ್ಯುನಿಸ್ಟ್ ದಂಗೆಯಾದ ಪುನ್ನಪ್ರಾ–ವಯಲಾರ್ ಹೋರಾಟದಲ್ಲಿ ಪಾಲ್ಗೊಂಡಿದ್ದರು. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಕಾರ್ಮಿಕ ವರ್ಗದ ಆಂದೋಲನಗಳಿಗೆ ಸಂಬಂಧಿಸಿದಂತೆ ವಿ.ಎಸ್ ಅವರು ಹಲವು ಬಾರಿ ಜೈಲು ಸೇರಿದ್ದರು. ಅಲ್ಲದೆ ಸೆರೆವಾಸದಲ್ಲಿ ಚಿತ್ರಹಿಂಸೆಯನ್ನೂ ಅನುಭವಿಸಿದ್ದರು.

ನ್ಯಾ. ಯಶವಂತ್ ವರ್ಮಾ ಪದಚ್ಯುತಿಗೊಳಿಸುವ ಪ್ರಕ್ರಿಯೆಗೆ ಚಾಲನೆ

ಉಭಯ ಸದನಗಳಲ್ಲಿ ನೋಟಿಸ್ ಸಲ್ಲಿಕೆ

ನವದೆಹಲಿ (ಪಿಟಿಐ): ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರನ್ನು ಪದಚ್ಯುತಗೊಳಿಸುವುದಕ್ಕೆ ಸಂಬಂಧಿಸಿದ ನೋಟಿಸ್‌ಅನ್ನು ಸಂಸದರು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಸೋಮವಾರ ಸಲ್ಲಿಸಿದ್ದಾರೆ.



ಯಶವಂತ್ ವರ್ಮಾ

ನಿವಾಸದಲ್ಲಿ ನಗದು ಪತ್ತೆ ಪ್ರಕರಣದಲ್ಲಿ ವರ್ಮಾ ವಿರುದ್ಧದ ಆರೋಪಗಳು ಸಾಬೀತಾಗಿವೆ ಎಂದು ಸುಪ್ರೀಂ ಕೋರ್ಟ್ ನೇಮಿಸಿದ್ದ ವಿಚಾರಣಾ ಸಮಿತಿ ತಿಳಿಸಿತ್ತು. ಅವರನ್ನು ಪದಚ್ಯುತಗೊಳಿಸುವ ಪ್ರಕ್ರಿಯೆ ಆರಂಭಿಸುವಂತೆ ಸುಪ್ರೀಂ ಕೋರ್ಟ್‌ನ ಈ ಹಿಂದಿನ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಶಿಫಾರಸು ಮಾಡಿದ್ದರು.

ವಿವಾದ ಕೇಳಿಬಂದ ಬೆನ್ನಲ್ಲೇ ನ್ಯಾಯಮೂರ್ತಿ ವರ್ಮಾ ಅವರನ್ನು ದೆಹಲಿ ಹೈಕೋರ್ಟ್‌ನಿಂದ ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾವಣೆ ಮಾಡಲಾಗಿತ್ತು.

ಸಂವಿಧಾನದ 124, 217 ಮತ್ತು 218ನೇ ವಿಧಿಗಳ ಅಡಿಯಲ್ಲಿ ನ್ಯಾಯಮೂರ್ತಿ ವರ್ಮಾ ಅವರನ್ನು ಪದಚ್ಯುತಗೊಳಿಸುವಂತೆ ವಿವಿಧ ಪಕ್ಷಗಳ ನಿಯೋಗವು 145 ಸದಸ್ಯರ ಸಹಿಯನ್ನು ಒಳಗೊಂಡ ನೋಟಿಸ್‌ಅನ್ನು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರಿಗೆ ಸಲ್ಲಿಸಿದೆ.

ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್ ಅವರಿಗೂ ಇದೇ ರೀತಿಯ ನೋಟಿಸ್ ಸಲ್ಲಿಸಲಾಯಿತು. ಮೇಲ್ಮನೆಯ 63 ಸದಸ್ಯರು ನೋಟಿಸ್‌ಗೆ ಸಹಿ ಹಾಕಿದ್ದಾರೆ. ಲೋಕಸಭೆ ಸ್ಪೀಕರ್ ಮತ್ತು ರಾಜ್ಯಸಭಾ ಸಭಾಪತಿ ಅವರು ಈ ನೋಟಿಸ್‌ಅನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು.

ತುರ್ತು ವಿಚಾರಣೆಗೆ ಸುಪ್ರೀಂ ಕೋರ್ಟ್ ನಕಾರ

ನವದೆಹಲಿ (ಪಿಟಿಐ): ನಗದು ಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿ ಸಲ್ಲಿಸಲಾದ ಅರ್ಜಿಯನ್ನು ತುರ್ತು ವಿಚಾರಣೆಗೆ ಪಟ್ಟಿ ಮಾಡಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ವಕೀಲ ಮ್ಯಾಥ್ಯೂಸ್ ನೆಡುಂಬಾರ ಅವರು ಈ ವಿಷಯಕ್ಕೆ ಸಂಬಂಧಿಸಿದಂತೆ ಇದು ತಮ್ಮ ಮೂರನೇ ಅರ್ಜಿಯಾಗಿದ್ದು, ಅದನ್ನು ತುರ್ತಾಗಿ ವಿಚಾರಣೆಗೆ ಪಟ್ಟಿ ಮಾಡಬೇಕೆಂದು ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರನ್ನೊಳಗೊಂಡ ಪೀಠವನ್ನು ಒತ್ತಾಯಿಸಿದರು.

'ಈ ಅರ್ಜಿಯನ್ನು ಈಗಲೇ ವಜಾಗೊಳಿಸಲು ನೀವು ಬಯಸುತ್ತೀರಾ' ಎಂದು ಪ್ರಶ್ನಿಸಿದ ಸಿಜೆಐ, ಸೂಕ್ತ ಸಮಯದಲ್ಲಿ ವಿಚಾರಣೆಗೆ ಪಟ್ಟಿ ಮಾಡಲಾಗುವುದು ಎಂದು ಹೇಳಿದರು. 'ಅರ್ಜಿಯನ್ನು ವಜಾಗೊಳಿಸುವುದು ಅಸಾಧ್ಯ. ಈ ಪ್ರಕರಣದ ಎಫ್‌ಐಆರ್ ದಾಖಲಿಸಬೇಕಾಗಿದೆ. ಈಗ ವರ್ಮಾ ಕೂಡಾ ಅದನ್ನೇ ಕೇಳುತ್ತಿರುವಂತೆ ತೋರುತ್ತಿದೆ. ಎಫ್‌ಐಆರ್ ದಾಖಲಿಸಿ ತನಿಖೆ ನಡೆಯಬೇಕು' ಎಂದು ವಕೀಲರು ತಿಳಿಸಿದರು.


ವಕೀಲರು ಹೈಕೋರ್ಟ್ ನ್ಯಾಯಮೂರ್ತಿಯನ್ನು 'ವರ್ಮಾ' ಎಂದಷ್ಟೇ ಸಂಬೋಧಿಸಿರುವುದಕ್ಕೆ ಪೀಠ ತೀವ್ರ ಆಕ್ಷೇಪ ವ್ಯಕ್ತಪಡಿಸಿತು.

'ಅವರು (ವರ್ಮಾ) ನಿಮ್ಮ ಸ್ನೇಹಿತರೇ? ವರ್ಮಾ ಅವರು ಇನ್ನೂ ನ್ಯಾಯಮೂರ್ತಿ ಆಗಿದ್ದಾರೆ. ನೀವು ಅವರನ್ನು ಯಾವ ರೀತಿ ಸಂಬೋಧಿಸುತ್ತೀರಿ? ಶಿಷ್ಟಾಚಾರ ಪಾಲಿಸಿರಿ' ಎಂದು ಸಿಜೆಐ ಹೇಳಿದರು.

'ನ್ಯಾಯಮೂರ್ತಿ ಎಂಬ ಗೌರವದ ಸ್ಥಾನ ಅವರಿಗೆ ಅನ್ವಯಿಸಬಹುದು ಎಂದು ನಾನು ಭಾವಿಸುವುದಿಲ್ಲ. ಅರ್ಜಿಯನ್ನು ವಿಚಾರಣೆಗೆ ಪಟ್ಟಿ ಮಾಡಬೇಕು' ಎಂದು ವಕೀಲರು ಒತ್ತಾಯಿಸಿದರು. 'ದಯವಿಟ್ಟು ನ್ಯಾಯಾಲಯಕ್ಕೆ ಅಪ್ಪಣೆ ಮಾಡಬೇಡಿ' ಎಂದು ಸಿಜೆಐ ಹೇಳಿದರು.

ಮಹಾರಾಷ್ಟ್ರ: ಕೃಷಿ ಸಚಿವರ ರಾಜೀನಾಮೆಗೆ ಆಗ್ರಹ

ಮುಂಬೈ (ಪಿಟಿಐ): 'ಒಂದೆಡೆ ರಾಜ್ಯದಲ್ಲಿ ನಿತ್ಯ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೆ, ಇನ್ನೊಂದೆಡೆ ಕೃಷಿ ಸಚಿವರು ಅಧಿವೇಶನದಲ್ಲಿಯೇ ಮೊಬೈಲ್‌ನಲ್ಲಿ ಆನ್‌ಲೈನ್ ಆಟವಾಡುವುದರಲ್ಲಿ ತಲ್ಲೀನರಾಗಿದ್ದಾರೆ' ಎಂದು ಮಹಾರಾಷ್ಟ್ರದ ಕಾಂಗ್ರೆಸ್ ಅಧ್ಯಕ್ಷ ಹರ್ಷವರ್ಧನ ಸಪ್ಕಲ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಹರ್ಷವರ್ಧನ

'ಮಹಾರಾಷ್ಟ್ರದಲ್ಲಿ ನಿತ್ಯ ಆರು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆದರೆ ಇದನ್ನು ನಿರ್ಲಕ್ಷಿಸಿ, ಶಾಸನಭೆಯಲ್ಲಿ ಆನ್‌ಲೈನ್ ಆಟವಾಡುತ್ತಿದ್ದ ಕೃಷಿ ಸಚಿವ ಮಾಣಿಕರಾವ್ ಕೊಕಾಟೆ ಅವರನ್ನು ತಕ್ಷಣವೇ ಸಚಿವ ಸ್ಥಾನದಿಂದ ವಜಾಗೊಳಿಸಬೇಕು' ಎಂದು ಅವರು ಆಗ್ರಹಿಸಿದ್ದಾರೆ.

'ಕೃಷಿ ಸಚಿವರು ಹಿಂದೆ ರೈತರನ್ನು ಭಿಕ್ಷುಕರು ಎಂದು ಕರೆದು ಅವಮಾನಸಿದ್ದರು. ಅಲ್ಲದೆ ಸಾಲ ಮನ್ನಾದ ಮೊತ್ತವನ್ನು ರೈತರು ವಿವಾಹ ಕಾರ್ಯಗಳಿಗೆ ಖರ್ಚು ಮಾಡುತ್ತಾರೆ ಎಂದೂ ಜರೆದಿದ್ದರು. ಅಷ್ಟು ಸಾಲದು ಎಂಬಂತೆ ಈಗ ಶಾಸನಸಭೆ ಯಲ್ಲಿ ಆನ್‌ಲೈನ್ ಆಟದಲ್ಲಿ ತಲ್ಲೀನರಾಗಿದ್ದಾರೆ. ಇವರ ಈ ವರ್ತನೆಯನ್ನು ಪ್ರಶ್ನಿಸಿ, ಪ್ರತಿಭಟಿಸುವುದರಲ್ಲಿ ಏನು ತಪ್ಪಿದೆ' ಎಂದು ಸಪ್ಕಲ್ ಪ್ರಕಟಣೆಯಲ್ಲಿ ಪ್ರಶ್ನಿಸಿದ್ದಾರೆ.

'ರಾಜ್ಯದಲ್ಲಿ ಪ್ರಜಾಪ್ರಭುತ್ವ ಇಲ್ಲ, ಬದಲಿಗೆ ಗಲಭೆ ನಡೆಸುವ ಗುಂಪಿನ ಆಡಳಿತ ನಡೆಯುತ್ತಿದೆ. ಶಾಸಕರಷ್ಟೇ ಅಲ್ಲ ಸಚಿವರು ಮತ್ತು ಆ ಪಕ್ಷಗಳ ಪದಾಧಿಕಾರಿಗಳು ಸಹ ಅಹಂಕಾರದಿಂದ ನಡೆದುಕೊಳ್ಳುತ್ತಿದ್ದಾರೆ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿ ಗಮನ ಹರಿಸಿ, ಕ್ರಮ ತೆಗೆದುಕೊಳ್ಳುವ ಧೈರ್ಯ ತೋರಬೇಕು ಎಂದು ಅವರು ಹೇಳಿದ್ದಾರೆ.

ಏನಿದು ಪ್ರಕರಣ: ಕೃಷಿ ಸಚಿವ ಮಾಣಿಕರಾವ್ ಕೊಕಾಟೆ ಅವರು ಮುಂಗಾರು ಅಧಿವೇಶನದಲ್ಲಿ ಸದನದೊಳಗೆ ಕಲಾಪದ ಅವಧಿಯಲ್ಲಿ ಆನ್‌ಲೈನ್ ರಮ್ಮಿ ಆಡುತ್ತಿದ್ದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿತ್ತು. ಈ ಕುರಿತು ವಿವಿಧ ಪಕ್ಷಗಳ ನಾಯಕರು ಮತ್ತು ಸಾರ್ವಜನಿಕರಿಂದ ತೀವ್ರ ಟೀಕೆ ವ್ಯಕ್ತವಾಗಿತ್ತು. ಅದರ ಬೆನ್ನಲ್ಲೇ ಸ್ಪಷ್ಟನೆ ನೀಡಿದ್ದ ಕೊಕಟೆ ಅವರು, 'ತನ್ನ ಮೊಬೈಲ್‌ನಲ್ಲಿ ಇದ್ದಕ್ಕಿದ್ದಂತೆ ಆನ್‌ಲೈನ್ ಆಟವೊಂದು ಡೌನ್‌ಲೋಡ್ ಆಗುತ್ತಿತ್ತು. ಅದನ್ನು ತಡೆಯಲು ನಾನು ಪ್ರಯತ್ನಿಸುತ್ತಿದ್ದೆ' ಎಂದು ಹೇಳಿದ್ದರು.

ಉಪ ರಾಷ್ಟ್ರಪತಿ ಧನಕರ್ ರಾಜೀನಾಮೆ

ಒಂದನೇ ಪುಟದಿಂದ...

'ಪ್ರಧಾನ ಮಂತ್ರಿ ಮತ್ತು ಸಚಿವ ಸಂಪುಟದ ಎಲ್ಲ ಸದಸ್ಯರಿಗೆ ಹೃದಯಾಂತರಾಳದ ಕೃತಜ್ಞತೆ ಸಲ್ಲಿಸುತ್ತೇನೆ. ಪ್ರಧಾನ ಮಂತ್ರಿ ಅವರು ನೀಡಿರುವ ಸಹಕಾರ ಮತ್ತು ಬೆಂಬಲ ಅಮೂಲ್ಯವಾದುದು. ಅಧಿಕಾರದಲ್ಲಿದ್ದಾಗ ನಾನು ಬಹಳಷ್ಟು ಕಲಿತಿದ್ದೇನೆ' ಎಂದು ಪತ್ರದಲ್ಲಿ ಹೇಳಿದ್ದಾರೆ. 'ಸಂಸತ್ ಸದಸ್ಯರು ತೋರಿಸಿರುವ ಪ್ರೀತಿ, ಗೌರವ ಸದಾ ಕಾಲ ನನ್ನ ನೆನಪಿನಲ್ಲಿ ಉಳಿಯಲಿದೆ. ನಮ್ಮ ಮಹಾನ್ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಉಪ ರಾಷ್ಟ್ರಪತಿಯಾಗಿ ಗಳಿಸಿದ ಅನುಭವಗಳು ಮತ್ತು ಒಳನೋಟಗಳಿಗೆ ತುಂಬಾ ಕೃತಜ್ಞನಾಗಿದ್ದೇನೆ' ಎಂದಿದ್ದಾರೆ.

'ಭಾರತದ ಆರ್ಥಿಕ ಪ್ರಗತಿ ಮತ್ತು ಅಭೂತಪೂರ್ವ ಬೆಳವಣಿಗೆಗೆ ಸಾಕ್ಷಿಯಾಗಿರುವುದು ತೃಪ್ತಿ ನೀಡಿದೆ. ದೇಶದ ಪರಿವರ್ತನೆಯ ಈ ಯುಗದಲ್ಲಿ ಕರ್ತವ್ಯ ನಿರ್ವಹಿಸಿರುವುದು ನಿಜಕ್ಕೂ ಗೌರವ' ಎಂದಿದ್ದಾರೆ.

'ರಾಜೀನಾಮೆ ಮರುಪರಿಶೀಲಿಸಲಿ'

'ಜಗದೀಪ್ ಧನಕರ್ ಅವರು ತಮ್ಮ ನಿರ್ಧಾರವನ್ನು ಮರುಪರಿಶೀಲಿಸಬೇಕು ಮತ್ತು ರಾಜೀನಾಮೆ ವಾಪಸ್ ಪಡೆಯುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಧನಕರ್ ಅವರ ಮನವೊಲಿಸಬೇಕು' ಎಂದು ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಹೇಳಿದ್ದಾರೆ.

ಮುಂದಿನ ಉಪರಾಷ್ಟ್ರಪತಿ ಯಾರು?

ಜಗದೀಪ್ ಧನಕರ್ ರಾಜೀನಾಮೆಯಿಂದಾಗಿ ತೆರವಾಗುವ ಉಪರಾಷ್ಟ್ರಪತಿ ಹುದ್ದೆಗೆ ಯಾರು ಆಯ್ಕೆಯಾಗಲಿದ್ದಾರೆ ಎಂಬ ಚರ್ಚೆ ಆರಂಭವಾಗಿದೆ.

ರಾಜ್ಯಸಭಾ ಉಪ ಸಭಾಪತಿಯೂ ಆದ ಜನತಾದಳ (ಯುನೈಟೆಡ್) ಸಂಸದ ಹರಿವಂಶ್ ಅವರು 2020ರಿಂದ ಉಪ ಸಭಾಪತಿ ಸ್ಥಾನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸರ್ಕಾರದ ವಿಶ್ವಾಸವನ್ನು ಗಳಿಸಿದ್ದಾರೆ. ಈ ಕಾರಣಕ್ಕೆ ಅವರು ಸಂಭಾವ್ಯ ಅಭ್ಯರ್ಥಿಯಾಗಿದ್ದಾರೆ.

'ಮುಂದಿನ ಉಪರಾಷ್ಟ್ರಪತಿ ಅಭ್ಯರ್ಥಿ ಆಯ್ಕೆ ಪ್ರಕ್ರಿಯೆ ನಡೆದಿದೆ. ಉತ್ತಮ ಘನತೆಯುಳ್ಳ ಹಾಗೂ ವಿವಾದಾತ್ಮಕವಲ್ಲದ ವ್ಯಕ್ತಿಯನ್ನು ಪಕ್ಷವು ಆಯ್ಕೆ ಮಾಡಲಿದೆಯೆಂದು ನಂಬಿದ್ದೇನೆ' ಎಂದು ಬಿಜೆಪಿ ನಾಯಕರೊಬ್ಬರು ತಿಳಿಸಿದ್ದಾರೆ.

ಎಲ್ಲಾ 12 ಆರೋಪಿಗಳು ಖುಲಾಸೆ

ಒಂದನೇ ಪುಟದಿಂದ...

'ಈ ಪ್ರಕರಣದಲ್ಲಿ ಆರೋಪಿಗಳು ನೀಡಿದ ತಪ್ಪೊಪ್ಪಿಗೆ ಹೇಳಿಕೆಯು ಪರಿಪೂರ್ಣವಾಗಿಲ್ಲ. ಕೆಲವು ಭಾಗಗಳಲ್ಲಿ ಒಬ್ಬರ ತಪ್ಪೊಪ್ಪಿಗೆ ಹೇಳಿಕೆಯನ್ನೇ ಮತ್ತೊಬ್ಬರಿಗೂ ನಕಲು ಮಾಡಲಾಗಿದೆ. ತಪ್ಪೊಪ್ಪಿಗೆ ಹೇಳಿಕೆ ಪಡೆಯುವಾಗ ಚಿತ್ರಹಿಂಸೆ ನೀಡಲಾಗಿತ್ತು ಎಂದು ಆರೋಪಿಗಳು ಸಾಬೀತುಪಡಿಸಿದ್ದಾರೆ' ಎಂದು ಹೇಳಿದೆ.

'ಆರೋಪಿಗಳ ವಿರುದ್ಧ ಯಾವುದೇ ಪ್ರಕರಣಗಳು ಇಲ್ಲದಿದ್ದರೆ, ಎಲ್ಲರನ್ನೂ ಜೈಲಿನಿಂದ ಬಿಡುಗಡೆಗೊಳಿಸಬಹುದು' ಎಂದು ಹೈಕೋರ್ಟ್ ತಿಳಿಸಿದೆ.

ನ್ಯಾಯಾಲಯವು ತೀರ್ಪು ಪ್ರಕಟಿಸುತ್ತಿದ್ದಂತೆಯೇ, ಆರೋಪಿಗಳ ಪರ ವಾದ ಮಂಡಿಸಿದ್ದ ಯುಗ್ ಚೌಧರಿ, 'ನ್ಯಾಯಾಲಯದ ತೀರ್ಪಿನಿಂದ ನ್ಯಾಯ ಹಾಗೂ ಮಾನವೀಯತೆ ಮೇಲಿನ ನಂಬಿಕೆ ಪುನರ್ ಸ್ಥಾಪನೆಯಾಗಿದೆ. ತಾವು ಅಪರಾಧ ಮಾಡದಿದ್ದರೂ, 12 ಮಂದಿ 19 ವರ್ಷ ಜೈಲಿನಲ್ಲಿ ಕೊಳೆಯುವಂತಾಯಿತು' ಎಂದು ಹೇಳಿದ್ದಾರೆ. ಕೆಲ ಆರೋಪಿಗಳ ಪರ ಹಾಜರಾಗಿದ್ದ ಹಿರಿಯ ವಕೀಲ ಎಸ್. ಮುರಳೀಧರ್, 'ಭಯೋತ್ಪಾದನೆಗೆ ಸಂಬಂಧಿಸಿದ ಪ್ರಕರಣಗಳ ತನಿಖೆ ಮಾಡುವಾಗ ತನಿಖಾ ತಂಡವು 'ಕೋಮು ಪಕ್ಷಪಾತ'ವಾಗಿ ತನಿಖೆ ನಡೆಸಿತು' ಎಂದು ಆರೋಪಿಸಿದರು.

12 ಮಂದಿ ಆರೋಪಿಗಳ ಪೈಕಿ 5 ಮಂದಿಗೆ ಗಲ್ಲುಶಿಕ್ಷೆ, ಉಳಿದ ಏಳು ಮಂದಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತು. ಮರಣದಂಡನೆ ಶಿಕ್ಷೆಗೆ ಗುರಿಯಾಗಿದ್ದ ಕಮಲ್ ಅಹಮದ್ ಅನ್ಸಾರಿ 2021ರಲ್ಲಿ ಮೃತಪಟ್ಟಿದ್ದಾರೆ. 2006ರ ಜುಲೈ 11ರಂದು ಮುಂಬೈ ಲೋಕಲ್ ರೈಲುಗಳಲ್ಲಿ ವಿವಿಧೆಡೆ ನಡೆದ ಏಳು ಬಾಂಬ್ ಸ್ಫೋಟಗಳಲ್ಲಿ ಸ್ಥಳದಲ್ಲೇ 180 ಮಂದಿ ಮೃತಪಟ್ಟು, ನೂರಾರು ಮಂದಿ ಗಾಯಗೊಂಡಿದ್ದರು. ಚಿಕಿತ್ಸೆಗೆ ಸ್ಪಂದಿಸದೇ, 29 ಮಂದಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದರು.

11 ಪೀಠಗಳ ಎದುರು ಪ್ರಕರಣ ಮಂಡನೆಯಾದರೂ, 2015ರಿಂದಲೂ ಈ ಸಂಬಂಧ ಸಲ್ಲಿಸಿದ್ದ ಮೇಲ್ಮನವಿಯ ಅರ್ಜಿ ವಿಚಾರಣೆ ನಡೆದಿರಲಿಲ್ಲ. ಗಲ್ಲುಶಿಕ್ಷೆಗೆ ಗುರಿಯಾಗಿದ್ದ ಈತೇಶ್ಯಾಮ್ ಸಿದ್ದಿಕಿಯು ತ್ವರಿತ ವಿಚಾರಣೆ ನಡೆಸಲು ಹೈಕೋರ್ಟ್ ಮಧ್ಯಪ್ರವೇಶಿಸಬೇಕು ಎಂದು ಕೋರಿ ಮನವಿ ಸಲ್ಲಿಸಿದ್ದರು.

ಇದಾದ ನಂತರ ಮೇಲ್ಮನವಿ ಅರ್ಜಿಗಳ ವಿಚಾರಣೆಗೆ ನ್ಯಾಯಮೂರ್ತಿಗಳಾದ ಕಿಲೋರ್ ಹಾಗೂ ಚಾಂದಕ್ ಅವರ ನೇತೃತ್ವದಲ್ಲಿ ವಿಶೇಷ ನ್ಯಾಯಪೀಠ ರಚಿಸಲಾಗಿತ್ತು. ಜ.31ರಿಂದ ಐದು ತಿಂಗಳ ಕಾಲ ಈ ಪೀಠವು ದೈನಂದಿನ ಆಧಾರದಲ್ಲಿ ವಿಚಾರಣೆ ನಡೆಸಿ ತೀರ್ಪು ಕಾಯ್ದಿರಿಸಿತ್ತು.

ನ್ಯಾಯ ಕೊಲ್ಲಲ್ಪಟ್ಟಿದೆ: ಸಂತ್ರಸ್ತರ ಆಕ್ರೋಶ

ಮುಂಬೈ (ಪಿಟಿಐ): 'ಈ ದೇಶದ ಕಾನೂನು ನ್ಯಾಯನೀಡಲು ವಿಫಲವಾಗಿದ್ದು, ನ್ಯಾಯ ಕೊಲ್ಲಲ್ಪಟ್ಟಿದೆ' ಎಂದು ಸ್ಫೋಟದಲ್ಲಿ ಬದುಕುಳಿದ ಸಂತ್ರಸ್ತ ಚಿರಾಗ್ ಚೌಹಾಣ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. 'ಘಟನೆ ನಡೆದ ವೇಳೆ ನರೇಂದ್ರ ಮೋದಿ ಅವರು ಪ್ರಧಾನಿಯಾಗಿದ್ದರೆ, ಪರಿಸ್ಥಿತಿ ಬೇರೆಯಾಗಿರುತ್ತಿತ್ತು' ಎಂದು ಹೇಳಿದ್ದಾರೆ.

'ಸ್ಫೋಟದಲ್ಲಿ ಬದುಕಿ ಉಳಿದವರಲ್ಲಿ ನಾನೂ ಒಬ್ಬ. ವೈಯಕ್ತಿಕವಾಗಿ ಈ ಹಿಂದೆಯೇ ಭಯೋತ್ಪಾದಕರನ್ನು ಕ್ಷಮಿಸಿದ್ದೇನೆ. ಜೀವನ ಸಾಗಿಸುತ್ತಿದ್ದೇನೆ. ಆದರೆ, ಈ ನೆಲದ ಕಾನೂನು ಇಂದು ತಪ್ಪಿತಸ್ಥರನ್ನು ಶಿಕ್ಷಿಸುವಲ್ಲಿ, ಪ್ರಾಣ ಕಳೆದುಕೊಂಡಿದ್ದ 180ಕ್ಕೂ ಮಂದಿಗೆ ನ್ಯಾಯ ಒದಗಿಸುವಲ್ಲಿ ವಿಫಲವಾಗಿದೆ' ಎಂದು ಹೇಳಿದ್ದಾರೆ.

ಎಸ್‌ಐಟಿ: ಗೃಹ ಸಚಿವ ಜಿ.ಪರಮೇಶ್ವರ ಸ್ಪಷ್ಟನೆ

'ಯಾವ ಅಧಿಕಾರಿಗಳೂ ಹಿಂದೆ ಸರಿದಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಹಿಂದೆ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಪ್ರಕರಣಗಳ ಸಮಗ್ರ ತನಿಖೆಗೆ ರಚಿಸಿರುವ ವಿಶೇಷ ತನಿಖಾ ತಂಡದಿಂದ (ಎಸ್‌ಐಟಿ) ಯಾವ ಅಧಿಕಾರಿಗಳೂ ಹಿಂದೆ ಸರಿದಿಲ್ಲ' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.



ಪರಮೇಶ್ವರ

ಎಸ್‌ಐಟಿ ತಂಡದಿಂದ ಕೆಲವು ಅಧಿಕಾರಿಗಳು ವೈಯಕ್ತಿಕ ಕಾರಣಕ್ಕೆ ಹೊರಗುಳಿಯಲಿದ್ದಾರೆ ಎಂಬ ವದಂತಿಗಳ ಕುರಿತು ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಆ ರೀತಿಯ ಯಾವುದೇ ಬೆಳವಣಿಗೆ ನಡೆದಿಲ್ಲ. ತಂಡದಲ್ಲಿ ಇರುವವರು ಜವಾಬ್ದಾರಿಯುತ ಸ್ಥಾನದಲ್ಲಿರುವ ಹಿರಿಯ ಅಧಿಕಾರಿಗಳು. ಅವರು ತಮ್ಮ ಕೆಲಸವನ್ನು ಮಾಡುತ್ತಾರೆ. ತಾವು ಬರುವುದಿಲ್ಲ ಎಂದು ಅವರು ನನಗಾಗಲಿ, ಸರ್ಕಾರಕ್ಕಾಗಲಿ ಹೇಳಿಲ್ಲ' ಎಂದು ಸ್ಪಷ್ಟಪಡಿಸಿದರು.

ಮೊಹಾಂತಿ ಭೇಟಿ: ಸದಾಶಿವನಗರದಲ್ಲಿರುವ ಪರಮೇಶ್ವರ ಅವರ ನಿವಾಸಕ್ಕೆ ಸೋಮವಾರ ಬೆಳಿಗ್ಗೆ ತೆರಳಿದ ಎಸ್‌ಐಟಿ ಮುಖ್ಯಸ್ಥ ಪ್ರಣವ ಮೊಹಾಂತಿ ಅವರು ಕೆಲಹೊತ್ತು ಚರ್ಚೆ ನಡೆಸಿದರು. 'ಜವಾಬ್ದಾರಿಯಿಂದ ಪ್ರಕರಣಗಳ ತನಿಖೆ ಮಾಡುವುದಾಗಿ ಮೊಹಾಂತಿ ಹೇಳಿದ್ದಾರೆ' ಎಂದು ಪರಮೇಶ್ವರ ತಿಳಿಸಿದರು.

ಮಹಿಳೆಯರ ನಾಪತ್ತೆ ಪ್ರಕರಣ: ನಿಷ್ಪಕ್ಷಪಾತ ತನಿಖೆಗೆ ಆಗ್ರಹ

ಬೆಂಗಳೂರು: ಧರ್ಮಸ್ಥಳ ವ್ಯಾಪ್ತಿಯಲ್ಲಿ ನಾಪತ್ತೆ ಆಗಿರುವ ಮಹಿಳೆಯರು, ವಿದ್ಯಾರ್ಥಿನಿಯರು, ಅಸ್ವಾಭಾವಿಕ ಸಾವು, ಕೊಲೆ ಹಾಗೂ ಅತ್ಯಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಲು ರಾಜ್ಯ ಸರ್ಕಾರ ಎಸ್‌ಐಟಿ ರಚಿಸಿರುವುದು ಶ್ಲಾಘನೀಯ. ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು 'ನಾವೆದ್ದು ನಿಲ್ಲದಿದ್ದರೆ–ಕರ್ನಾಟಕ' ಸಂಘಟನೆ ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆಯ ಪದಾಧಿಕಾರಿಗಳಾದ ಕೆ.ಎಸ್. ವಿಮಲಾ, ಅಕ್ಕೈ ಪದ್ಮಶಾಲಿ, ಮೈತ್ರೇಯಿ ಕೃಷ್ಣನ್, ಮಲ್ಲಿಗೆ, 'ಎಸ್‌ಐಟಿ ತಂಡ ಯಾವುದೇ ರೀತಿಯ ಪ್ರಭಾವ, ಲಾಬಿಗೆ ಮಣಿಯದೇ ನಿಷ್ಪಕ್ಷಪಾತ ತನಿಖೆ ನಡೆಸಬೇಕು. ಈ ಭಾಗದಲ್ಲಿ ಅನೇಕ ಮಹಿಳೆಯರು ಹಾಗೂ ವಿದ್ಯಾರ್ಥಿನಿಯರನ್ನು ಅತ್ಯಾಚಾರ ಮಾಡಿ ಕೊಲೆ ಮಾಡಲಾಗಿದೆ ಎಂಬ ಆರೋಪಗಳಿವೆ. ಈ ಪ್ರಕರಣದಲ್ಲಿ ಭಾಗಿಯಾದವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಸಂತ್ರಸ್ತರಿಗೆ ನ್ಯಾಯ ಒದಗಿಸಬೇಕು' ಎಂದು ಆಗ್ರಹಿಸಿದರು.

'ಧರ್ಮಸ್ಥಳದ ಸುತ್ತಮುತ್ತ ನೂರಾರು ಶವಗಳನ್ನು ಹೂತಿರುವುದಾಗಿ ವ್ಯಕ್ತಿಯೊಬ್ಬರು ನ್ಯಾಯಾಲಯದಲ್ಲಿ ಹೇಳಿಕೆ ದಾಖಲಿಸಿದ್ದಾರೆ. ಆದ್ದರಿಂದ ಈ ವ್ಯಕ್ತಿಗೆ ಹಾಗೂ ಅವರ ಕುಟುಂಬಕ್ಕೆ ರಕ್ಷಣೆ ಒದಗಿಸಬೇಕು. ಸಾಕ್ಷಿದಾರನಾಗಿರುವ ಈ ವ್ಯಕ್ತಿಯು 1995ರಿಂದ 2014ರವರೆಗೆ ಧರ್ಮಸ್ಥಳದಲ್ಲಿ ನಡೆದಿರುವ ಭೀಕರ ಅಪರಾಧಗಳಿಗೆ ಸಾಕ್ಷಿಯಾಗಿದ್ದಾರೆ. ಕೊಲೆಯಾದ ಹೆಣ್ಣುಮಕ್ಕಳ ಕುಟುಂಬಸ್ಥರಿಗೂ ಸರ್ಕಾರ ಸೂಕ್ತ ರಕ್ಷಣೆ ನೀಡಬೇಕು' ಎಂದು ಒತ್ತಾಯಿಸಿದರು.

'ಧಾರ್ಮಿಕ ಸಂಸ್ಥೆಗಳ ದುರ್ಬಳಕೆಯನ್ನು ತಡೆಗಟ್ಟಬೇಕು. ಧರ್ಮಸ್ಥಳದ ದೇವಸ್ಥಾನದ ಆಡಳಿತವನ್ನು ಸರ್ಕಾರ ಮುಜರಾಯಿ ಇಲಾಖೆಯ ಸುಪರ್ದಿಗೆ ತೆಗೆದುಕೊಳ್ಳಬೇಕು' ಎಂದು ಆಗ್ರಹಿಸಿದರು.

ಕ್ಷೇತ್ರದ ಪಾವಿತ್ರ್ಯಕ್ಕೆ ಧಕ್ಕೆ ತರಬೇಡಿ

ಮಂಗಳೂರು: 'ಧರ್ಮಸ್ಥಳದಲ್ಲಿ ಹಿಂದೆ ನಡೆದಿವೆ ಎನ್ನಲಾದ ಪ್ರಕರಣಗಳ ತನಿಖೆಗೆ ಸರ್ಕಾರ ಎಸ್‌ಐಟಿ ರಚಿಸಿದೆ. ತನಿಖೆ ನಡೆದು, ಸತ್ಯ ಹೊರಬರುವ ಮುನ್ನವೇ, ಪೂರ್ವಗ್ರಹದ ಅಭಿಪ್ರಾಯ ನೀಡುವುದು ಸರಿಯಲ್ಲ' ಎಂದು ಸ್ಪೀಕರ್ ಯು.ಟಿ. ಖಾದರ್ ಹೇಳಿದರು.



ಖಾದರ್

'ತನಿಖೆಯಿಂದ ಸತ್ಯ ಬಹಿರಂಗಗೊಂಡು, ತಪ್ಪಿತಸ್ಥರ ಮೇಲೆ ಕಾನೂನು ಪ್ರಕಾರ ಕ್ರಮವಾಗುತ್ತದೆ. ಪವಿತ್ರ ಕ್ಷೇತ್ರಕ್ಕೆ ಧಕ್ಕೆ ತರುವ ಕೆಲಸ ಆಗಬಾರದು' ಎಂದರು. 'ಕ್ಷೇತ್ರ ಕಟ್ಟುವುದು ಸುಲಭವಲ್ಲ, ಅದರಿಂದ ಎಷ್ಟೋ ಜನರಿಗೆ ಪ್ರಯೋಜನವಿದೆ. ಕ್ಷೇತ್ರದ ವರ್ಚಸ್ಸಿಗೆ ಕಪ್ಪುಚುಕ್ಕೆ ತರಲು ಯತ್ನಿಸುವ ಮುನ್ನ ಆತ್ಮಾವಲೋಕನ ಮಾಡಿಕೊಳ್ಳಲಿ' ಎಂದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಮಾನವ ತಾನು ದೊಡ್ಡವನಾಗದೆ ತನ್ನ ದೇವರನ್ನು ದೊಡ್ಡದು ಮಾಡಲಾರ. –ಶಿವರಾಮ ಕಾರಂತ

ಸಂಪಾದಕೀಯ

ಕಾನೂನಿನ ಚೌಕಟ್ಟಿಗೆ 'ಬಿ ಖಾತಾ' ಪಾರದರ್ಶಕ ಅನುಷ್ಠಾನ ಅಗತ್ಯ

ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಇರುವ ಬಿ-ಖಾತಾ ಆಸ್ತಿಗಳನ್ನು ಕಾನೂನಿನ ಚೌಕಟ್ಟಿನ ಅಡಿ ತರುವ ರಾಜ್ಯ ಸರ್ಕಾರದ ನಡೆಯು ಪ್ರಗತಿಪರವಾದುದು ಎಂದು ಬಿಂಬಿಸಲಾಗುತ್ತಿದೆ. ಲಕ್ಷಾಂತರ ಸಂಖ್ಯೆಯಲ್ಲಿ ಇರುವ, ಕಾನೂನಿನ ನಿಯಂತ್ರಣಕ್ಕೆ ಒಳಪಟ್ಟಿರದ ಆಸ್ತಿಗಳ ವಿಚಾರದಲ್ಲಿ ಸ್ಪಷ್ಟತೆಯನ್ನು ತರಲು ಹಾಗೂ ಅವುಗಳ ಮೇಲೆ ಆಡಳಿತಾತ್ಮಕ ನಿಯಂತ್ರಣ ಸಾಧಿಸಲು ಇದು ಅಗತ್ಯವಾಗಿದ್ದ ಕ್ರಮ ಎಂದು ಹೇಳಲಾಗುತ್ತಿದೆ. ಆದರೆ, ಇಲ್ಲಿ ಕಟುಸತ್ಯವೊಂದನ್ನು ಹೇಳಬೇಕಾಗಿದೆ: ಬೇರೆ ಬೇರೆ ಪಕ್ಷಗಳ ನೇತೃತ್ವದ ಸರ್ಕಾರಗಳು ತಮ್ಮ ನಿಷ್ಕ್ರಿಯತೆಯ ಮೂಲಕ ಹಾಗೂ ಕಾನೂನು ಉಲ್ಲಂಘನೆಯಲ್ಲಿ ಕೈಜೋಡಿಸುವ ಮೂಲಕ ಈ ಗೋಜಲನ್ನು ಸೃಷ್ಟಿಸಿವೆ. ಕಂದಾಯ ಜಮೀನಿನಲ್ಲಿ ಕಟ್ಟಡಗಳು ನಿರ್ಮಾಣ ಆಗುತ್ತಿರುವುದರ ಬಗ್ಗೆ ಅಧಿಕಾರಿಗಳು ಕಣ್ಣುಮುಚ್ಚಿ ಕುಳಿತಿದ್ದರು. ಇಂತಹ ನಿರ್ಮಾಣಗಳಿಗೆ ಹಲವು ಸಂದರ್ಭಗಳಲ್ಲಿ ಸ್ಥಳೀಯ ಆಡಳಿತ ಸಂಸ್ಥೆಗಳ ಒಪ್ಪಿಗೆ ಇತ್ತು ಹಾಗೂ ರಾಜಕೀಯ ನಾಯಕರ ಆಶೀರ್ವಾದ ಕೂಡ ಇತ್ತು. ಅಗತ್ಯ ಅನುಮೋದನೆಗಳನ್ನು ಪಡೆದುಕೊಳ್ಳದ ಆಸ್ತಿಗಳನ್ನು ಕೂಡ ನೋಂದಣಿ ಮಾಡಿಸಿಕೊಳ್ಳಲಾಯಿತು, ಅವುಗಳಿಂದ ಮುದ್ರಾಂಕ ಶುಲ್ಕವನ್ನು ಸಂಗ್ರಹಿಸಲಾಯಿತು. ಹೀಗೆ ಮಾಡಿದ್ದರಿಂದಾಗಿ ಲಕ್ಷಾಂತರ ಮಂದಿಗೆ ತಾವು ಮಾಡಿರುವ ಆಸ್ತಿ ಖರೀದಿಗಳು ಸಕ್ರಮ ಎಂಬ ಭಾವನೆ ಮೂಡುವಂತೆ ಆಯಿತು. ಈಗ ಗೋಜಲುಗಳನ್ನೆಲ್ಲ ಸರಿಪಡಿಸುವುದಾಗಿ ಸರ್ಕಾರ ಹೇಳಿದೆ. ಈ ಪರಿಷ್ಕರಣೆಯನ್ನು ಬೆಂಗಳೂರಿಗೆ ಸೀಮಿತವಾಗಿ ಮಾಡಲು ಮುಂದಾಗಿದೆ. ಆದರೆ, ಸಂಬಂಧಪಟ್ಟ ಅಧಿಕಾರಿಗಳು ಪಂಚಾಯಿತಿ ವ್ಯಾಪ್ತಿಯಲ್ಲಿ ಅಕ್ರಮವಾಗಿ ನಿರ್ಮಿಸಲು ಅನುವು ಮಾಡಿಕೊಟ್ಟಿರುವ ಬಡಾವಣೆಗಳಲ್ಲಿ ಇರುವ ಲಕ್ಷಾಂತರ ಸಂಖ್ಯೆಯ ಆಸ್ತಿಗಳ ಕತೆ ಏನು? ಇಲ್ಲೆಲ್ಲ ಆಸ್ತಿ ಖರೀದಿಸಿದವರ ವಿಚಾರವಾಗಿ ಸರ್ಕಾರವು ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಬಹುದೇ?



ಬಿ–ಖಾತಾ ಆಸ್ತಿಗಳನ್ನು ಕಾನೂನಿನ ಚೌಕಟ್ಟಿಗೆ ತರುವ ಪ್ರಕ್ರಿಯೆ ಕಾನೂನಿಗೆ ಅನುಗುಣವಾಗಿ ಹಾಗೂ ಪಾರದರ್ಶಕವಾಗಿ ಅನುಷ್ಠಾನಕ್ಕೆ ಬರುವಂತೆ ಸರ್ಕಾರ ನೋಡಿಕೊಳ್ಳಬೇಕು.

ಸರ್ಕಾರವು ಈಗ ಪ್ರಸ್ತಾಪಿಸಿರುವ ಕಾನೂನಿನ ಚೌಕಟ್ಟು, ಬೆಂಗಳೂರಿನ ಬಿ–ಖಾತಾ ಆಸ್ತಿಗಳಿಗೆ ಕಾನೂನಿನ ಅಡಿ ಮಾನ್ಯತೆ ನೀಡುವಂತೆ ಇದೆ. ಇಂತಹ ಆಸ್ತಿಗಳ ಮಾಲೀಕರು ಕಟ್ಟಡ ಯೋಜನೆಗೆ ಅನುಮೋದನೆ ಪಡೆಯಬಹುದು, ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯಬಹುದು, ನಿರ್ದಿಷ್ಟ ಷರತ್ತುಗಳನ್ನು ಪೂರೈಸಿದರೆ ತಮ್ಮ ಆಸ್ತಿಗಳನ್ನು ಎ–ಖಾತಾ ಆಗಿ ಪರಿವರ್ತನೆ ಮಾಡಿಕೊಳ್ಳಬಹುದು. ಇದರಿಂದಾಗಿ ಆಸ್ತಿಗಳ ಮಾಲೀಕರಿಗೆ ಬ್ಯಾಂಕ್ ಸಾಲ ಸೌಲಭ್ಯ ಪಡೆಯಲು ಸಾಧ್ಯವಾಗುತ್ತದೆ, ಆಸ್ತಿಯನ್ನು ಬೇರೆಯವರಿಗೆ ವರ್ಗಾವಣೆ ಮಾಡಲು ಆಗುತ್ತದೆ. ಇಂತಹ ಅವಕಾಶಗಳು ಅವರಿಗೆ ಇದುವರೆಗೆ ಇರಲಿಲ್ಲ. ಹೀಗಿದ್ದರೂ ಸರ್ಕಾರದ ಈ ನೀತಿಯು ತೀರಾ ನ್ಯಾಯಸಮ್ಮತವಾಗಿದೆ ಎಂದು ಹೇಳಲಾಗುವುದಿಲ್ಲ. 'ಜಿಬಿಎ' ವ್ಯಾಪ್ತಿಯ ಆಚೆಗಿನ ಆಸ್ತಿಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಇರುವ ಮೂಲಕ ರಾಜ್ಯ ಸರ್ಕಾರವು ಬೇರೆಡೆಗಳಲ್ಲಿ ಆಸ್ತಿಗಳ ಮೇಲೆ ಸದಾಶಯದೊಂದಿಗೆ ಹೂಡಿಕೆ ಮಾಡಿದ ಮಧ್ಯಮ ವರ್ಗದವರನ್ನು ಶಿಕ್ಷಿಸುವ ಕೆಲಸ ಮಾಡುತ್ತಿದೆ. ಬೇರೆಡೆ ಆಸ್ತಿ ಖರೀದಿಸಿದವರು ಕೂಡ ದಾಖಲೆಗಳಲ್ಲಿ ಇರುವ ಸರ್ಕಾರದ ಮುದ್ರೆಯನ್ನು ಪರಿಗಣಿಸಿ, ಅದನ್ನು ನಂಬಿಯೇ ವಹಿವಾಟು ನಡೆಸಿದ್ದರು ಎಂಬುದನ್ನು ಮರೆಯಬಾರದು. ಅಲ್ಲದೆ, ಜೀವನಪರ್ಯಂತ ದುಡಿದು ಉಳಿಸಿದ ಹಣವನ್ನು ಬಳಸಿ ಆಸ್ತಿ ಖರೀದಿಸಿದವರಿಗೆ ಶಿಕ್ಷೆ ನೀಡಿ, ಕಾನೂನು ಉಲ್ಲಂಘನೆಯನ್ನು ಉತ್ತೇಜಿಸಿದ ಅಧಿಕಾರಿಗಳಿಗೆ ಶಿಕ್ಷೆ ಇಲ್ಲ ಎಂದು ಹೇಳುವುದು ನ್ಯಾಯದ ಅಣಕವಲ್ಲವೇ?

ಸರ್ಕಾರವು ತನ್ನ ಮಾತುಗಳಲ್ಲಿ 'ಸಕ್ರಮ' ಎಂಬ ಪದವನ್ನು ಬಳಕೆ ಮಾಡದೆ ಎಚ್ಚರಿಕೆಯ ನಡೆಯೊಂದನ್ನು ಇರಿಸಿರುವಂತಿದೆ. ಆದರೆ, ಪರಿಣಾಮದಲ್ಲಿ ಸರ್ಕಾರ ಮಾಡುತ್ತಿರುವುದು ಆಯ್ದ ಕೆಲವನ್ನು 'ಸಕ್ರಮ'ಗೊಳಿಸುವ ಕೆಲಸವನ್ನೇ. ನಿರ್ಮಾಣ ಚಟುವಟಿಕೆಗಳಲ್ಲಿ ಶಿಸ್ತನ್ನು ತರುವುದು, ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತರುವುದು ಸರ್ಕಾರದ ಇರಾದೆ ಆಗಿದ್ದರೆ, ರಾಜ್ಯದ ಎಲ್ಲೆಡೆ ಕಂದಾಯ ಜಮೀನಿನಲ್ಲಿ ಇರುವ ಬಡಾವಣೆಗಳಿಗೂ ಇದನ್ನು ವಿಸ್ತರಿಸಬೇಕು. ಅಕ್ರಮ ನಡೆಯುವಲ್ಲಿ ಸರ್ಕಾರದ ಅಧಿಕಾರಿಗಳ ಪಾತ್ರ ಎಲ್ಲೆಲ್ಲಿ ಇತ್ತೋ, ಅಲ್ಲೆಲ್ಲ ಈ ಸೌಲಭ್ಯ ಅನ್ವಯವಾಗಬೇಕು. ಆಸ್ತಿಯನ್ನು ಖರೀದಿಸಿ, ಕಾನೂನಿಗೆ ಅನುಗುಣವಾಗಿ ಅದನ್ನು ನೋಂದಣಿ ಮಾಡಿಸಿದವರು ಸಂಕಷ್ಟಕ್ಕೆ ಸಿಲುಕಬಾರದು. ಏಕೆಂದರೆ, ತಾನೇ ರೂಪಿಸಿದ ಕಾನೂನನ್ನು ಪಾಲಿಸದ ವ್ಯವಸ್ಥೆಯೊಂದರಿಂದ ತಪ್ಪುದಾರಿಗೆ ಎಳೆಯಲಾದ ನಾಗರಿಕರು ಅವರು. ಸರ್ಕಾರವು ಇಡೀ ಪ್ರಕ್ರಿಯೆಯನ್ನು ಔದಾರ್ಯದ ಕ್ರಮ ಎಂಬ ರೀತಿಯಲ್ಲಿ ಭಾವಿಸಬಾರದು. ಅದರ ಬದಲಿಗೆ, ವ್ಯವಸ್ಥೆಯಲ್ಲಿನ ವೈಫಲ್ಯವನ್ನು ಸರಿಪಡಿಸುವ ಹಾಗೂ ಸಾರ್ವಜನಿಕರಲ್ಲಿ ಮತ್ತೆ ವಿಶ್ವಾಸ ಮೂಡಿಸುವ ಕ್ರಮವನ್ನಾಗಿ ಇದನ್ನು ಕಾಣಬೇಕು. ಹೊಸ ಘೋಷಣೆಯು ಕಾನೂನಿಗೆ ಅನುಗುಣವಾಗಿ, ಪಾರದರ್ಶಕವಾಗಿ ಅನುಷ್ಠಾನಕ್ಕೆ ಬರುವಂತೆ ನೋಡಿಕೊಳ್ಳುವ ಹೊಣೆಯು ಈಗ ಸರ್ಕಾರದ ಮೇಲಿದೆ.

ಕೊಂಕು ಬೇಡ



ಯಾವುದೇ ಸರ್ಕಾರ ಜನಪರ ಹೋರಾಟಗಳಿಗೆ ಕಿಮ್ಮತ್ತು ಕೊಡದಿದ್ದಾಗ ಟೀಕಿಸುವುದು, ಕೊಟ್ಟಾಗ ಅಭಿನಂದಿಸುವುದೇ ಜನತಂತ್ರದ ನಿಜವಾದ ಸೊಬಗು. ಅದರಲ್ಲೂ ಕೊಂಕು ತೆಗೆಯುವುದು ಕೂಡದು.

ಸದಾನಂದ ಸಿ. ಗಂಗನಬೀಡು, ಪತ್ರಕರ್ತ, ಫೇಸ್‌ಬುಕ್‌ನಿಂದ

ಕಿಡಿನುಡಿ



ಬಿಜೆಪಿ ವರಿಷ್ಠರು, ವಿಪಕ್ಷಗಳನ್ನು ತೇಜೋವಧೆ ಮಾಡಲು ಜಾರಿ ನಿರ್ದೇಶನಾಲಯದಂತಹ ತನಿಖಾ ಸಂಸ್ಥೆಗಳನ್ನು ದಾಳವಾಗಿ ಬಳಸಿಕೊಳ್ಳುತ್ತಿರುವುದು ಸ್ಪಷ್ಟವಾಗಿದೆ. ಇಂತಹ ಹೀನ ರಾಜಕೀಯ ಕೃತ್ಯ ಮಾಡಿದ್ದಕ್ಕಾಗಿ ಅವರು ರಾಜ್ಯದ ಜನರ ಮುಂದೆ ಬಹಿರಂಗವಾಗಿ ಕ್ಷಮೆ ಯಾಚಿಸಬೇಕಿದೆ.

ಡಾ. ಎಚ್‌.ಸಿ. ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ

25 ವರ್ಷಗಳ ಹಿಂದೆ

ಶನಿವಾರ, 22-7-2000

- **ಹುಬ್ಬಳ್ಳಿಯಲ್ಲಿ ಹೈಕೋರ್ಟ್ ಪೀಠಕ್ಕೆ ಕೇಂದ್ರ ಒಪ್ಪಿಗೆ?**

ನವದೆಹಲಿ, ಜುಲೈ 21– ಹುಬ್ಬಳ್ಳಿ–ಧಾರವಾಡದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸಲು ಕೇಂದ್ರ ಸರ್ಕಾರ ತಾತ್ವಿಕ ಒಪ್ಪಿಗೆ ನೀಡುವ ಮೂಲಕ ಉತ್ತರ ಕರ್ನಾಟಕದ ಬಹುದಿನಗಳ ಬೇಡಿಕೆ ಈಡೇರುವ ದಿನಗಳು ಸಮೀಪಿಸುತ್ತಿರುವಂತೆ ಕಾಣುತ್ತಿದೆ.

ಕರ್ನಾಟಕ ಹೈಕೋರ್ಟಿನ ಪ್ರತ್ಯೇಕ ಪೀಠವನ್ನು ಹುಬ್ಬಳ್ಳಿ–ಧಾರವಾಡದಲ್ಲಿ ಸ್ಥಾಪಿಸುವ ಕುರಿತು ರಾಷ್ಟ್ರಪತಿಯವರ ಆದೇಶ 'ಅಂತಿಮ ಹಂತ'ದಲ್ಲಿದ್ದು, ಈ ಕುರಿತ ನಿರ್ಧಾರವನ್ನು ಸರ್ಕಾರ ಜುಲೈ 24ರಿಂದ ಪ್ರಾರಂಭವಾಗುವ ಲೋಕಸಭೆಯ ಮುಂಗಾರು ಅಧಿವೇಶನದಲ್ಲಿ ಪ್ರಕಟಿಸಲಿದೆ ಎಂದು ಮೂಲಗಳು ತಿಳಿಸಿವೆ.

- **ರಾಜ್ಯದಲ್ಲಿ ಹೆಲ್ಮೆಟ್ ಕಡ್ಡಾಯ ಇಲ್ಲ**

ಬೆಂಗಳೂರು, ಜುಲೈ 21– ದ್ವಿಚಕ್ರ ವಾಹನ ಸವಾರರಿಗೆ ಹೆಲ್ಮೆಟ್ (ಶಿರಸ್ತ್ರಾಣ) ಧರಿಸುವುದನ್ನು ಕಡ್ಡಾಯಗೊಳಿಸುವುದಿಲ್ಲ ಎಂದು ಸಾರಿಗೆ ಸಚಿವ ಸಿ.ಆರ್. ಸಗೀರ್ ಅಹಮದ್ ಇಂದು ಇಲ್ಲಿ ತಿಳಿಸಿದರು.

'ಈ ಹಿಂದೆ ಹೆಲ್ಮೆಟ್ ಕಡ್ಡಾಯದ ಬಗ್ಗೆ ಸರ್ಕಾರ ಚಿಂತನೆ ನಡೆಸಿತ್ತು. ಸಾರ್ವಜನಿಕರಿಂದ ವಿರೋಧ ಬಂದ ಹಿನ್ನೆಲೆಯಲ್ಲಿ ಈ ವಿಚಾರವನ್ನು ಕೈಬಿಡಲಾಗಿದೆ' ಎಂದರು.

75 ವರ್ಷಗಳ ಹಿಂದೆ

ಶನಿವಾರ, 22-7-1950

- **ಕ್ಷೌರಿಕರ ಮುಷ್ಕರ**

ಅಹಮದಾಬಾದ್, ಜುಲೈ 21– ಮೆಹ್ಸಾನ ಜಿಲ್ಲೆಯ ಕೊಳ್ವಾಡಾ ಎಂಬ ಊರಿನ ಜನರು ಆಯುಷ್ಕರ್ಮಕ್ಕೆ ಧಾನ್ಯ ಕೊಡುವುದಕ್ಕೆ ಬದಲು ಧನ ಕೊಡಲು ನಿರಾಕರಿಸಿದ್ದಕ್ಕೆ ಆ ಊರಿನ ಕ್ಷೌರಿಕರು ಒಂದು ತಿಂಗಳಿನಿಂದಲೂ ತಮ್ಮ ಉದ್ಯೋಗ ನಿಲ್ಲಿಸಿದ್ದಾರೆಂದು ವರದಿಯಾಗಿದೆ. ಅಕ್ಕಪಕ್ಕದ ಹಳ್ಳಿಯಲ್ಲಿರುವ ಕ್ಷೌರಿಕರು ಸಹ ತಮ್ಮ ಕಸುಬುದಾರರಿಗೆ ಬೆಂಬಲವಿತ್ತು ಆ ಹಳ್ಳಿಗರಿಗೆ ಆಯುಷ್ಕರ್ಮ ಮಾಡಿಲ್ಲವಂತೆ.

ಹಳ್ಳಿಗಾರರು ಬೇರೆ ಊರಿನಿಂದ ಕ್ಷೌರಿಕರನ್ನು ಕರೆಸುವುದಾಗಿ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ತಿಳಿಸಿರುವರಂತೆ.

125! ಅಂಕಗಳಷ್ಟೇ ಅಲ್ಲ, ಹೋರಾಟ



ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ಕರ್ನಾಟಕದ ಶಿಕ್ಷಣ ಕ್ಷೇತ್ರದಲ್ಲಿ ಕನ್ನಡದ ಸ್ಥಾನಮಾನ ಕುರಿತ ಚರ್ಚೆಗೆ ಕೊನೆ ಮೊದಲಿಲ್ಲ ಎಂಬಂತಾಗಿದೆ. ಇತ್ತೀಚೆಗೆ 'ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ'ಯು ಕನ್ನಡವೂ ಸೇರಿದಂತೆ ಪ್ರಥಮ ಭಾಷೆಗಳಿಗೆ ನಿಗದಿಯಾಗಿದ್ದ 125 ಅಂಕಗಳನ್ನು ಕೇಂದ್ರೀಯ ಪಠ್ಯಕ್ರಮಕ್ಕನುಗುಣವಾಗಿ 100 ಅಂಕಗಳಿಗೆ ಇಳಿಸಲು ನಿರ್ಧರಿಸಿದೆ. ಈ ನಿರ್ಧಾರವನ್ನು ನಾನು ವಿರೋಧಿಸಿ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಪತ್ರ ಬರೆದೆ. ಈ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಅವರ ಪ್ರತಿನಿಧಿಯಾಗಿ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯ ನಿರ್ದೇಶಕರು ನನ್ನಲ್ಲಿಗೆ ಬಂದು ಚರ್ಚಿಸಿದರು. ಇದೊಂದು ಸಕಾರಾತ್ಮಕ ಸ್ಪಂದನೆಯಾಗಿದ್ದರೂ, ಸರ್ಕಾರದ ಅಂತಿಮ ನಿರ್ಧಾರ ಪ್ರಕಟವಾಗಿಲ್ಲ.

ಕನ್ನಡವೂ ಸೇರಿದಂತೆ ಪ್ರಥಮ ಭಾಷೆಗಳಿಗೆ 125 ಅಂಕಗಳನ್ನು ನಿಗದಿ ಮಾಡಿದ್ದಕ್ಕೆ ದೊಡ್ಡ ಇತಿಹಾಸವಿದೆ. ಅದು ದೇವರಾಜ ಅರಸು ಅವರ ನೇತೃತ್ವದ ಸರ್ಕಾರವಿದ್ದ ಕಾಲಾವಧಿ. ಆಗ ಪ್ರೌಢಶಾಲೆಯ ಪಠ್ಯಕ್ರಮದಲ್ಲಿ ಕನ್ನಡದ ಜೊತೆಗೆ ನಮ್ಮ ರಾಜ್ಯದ ಭಾಷಿಕ ಅಲ್ಪಸಂಖ್ಯಾತರ ಭಾಷೆಗಳೂ ಪ್ರಥಮ ಭಾಷೆಯ ಪಟ್ಟಿಯಲ್ಲಿ ಇದ್ದವು. ಇದು ಎಲ್ಲ ರಾಜ್ಯಗಳಿಗೂ ಅನ್ವಯಿಸುವ ಸಹಜ ನಿಯಮವಾಗಿತ್ತು. ವಿಶೇಷವೆಂದರೆ, ನಮ್ಮ ರಾಜ್ಯದಲ್ಲಿ ಜನಬಳಕೆಯಲ್ಲಿ ಇಲ್ಲದ, ಸಂಸ್ಕೃತವೂ ಪ್ರಥಮ ಭಾಷೆಯ ಪಟ್ಟಿಯಲ್ಲಿತ್ತು. ಪ್ರೌಢಶಾಲೆಯಲ್ಲಿ ಸಂಸ್ಕೃತವನ್ನು ಅಕ್ಷರಾಭ್ಯಾಸದಿಂದಲೇ ಕಲಿಸಬೇಕಾದ ಅನಿವಾರ್ಯವಿತ್ತು. ಯಾಕೆಂದರೆ, ಏಳನೇ ತರಗತಿಯವರೆಗೆ ಶಾಲಾ ಪಠ್ಯಕ್ರಮದಲ್ಲಿ ಸಂಸ್ಕೃತಾಭ್ಯಾಸಕ್ಕೆ ಅವಕಾಶವಿರಲಿಲ್ಲ.

ಹೀಗಾಗಿ, ಪ್ರೌಢಶಾಲಾ ಹಂತದ ಸಂಸ್ಕೃತ ಪಠ್ಯಗಳು ತೀರಾ ಸರಳವಾಗಿದ್ದವು. ಅಲ್ಲದೆ ಪರೀಕ್ಷೆಯಲ್ಲಿ ಆಯಾ ಭಾಷೆಯಲ್ಲೇ ಉತ್ತರ ಬರೆಯಬೇಕೆಂಬ ಕಡ್ಡಾಯ ನಿಯಮವನ್ನು ಸಂಸ್ಕೃತಕ್ಕೆ ಅನ್ವಯಿಸಿರಲಿಲ್ಲ. ಸಂಸ್ಕೃತ ಪ್ರಶ್ನೆಗಳಿಗೆ ಇಂಗ್ಲಿಷ್ ಅಥವಾ ಅವರವರ ಮಾತೃಭಾಷೆಯಲ್ಲೇ ಉತ್ತರಿಸಬಹುದಿತ್ತು. ಈಗಲೂ ಇದು ಮುಂದುವರಿದಿದೆ. ಸರಳ ಪಠ್ಯ, ಸರಳ ಪ್ರಶ್ನೆಪತ್ರಿಕೆ ಮತ್ತು ಸಂಸ್ಕೃತದಲ್ಲೇ ಉತ್ತರಿಸಬೇಕಾಗಿಲ್ಲವೆಂಬ ವಿಚಿತ್ರ ರಿಯಾಯಿತಿಗಳ ಫಲವಾಗಿ ಸಂಸ್ಕೃತವು ಹೆಚ್ಚು ಅಂಕಗಳನ್ನು ಪಡೆಯುವ ಸಾಧನವಾಯಿತು. ಸಂಸ್ಕೃತವನ್ನು ಪ್ರಥಮ ಭಾಷೆಯಾಗಿ ಅಭ್ಯಾಸ ಮಾಡುವವರೇ ಅಧಿಕ ಅಂಕಗಳನ್ನೂ ರ್‍ಯಾಂಕ್‌ಗಳನ್ನೂ ಪಡೆಯುತ್ತಿದ್ದುದರಿಂದ, ಕನ್ನಡವನ್ನು ಪ್ರಥಮ ಭಾಷೆಯನ್ನಾಗಿ ಆಯ್ಕೆ ಮಾಡಿಕೊಳ್ಳುವವರ ಸಂಖ್ಯೆ ಕಡಿಮೆಯಾಗತೊಡಗಿತು. ಸಂಸ್ಕೃತದ ಆಯ್ಕೆ ಅತಿಯಾಯಿತು.

ಈ ಕಾರಣದಿಂದ 1976ರಲ್ಲಿ ಶಿವಮೊಗ್ಗದಲ್ಲಿ ನಡೆದ 49ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು, ಸಂಸ್ಕೃತವನ್ನು ಪ್ರಥಮ ಭಾಷೆ ಪಟ್ಟಿಯಿಂದ ಕೈಬಿಡಬೇಕು ಮತ್ತು ಕನ್ನಡವನ್ನು ಒಂದು ಭಾಷೆಯಾಗಿ ಕನ್ನಡೇತರ ಶಾಲೆಗಳಲ್ಲಿ ಕಡ್ಡಾಯ ಮಾಡಬೇಕು ಎಂಬ ನಿರ್ಣಯವನ್ನು ಅಂಗೀಕರಿಸಿ, ಸರ್ಕಾರವನ್ನು ಒತ್ತಾಯಿಸಿತು. ಸರ್ಕಾರವು 'ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ'ಗೆ ಈ ನಿರ್ಣಯವನ್ನು ಕಳಿಸಿ, ವರದಿ ಕೊಡುವಂತೆ ಕೇಳಿತು. ಈ ಮಂಡಳಿಯು ನಿರ್ಣಯವನ್ನು ಸಮರ್ಥಿಸಿ ವರದಿ ನೀಡಿತು. ಸಮ್ಮೇಳನದ ನಿರ್ಣಯ ಮತ್ತು ಈ ವರದಿಯನ್ನು ಜಾರಿಗೊಳಿಸಲು ಕನ್ನಡ ಪರ ವಲಯದಿಂದ ತೀವ್ರ ಒತ್ತಾಯ ಬಂದಿತು. ದೇವರಾಜ ಅರಸು ನೇತೃತ್ವದ ಸರ್ಕಾರವು 1979ರ ಅಕ್ಟೋಬರ್‌ನಲ್ಲಿ ಆದೇಶವೊಂದನ್ನು ಹೊರಡಿಸಿ, ಸಂಸ್ಕೃತವನ್ನು ಪ್ರಥಮ ಭಾಷೆ ಪಟ್ಟಿಯಿಂದ ತೆಗೆದು ಮೂರನೇ ಭಾಷೆಗೆ ವರ್ಗಾಯಿಸಿತು. ಇದು ಒಂದು ಮುಖ್ಯಘಟ್ಟ.

ಮುಂದಿನ ಬೆಳವಣಿಗೆಗಳು ಕನ್ನಡವನ್ನು ಹೋರಾಟದ ಕೇಂದ್ರವಾಗಿಸಿ ಮತ್ತೊಂದು ಪ್ರಮುಖ ಘಟ್ಟಕ್ಕೆ ಕಾರಣವಾದವು. ಅರಸು ಅವರ ನಂತರ ಅಧಿಕಾರಕ್ಕೆ ಬಂದ ಗುಂಡೂರಾವ್ ನೇತೃತ್ವದ ಸರ್ಕಾರವು ಕೆಲವರ ಒತ್ತಾಯಕ್ಕೆ ಒಪ್ಪಿ, ಸಂಸ್ಕೃತವನ್ನು ಪ್ರಥಮ ಭಾಷೆಗಳ ಪಟ್ಟಿಗೆ ಮತ್ತೆ ಸೇರಿಸಿ ಕಿಚ್ಚು ಹತ್ತಿಸಿತು! ಹಕ್ಕೊತ್ತಾಯ ಮತ್ತು ಹೋರಾಟಗಳ ಪರ್ವ ಪ್ರಾರಂಭವಾಯಿತು.

'ಕನ್ನಡ ಉಳಿಸಿ' ಕ್ರಿಯಾ ಸಮಿತಿ, ಧಾರವಾಡದ ಕೇಂದ್ರ ಕನ್ನಡ ಕ್ರಿಯಾ ಸಮಿತಿಯಾದಿಯಾಗಿ ವಿವಿಧ ಕನ್ನಡಪರ ಸಂಘಟನೆಗಳು ಹಾಗೂ ಹೋರಾಟಗಾರರಿಂದ ಸರ್ಕಾರದ ನಿರ್ಧಾರಕ್ಕೆ ವಿರೋಧ ಎದುರಾಯಿತು. ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆಯು, ಸಮುದಾಯ, ದಲಿತ ಸಂಘರ್ಷ ಸಮಿತಿ, 'ಚಿತ್ರಾ' ನಾಟಕ ತಂಡಗಳ ಸಹಕಾರದಿಂದ ಬೆಂಗಳೂರಿನಲ್ಲಿ 'ಕನ್ನಡ ಹೋರಾಟವಾರ'ವನ್ನು ಹಮ್ಮಿಕೊಂಡು, ಸುಮಾರು 50ಕ್ಕೂ ಹೆಚ್ಚು ಪ್ರಮುಖ ಬರಹಗಾರರ ಸಹಿ ಪಡೆದ 25 ಸಾವಿರ ಕರಪತ್ರಗಳನ್ನು ಹಂಚಿತು. ಇದಲ್ಲದೆ, ಅನೇಕ ಸಂಘಟನೆಗಳ ಸಂಘಟಿತ ಹೋರಾಟದ ಫಲವಾಗಿ ಸರ್ಕಾರವು ಸಮಸ್ಯೆಯ ಪರಿಹಾರಕ್ಕಾಗಿ ವಿ.ಕೃ. ಗೋಕಾಕರ ನೇತೃತ್ವದಲ್ಲಿ 1980ರ ಜುಲೈ 5ರಂದು ಒಂದು ಸಮಿತಿಯನ್ನು ನೇಮಿಸಿ ಆದೇಶ ಹೊರಡಿಸಿತು. ಗೋಕಾಕ್ ನೇತೃತ್ವದ ಸಮಿತಿಯ ವರದಿಯಿಂದಲೇ ಅಂಕ ನಿಗದಿಯ ಚರ್ಚೆಯೂ ಆರಂಭವಾಯಿತು.

> ಪ್ರಥಮ ಭಾಷೆ ಕನ್ನಡದ ಅಂಕಗಳನ್ನು 125ಕ್ಕೆ ನಿಗದಿಪಡಿಸಿರುವುದರ ಹಿಂದೆ ಇರುವುದು ಬರೀ ಅಂಕಿ ಸಂಖ್ಯೆಗಳ ಲೆಕ್ಕಾಚಾರವಲ್ಲ; ಅದರ ಹಿಂದೆ ದಶಕಗಳ ಹೋರಾಟವಿದೆ. ಕನ್ನಡ ಸಂಘ, ಸಂಸ್ಥೆಗಳು ಹಾಗೂ ಹೋರಾಟಗಾರರ ಅವಿರತ ಶ್ರಮವಿದೆ. ಗೋಕಾಕ್ 'ಜನ ಚಳವಳಿ'ಯ ವಿಶೇಷ ಸ್ಮೃತಿಗಳಿವೆ.

ಗೋಕಾಕ್ ಸಮಿತಿಯು 1981–82ನೇ ಶೈಕ್ಷಣಿಕ ವರ್ಷದಿಂದಲೇ ಕನ್ನಡವನ್ನು 'ಏಕೈಕ' ಪ್ರಥಮ ಭಾಷೆಯಾಗಿ ಕಡ್ಡಾಯಗೊಳಿಸಿ ಜಾರಿಗೆ ತರಬೇಕೆಂದು ಶಿಫಾರಸು ಮಾಡಿತು. ಅಷ್ಟೇ ಅಲ್ಲ, ಪ್ರಥಮ ಭಾಷೆ ಕನ್ನಡಕ್ಕೆ 150 ಅಂಕಗಳನ್ನು ನಿಗದಿಪಡಿಸಿತು. ಎರಡನೇ ಭಾಷೆಗಳ ಪಟ್ಟಿಯಲ್ಲಿ ತೆಲುಗು, ತಮಿಳು, ಮರಾಠಿ, ಹಿಂದಿ, ಉರ್ದು ಮುಂತಾದ ಭಾರತೀಯ ಭಾಷೆಗಳಲ್ಲಿ ಒಂದು ಅಥವಾ ಇಂಗ್ಲಿಷ್ ಅಥವಾ ಸಂಸ್ಕೃತವೇ ಮುಂತಾದ ಪ್ರಾಚೀನ ಭಾಷೆಗಳ ಅಭ್ಯಾಸಕ್ಕೆ ಶಿಫಾರಸು ಮಾಡಿ 100 ಅಂಕಗಳನ್ನು ನಿಗದಿಮಾಡಿತು. ಎರಡನೇ ಭಾಷೆಯಲ್ಲಿ ಆಯ್ಕೆ ಮಾಡಿಕೊಂಡಿದ್ದನ್ನು ಬಿಟ್ಟು, ಆ ಪಟ್ಟಿಯಲ್ಲೇ ಇರುವ ಇತರೆ ಒಂದು ಭಾಷೆಯನ್ನು ಮೂರನೇ ಭಾಷೆಯಾಗಿ ಆಯ್ಕೆ ಮಾಡಿಕೊಳ್ಳಬೇಕೆಂದು ತಿಳಿಸಿತು. ಮೂರನೇ ಭಾಷೆಗೆ 50 ಅಂಕಗಳನ್ನು ನಿಗದಿ ಮಾಡಿದ್ದಲ್ಲದೆ, ಪರೀಕ್ಷೆಗೆ ಕಡ್ಡಾಯ ಮಾಡಬೇಕೆಂದು ತಿಳಿಸಿತು.

ಕನ್ನಡವು ಏಕೈಕ ಪ್ರಥಮ ಭಾಷೆಯಾಗಿರಬೇಕೆಂದು ಶಿಫಾರಸು ಮಾಡಿದ್ದಲ್ಲದೆ, ಅದಕ್ಕೆ 150 ಅಂಕಗಳನ್ನು ನಿಗದಿ ಮಾಡಿದ್ದು ಕನ್ನಡಿಗರಲ್ಲಿ ಸಹಜ ಸಂಭ್ರಮಕ್ಕೆ ಕಾರಣವಾಯಿತು. ಸರ್ಕಾರವು 'ಗೋಕಾಕ್ ಸಮಿತಿ'ಯ ವರದಿಯನ್ನು ಒಪ್ಪಲು ವಿಳಂಬ ಮಾಡಿದಾಗ ಕರ್ನಾಟಕದಾದ್ಯಂತ ಹೋರಾಟದ ಉಮೇದು ಹೆಚ್ಚತೊಡಗಿತು. ಬೆಂಗಳೂರಿನಲ್ಲಿ 'ಸಾಹಿತಿ– ಕಲಾವಿದರ ಬಳಗ'ದಿಂದ ಸರಣಿ ಉಪವಾಸ ಸತ್ಯಾಗ್ರಹ, ಧಾರವಾಡದ ಕೇಂದ್ರ ಕನ್ನಡ ಕ್ರಿಯಾ ಸಮಿತಿಯಿಂದ ನಿತ್ಯ ಹಕ್ಕೊತ್ತಾಯ, ಕನ್ನಡ ಹೋರಾಟಗಾರರ ಆಗ್ರಹ– ಎಲ್ಲವೂ ಸೇರಿ ಬಿಸಿ ವಾತಾವರಣ ಮೂಡುತ್ತಿದ್ದರೂ ಸರ್ಕಾರ ಮೌನವಾಗಿತ್ತು. ಆಗ ವರನಟ ರಾಜ್‌ಕುಮಾರ್ ಅವರು ಗೋಕಾಕ್ ವರದಿ ಜಾರಿಗೊಳಿಸಬೇಕೆಂಬ ಹೋರಾಟಕ್ಕೆ ನೇರವಾಗಿ ಪ್ರವೇಶಿಸಿ, ಚಲನಚಿತ್ರ ಕಲಾವಿದರೊಂದಿಗೆ ರಾಜ್ಯದಾದ್ಯಂತ ಸಂಚರಿಸಿ ಸಂಚಲನವುಂಟುಮಾಡಿದರು. ಹೋರಾಟವು ಜನ ಚಳವಳಿಯ ರೂಪ ಪಡೆಯಿತು. ಸರ್ಕಾರ ಮಣಿಯಲೇಬೇಕಾಯಿತು.

ಸರ್ಕಾರವು ಗೋಕಾಕ್ ವರದಿ ಆಧರಿಸಿ ಒಂದು ಸೂತ್ರವನ್ನು ರೂಪಿಸಿತು. ಏಕೈಕ ಪ್ರಥಮ ಭಾಷೆಯಾಗಿ ಕನ್ನಡವನ್ನು ಕಡ್ಡಾಯಗೊಳಿಸಿತು. ಆದರೆ, ಗೋಕಾಕ್ ಸಮಿತಿ ಸೂಚಿಸಿದ 150 ಅಂಕಗಳ ಬದಲು 100 ಅಂಕಗಳನ್ನು ನಿಗದಿಪಡಿಸಿತು. ಎರಡು ಮತ್ತು ಮೂರನೇ ಭಾಷೆಗಳಿಗೂ ತಲಾ ನೂರು ಅಂಕಗಳನ್ನು ಇಡುವುದಾಗಿ ತಿಳಿಸಿತು. ಈ ಸೂತ್ರಕ್ಕೆ ಮತ್ತೆ ಪ್ರಬಲ ವಿರೋಧ ವ್ಯಕ್ತವಾದ ಫಲವಾಗಿ, ಏಕೈಕ ಪ್ರಥಮ ಭಾಷೆಯಾಗಿ ಕನ್ನಡಕ್ಕೆ 125, ಎರಡು ಮತ್ತು ಮೂರನೇ ಭಾಷೆಗಳಿಗೆ ತಲಾ 100 ಅಂಕಗಳನ್ನು ನಿಗದಿಗೊಳಿಸಿ ಸರ್ಕಾರವು 1982ರ ಜುಲೈ 20ರಂದು ಆದೇಶ ಹೊರಡಿಸಿತು. ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಕನ್ನಡ/ ಮಾತೃಭಾಷೆ ಮಾಧ್ಯಮ ಮತ್ತು ಕನ್ನಡೇತರ ಮಾಧ್ಯಮ ಶಾಲೆಗಳಲ್ಲಿ ಮೂರನೇ ತರಗತಿಯಿಂದ ಕನ್ನಡವು ಐಚ್ಛಿಕ ಕಲಿಕೆಯ ಭಾಷೆಯಾಗಿರುತ್ತದೆಯೆಂದು ಈ ಆದೇಶ ಸೂಚಿಸಿತು.

ಇಷ್ಟಕ್ಕೇ ಭಾಷಾ ವಿವಾದ ನಿಲ್ಲಲಿಲ್ಲ. 1982ರ ಈ ಆದೇಶವನ್ನು ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದವು. ಸಾಕಷ್ಟು ಕಾಲ ವಿಚಾರಣೆ ನಡೆದು, ಈ ಆದೇಶವನ್ನು ಹೈಕೋರ್ಟ್ ರದ್ದು ಮಾಡಿತು. ಮುಖ್ಯವಾಗಿ, ಪ್ರಥಮ ಭಾಷೆಯಾಗಿ ಏಕೈಕ ಭಾಷೆಯನ್ನು (ಕನ್ನಡವನ್ನು) ಕಡ್ಡಾಯ ಮಾಡುವುದು ಸಂವಿಧಾನದ 14, 29(1) ಮತ್ತು 30(1)ನೇ ವಿಧಿಗಳಿಗೆ ವಿರುದ್ಧವಾದುದೆಂದು ತೀರ್ಪು ನೀಡಿತು. 14ನೇ ವಿಧಿ ಸಮಾನತೆಯ ತತ್ವಕ್ಕೆ, 29(1) ಅಲ್ಪಸಂಖ್ಯಾತರ ಅವಕಾಶ ರಕ್ಷಣೆಗೆ ಮತ್ತು 30(1)ನೇ ವಿಧಿಯು ಅಲ್ಪಸಂಖ್ಯಾತರ ಶೈಕ್ಷಣಿಕ ವಿಷಯಕ್ಕೆ ಸಂಬಂಧಿಸಿವೆ. ಒಂದೇ ಭಾಷೆಯನ್ನು ಕಡ್ಡಾಯ ಮಾಡುವುದರಿಂದ ಆಯಾ ರಾಜ್ಯದ ಭಾಷಿಕ ಅಲ್ಪಸಂಖ್ಯಾತರ ಮಾತೃಭಾಷಾ ಕಲಿಕೆಯ ಹಕ್ಕಿಗೆ ಧಕ್ಕೆಯಾಗುತ್ತದೆಯೆಂದು ಹೈಕೋರ್ಟ್ ತಿಳಿಸಿತು (ಮಹಾರಾಷ್ಟ್ರ ಮುಂತಾದ ರಾಜ್ಯಗಳಲ್ಲಿ ಭಾಷಿಕ ಅಲ್ಪಸಂಖ್ಯಾತರ ಸಂವಿಧಾನಾತ್ಮಕ ಹಕ್ಕಿನ ಫಲವಾಗಿಯೇ ಕನ್ನಡಿಗರು ಕನ್ನಡ ಕಲಿಯುವ, ಕನ್ನಡ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸುವ ಅವಕಾಶ ಪಡೆದಿರುವುದನ್ನು ಇಲ್ಲಿ ಗಮನಿಸಬಹುದು. ಅಲ್ಲದೆ, ಸಂವಿಧಾನದ 350ಎ ವಿಧಿಯು ಭಾಷಾ ಅಲ್ಪಸಂಖ್ಯಾತರು ತಮ್ಮ ಮಾತೃಭಾಷೆಯಲ್ಲಿ ಕಲಿಯುವ ಅವಕಾಶ ಕೊಟ್ಟಿರುವುದು ಇಲ್ಲಿ ಉಲ್ಲೇಖನೀಯ).

ರಾಜ್ಯ ಹೈಕೋರ್ಟ್ ನೀಡಿದ ತೀರ್ಪಿನ ಪರಿಣಾಮವಾಗಿ ಕನ್ನಡವೊಂದೇ ಪ್ರಥಮ ಭಾಷೆಯಾಗಿರಬೇಕೆಂಬ ಗೋಕಾಕ್ ಸಮಿತಿ ನೀಡಿದ್ದ ಶಿಫಾರಸು ನಿಷ್ಫಲಗೊಂಡಿತು. ಸರ್ಕಾರವು 1989ರ ಜೂನ್ 19ರಂದು ಮತ್ತೊಂದು ಆದೇಶ ಹೊರಡಿಸಿ, ಕನ್ನಡವೂ ಸೇರಿದಂತೆ ಕರ್ನಾಟಕದಲ್ಲಿ ವಾಸಿಸುವ ಭಾಷಿಕ ಅಲ್ಪಸಂಖ್ಯಾತರ ಮಾತೃಭಾಷೆಗಳನ್ನು ಪ್ರಥಮ ಭಾಷೆ ಪಟ್ಟಿಗೆ ಸೇರಿತು. ಮೂಲತಃ ಯಾವ ಕಾರಣಕ್ಕಾಗಿ ಪ್ರತಿರೋಧ ಆರಂಭವಾಯಿತೋ ಅದೇ ಸಂಸ್ಕೃತ ಭಾಷೆಯನ್ನೂ ಈ ಆದೇಶದಲ್ಲಿ ಪ್ರಥಮ ಭಾಷೆ ಪಟ್ಟಿಗೆ ಸೇರಿಸಲಾಯಿತು! ಕನ್ನಡವೂ ಸೇರಿದಂತೆ ಪ್ರಥಮ ಭಾಷೆಗಳಿಗೆ 125 ಅಂಕಗಳನ್ನೇ ಮುಂದುವರಿಸಲಾಯಿತು.

ಈಗ ಇದ್ದಕ್ಕಿದ್ದಂತೆ ಕೇಂದ್ರೀಯ ಪಠ್ಯಕ್ರಮಕ್ಕನುಗುಣವಾಗಿ 125 ಅಂಕಗಳ ಬದಲು 100 ಅಂಕ ನಿಗದಿ ಮಾಡುವುದಾದರೆ, ಕೇಂದ್ರ ಸರ್ಕಾರದ 'ರಾಷ್ಟ್ರೀಯ ಶಿಕ್ಷಣ ನೀತಿ'ಯನ್ನು ವಿರೋಧಿಸಿದ್ದಾದರೂ ಯಾಕೆ? ರಾಜ್ಯ ಶಿಕ್ಷಣ ನೀತಿ ನಿರೂಪಣೆಗೆ ಸಮಿತಿ ರಚಿಸಿ ಅದರ ಶಿಫಾರಸುಗಳಿಗೂ ಕಾಯದೆ ಮತ್ತು ಬೇಗ ವರದಿ ಕೊಡಲು ಒತ್ತಾಯಿಸದೆ, ಶೈಕ್ಷಣಿಕ ಸುಧಾರಣೆ ಹೆಸರಲ್ಲಿ ಪ್ರಮುಖ ನಿರ್ಧಾರಗಳನ್ನು ಜಾರಿ ಮಾಡುವುದು ಸರಿಯೆ? ಸರ್ಕಾರ ಮರುಚಿಂತನೆ ಮಾಡಬೇಕಾಗಿದೆ.

ಹೋರಾಟದ ಫಲವಾಗಿ ನಿಗದಿಯಾದ 125 ಅಂಕಗಳನ್ನು ಹಾಗೇ ಉಳಿಸಿ, ಕನ್ನಡ ಓದುವ ಮಕ್ಕಳಿಗೆ ಪೂರಕ ಸುಧಾರಣೆಗಳನ್ನು ಜಾರಿಗೊಳಿಸುವ ಚರ್ಚೆ, ಚಿಂತನೆ ಮಾಡಬೇಕಾಗಿದೆ.

ವಾಚಕರ ವಾಣಿ

ತುಳುನಾಡಿನ ಭ್ರಾತೃತ್ವ ಮತ್ತೆ ಮೆರೆಯಲಿ

'ಬದಲಾಗುತ್ತಿದೆಯೇ ಅವಿಭಜಿತ ದಕ್ಷಿಣ ಕನ್ನಡ' ಲೇಖನವು (ಪ್ರ.ವಾ., ಜುಲೈ 20) ದಕ್ಷಿಣ ಕನ್ನಡ ಜಿಲ್ಲೆಯ ಸೂಕ್ಷ್ಮ ಮಾಹಿತಿಯನ್ನು ಸವಿವರವಾಗಿ ಕಟ್ಟಿಕೊಟ್ಟಿದೆ. ಅಲ್ಲಿನ ಜನರು ಬದಲಾವಣೆಗಾಗಿ ಹಂಬಲಿಸುತ್ತಿದ್ದಾರೆ. ಕೋಮುಗಲಭೆಗಳಿಂದ ಸಾರ್ವಜನಿಕವಾಗಿ ಹಾಗೂ ಪರಸ್ಪರರ ಏಳಿಗೆ ದೃಷ್ಟಿಯಿಂದ ಎಷ್ಟೊಂದು ಆಘಾತವಾಗುತ್ತದೆ ಎಂಬುದು ಅರ್ಥವಾಗುತ್ತದೆ. ಜಿಲ್ಲೆಯ ಅಭಿವೃದ್ಧಿ ಹಾಗೂ ಮಕ್ಕಳ ಭವಿಷ್ಯ ಕುರಿತು ಸಮುದಾಯದಲ್ಲಿ ಚಿಂತನೆ ಶುರುವಾಗಿರುವುದು ಒಳ್ಳೆಯ ಬೆಳವಣಿಗೆ. ದಕ್ಷಿಣ ಕನ್ನಡ ಬದಲಾಗಲಿ ಎಂಬುದು ಎಲ್ಲರ ಆಶಯ.

ಜೆ.ಸಿ. ಜಾಧವ, ಬಾಗಲಕೋಟೆ

ಖರ್ಗೆ ಅವರಿಗೆ ಶೋಭೆ ತರುವುದೇ?

ಮೈಸೂರಿನಲ್ಲಿ ನಡೆದ ಸರ್ಕಾರದ ಸಾಧನಾ ಸಮಾವೇಶದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, 'ದೂರದರ್ಶನದಲ್ಲಿ ಹಿಂದಿನ ಯಾವ ಪ್ರಧಾನಿಯೂ ನರೇಂದ್ರ ಮೋದಿ ಅವರಂತೆ ನಿತ್ಯ ಬೊಗಳುತ್ತಿರಲಿಲ್ಲ' ಎಂದು ಹೇಳಿದ್ದಾರೆ. ಇದು ಅವರ ಹಿರಿತನಕ್ಕೆ ಶೋಭೆ ತರುವುದಿಲ್ಲ. ರಾಜಕೀಯ ಕಾರಣಕ್ಕಾಗಿ ಟೀಕೆ, ಪ್ರತಿ ಟೀಕೆ ಸಾಮಾನ್ಯ. ಇಂದಿನ ರಾಜಕಾರಣಿಗಳು ಪಕ್ಷಾತೀತವಾಗಿ ಅವರ ಮೆದುಳಿಗೂ ನಾಲಿಗೆಗೂ ಸಂಪರ್ಕ ಕಳೆದುಕೊಂಡಿದ್ದಾರೆ. ಅಸಹನೆ, ಅಸೂಯೆ, ಮತ್ಸರದಿಂದ ಪ್ರಧಾನಿ ಅವರನ್ನು ಪದೇ ಪದೇ ಅರ್ಥಹೀನ ಪದಗಳಿಂದ ಜರಿಯುವುದು ತರವಲ್ಲ.

ಎಸ್‌.ಎನ್‌. ರಮೇಶ್, ಸಾತನೂರು

ಯುಪಿಐ ಗೊಂದಲ: ಬೇಕು ಪರಿಹಾರ

ದೇಶದಲ್ಲಿ 'ಏಕೀಕೃತ ಪಾವತಿ ವ್ಯವಸ್ಥೆ' (ಯುಪಿಐ) ಅನುಷ್ಠಾನಗೊಂಡಾಗ ಜನ ಸಹಜವಾಗಿಯೇ ಖುಷಿಪಟ್ಟಿದ್ದರು. ಇದರಿಂದ ಜೇಬುಗಳ್ಳತನ ಹಾಗೂ ನಿರ್ಲಕ್ಷ್ಯದಿಂದ ಹಣ ಕಳೆದುಕೊಳ್ಳುವುದು ಕಡಿಮೆಯಾಗಿತ್ತು. ದೂರದೂರಿಗೆ ಪ್ರಯಾಣ ಮಾಡಿದರೂ ಹಣ ಕೊಂಡೊಯ್ಯುವ ತಾಪತ್ರಯ ಇರಲಿಲ್ಲ. ಇದೀಗ ನಿಗದಿತ ವ್ಯಾಪಾರ ವಹಿವಾಟಿನ ಮಿತಿ ದಾಟಿದ ಅಂಗಡಿ ಮಾಲೀಕರಿಗೆ ಕರ್ನಾಟಕ ವಾಣಿಜ್ಯ ತೆರಿಗೆಗಳ ಇಲಾಖೆಯಿಂದ ನೋಟಿಸ್ ನೀಡಲಾಗಿದೆ. ಇದರಿಂದ ಕೆಲವೆಡೆ ಅಂಗಡಿ ಮಾಲೀಕರು ಉತ್ಪನ್ನಗಳನ್ನು ಖರೀದಿಸಿದಾಗ ಯುಪಿಐ ಪಾವತಿ ಬದಲು ನಗದು ನೀಡುವಂತೆ ಗ್ರಾಹಕರನ್ನು ಕೇಳುತ್ತಿದ್ದಾರೆ. ಸರ್ಕಾರ ಮತ್ತು ತಜ್ಞರು ಇದಕ್ಕೆ ಪರಿಹಾರ ಹುಡುಕಬೇಕಿದೆ.

ಕುಮಾರ ಚಲವಾದಿ, ಹಾಸನ

ಹಲಸಿನ ಮರಗಳ ಮಾರಣಹೋಮ

ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಚೆಂಬು ಗ್ರಾಮದಲ್ಲಿರುವ ನನ್ನ ತೋಟಕ್ಕೆ ಕಾಡಾನೆಗಳು ಪ್ರತಿದಿನ ಲಗ್ಗೆ ಇಟ್ಟು ಫಸಲು ನಾಶ ಮಾಡುತ್ತಿವೆ. ಹಲಸಿನ ಹಣ್ಣಿನ ವಾಸನೆ ಹಿಡಿದು ಆನೆಗಳು ತೋಟಕ್ಕೆ ಬರುತ್ತವೆ ಎನ್ನುವುದು ನಮ್ಮೂರಿನವರ ಲೆಕ್ಕಾಚಾರ. ಹಲಸಿನ ಮರಗಳನ್ನು ಕಡಿದು ಹಾಕಿದರೆ ಅವು ಬರುವುದಿಲ್ಲ ಎಂದು ಊರವರೆಲ್ಲರೂ ಅವರವರ ತೋಟದಲ್ಲಿರುವ ಹಲಸಿನ ಮರಗಳನ್ನು ಕಡಿಯತೊಡಗಿದ್ದಾರೆ. ನನ್ನ ಗಂಡ ಕೂಡ ಹಲಸಿನ ಮರ ಕಡಿಯಲು ಮುಂದಾಗಿದ್ದಾರೆ. ನಮ್ಮ ತೋಟದಲ್ಲಿ 25ಕ್ಕಿಂತ ಹೆಚ್ಚು ಹಲಸಿನ ಮರಗಳಿವೆ. ನಮ್ಮೂರಿನ ಸಂರಕ್ಷಿತ ಅರಣ್ಯಕ್ಕೆ ಆನೆಗಳು ಬಾರದಂತೆ ಸೌರ ಬೇಲಿ ಅಳವಡಿಸಿ ಎಂದು ಅರಣ್ಯಾಧಿಕಾರಿಗಳಿಗೆ ಎಷ್ಟು ಕೋರಿಕೊಂಡರೂ ಲೆಕ್ಕಕ್ಕೆ ತೆಗೆದುಕೊಳ್ಳುತ್ತಿಲ್ಲ. ಹಾಗಾಗಿ, ಅರಣ್ಯ ಸಚಿವರು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಅರಣ್ಯಕ್ಕೆ ಕೂಡಲೇ ಸೌರ ಬೇಲಿ ಅಳವಡಿಸಿ ಹಲಸಿನ ಮರಗಳನ್ನು ಉಳಿಸಬೇಕಾಗಿ ವಿನಂತಿ. ನಾವೇ ತೋಟಕ್ಕೆ ಬೇಲಿ ಅಳವಡಿಸಲು ಲಕ್ಷಗಟ್ಟಲೆ ದುಡ್ಡು ಬೇಕು. ಸರ್ಕಾರದ ಸಹಾಯಧನ ಸಿಗುವುದೆಂಬ ಗ್ಯಾರಂಟಿ ಇಲ್ಲ. ನಾಲ್ಕು ವರ್ಷದ ಹಿಂದೆ ಸೌರ ಬೇಲಿ ಅಳವಡಿಸಿಕೊಂಡ ಒಬ್ಬ ರೈತನಿಗೆ ಇನ್ನೂ ಸಹಾಯಧನ ಪಾವತಿಯಾಗಿಲ್ಲ.

ಸಹನಾ ಕಾಂತಬೈಲು, ಮಡಿಕೇರಿ

ಧ್ವಜಾರೋಹಣದ ಹೊಣೆ ಯಾರದ್ದು?

ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ, ಕನ್ನಡ ರಾಜ್ಯೋತ್ಸವ, ಕಲ್ಯಾಣ ಕರ್ನಾಟಕ ಉತ್ಸವ ದಿನಗಳಂದು ಶಾಲೆಗಳಲ್ಲಿ ಮೊದಲಿನಿಂದಲೂ ಮುಖ್ಯೋಪಾಧ್ಯಾಯರೇ ಧ್ವಜಾರೋಹಣ ನೆರವೇರಿಸುತ್ತಾ ಬಂದಿದ್ದಾರೆ. ಈಗೀಗ ಕೆಲವು ಶಾಲೆಗಳಲ್ಲಿ ಎಸ್‌ಡಿಎಂಸಿ ಅಧ್ಯಕ್ಷರು ಈ ಕಾರ್ಯ ಮಾಡುತ್ತಿದ್ದಾರೆ. ಇದಕ್ಕೆ ಮುಖ್ಯೋಪಾಧ್ಯಾಯರ ಮೇಲೆ ಹೇರುವ ರಾಜಕೀಯ ಒತ್ತಡವೇ ಕಾರಣ. ಯಾವುದೋ ಶಾಲೆಯ ಉದಾಹರಣೆ ತೋರಿಸಿ, ತಾವು ಅಧ್ಯಕ್ಷರಾಗಿರುವ ಶಾಲೆಯಲ್ಲೂ ತಾವೇ ಧ್ವಜಾರೋಹಣ ನೆರವೇರಿಸುವುದಾಗಿ ಹಟ ಹಿಡಿದು ಶಿಕ್ಷಕರನ್ನು ಬೆದರಿಸಿ ಗೊಂದಲ ಸೃಷ್ಟಿಸುತ್ತಿದ್ದಾರೆ. ಸರ್ಕಾರ ಇದಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿ ಹೊರಡಿಸಿ ಏಕರೂಪತೆ ಕಾಯ್ದುಕೊಳ್ಳಬೇಕಿದೆ.


ಶಿವಕುಮಾರ ಬಂಡೋಳಿ, ಯಾದಗಿರಿ

ಮುಸುಕಿನ ಗುದ್ದಾಟ ಬಹಿರಂಗ

ಮೈಸೂರಿನಲ್ಲಿ ನಡೆದ ರಾಜ್ಯ ಸರ್ಕಾರದ ಸಾಧನಾ ಸಮಾವೇಶದಲ್ಲಿ ಭಾಗವಹಿಸಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮಾರಂಭದ ಮಧ್ಯದಲ್ಲಿಯೇ ನಿರ್ಗಮಿಸಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ವಾಗತಕ್ಕೆ ನಿಂತಾಗ ಶಿವಕುಮಾರ್ ಅವರ ಹೆಸರು ಪ್ರಸ್ತಾಪಿಸುವುದನ್ನು ಕೈಬಿಟ್ಟರು. ಈ ಬಗ್ಗೆ ಪಕ್ಕದಲ್ಲಿದ್ದವರು ಅವರಿಗೆ ಇದನ್ನು ಜ್ಞಾಪಿಸಿದರು. ಆಗ ಸಿದ್ದರಾಮಯ್ಯ, 'ಮನೆಯಲ್ಲಿ ಕುಳಿತವರಿಗೆ ಸ್ವಾಗತ ಕೋರಲು ಆಗುವುದಿಲ್ಲ' ಎಂದು ಗರಂ ಆದ ಬಗ್ಗೆ ವರದಿಯಾಗಿದೆ. ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದವರ ಗೈರುಹಾಜರಿಯಲ್ಲಿಯೂ ಅವರ ಹೆಸರನ್ನು ಉಲ್ಲೇಖಿಸುವ ಸಂಪ್ರದಾಯ ಇದೆ. ಈ ಇಬ್ಬರು ಧುರೀಣರ ಮುಸುಕಿನ ಗುದ್ದಾಟ ಸಾರ್ವಜನಿಕವಾಗಿ ಬಹಿರಂಗಗೊಂಡಿದ್ದಂತೂ ಸತ್ಯ.

ಲಕ್ಷ್ಮೀಕಾಂತರಾಜು ಎಂ.ಜಿ., ಗುಬ್ಬಿ

ಚುರುಮುರಿ



ಗಂಗಾ ಕಾವೇರಿ

• ಲಿಂಗರಾಜು ಡಿ.ಎಸ್.

'ಯಾರೆ ಅದು ಹೋಯ್ತಿರದು? ಕಾವೇರಿಯೇನೆ? ಕಣ್ಣು ಮಂಜಾಗೋಗ್ಯವೆ ಕವ್ವ. ಸರಿಯಾಗಿ ಕಾಣಕ್ಕುಲ್ಲ. ಎಂಗದೀಯಾ ನನ್ತಾಯಿ?' ಗಂಗಮ್ಮ ಪ್ರೀತಿಯಿಂದ ಕೇಳಿದಳು.

'ಹೂ ಕನಕ್ಕಾ. ಕಾವೇರಿನೇಯ. ನೀನೆಂಗದೀಯಕ್ಕಾ?' ಕಾವೇರಮ್ಮ ಕೇಳಿದಳು.

'ಅಯ್ಯೋ... ನನ ಸುಖ ಏನೇಳನ ನನ್ತಾಯಿ. ಮೊದಲು ಸೀಯಾಳದಂಗಿದ್ದೆ. ಕಂಡೋರ ಪಾಪ ತೊಳದೂ ತೊಳದೂ ಸವೆದು ಸಂಕವಾಗೋಗಿದ್ದೀನಿ ಕನೆ'.

'ನಮಾಮಿ ಗಂಗೆ ಅಂತ ಕೋಟಿ ಕೋಟಿ ಖರ್ಚು ಮಾಡಿದ್ರಲ್ಲಕ್ಕಾ? ಎಲ್ಲಾ ಕಾಸು ಎಲ್ಲಿಗೋತು?' ಕಾವೇರಿ ಮಾತಿಗೆ ಗಂಗವ್ವ ಕಣ್ಣಗೆ ನೀರಾಕ್ಯಂದಳು.

'ನೋಡೇ ಕಾವೇರಿ. ತಟದಗೇ ಅರೆಬರೆ ಸುಟ್ಟ ಹೆಣವ ಸಿದಿಗೆ ಸಮೇತ ತಕ್ಕಬಂದು ನನ್ನ ಮಡಿಲಿಗೆ ಹಾಕಿಬುಡ್ತರೆ ಕನೆ. ಇನ್ನು ದಾರೀಗಂಟಾ ನಾನಾಥರದ ಐನಾತಿ ಪ್ಯಾಕ್ಟ್ರಿಗಳದಾವಲ್ಲಾ, ಅವರ ರೋಸನೆಲ್ಲ ತಂದು ನನ್ನ ಮ್ಯಾಕ್ಕೆ ಸುರೀತರೆ.'

'ಅಯ್ಯೋ ಶಿವನೇ, ನಂದೂ ಅದೇ ಕತೆ ಕನಕ್ಕಾ. ಕಾವೇರಿಗೆ ಪ್ರಾಣ ಕೊಟ್ಟೇವು ನೀರು ಬುಡಕುಲ್ಲ ಅಂತ ಎರಡೂ ಕಡೆ ಜನ ಕಿತ್ತಾಡತರೆ. ನನ್ನ ನೋಡಿಕ್ಯಳಕೆ ಅಂತ್ಲೆ ಪ್ರಾಧಿಕಾರ ಬ್ಯಾರೆ ಮಾಡ್ಯವುರೆ. ರಾಜಕೀಯದವು ಬಾಗಿನ ಕೊಡ್ತೀವಿ ಅಂತ ಕಸ ಎಸೆದಂಗೆ ಎಸೆದು ಪಟ ತೆಗೆಸಿಕ್ಯಂದು ಹೊಂಟೋಯ್ತರೆ ಕನಕ್ಕಾ' ಕಾವೇರಮ್ಮ ಬಿಕ್ಕಿದಳು.

'ರಾಜಕೀಯದವು ಸುಮ್ಮನೆ ಶಂಖ ಊದ್ತವೆ ಕನೇ. ನಾವು ದಿನಾ ಸತ್ತು ಸತ್ತು ಹುಟ್ಟೋದು ಅವುಕ್ಕೇನು ಗೊತ್ತದೆ ಕಾವೇರಿ? ಇನ್ನು ನಿನಗೂ ಮಂಗಳಾರತಿ ಮಾಡಾರಂತೆ?'

'ಅದು ಬ್ಯಾರೆ ಕೇಡು. ನನ್ನ ತಂಗೇದೀರು ಅರ್ಕಾವತಿ, ವೃಷಭಾವತಿ ರಾಜಕಾಲುವೆಗಳಾಗೋದ್ರು. ಸುವರ್ಣಾವತಿ, ಭವಾನಿ, ಅಮರಾವತಿ ಒಣಗೋದ್ರು. ರಾಮತೀರ್ಥ, ಲಕ್ಷ್ಮಣತೀರ್ಥ ಕಾಣದಂಗೆ ಹೊಂಟೋದ್ರು. ಈಗ ನನ್ನ ಮೇಕೆದಾಟು ಮಾಡ್ತಾರಂತೆ' ಕಾವೇರಮ್ಮನಿಗೆ ಕ್ವಾಪ ಬಂದುತ್ತು.

'ಬುಡೇ ರಾಜಕೀಯದೋರ ಕತೆ ಬೆಳಗಾನ ಹೇಳಿದ್ರೂ ಮುಗಿಯಕುಲ್ಲ. ಹೌದಪ್ಪನ ಚಾವಡೀಲಿ ಇಲ್ಲಪ್ಪನ್ನ ಯಾರು ಕೇಳ್ತರೆ ಮಗಾ' ಗಂಗಮ್ಮ ಬುದ್ಧಿ ಮಾತು ಹೇಳಿದಳು.

ಸಂಗತ

ಕರೆದರೆ ಓಗೊಡುವ '1098' ಆಪ್ತಮಿತ್ರ

ಆಪತ್ತಿನ ಸಮಯದಲ್ಲಿ ನೆರವಿಗೆ ಓಗೊಡುವ 'ಮಕ್ಕಳ ಸಹಾಯವಾಣಿ' ಸಂಖ್ಯೆ ಎಳೆಯರ ಕಣ್ಣಿಗೆ ಬೀಳುವಂತಿರಬೇಕು. ಅದು ಚಿಣ್ಣರ ಪಾಲಿಗೆ ಆಪ್ತಮಿತ್ರ.

• ಡಾ. ಮುರಳೀಧರ ಕಿರಣಕೆರೆ

ರಾಜ್ಯದ ಎಲ್ಲಾ ಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ಮಕ್ಕಳ ಸಹಾಯವಾಣಿ '1098' ಅನ್ನು ಗೋಡೆಗಳ ಮೇಲೆ ದೊಡ್ಡದಾಗಿ ಬರೆಸಲು ಶಿಕ್ಷಣ ಇಲಾಖೆಯು ಆದೇಶಿಸಿದೆ. ಈ ಆದೇಶಕ್ಕೆ ವಿಶೇಷ ಮಹತ್ವವಿದೆ.

ಗೋಡೆ ಬರಹವಾಗಿ ಮಾತ್ರವಲ್ಲ, ಪಠ್ಯಪುಸ್ತಕದ ಪುಟಗಳ ತಳಭಾಗದಲ್ಲೂ ಸಹಾಯವಾಣಿಯ ಮೊಹರು ಇರಬೇಕು, ಶಾಲೆಯ ಜಾಲತಾಣದಲ್ಲೂ ಈ ಸಂಖ್ಯೆ ಎದ್ದು ಕಾಣುವಂತೆ ತೋರಿಸಬೇಕು, ಮಕ್ಕಳ ಬೆಳಗಿನ ಸಭೆಯಲ್ಲೂ ಸಹಾಯವಾಣಿಯ ಮಹತ್ವ ವಿವರಿಸಬೇಕೆಂದು ಸುತ್ತೋಲೆ ತಿಳಿಸಿದೆ. ಪ್ರತಿ ಮಗುವಿಗೂ ಪ್ರತಿನಿತ್ಯ ಈ ಸಂಖ್ಯೆ ಕಣ್ಣಿಗೆ ಬೀಳುತ್ತಿರಬೇಕು; ಹತ್ತು ಒಂಬತ್ತು ಎಂಟು ಎಂಬುದು ಕಂಠಪಾಠವಾಗಬೇಕು ಮತ್ತು ಅಗತ್ಯ ಬಿದ್ದಾಗ ಮಕ್ಕಳು ಯಾವುದೇ ಹಿಂಜರಿಕೆಯಿಲ್ಲದೆ ಅದನ್ನು ಬಳಸಬೇಕು ಎಂಬುದು ಸರ್ಕಾರದ ಚಿಂತನೆ.

1996ರ ಸುಮಾರಿಗೆ ಮುಂಬೈನಲ್ಲಿ ಪ್ರಾರಂಭವಾಗಿ ನಂತರದಲ್ಲಿ ದೇಶದಾದ್ಯಂತ ವಿಸ್ತರಣೆಗೊಂಡ ಮಕ್ಕಳ ಸಹಾಯವಾಣಿಗೆ ಈಗ ದಿಢೀರೆಂದು ಮಹತ್ವ ನೀಡಲು ಕಾರಣವಿದೆ. ನಮ್ಮ ರಾಜ್ಯದಲ್ಲಿ ಕಳೆದ ವರ್ಷ ಏಳುನೂರಕ್ಕೂ ಹೆಚ್ಚು ಬಾಲ್ಯವಿವಾಹಗಳು ವರದಿಯಾಗಿವೆ. ಎಂಟು ಸಾವಿರಕ್ಕೂ ಅಧಿಕ ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ, ಇದರಲ್ಲಿ ಅರ್ಧದಷ್ಟು ಪೋಕ್ಸೊ ಕೇಸುಗಳು!

ಅಂದರೆ, ಪ್ರತಿದಿನ ಸರಾಸರಿ ಹತ್ತು ಮಕ್ಕಳು ಲೈಂಗಿಕ ಕಿರುಕುಳದ ಕಾರಣ ಪೊಲೀಸ್ ಠಾಣೆಯ ಮೆಟ್ಟಿಲೇರುತ್ತಿದ್ದಾರೆ. ಮಕ್ಕಳಿಗೆ ಅವರಿಗಾಗಿಯೇ ಇರುವ ತುರ್ತು ಸೇವೆಯ ಸಹಾಯವಾಣಿಯ ಉಪಯುಕ್ತತೆಯನ್ನು ಮನದಟ್ಟು ಮಾಡಿಸಿದಾಗ ತಮ್ಮ ಮೇಲಾಗುವ ದೈಹಿಕ, ಮಾನಸಿಕ, ಲೈಂಗಿಕ ಕಿರುಕುಳ, ಹಲ್ಲೆ, ಬಲವಂತದ ಮದುವೆ, ಹಕ್ಕುಚ್ಯುತಿಯಂತಹ ಪ್ರಕರಣಗಳನ್ನು ಸಹಾಯವಾಣಿಯ ಗಮನಕ್ಕೆ ತಂದು ಅಗತ್ಯ ರಕ್ಷಣೆ, ಆರೈಕೆ ಪಡೆಯುತ್ತಾರೆ.

'ಯಾವುದು ಕಣ್ಣಿನಿಂದ ಮರೆಯಾಗುತ್ತದೆಯೋ ಅದು ಮನಸ್ಸಿನಿಂದಲೂ ದೂರವಾಗುತ್ತದೆ' ಎಂಬುದು ಅನುಭವದ ನುಡಿ. ಹೆಚ್ಚಿನ ಮಕ್ಕಳಿಗೆ ಸದಾ ತಮ್ಮ ಸಹಾಯಕ್ಕೆ ಧಾವಿಸುವ, 24x7 ಸಮಯವೂ ಸಕ್ರಿಯವಾಗಿರುವ ಹೀಗೊಂದು ಉಚಿತ ವ್ಯವಸ್ಥೆಯಿದೆಯೆಂಬ ಅರಿವಿಲ್ಲ.

ಕಾನೂನು, 18 ವರ್ಷದೊಳಗಿನ ಎಲ್ಲರನ್ನೂ ಮಕ್ಕಳೆಂದೇ ಪರಿಗಣಿಸುತ್ತದೆ. ಎಳೆಯರು ತಮ್ಮ ಮೇಲಾಗುವ ಶೋಷಣೆ, ಕಿರುಕುಳ, ದೌರ್ಜನ್ಯಗಳನ್ನು ಅದು ಮನೆಯಲ್ಲಾಗಲಿ, ಶಾಲೆಯಲ್ಲಾಗಲಿ ತಮ್ಮ ಪೋಷಕರು, ಶಿಕ್ಷಕರೊಂದಿಗೆ ಹಂಚಿಕೊಳ್ಳಲು ಸಹಜವಾಗಿಯೇ ಹಿಂಜರಿಯುತ್ತಾರೆ. ಅವರ ಈ ಅಸಹಾಯಕತೆಯ ಕಾರಣ, ಕ್ರೌರ್ಯ ಮತ್ತಷ್ಟು ಹೆಚ್ಚುತ್ತದೆ.



ಮಕ್ಕಳಿಗೆ ಸುರಕ್ಷಿತ ವಾತಾವರಣ, ಉತ್ತಮ ಭವಿಷ್ಯ ಖಾತರಿಪಡಿಸುವುದು, ಅವರ ಯಾವುದೇ ಸಮಸ್ಯೆಗಳಿಗೆ ತುರ್ತಾಗಿ ಸ್ಪಂದಿಸುವುದು ಆಡಳಿತದ ಹೊಣೆ. ಈ ನಿಟ್ಟಿನಲ್ಲಿ ಸಹಾಯವಾಣಿಯ ಸೌಲಭ್ಯವಲ್ಲದೆ, ಪ್ರತಿ ಶಿಕ್ಷಣ ಸಂಸ್ಥೆಯಲ್ಲೂ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿ ರಚಿಸಬೇಕೆಂದು ಸರ್ಕಾರದ ಆದೇಶವಿದೆ. ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು, ಆಡಳಿತ ಮಂಡಳಿಯ ಪ್ರತಿನಿಧಿಗಳುಳ್ಳ ಈ ಸಮಿತಿ ನಿಯಮಿತವಾಗಿ ಸಭೆ ಸೇರಿ ಮಕ್ಕಳ ಕುಂದು–ಕೊರತೆ ಬಗ್ಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕು. ಮಕ್ಕಳ ಹಕ್ಕುಗಳು, ಪೋಕ್ಸೊ ಕಾಯ್ದೆಯಂತಹ ವಿಚಾರಗಳಲ್ಲಿ ಅರಿವು ಮೂಡಿಸಬೇಕೆಂಬ ನಿರ್ದೇಶನವಿದೆ.

ಸಹಾಯವಾಣಿ ವಿಷಯದಲ್ಲಿ ನಮ್ಮ ಬಹುತೇಕ ಮಕ್ಕಳು ಮುಗ್ಧರು. ಮಕ್ಕಳ ಗ್ರಾಮ ಸಭೆ, ಶಾಲಾ ಕಾರ್ಯಕ್ರಮಗಳಲ್ಲಿ ಸಹಾಯವಾಣಿಯ ಬಗ್ಗೆ ಎಷ್ಟು ಮಕ್ಕಳಿಗೆ ಗೊತ್ತಿದೆ ಎಂಬ ಪ್ರಶ್ನೆ ಮುಂದಿಟ್ಟರೆ ಸಿಗುವ ಪ್ರತಿಕ್ರಿಯೆ ನಿರಾಶಾದಾಯಕ. ಬೆರಳೆಣಿಕೆಯಷ್ಟು ಎಳೆಯರನ್ನು ಬಿಟ್ಟರೆ ಉಳಿದವರಿಗೆ ಈ ಸಂಖ್ಯೆಯಾಗಲೀ, ಅದರ ಮಹತ್ವವಾಗಲೀ ತಿಳಿದಿಲ್ಲ. ಹಾಗಾಗಿಯೇ ಬಾಲ್ಯವಿವಾಹ, ಬಾಲಕಾರ್ಮಿಕರು, ದೇವದಾಸಿ ಪದ್ಧತಿ, ಮಕ್ಕಳ ಕಳ್ಳಸಾಗಣೆ, ಲೈಂಗಿಕ ದೌರ್ಜನ್ಯ ಸೇರಿದಂತೆ ಮಕ್ಕಳ ಮೇಲಾಗುತ್ತಿರುವ ವಿವಿಧ ಕ್ರೌರ್ಯಗಳಿಗೆ ಕಡಿವಾಣ ಹಾಕಲು ಸಾಧ್ಯವಾಗುತ್ತಿಲ್ಲ.

ಸಹಾಯವಾಣಿಯೆಂಬ ಆಪ್ತರಕ್ಷಕ ವ್ಯವಸ್ಥೆಯನ್ನು ಎಳೆಯರಿಗೆ ಆಪ್ತವಾಗಿಸಿ ಅವರ ಸಮಗ್ರ ಸ್ವಾಸ್ಥ್ಯವನ್ನು ಕಾಪಾಡುವ ನಿಟ್ಟಿನಲ್ಲಿ ವ್ಯಾಪಕ ಪ್ರಚಾರ ನೀಡುವ ಆಡಳಿತದ ಈ ನಡೆ ಖಂಡಿತವಾಗಿಯೂ ಪ್ರಶಂಸಾರ್ಹ. ಹೌದು, ಮಕ್ಕಳ ಸಹಾಯವಾಣಿ ಎಳೆಯರ ಸಂವಿಧಾನಬದ್ಧ ಹಕ್ಕುಗಳನ್ನು ರಕ್ಷಿಸುವಲ್ಲಿ, ಅವರ ಸುರಕ್ಷಿತ ಭವಿಷ್ಯ ಖಚಿತಪಡಿಸಿಕೊಳ್ಳುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ.

ಸಹಾಯವಾಣಿಯ ನೆರವಿನಿಂದ ಮಕ್ಕಳು ತಮ್ಮ ಸಂಕಟಗಳಿಗೆ ಪರಿಹಾರ ಕಂಡುಕೊಂಡ ಅನೇಕ ನಿದರ್ಶನಗಳಿವೆ. ಶಿಕ್ಷಣ ಪಡೆಯುವ ತನ್ನ ಹಕ್ಕಿಗೆ ಚ್ಯುತಿಯಾಗುತ್ತಿದೆಯೆಂಬ ಕಾರಣಕ್ಕೆ ಮನೆಗೆ ವಿದ್ಯುತ್ ಸಂಪರ್ಕ ಪಡೆದುಕೊಂಡ, ಶೌಚಾಲಯ ಸೌಲಭ್ಯ ಪಡೆದುಕೊಂಡ, ಕುಡಿಯುವ ನೀರಿನ ಸಂಪರ್ಕ ಪಡೆದ, ಬಾಲ್ಯವಿವಾಹದಿಂದ ಬಚಾವಾದ, ಬಂಧುಗಳು, ಶಿಕ್ಷಕರ ಲೈಂಗಿಕ ಕಿರುಕುಳದಿಂದ ಪಾರಾದ, ಮನೆಗೆ ರಸ್ತೆ ಸಂಪರ್ಕ ಪಡೆದುಕೊಂಡ ಹಲವು ಉದಾಹರಣೆಗಳು ನಮ್ಮ ಕಣ್ಣೆದುರುಗಿವೆ.

ಸಹಾಯವಾಣಿಯ ಇಂತಹ ಯಶೋಗಾಥೆಗಳನ್ನು ಎಳೆಯರೊಡನೆ ಹಂಚಿಕೊಳ್ಳಬೇಕು. ವ್ಯಾಪಕ ಪ್ರಚಾರದ ಜೊತೆಗೆ ವರ್ಷಕ್ಕೆ ಕನಿಷ್ಠ ಎರಡು ಬಾರಿಯಾದರೂ ಮಕ್ಕಳ ಗ್ರಾಮಸಭೆಯನ್ನು ಪರಿಣಾಮಕಾರಿಯಾಗಿ ಆಯೋಜಿಸಿ, ಅವರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಿ, ಅಹವಾಲುಗಳನ್ನು ಆಲಿಸಿ, ಪರಿಹಾರ ಕಂಡುಕೊಳ್ಳಬೇಕು. ಸ್ವಸ್ಥ ನಾಗರಿಕ ಸಮಾಜ ಕಟ್ಟಲು ಅರಿವೆಂಬ ಅಸ್ತ್ರ ಮೊನಚಾಗಬೇಕು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಯುಪಿಐ–ಜಿಎಸ್‌ಟಿ; ಗೊಂದಲವೇಕೆ?

• ಎಚ್.ಆರ್.ಪ್ರಭಾಕರ್



ಎರಡು ವಾರಗಳಿಂದ ರಾಜ್ಯದಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ನೋಟಿಸ್ ಸದ್ದು ಮಾಡುತ್ತಿದೆ. ಜಿಎಸ್‌ಟಿಯನ್ನು ಅರ್ಥಮಾಡಿಕೊಳ್ಳಲು ಜನರಿಗೆ ಒಂದಷ್ಟು ಸಮಯ ಬೇಕಾಗಬಹುದು ಎನ್ನುವುದನ್ನೂ ಯೋಚಿಸದೆ 2017ರ ಜುಲೈ 1ರಂದು ದೇಶದಾದ್ಯಂತ ಅದನ್ನು ಜಾರಿಗೆ ತರಲಾಗಿತ್ತು. ಹೊಸ ತೆರಿಗೆ ವ್ಯವಸ್ಥೆ ಜಾರಿಗೆ ಬಂದು ಎಂಟು ವರ್ಷಗಳು ಕಳೆದಿದ್ದರೂ ಹೆಚ್ಚಿನ ಜನರಿಗೆ ಅದರ ಬಗ್ಗೆ ತಿಳಿದಿಲ್ಲ; ಅವರ ಪ್ರಶ್ನೆಗಳಿಗೆ ಉತ್ತರ ಸಿಕ್ಕಿಲ್ಲ. ಆರಂಭದಿಂದಲೂ ಒಂದಲ್ಲ ಒಂದು ಸಮಸ್ಯೆ ಎದುರಿಸುತ್ತಾ ಬಂದ ಈ ವ್ಯವಸ್ಥೆ ಸುಧಾರಿಸುತ್ತಿದೆ ಎಂಬ ಭಾವನೆ ಮೂಡಿದ ಹೊತ್ತಿನಲ್ಲೇ ಈಗ ರಾಜ್ಯದ ಸಾವಿರಾರು ಹಣ್ಣು, ತರಕಾರಿ, ಬೇಕರಿ, ಕಾಂಡಿಮೆಂಟ್ಸ್ ವ್ಯಾಪಾರಿಗಳು, ಮದ್ಯದ ಅಂಗಡಿಗಳಲ್ಲಿ ಕುರುಕಲು ತಿಂಡಿ ಮಾಡುವವರು, ಹೋಟೆಲ್‌ಗಳು, ಪಾನ್ ಬೀಡಾ ಅಂಗಡಿಗಳನ್ನು ನಡೆಸುತ್ತಿರುವವರಿಗೆ ವಾಣಿಜ್ಯ ತೆರಿಗೆ ಇಲಾಖೆ ನೋಟಿಸ್ ನೀಡಿದೆ. ನೋಟಿಸ್ ಕಂಡ ವ್ಯಾಪಾರಿಗಳು ಆತಂಕಗೊಂಡಿದ್ದಾರೆ, ದ್ವಂದ್ವಕ್ಕೆ ಒಳಗಾಗಿದ್ದಾರೆ, ಒಂದಷ್ಟು ಜನ ತಮ್ಮ ಸಿಟ್ಟನ್ನು ಹೊರಹಾಕಿದ್ದಾರೆ. ಮತ್ತೊಂದಷ್ಟು ಜನ ರೊಚ್ಚಿಗೂ ಎದ್ದಿದ್ದಾರೆ. ನೋಟಿಸ್ ನೀಡುವುದಕ್ಕೆ ಏನು ಕಾರಣ? ಈ ಗೊಂದಲ ಏಕೆ? ಉತ್ತರಗಳು ಇಲ್ಲಿವೆ



• ಏನಿದು ಜಿಎಸ್‌ಟಿ? ಯಾರ ಅಧೀನದಲ್ಲಿದೆ?

ರಾಜ್ಯ ಮತ್ತು ಕೇಂದ್ರ ಸರ್ಕಾರಗಳು 50:50 ಅನುಪಾತದಲ್ಲಿ ಪಾಲು ಪಡೆಯುವ ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆಯು ಕೇಂದ್ರ ಸರ್ಕಾರದ ಪರೋಕ್ಷ ತೆರಿಗೆಗಳ ಕೇಂದ್ರೀಯ ಮಂಡಳಿ ಅಡಿಯಲ್ಲಿ ಬರುವ ತೆರಿಗೆ ಇಲಾಖೆ ಮತ್ತು ರಾಜ್ಯ ಸರ್ಕಾರದ ವಾಣಿಜ್ಯ ತೆರಿಗೆಗಳ ಇಲಾಖೆಗಳ ಅಧೀನದಲ್ಲಿ ಬರುತ್ತದೆ. ನಾವು ಖರೀದಿಸುವ ಪ್ರತಿ ಸರಕು ಮತ್ತು ಪಡೆಯುವ ಪ್ರತಿ ಸೇವೆಯ ಮೇಲೆ ಪಾವತಿಸುವ ಒಂದು ರೂಪಾಯಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ತಲಾ 50 ಪೈಸೆ ತೆರಿಗೆ ಹೋಗುತ್ತದೆ. ಅಂತರರಾಜ್ಯ ವಹಿವಾಟಿಗೆ ಸಂಬಂಧಿಸಿದಂತೆ ಐಜಿಎಸ್‌ಟಿ ಇದ್ದು, ಅದರಲ್ಲಿ ಕೇಂದ್ರ ಸರ್ಕಾರಕ್ಕೆ ಮಾತ್ರ ಪಾಲಿದೆ.

• ನೋಟಿಸ್ ಕೊಟ್ಟಿದ್ದು ಯಾರು?

ರಾಜ್ಯದಲ್ಲಿ ಇದುವರೆಗೆ ಬಂದ ನೋಟಿಸ್‌ಗಳನ್ನು ಆಧರಿಸಿ ಹೇಳುವುದಾದರೆ, ರಾಜ್ಯ ಸರ್ಕಾರದ ವಾಣಿಜ್ಯ ತೆರಿಗೆ ಇಲಾಖೆ ನೋಟಿಸ್‌ಗಳನ್ನು ನೀಡಿದೆ. ಕೇಂದ್ರ ತೆರಿಗೆ ಇಲಾಖೆ ಕೊಟ್ಟಿದ್ದು ಎಲ್ಲೂ ವರದಿಯಾಗಿಲ್ಲ. ಆದರೆ, ಸಂಗ್ರಹವಾಗುವ ಪ್ರತಿ ರೂಪಾಯಿ ತೆರಿಗೆಯಲ್ಲೂ ಕೇಂದ್ರಕ್ಕೆ ಶೇ 50 ಪಾವತಿಯಾಗುತ್ತದೆ ಎಂಬುದನ್ನು ನಾವು ನೆನಪಿಡಬೇಕು.

ವಹಿವಾಟಿನ ಮಿತಿ ಎಷ್ಟು?

ಒಂದು ಆರ್ಥಿಕ ವರ್ಷದಲ್ಲಿ ನಡೆಯುವ ಸೇವೆಗೆ (service) ಸಂಬಂಧಿಸಿದ ವಹಿವಾಟಿನ ಮೊತ್ತ ₹20 ಲಕ್ಷಕ್ಕಿಂತ ಕಡಿಮೆ ಇದ್ದರೆ, ಅಂತಹ ವ್ಯಾಪಾರಿಗಳು ಜಿಎಸ್‌ಟಿ ನೋಂದಣಿ ಮಾಡುವ ಅವಶ್ಯಕತೆ ಇಲ್ಲ. ಅದೇ ರೀತಿ, ವಾರ್ಷಿಕ ಸರಕು (goods) ವಹಿವಾಟಿನ ಮೊತ್ತ ₹40 ಲಕ್ಷದವರೆಗೆ ಇದ್ದರೆ ನೋಂದಣಿ ಮಾಡಬೇಕಾಗಿಲ್ಲ. ಒಂದು ವೇಳೆ ಸೇವೆ ಮತ್ತು ಸರಕು ವ್ಯವಹಾರದ ಮಿತಿಯು ಇದನ್ನು ಮೀರಿದ್ದರೆ, ಜಿಎಸ್‌ಟಿ ನೋಂದಣಿ ಮತ್ತು ತೆರಿಗೆ ಪಾವತಿಸುವುದು ಕಡ್ಡಾಯ. ಜಿಎಸ್‌ಟಿ ನೋಂದಣಿ ಮಾಡಿಕೊಳ್ಳದೆ, ವಾರ್ಷಿಕವಾಗಿ ಈ ಮಿತಿಗಿಂತ ಹೆಚ್ಚು ವಹಿವಾಟು ನಡೆಸಿದವರಿಗೆ ಈಗ ನೋಟಿಸ್ ಬಂದಿದೆ

ನಗದು ವ್ಯವಹಾರ ಪರಿಹಾರವೇ?

ಯುಪಿಐ ಬಳಸದೇ ನಗದು ವ್ಯವಹಾರ ಮಾಡುವುದು ಇದಕ್ಕೆ ಪರಿಹಾರವಲ್ಲ. ಇಲಾಖೆ ಈಗಾಗಲೇ ಇದರ ಬಗ್ಗೆ ಸ್ಪಷ್ಟನೆ ನೀಡಿದೆ. ಮೊದಲು ನೋಟಿಸ್‌ಗೆ ಉತ್ತರಿಸಬೇಕು. ನಂತರ ಇಲಾಖೆಯ ಅಧಿಕಾರಿಯು ನೀವು ಕೊಡುವ ಉತ್ತರ, ಅದಕ್ಕೆ ಸಂಬಂಧಿಸಿದ ದಾಖಲೆ ಎಲ್ಲವನ್ನೂ ಪರಿಶೀಲಿಸಿ ನೀವು ತೆರಿಗೆ ಕಟ್ಟಬೇಕಾ, ಜಿಎಸ್‌ಟಿ ನೋಂದಣಿ ಮಾಡಿಕೊಳ್ಳಬೇಕಾ ಎಂಬ ಬಗ್ಗೆ ಮಾರ್ಗದರ್ಶನ ಮಾಡುತ್ತಾರೆ. ಯಾವ ಉತ್ತರವನ್ನೂ ನೀಡದೇ ಹೋದರೆ ಜಿಎಸ್‌ಟಿ ಕಾಯ್ದೆಯ ಪ್ರಕಾರ, ನೀವೇ ತೆರಿಗೆ ವಂಚಿಸುತ್ತಿದ್ದೀರಿ ಎಂದು ಕ್ರಮ ಕೈಗೊಳ್ಳಲಾಗುವುದು. ಹಾಗಾಗಿ 'ನಾನ್ಯಾಕೆ ಉತ್ತರಿಸಲಿ' ಎನ್ನುವುದಕ್ಕಿಂತ ನಿಮ್ಮ ಉತ್ತರ ಲಿಖಿತ ರೂಪದಲ್ಲಿ ತೆರಿಗೆ ಇಲಾಖೆಯ ಕಚೇರಿಗೆ ಸಲ್ಲಿಸುವುದು ಸೂಕ್ತ. ನೀವು ತೆರಿಗೆ ವ್ಯಾಪ್ತಿಗೆ ಬರುತ್ತೀರೋ ಇಲ್ಲವೋ ಎನ್ನುವುದು ನಂತರದ ವಿಷಯ. ಆದರೆ, ಇಲಾಖೆಯ ನೋಟಿಸ್‌ಗೆ ದಾಖಲೆಗಳ ಮತ್ತು ಅಂಕಿ ಅಂಶಗಳ ಸಹಿತ ಉತ್ತರಿಸುವುದಂತೂ ಅನಿವಾರ್ಯ.

ಜಿಎಸ್‌ಟಿ ಜಾರಿಯಾದಾಗಿನಿಂದ ಈವರೆಗೆ ಜಿಎಸ್‌ಟಿ ಕೌನ್ಸಿಲ್‌ನ 55 ಸಭೆಗಳಾಗಿವೆ. ಆ ಸಭೆಗಳಲ್ಲಿ ಅನೇಕ ಬದಲಾವಣೆಗಳ ಬಗ್ಗೆ ನಿರ್ಣಯ ಕೈಗೊಂಡು ಜಾರಿಗೆ ತರಲಾಗಿದೆ. ಮುಂದೆ ಇನ್ನೇನು ಬದಲಾವಣೆಗಳು ಆಗಬಹುದು ಎನ್ನುವ ಕುತೂಹಲ ಇದ್ದೇ ಇದೆ.

• ಇಷ್ಟು ವರ್ಷ ಇಲ್ಲದ ನೋಟಿಸ್ ಈಗೇಕೆ ಬಂತು?

ಏಕೀಕೃತ ಪಾವತಿ ವ್ಯವಸ್ಥೆ (ಯುಪಿಐ) ಮೂಲಕ ನಡೆದ ವಹಿವಾಟಿನ ಆಧಾರದಲ್ಲಿ ಪ್ರತಿ ಆರ್ಥಿಕ ವರ್ಷ ಕಳೆದ ತಕ್ಷಣ ನೋಟಿಸ್ ನೀಡದೇ, ಈಗ ಒಟ್ಟಿಗೆ ಮೂರು ಅಥವಾ ನಾಲ್ಕು ವರ್ಷಗಳ ವಹಿವಾಟುಗಳ ಆಧಾರದಲ್ಲಿ ನೋಟಿಸ್ ಕೊಟ್ಟಿದ್ದು ಯಾಕೆ ಎಂಬುದು ಬಹುತೇಕರ ಪ್ರಶ್ನೆ. ಜಿಎಸ್‌ಟಿ 2017ರಲ್ಲಿ ಜಾರಿಗೆ ಬಂದಿದ್ದರೂ ಅಂದಿನಿಂದ ನೀಡದೆ, 2020ರಿಂದ ನೋಟಿಸ್ ಯಾಕೆ ಕೊಟ್ಟಿದ್ದು ಎನ್ನುವ ಪ್ರಶ್ನೆಯೂ ಇದೆ. 2020ರ ನಂತರ ನಡೆದಿದ್ದ ಯುಪಿಐ ವಹಿವಾಟು ಆಧರಿಸಿ ನೋಟಿಸ್ ನೀಡಲಾಗಿದೆ ಎಂಬ ವಿಷಯವನ್ನು ವಾಣಿಜ್ಯ ತೆರಿಗೆ ಇಲಾಖೆಯೇ ಹೇಳಿದ್ದನ್ನು ಗಮನಿಸಬೇಕು. ಅಂದರೆ, ಯಾವ ವರ್ಷದಿಂದ ಯುಪಿಐ ದತ್ತಾಂಶ ಲಭ್ಯವಿದೆಯೋ, ಆಯಾ ವರ್ಷದ ಮಾಹಿತಿ ಆಧರಿಸಿ ನೋಟಿಸ್ ನೀಡಲಾಗಿದೆ ಎಂಬುದು ಸ್ಪಷ್ಟ. ನೋಟಿಸ್ ನೀಡುವುದಕ್ಕೆ ಸಮಯದ ಮಿತಿ ಇದೆ. ಒಂದು ಸಂಸ್ಥೆಯ ಮೌಲ್ಯಮಾಪನ (ಅಸೆಸ್‌ಮೆಂಟ್) ಮಾಡಲು ಕಾನೂನಿನ ಅಡಿಯಲ್ಲಿ ಐದು ವರ್ಷಗಳವರೆಗೆ ಅವಕಾಶವಿದೆ. ಈ ಕಾರಣದಿಂದ ನೋಟಿಸ್ ಜಾರಿ ಮಾಡಲು ತಡವಾಗಿರಬಹುದು.

• ಮಿತಿಮೀರಿ ವಹಿವಾಟು ನಡೆಸಿದರೆ ಎಷ್ಟು ತೆರಿಗೆ ಪಾವತಿಸಬೇಕು?

ಆರ್ಥಿಕ ವರ್ಷದಲ್ಲಿ ₹20 ಲಕ್ಷ (ಸೇವೆ), ₹40 ಲಕ್ಷ (ಸರಕು) ಮಿತಿಗಿಂತ ಹೆಚ್ಚು ವಹಿವಾಟು ನಡೆಸಿದ ವ್ಯಾಪಾರಿಗಳು ತೆರಿಗೆ ಪಾವತಿಸುವುದು ಕಡ್ಡಾಯ. ಆದರೆ, ಸಣ್ಣ ವ್ಯಾಪಾರಿಗಳಿಗಾಗಿಯೇ ಕಾಂಪೋಸಿಷನ್ ಸ್ಕೀಮ್ ಅಥವಾ ರಾಜಿ ತೆರಿಗೆ ಪದ್ಧತಿ ಎಂಬ ವ್ಯವಸ್ಥೆ ಇದೆ. ಇದರಲ್ಲಿ ಒಬ್ಬ ಸರಕು ವ್ಯಾಪಾರಿಯ ವಾರ್ಷಿಕ ವಹಿವಾಟು ₹1.5 ಕೋಟಿಯ ಒಳಗಿದ್ದರೆ ಅಂತಹ ವ್ಯಾಪಾರಿ ಕೇವಲ ಶೇ 1ರಷ್ಟು (ಸಿಜಿಎಸ್‌ಟಿ ಶೇ 0.5, ಎಸ್‌ಜಿಎಸ್‌ಟಿ ಶೇ 0.5) ತೆರಿಗೆಯನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಪಾವತಿಸಿ ತಮ್ಮ ರಿಟರ್ನ್ ಸಲ್ಲಿಸಬಹುದು. ಅದೇ ರೀತಿ, ಸೇವಾ ವಲಯದ ವ್ಯಕ್ತಿ ಅಥವಾ ಸಂಸ್ಥೆ ವಾರ್ಷಿಕ ವಹಿವಾಟು ₹50 ಲಕ್ಷದ ಒಳಗೆ ಇದ್ದರೆ, ಅದಕ್ಕೆ ಸಂಬಂಧಿಸಿದಂತೆ ಶೇ 6 ರಷ್ಟು (ಸಿಜಿಎಸ್‌ಟಿ ಶೇ 3, ಎಸ್‌ಜಿಎಸ್‌ಟಿ ಶೇ 3) ತೆರಿಗೆ ಪಾವತಿಸಬೇಕು. ಹೋಟೆಲ್ ಮಾಲೀಕರೂ ಈ ರಾಜಿ ತೆರಿಗೆ ಪದ್ಧತಿ ಅಳವಡಿಸಿಕೊಳ್ಳಬಹುದು. ಅವರು ಶೇ 5ರಷ್ಟು ತೆರಿಗೆ ಪಾವತಿಸಬೇಕಾಗುತ್ತದೆ (ಸಿಜಿಎಸ್‌ಟಿ ಶೇ 2.5, ಎಸ್‌ಜಿಎಸ್‌ಟಿ ಶೇ 2.5).

ಈ ರಾಜಿ ತೆರಿಗೆ ಪದ್ಧತಿಯನ್ನು ನೋಂದಣಿ ಸಮಯದಲ್ಲಿ ಅಥವಾ ಪ್ರತಿ ಆರ್ಥಿಕ ವರ್ಷದ ಆರಂಭದಲ್ಲಿ ಆಯ್ಕೆ ಮಾಡಿಕೊಳ್ಳಲು ಮಾತ್ರ ಅವಕಾಶವಿರುತ್ತದೆ. ಈಗಾಗಲೇ ನೋಟಿಸ್ ಪಡೆದವರಿಗೆ ಕಳೆದ ಆರ್ಥಿಕ ವರ್ಷಗಳಿಗೆ ಇದರ ಆಯ್ಕೆಯ ಅವಕಾಶ ಇಲ್ಲ.

• ಯಾರಿಗೆಲ್ಲ ವಿನಾಯಿತಿ ಇದೆ?

ಪರೋಕ್ಷ ತೆರಿಗೆ ವಿನಾಯಿತಿ ಕೆಲವು ವಸ್ತುಗಳಿಗೆ ಮಾತ್ರವಿದೆ. ಅದರಲ್ಲಿ, ಈಗ ನೋಟಿಸ್ ಬಂದಂತಹ ವಿಷಯಕ್ಕೆ ಸಂಬಂಧಿಸಿದಂತೆ ಹಾಲು, ತರಕಾರಿ, ಹಣ್ಣುಗಳು, ಹಾಲು, ಮಾಂಸ, ಮೀನು, ಮೊಟ್ಟೆ, ಅಕ್ಕಿ, ರಾಗಿ, ಜೋಳ, ಗೋಧಿ, ಸಜ್ಜೆ, ನವಣೆ ಇವುಗಳಿಗೆ ತೆರಿಗೆ ವಿನಾಯಿತಿ ಇದೆ. ಉಳಿದ ಪದಾರ್ಥಗಳಿಗೆ ಸಂಬಂಧಿಸಿದಂತೆ ಸರಕು ಮತ್ತು ಸೇವಾ ತೆರಿಗೆಯ ಕಾಯ್ದೆಯ ಪ್ರಕಾರ ಆಯಾ ಸರಕುಗಳಿಗೆ ಇರುವಂತಹ ಶೇ 5, ಶೇ 12, ಶೇ 18 ಮತ್ತು ಶೇ 28 ತೆರಿಗೆ ಪಾವತಿಸಬೇಕು. ಚಿನ್ನ ಬೆಳ್ಳಿಗೆ ಶೇ 3... ಹೀಗೆ ತೆರಿಗೆ ಅನ್ವಯಿಸುತ್ತದೆ.

• ನೋಟಿಸ್‌ಗೆ ಉತ್ತರಿಸುವುದು ಹೇಗೆ?

ನೋಟಿಸ್ ಬಂದ ತಕ್ಷಣ ಭಯಭೀತರಾಗದೆ ನಿಮ್ಮ ಯುಪಿಐ ವಹಿವಾಟಿನ ವಿವರಗಳನ್ನು ಆಯಾ ಆರ್ಥಿಕ ವರ್ಷದ ಬ್ಯಾಂಕ್ ಸ್ಟೇಟ್‌ಮೆಂಟ್ ಪಡೆದು (ಬಹುತೇಕರದ್ದು ನೂರಾರು/ಸಾವಿರಾರು ಪುಟಗಳಿರುವುದರಿಂದ ಸಾಫ್ಟ್ ಕಾಪಿ ಡೌನ್‌ಲೋಡ್ ಮಾಡುವುದು ಉತ್ತಮ) ಅದರಲ್ಲಿ ಬಂದಿರುವುದೆಲ್ಲಾ ವ್ಯಾಪಾರದ ಹಣವಾ? ಬೇರೆ ಸಾಲಗಳಿದ್ದವೇ? ನಗದು ತೇವಣಿ ಇದೆಯೇ? ನೀವು ಯಾವ ವಸ್ತುಗಳನ್ನು ಮಾರುತ್ತಿದ್ದೀರಿ? ಹೀಗೆ ಪ್ರತಿಯೊಂದು ವಿವರವನ್ನೂ ನೋಟಿಸ್ ಕೊಟ್ಟ ಅಧಿಕಾರಿಗೆ ಉತ್ತರಿಸಬೇಕು. ಇಲ್ಲದಿದ್ದರೆ ನಿಮ್ಮದೇನೂ ತಕರಾರಿಲ್ಲ ಎಂದು ಅಧಿಕಾರಿ ಏಕಪಕ್ಷೀಯವಾಗಿ ನಿರ್ಧಾರ ಕೈಗೊಂಡು ಆದೇಶ ಮಾಡಲು ಅವಕಾಶವಿದೆ.


• ರಾಜ್ಯ ಸರ್ಕಾರ ಈ ತೆರಿಗೆ ಮನ್ನಾ ಮಾಡಬಹುದಾ?

ಸರಕು ಮತ್ತು ಸೇವಾ ತೆರಿಗೆ ಕೇಂದ್ರ ಸರ್ಕಾರದ ನೇರ ವ್ಯಾಪ್ತಿಯಲ್ಲಿ ಇಲ್ಲ. 'ಜಿಎಸ್‌ಟಿ ಕೌನ್ಸಿಲ್' ಎನ್ನುವ ಪರೋಕ್ಷ ತೆರಿಗೆ ಮಂಡಳಿಯ ಅಡಿಯಲ್ಲಿ ಬರುತ್ತದೆ. ಕೇಂದ್ರ ಹಣಕಾಸು ಸಚಿವರು ಇದಕ್ಕೆ ಅಧ್ಯಕ್ಷರು. ಉಳಿದಂತೆ ಪ್ರತಿ ರಾಜ್ಯದ ಪ್ರತಿನಿಧಿ ಅಥವಾ ಹಣಕಾಸು ಮಂತ್ರಿ ಆಯಾ ರಾಜ್ಯದ ಸಮಸ್ಯೆಗಳನ್ನು, ಪ್ರಶ್ನೆಗಳನ್ನು ಮಂಡಳಿ ಸಭೆಯಲ್ಲಿ ಇರಿಸುತ್ತಾರೆ. ಅಲ್ಲಿ ಅಂಗೀಕಾರವಾದ, ಅನುಮೋದಿಸಲ್ಪಟ್ಟ ವಿಷಯಗಳನ್ನು ಮಾತ್ರ ಜಾರಿಗೆ ತರಲಾಗುತ್ತದೆಯೇ ವಿನಾ, ರಾಜ್ಯ ಸರ್ಕಾರವಾಗಲಿ, ಕೇಂದ್ರ ಸರ್ಕಾರವಾಗಲಿ ತೀರ್ಮಾನ ಕೈಗೊಳ್ಳುವುದಕ್ಕೆ ಆಗುವುದಿಲ್ಲ. ಜಿಎಸ್‌ಟಿ ಮಂಡಳಿ ಮಾತ್ರ ಸದಸ್ಯರ ಬಹುಮತ ಅಭಿಪ್ರಾಯದ ಆಧಾರದ ಮೇಲೆ ಈ ವಿಷಯದಲ್ಲಿ ನಿರ್ಧಾರ ಕೈಗೊಳ್ಳಬಹುದು.

ಲೇಖಕ: ತೆರಿಗೆ ಮತ್ತು ಆರ್ಥಿಕ ತಜ್ಞ

ನೋಟಿಸ್ ಬಂದಾಗ ಏನು ಮಾಡಬೇಕು?

• ಜಂಬಿಗಿ ರಾಧೇಶ



ವ್ಯಾಪಾರಿಗಳಿಗೆ, ವಿಶೇಷವಾಗಿ ಜಿಎಸ್‌ಟಿ ನೋಂದಣಿ ಮಾಡಿಸದವರಿಗೆ ತೆರಿಗೆ ಪಾವತಿಸಿ ಮತ್ತು ನೋಂದಣಿ ಮಾಡಿಸಿಕೊಳ್ಳಿ ಎಂದು ಸೂಚಿಸಿ ವಾಣಿಜ್ಯ ತೆರಿಗೆ ಇಲಾಖೆಯಿಂದ ಜಿಎಸ್‌ಟಿ ನೋಟಿಸ್ ಬಂದರೆ ಏನು ಮಾಡಬೇಕು? ಇಲ್ಲಿದೆ ಸಲಹೆ:

- ಜಿಎಸ್‌ಟಿ ಕಾಯ್ದೆಯ ಅಡಿಯಲ್ಲಿ, ವಾರ್ಷಿಕ ವಹಿವಾಟು (Aggregate Turnover) ಎಂದರೆ ಕೇವಲ ವ್ಯಾಪಾರಕ್ಕೆ ಸಂಬಂಧಿಸಿದ ಆದಾಯ (Business Receipts) ಮಾತ್ರ. ಅದರಲ್ಲಿ ವೈಯಕ್ತಿಕ ಅಥವಾ ವ್ಯಾಪಾರೇತರ (Non-Business) ವಹಿವಾಟುಗಳು ಸೇರುವುದಿಲ್ಲ
- ಜಿಎಸ್‌ಟಿ ಕಾಯ್ದೆಯ ಸೆಕ್ಷನ್ 22/24ರ ಅಡಿಯಲ್ಲಿ ನಿಮ್ಮ ವ್ಯವಹಾರದ ವಾರ್ಷಿಕ ವಹಿವಾಟು ಮಿತಿ ಮೀರಿದರೆ ಅಥವಾ ಕಡ್ಡಾಯ ನೋಂದಣಿಗೆ ಒಳಪಡುವ ವ್ಯವಹಾರವಿದ್ದರೆ, ತಕ್ಷಣ ಜಿಎಸ್‌ಟಿ ನೋಂದಣಿ ಮಾಡಿಸಿ. ಎಲ್ಲಾ ವಹಿವಾಟುಗಳ ದಾಖಲೆಗಳನ್ನೂ ಕ್ರಮಬದ್ಧವಾಗಿ ಇರಿಸಿಕೊಳ್ಳಿ
- ಜಿಎಸ್‌ಟಿ ಕಾಯ್ದೆಯ ಸೆಕ್ಷನ್ 23ರ ಪ್ರಕಾರ, ಸಂಪೂರ್ಣವಾಗಿ ತೆರಿಗೆ-ವಿನಾಯಿತಿ ಇರುವ ಅಥವಾ ಶೂನ್ಯ-ದರದ ವಸ್ತು/ಸೇವೆಗಳಿಗೆ ನೋಂದಣಿ ಅಗತ್ಯವಿಲ್ಲ. ಉದಾಹರಣೆಗೆ, ಹಣ್ಣು/ತರಕಾರಿ ಮಾರಾಟ, ಕೃಷಿಕರ ಅಕ್ಕಿ ಮಾರಾಟ, ಆಸ್ಪತ್ರೆ ಸೇವೆಗಳು
- ಕೆಲವೊಮ್ಮೆ, ತೆರಿಗೆ ಇಲಾಖೆಯು ಯುಪಿಐ ವಹಿವಾಟಿನ ಒಟ್ಟು ದತ್ತಾಂಶವನ್ನು (ವೈಯಕ್ತಿಕ ಮತ್ತು ವ್ಯಾಪಾರ ವಹಿವಾಟುಗಳನ್ನು ಒಟ್ಟಿಗೆ) ಗಣನೆಗೆ ತೆಗೆದುಕೊಂಡು, ವಾರ್ಷಿಕ ವಹಿವಾಟಿನ ಮಿತಿಯನ್ನು ಮೀರಿದೆ ಎಂದು ಭಾವಿಸಿ ನೋಟಿಸ್ ಜಾರಿ ಮಾಡಬಹುದು. ನಿಮ್ಮ ಬ್ಯಾಂಕ್ ಸ್ಟೇಟ್‌ಮೆಂಟ್, ವಹಿವಾಟಿನ ಟಿಪ್ಪಣಿಗಳ ಆಧಾರದಲ್ಲಿ ವೈಯಕ್ತಿಕ ಮತ್ತು ವ್ಯಾಪಾರಕ್ಕೆ ಸಂಬಂಧಿಸಿದ ಯುಪಿಐ ವಹಿವಾಟುಗಳನ್ನು ಸ್ಪಷ್ಟವಾಗಿ ವಿಂಗಡಿಸಿ ತೋರಿಸಿ, 'ಇವು ವ್ಯಾಪಾರಕ್ಕೆ ಸಂಬಂಧವಿಲ್ಲ ಎನ್ನುವುದನ್ನು ಸಾಬೀತುಪಡಿಸಬೇಕು
- ಯುಪಿಐ ವಹಿವಾಟುಗಳು ಡಿಜಿಟಲ್ ಆರ್ಥಿಕತೆಯನ್ನು ಸುಗಮಗೊಳಿಸಿದರೂ, ಜಿಎಸ್‌ಟಿ ಕಾಯ್ದೆಯ ಅಡಿ ವಾರ್ಷಿಕ ವಹಿವಾಟಿನ ಮಿತಿಗಳನ್ನು ಗಮನದಲ್ಲಿ ಇಟ್ಟುಕೊಳ್ಳುವುದು ಮುಖ್ಯ. ತಪ್ಪಾದ ನೋಟಿಸ್ ಸಂದರ್ಭದಲ್ಲಿ, ದಾಖಲೆಗಳೊಂದಿಗೆ ತಕ್ಷಣ ಉತ್ತರಿಸಿ, ವಾಣಿಜ್ಯ ತೆರಿಗೆ ಇಲಾಖೆಯಿಂದ ಸ್ಪಷ್ಟನೆ ಪಡೆಯಿರಿ
- ಜಿಎಸ್‌ಟಿ ತಜ್ಞರ ಸಹಾಯದಿಂದ, ನೋಟಿಸ್‌ನಲ್ಲಿ ಉಲ್ಲೇಖಿತ ಗಡುವಿನೊಳಗೆ ಇಲಾಖೆಗೆ ಉತ್ತರಿಸಿ, ಅಗತ್ಯ ದಾಖಲೆಗಳನ್ನು ಸಲ್ಲಿಸಿ

ಲೇಖಕ: ತೆರಿಗೆ ಸಲಹೆಗಾರ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald-Prajavani relief** Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು **dept.fnc@printersmysore.co.in**ಗೆ ಮೇಲ್ ಕಳುಹಿಸಿ.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಜೊತೆಗೆ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಸ್‌ಎಫ್‌ಸಿ ಕೋಡ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಅಥವಾ ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **ಶೈಕ್ಷಣಿಕ ನೆರವಿಗೆ ಅರ್ಜಿ** ಎಂದು ಸ್ಪಷ್ಟವಾಗಿ ಬರೆದಿರಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ನೀಡಬೇಕು.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ರಾಷ್ಟ್ರೀಯ

ಸಿಬಿಎಸ್‌ಇ ಶಾಲೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಕಡ್ಡಾಯ

ನವದೆಹಲಿ (ಪಿಟಿಐ): ವಿದ್ಯಾರ್ಥಿಗಳ ಸುರಕ್ಷತೆಯ ದೃಷ್ಟಿಯಿಂದ ಸಿಬಿಎಸ್‌ಇ ಶಾಲೆಗಳಲ್ಲಿ ಧ್ವನಿ ಸಮೇತ ದೃಶ್ಯ ದಾಖಲಿಸುವ ಸಿ.ಸಿ.ಟಿ.ವಿ ಕ್ಯಾಮೆರಾಗಳ ಅಳವಡಿಕೆಯನ್ನು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಕಡ್ಡಾಯಗೊಳಿಸಿದೆ. ಶೌಚಾಲಯಗಳನ್ನು ಹೊರತುಪಡಿಸಿ ಇತರ ಎಲ್ಲಾ ಕಡೆಗಳಲ್ಲೂ ಸಿಸಿಟಿವಿ ಅಳವಡಿಸುವ ಸಂಬಂಧ ನಿಯಮಗಳಿಗೆ ಬದಲಾವಣೆ ತರಲಾಗಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

'ವಿದ್ಯಾರ್ಥಿಗಳ ಸುರಕ್ಷತೆಯು ಶಾಲೆಗಳ ಪ್ರಮುಖ ಹೊಣೆಗಾರಿಕೆ. ವಿದ್ಯಾರ್ಥಿಗಳ ಮೇಲಿನ ದೌರ್ಜನ್ಯ ತಡೆ ಹಾಗೂ ಗರಿಷ್ಠ ಪ್ರಮಾಣದ ಭದ್ರತೆ ಒದಗಿಸುವ ಉದ್ದೇಶದಿಂದ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆಗೆ ಆದೇಶಿಸಲಾಗಿದೆ' ಎಂದು ಸಿಬಿಎಸ್‌ಇ ಕಾರ್ಯದರ್ಶಿ ಹಿಮಾಂಶು ಗುಪ್ತಾ ತಿಳಿಸಿದರು.

ಶಾಲೆಗಳ ಮಾನ್ಯತೆಯ ಬೈಲಾ–2018ರ ನಾಲ್ಕನೇ ಅಧ್ಯಾಯಕ್ಕೆ(ಭೌತಿಕ ಮೂಲಸೌಕರ್ಯ) ತಿದ್ದುಪಡಿ ತಂದು ಸಿಸಿಟಿವಿ ಕ್ಯಾಮೆರಾ ಅಳವಡಿಕೆ ಕಡ್ಡಾಯ ಮಾಡಲಾಗಿದೆ.

ಬಹುತೇಕ ಪ್ರಕರಣಗಳಲ್ಲಿ ಬೆದರಿಕೆಯು ವಿದ್ಯಾರ್ಥಿಗಳಲ್ಲಿ ಮಾನಸಿಕ ಒತ್ತಡ ಹೆಚ್ಚಿಸುತ್ತಿದೆ. ನಿಂದನೆ, ಘರ್ಷಣೆ, ದೈಹಿಕ ಹಲ್ಲೆ, ಮಾನಸಿಕ ಕಿರುಕುಳ, ಪ್ರಕೃತಿ ಅಥವಾ ಮಾನವ ನಿರ್ಮಿತ ದುರಂತ, ಬೆಂಕಿ ಅವಘಡ, ಸಾರಿಗೆ ಸಮಸ್ಯೆ, ವಿಶೇಷವಾಗಿ ಭಾವನಾತ್ಮಕ ಸುರಕ್ಷತೆಗಾಗಿ ಈ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಗ್ರಾಹಕ ಹಕ್ಕು: 'ಸುಪ್ರೀಂ' ನೋಟಿಸ್

ನವದೆಹಲಿ (ಪಿಟಿಐ): ಗ್ರಾಹಕರ ಹಕ್ಕುಗಳ ರಕ್ಷಣೆಗೆ ಆದೇಶ ಕೋರಿ ಸಲ್ಲಿಕೆಯಾಗಿರುವ ಅರ್ಜಿಯೊಂದಕ್ಕೆ ಸಂಬಂಧಿಸಿದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಸೋಮವಾರ ನೋಟಿಸ್ ಜಾರಿಗೊಳಿಸಿದೆ.

ಯಾವುದೇ ಉತ್ಪನ್ನವನ್ನು ಖರೀದಿಸುವ ಗ್ರಾಹಕನಿಗೆ ಉತ್ಪನ್ನವನ್ನು ಮಾರಾಟ ಮಾಡುವ, ಉತ್ಪಾದಿಸುವ ಹಾಗೂ ವಿತರಿಸುವವರ ಮಾಹಿತಿಯನ್ನೂ ತಿಳಿದುಕೊಳ್ಳುವ ಹಕ್ಕು ಇದೆ ಎಂದು ಘೋಷಿಸುವಂತೆ ಕೋರಿ ಅರ್ಜಿ ಸಲ್ಲಿಕೆಯಾಗಿದೆ. ಈ ಬಗ್ಗೆ ಪ್ರತಿಕ್ರಿಯಿಸುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನ್ಯಾಯಮೂರ್ತಿ ವಿಕ್ರಮ್ ನಾಥ್ ಹಾಗೂ ನ್ಯಾಯಮೂರ್ತಿ ಸಂದೀಪ್ ಮೆಹ್ತಾ ಅವರನ್ನೊಳಗೊಂಡ ಪೀಠವು ಸೂಚನೆ ನೀಡಿದೆ.

ಅಶ್ವಿನ್ ಕುಮಾರ್ ಉಪಾಧ್ಯಾಯ ಎಂಬವರು ಈ ಅರ್ಜಿ ಸಲ್ಲಿಸಿದ್ದು, 'ಉತ್ಪನ್ನದ ಮಾರಾಟಗಾರರು, ವಿತರಕರು, ಮಳಿಗೆಯ ಮಾಲೀಕರು ತಮ್ಮ ನೋಂದಣಿ, ಹೆಸರು, ವಿಳಾಸವನ್ನು ಗ್ರಾಹಕರಿಗೆ ಕಾಣುವ ರೀತಿಯಲ್ಲಿ ಪ್ರದರ್ಶಿಸಬೇಕು. ಈ ಮಾಹಿತಿಯನ್ನು ತಿಳಿಯುವುದು ಗ್ರಾಹಕನ ಹಕ್ಕು ಎಂದು ಕೋರ್ಟ್ ಘೋಷಿಸಬೇಕು' ಎಂದು ಕೋರಿದ್ದಾರೆ.

ಪಿಟಿಐ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಕಾಂಗ್ರೆಸ್ ನಾಯಕ ಕನ್ಹಯ್ಯ ಕುಮಾರ್ ಅವರ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ವಿಡಿಯೊದಲ್ಲಿ ಕನ್ಹಯ್ಯ ಅವರು ಜುಲೈ 9ರಂದು ಬಿಹಾರದ ರ್‍ಯಾಲಿಯಲ್ಲಿ ತಮ್ಮ ಪಕ್ಷದ ಮುಖಂಡ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಟೀಕಿಸಿದ್ದಾರೆ ಎಂದೂ, ರ್‍ಯಾಲಿಯಲ್ಲಿ ಕನ್ಹಯ್ಯ ಮತ್ತು ಪಪ್ಪು ಯಾದವ್ ಅವರಿಗೆ ರಾಹುಲ್ ಗಾಂಧಿ ಅವರ ವಾಹನ ಹತ್ತಲು ಅವಕಾಶ ನಿರಾಕರಿಸಲಾಯಿತು ಎಂದೂ ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಅದು ಸುಳ್ಳು ಸುದ್ದಿ.



ವಿಡಿಯೊದ ಕೀಫ್ರೇಮ್ ಅನ್ನು ಇನ್‌ವಿಡ್ ಟೂಲ್ ಮೂಲಕ ಪ್ರತ್ಯೇಕಿಸಿ, ಗೂಗಲ್ ಲೆನ್ಸ್ ಮೂಲಕ ಪರಿಶೀಲನೆಗೊಳಪಡಿಸಿದಾಗ, ಒಂದೇ ವಿಡಿಯೊ ಅನ್ನು ಹಲವರು ಇದೇ ಪ್ರತಿಪಾದನೆಯೊಂದಿಗೆ ಹಂಚಿಕೊಂಡಿದ್ದಾರೆ ಎಂದು ತಿಳಿಯಿತು. ಅದನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಅದು ಐಎಫ್‌ಸಿ ಯೂಟ್ಯೂಬ್ ಚಾನೆಲ್‌ನಲ್ಲಿ 2023ರ ಜುಲೈ 27ರಂದು ಅಪ್‌ಲೋಡ್ ಮಾಡಲಾಗಿದ್ದ ವಿಡಿಯೊಗೆ ಸಂಪರ್ಕ ನೀಡಿತು. ಬೆಂಗಳೂರಿನಲ್ಲಿ ನಡೆದಿದ್ದ ಯುವ ಸಮಾವೇಶದಲ್ಲಿ ಭಾಗವಹಿಸಿದ್ದಾಗ ಕನ್ಹಯ್ಯ ಮಾತನಾಡಿದ ವಿಡಿಯೊ ಅದಾಗಿತ್ತು. ಹಳೆಯ ವಿಡಿಯೊ ಅನ್ನು ಸುಳ್ಳು ಪ್ರತಿಪಾದನೆಯೊಂದಿಗೆ ಹಂಚಿಕೊಳ್ಳಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಪದಬಂಧ 6111


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಶ್ರುತಿಗೆ ಹೊಂದದ ಸ್ವರ (4)
3.ಅರವತ್ತು ವರ್ಷದ ಹುಟ್ಟುಹಬ್ಬ (4)
5.ಮಾನವಂತನಿಗೆ ತೋರಿದ ಮನ್ನಣೆ (3)
6.ಜಗಳಕ್ಕೊಂದು ಪರ್ಯಾಯ ಪದ (3)
8.ಒಂದು ಬಗೆಯ ನೆಂಜಿಕೊಳ್ಳುವ ಪದಾರ್ಥ (3)
9.ಪ್ರಶ್ನೆಗೆ ಪೂರಕವಾಗಿ ಹೇಳುವ ಮಾತು (3)
10.ತಿರುಗಿಸಿದರೂ ಇದು ಚಿನ್ನ (3)
12.ಅಂದು ಖರೀದಿಸಿರುವ ಕಾಲಿನ ಕಡಗ (3)
14.ಈತ ಲೆಕ್ಕ ಬರೆಯುವವನು (4)
15.ಶಕ್ತಿಯನ್ನು ಕಳೆದುಕೊಂಡವನು (4)

ಮೇಲಿಂದ ಕೆಳಕ್ಕೆ

1.ಕಾಗೆ ಬಂಗಾರವಿದು (3)
2.ಸರಸದಲ್ಲೂ ವಿರಸದಲ್ಲೂ ಕಾಣುತ್ತಿರುವ ದ್ರವ (2)
3.ವರಮಾನವುಳ್ಳ ಅರಣ್ಯ (2)
4.ಹುತ್ತ ಇಲ್ಲಿದೆ (3)
7.ಅತಿಯಾಗಿ ಮಾತಾಡುವವನು (5)
8.ಕಡುಬನ್ನು ಹಿಡಿದಿರುವ ಅನುಯಾಯಿ! (5)
9.ಉದಯ ಕಾಲದಲ್ಲಿ ಶೇಖರಿಸಿರುವ ನೀರು (3)
11.ಹೆಪ್ಪುಗಟ್ಟಿದ ವಸ್ತು (3)
12.ಅಂಕಣದಲ್ಲಿರುವ ಸಂಖ್ಯೆ ಕಾಣುತ್ತಿದೆಯೇ? (2)
13.ತಿರುಗಿದಾಗ ದ್ವೇಷ ಕಾಣಿಸುತ್ತಿದೆಯಲ್ಲಾ! (2)



6110ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಮುಲಾಮು 4.ಗಿಟಕು
5.ಜವಾಹಿರಿ 6.ಟಕ್ಕುತನ
7.ಗಣಿತ 9.ನಸರಿ
13.ಗುಡಿಕಾರ 14.ಹಣಾಹಣಿ
15.ಸಿಂಧೂರ 16.ಪ್ರವಾಹ

ಮೇಲಿಂದ ಕೆಳಕ್ಕೆ:
1.ಇಂಗಿತಜ್ಞ 2.ಮುಕುಟಮಣಿ
3.ಮಹಿಳೆ 5.ಜನಮನ
8.ತಡಗುಣಿ 10.ಸಮರಸಿಂಹ
11.ಹಗರಣ 12.ಗುಣಾಢ್ಯ

ಸುಡೊಕು 6495

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

				8			2	
	3							8
6		5		9		4		3
	2		6				3	
5		3	2		1	8		9
	1				9		4	
	6			2				4
3		8	9				5	
	5			3	4			1

6494 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ಏಕಾಗ್ರತೆ ಸಾಧಿಸುವ ಬಗೆ

ನುಡಿ ಬೆಳಗು

ದೀಪಾ ಹಿರೇಗುತ್ತಿ



ಭಗವಾನ್ ಬುದ್ಧ ಪ್ರವಾಸ ಮಾಡುತ್ತಿರುವ ಸಂದರ್ಭದಲ್ಲೊಮ್ಮೆ ಹಳ್ಳಿಯೊಂದರಲ್ಲಿ ಕೆಲ ದಿನಗಳ ಕಾಲ ಉಳಿದ. ಅಲ್ಲಿಯ ಯುವಕನೊಬ್ಬ ಬುದ್ಧನ ಮಾರ್ಗದರ್ಶನ ಪಡೆಯಲು ಬಂದಿದ್ದ. ಯಾವ ಕೆಲಸವನ್ನೂ ಸರಿಯಾಗಿ ಮಾಡಲಾಗದಿರುವುದು, ಬೇರೆಯವರ ಯಶಸ್ಸನ್ನು ಕಂಡರೆ ಅಸೂಯೆಯಾಗುವುದು ಅವನ ಸಮಸ್ಯೆ. ಅವನ ಮಾತನ್ನು ಸಮಾಧಾನದಿಂದ ಕೇಳಿಸಿಕೊಂಡ ಮೇಲೆ ಬುದ್ಧ ಆತನನ್ನು ಆ ಊರಿನ ಒಂದು ದೊಡ್ಡ ನೀರಿನ ತೊಟ್ಟಿಯ ಹತ್ತಿರ ಕರೆದುಕೊಂಡು ಹೋದ. ಅದು ಸೀಳಿ ಹೋಗಿ ನೀರು ಸೋರಿ ಹರಿದು ಹೋಗುತ್ತಿತ್ತು. ಬುದ್ಧ ಹೇಳಿದ; 'ನೋಡು, ಈ ತೊಟ್ಟಿಯ ಕೆಲಸ ಊರಿಗೆ ನೀರು ಪೂರೈಸುವುದು. ಆದರೆ ಇದು ಸೀಳು ಬಿಟ್ಟಿರುವುದರಿಂದ ನೀರು ವ್ಯರ್ಥವಾಗಿ ಹರಿದು ಹೋಗುತ್ತಿದೆ. ಹಾಗಾಗಿ, ಅದು ಯಾವುದಕ್ಕಾಗಿ ನಿರ್ಮಿಸಲ್ಪಟ್ಟಿದೆಯೋ ಆ ಉದ್ದೇಶ ಪೂರ್ಣವಾಗಿಲ್ಲ. ನಿನ್ನ ಮನಸ್ಸೂ ಈ ಸೀಳು ಬಿಟ್ಟಿರುವ ತೊಟ್ಟಿಯ ಹಾಗಾಗಿದೆ. ಅಸೂಯೆ, ನೇತ್ಯಾತ್ಮಕತೆಗಳು ನಿನ್ನ ಸಾಮರ್ಥ್ಯ ಸೋರಿಹೋಗುವಂತೆ ಮಾಡಿ ನಿನ್ನನ್ನು ಖಾಲಿಯಾಗಿಸುತ್ತಿವೆ. ಇದರಿಂದ ನಿನಗೆ ಮಾಡಬೇಕೆಂದಿರುವ ಕೆಲಸ ಮಾಡಲಾಗುತ್ತಿಲ್ಲ'.

'ಹಾಗಾದರೆ ಇದನ್ನು ಸರಿಪಡಿಸಿಕೊಳ್ಳುವುದು ಹೇಗೆ' ಯುವಕ ಕೇಳಿದ. ಅದಕ್ಕೆ ಬುದ್ಧನೆಂದ, 'ಇತರರ ಬಗ್ಗೆ ಅಸೂಯೆ ಪಡುವುದರ ಬದಲು ಅವರ ಸಾಧನೆಯಿಂದ ನಾನೇನಾದರೂ ಕಲಿಯಬಹುದೇ ಎಂದು ಯೋಚಿಸಬೇಕು. ದೊಡ್ಡ ಕೆಲಸಗಳನ್ನು ಮಾಡುವುದರ ಬದಲು ಸಣ್ಣ ಸಣ್ಣ ಕೆಲಸಗಳನ್ನೇ ಏಕಾಗ್ರತೆಯಿಂದ ಮಾಡುತ್ತ ಹೋದರೆ ಈ ಸೀಳುಗಳನ್ನು ಮುಚ್ಚಬಹುದು. ನಮ್ಮ ಶಕ್ತಿ ಸೋರಿಹೋಗದಂತೆ ಕಾಪಾಡಿಕೊಳ್ಳಬಹುದು. ಹೇಗೆ ಸರಿಪಡಿಸಿದ ತೊಟ್ಟಿ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ನೀರನ್ನು ಹಿಡಿದಿಟ್ಟುಕೊಂಡು ಊರಿಗೇ ನೀರು ಕೊಡುತ್ತದೆಯೋ ಅದೇ ರೀತಿ ಬೇಡದ ವಿಚಾರಗಳನ್ನು ದೂರಸರಿಸಿ ಏಕಾಗ್ರತೆ ಸಂಪಾದಿಸಿದ ಮನಸ್ಸಿನಿಂದ ಅದ್ಭುತಗಳು ಸಾಧ್ಯ'. ಬುದ್ಧನ ಹೋಲಿಕೆ ಅರ್ಥವಾದ ಯುವಕ ತಲೆಬಾಗಿ ನಮಸ್ಕರಿಸಿ ಬೀಳ್ಕೊಂಡ.

ಹಿಂದಿನ ಕಾಲವಿರಲಿ, ಈಗಿನ ಕಾಲವಿರಲಿ ನಮ್ಮ ಬಹುದೊಡ್ಡ ಸಮಸ್ಯೆ ಎಂದರೆ ಚಂಚಲಗೊಳ್ಳುವ ಮನಸ್ಸು. ಬೇಡವಾದ ವಿಚಾರಗಳು ದೀಪಕ್ಕೆ ಮುತ್ತುವ ಹುಳುಗಳಂತೆ ಸದಾ ಕಾಡುತ್ತಿರುತ್ತವೆ. ಈಗಂತೂ ಪರಿಸ್ಥಿತಿ ವಿಕೋಪಕ್ಕೆ ಹೋಗುವಷ್ಟು ಸಾಧನ ಸಲಕರಣೆಗಳು! ಬೇರೆಯವರ ಬದುಕು ಆಕರ್ಷಕವೆನಿಸಿ ಅಸೂಯೆ ಚಿಗುರೊಡೆಯುತ್ತದೆ. ವಿದ್ಯಾರ್ಥಿಗಳಿರಲಿ, ಯುವಜನರಿರಲಿ ಅಥವಾ ಪ್ರೌಢರೇ ಇರಲಿ. ಎಲ್ಲರ ಸಮಸ್ಯೆಯೂ ಇದೇ. ಪ್ರಯತ್ನಪೂರ್ವಕವಾಗಿ ಏಕಾಗ್ರತೆ ತಂದುಕೊಳ್ಳದಿದ್ದರೆ ಯಾವ ಕೆಲಸವನ್ನೂ ಮಾಡಲಾಗದು. ಯಾವ ಗುರಿಯನ್ನೂ ತಲುಪಲಾಗದು. ಹಾಳಾದ ತೊಟ್ಟಿ ಹೇಗೆ ನೀರನ್ನು ವ್ಯರ್ಥಗೊಳಿಸುತ್ತದೋ ಅದೇ ರೀತಿ ನೇತ್ಯಾತ್ಮಕ ವಿಚಾರಗಳಿಂದ ಕೂಡಿದ ಮನಸ್ಸು ಯಾವ ಕೆಲಸವನ್ನೂ ಪರಿಪೂರ್ಣವಾಗಿ ಮಾಡಲಾರದು. ಹಾಗಾಗಿ ಮಾಡುವ ಕೆಲಸ ಯಾವುದೇ ಇರಲಿ, ಪೂರ್ತಿ ಗಮನ ಹರಿಸಿ ಮಾಡುವುದನ್ನು ಅಭ್ಯಾಸ ಮಾಡಿಕೊಂಡರೆ ಬೇಡದ ವಿಚಾರಗಳನ್ನು ದೂರ ಅಟ್ಟಲು ಸಾಧ್ಯ. ನಮ್ಮ ಮನಸ್ಸನ್ನು ಗುಣಪಡಿಸಿಕೊಳ್ಳಲೂ ಸಾಧ್ಯ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

22 ಜುಲೈ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ದ್ವಾದಶಿ ಗಂ. 7-06 ನಂತರ ತ್ರಯೋದಶಿ ಗಂ 28-40 **ನಕ್ಷತ್ರ:** ಮೃಗಶಿರ ಗಂ. 19-25 **ಯೋಗ:** ಧ್ರುವ ಗಂ. 15-32, ಕರ್ಕಾಟಕ ಮಾಸದ 06 ನೇ ದಿನ. **ಮಳೆ ನಕ್ಷತ್ರ:** ಪುಷ್ಯ 1 ನೇ ಪಾದ. **ರಾಹುಕಾಲ:** ಮಧ್ಯಾಹ್ನ 03-00 04-30 **ಸೂರ್ಯೋದಯ:** 06-17 ಸೂರ್ಯಾಸ್ತ: 06-57, **ಮುಸ್ಲಿಂ ದಿನಾಂಕ:** 26 ಮೊಹರಮ್, **ದಿನ ವಿಶೇಷ:** ಪಕ್ಷ ಪ್ರದೋಷ, **ಅದೃಷ್ಟ ಸಂಖ್ಯೆ:** 6, 10

ಮೇಷ: ಅಡಿಕೆ ಬೆಳೆಗಾರರಿಗೆ ನಷ್ಟದ ಸಲುವಾಗಿ ಬೇರೆ ಬೆಳೆ ಮುಂದುವರಿಸುವುದು ಸೂಕ್ತ ಎಂಬ ಯೋಚನೆಗಳು ಬರಬಹುದು. ಇತಿ-ಮಿತಿಯ ಬಗ್ಗೆ ಮೇಲಿನ ಅಧಿಕಾರಿಗಳು ಅರಿವು ಮೂಡಿಸುವರು.

ವೃಷಭ: ನಿತ್ಯದ ವಸ್ತುಗಳ ಖರೀದಿಯಲ್ಲಿ ಅತಿಯಾದ ಕೃಪಣತೆ ತೋರಿ ಸಮಾಜದಲ್ಲಿ ಸಣ್ಣವರಾಗಬೇಡಿ. ಸ್ವಯಂ ನಿರ್ಧಾರವನ್ನು ತೆಗೆದುಕೊಳ್ಳುವುದರಿಂದ ಕುಟುಂಬದವರ ದೂಷಣೆಗೆ ಒಳಗಾಗುವ ಲಕ್ಷಣವಿದೆ.

ಮಿಥುನ: ಗೆಳೆಯರ ಸವಾಲಿನಲ್ಲಿ ಸದಾ ವಿಜಯ ನಿಮ್ಮದೇ ಆದ್ದರಿಂದ ಬೇಸರವಿಲ್ಲದೇ ಸಂತಸದಿಂದಿರುವಿರಿ. ದುಶ್ಚಟಗಳಿಗೆ ಒಳಗಾಗಿ ಅದರಿಂದ ಹೊರ ಬರಬೇಕೆಂದು ಇರುವವರು ಸಜ್ಜನರಾಗುವ ಪ್ರಯತ್ನ ಮಾಡಿ.

ಕರ್ಕಾಟಕ: ಹೊಸ ಗೆಳೆಯರು ನಿಮಗೆ ಪ್ರಯೋಜನಕಾರಿ ಎನಿಸಲಿದ್ದಾರೆ. ಷೇರು ಮಾರುಕಟ್ಟೆಯ ವ್ಯವಹಾರಗಳು ಲಾಭದತ್ತ ಸಾಗುವುದು. ಹಿಂಜರಿಕೆಯ ಸ್ವಭಾವ ಬಿಟ್ಟು ಕಾರ್ಯ ಕೈಗೊಳ್ಳಲು ಮುಂದಾಗಿ. ಅವಕಾಶಗಳು ಸಿಗಲಿವೆ.

ಸಿಂಹ: ಬೌದ್ಧಿಕ ಸಾಮರ್ಥ್ಯದಿಂದ ಕೆಲಸಗಳನ್ನು ನಿರ್ವಹಿಸುವಿರಿ. ರಚನಾತ್ಮಕ ಕೆಲಸಗಳ ನಿರ್ವಹಣೆಯಿಂದ ಸತ್ಕೀರ್ತಿ ದೊರೆಯುವುದು. ಸಾಲ ಮರುಪಾವತಿಗೆ ಸುಲಭ ಸೌಲಭ್ಯಗಳನ್ನು ನಿಮ್ಮದಾಗಿಸಿಕೊಳ್ಳುವಿರಿ.

ಕನ್ಯಾ: ದೀರ್ಘಕಾಲೀನ ಯೋಜನೆಗಳು ಫಲದಾಯಕವಾಗಿ ವೃತ್ತಿಪರರಿಗೆ ಕಾರ್ಯರಂಗದಲ್ಲಿ ಪ್ರಗತಿ. ನಿಮ್ಮ ವ್ರತ ಹಾಗೂ ಅನುಷ್ಠಾನದ ಫಲವಾಗಿ ಮಗ ಅಥವಾ ಮಗಳಿಗೆ ಶ್ರೇಯಸ್ಸಾಗುವುದು ಅನುಭವಕ್ಕೆ ಬರುತ್ತದೆ.

ತುಲಾ: ಉದ್ಯೋಗ ಸಂಬಂಧಿತ ಚಟುವಟಿಕೆಯಲ್ಲಿ ಈ ದಿನ ಅಸಮಾಧಾನ, ನಿರಾಸಕ್ತಿ ಕಾಡಲಿದೆ. ಆದರೆ ಶ್ರೇಯಸ್ಸಿಗಾಗಿ ಸೋಮಾರಿತನ ದೂರಮಾಡಿ. ಅನಿರೀಕ್ಷಿತ ಬದಲಾವಣೆಗಳು ಸಮಸ್ಯೆಗಳನ್ನು ಕಡಿಮೆ ಮಾಡಲಿವೆ.

ವೃಶ್ಚಿಕ: ಮೃದು ಧೋರಣೆ ಸ್ವಭಾವವನ್ನು ವ್ಯವಹಾರಿಕ ವಿಷಯದಲ್ಲಿ ತ್ಯಜಿಸುವುದು ಉತ್ತಮ. ವ್ಯವಹಾರದಲ್ಲಿ ಗೌಪ್ಯತೆಯನ್ನು ಕಾಪಾಡಿಕೊಳ್ಳಿ. ಯೋಜನೆಗಳಿಗೆ ಪಾಲುದಾರರಿಂದ ಉತ್ತೇಜನಕಾರಿ ಪ್ರತಿಕ್ರಿಯೆ ಸಿಗುವುದು.

ಧನು: ಅಧಿಕಾರಿಗಳೊಂದಿಗೆ ವಾದಿಸದೆ ಅವರು ಹೇಳುವ ಕಾರ್ಯಗಳನ್ನು ಮಾಡುವುದು ನಿಮಗೆ ಒಳ್ಳೆಯದು. ಮಗಳ ಆರೋಗ್ಯದ ಹೆಚ್ಚಿನ ಗಮನ ಹರಿಸಿ. ಅಂತರ್ಜಾಲದಲ್ಲಿ ಸಿಗುವ ಮಾಹಿತಿಗಳನ್ನು ನಂಬಿ ಮೋಸ ಹೋಗದಿರಿ.

ಮಕರ: ಯಾಂತ್ರಿಕ ಬದುಕಿನ ಭಾಗವಾದ ನಿಮ್ಮ ಜೀವನದಲ್ಲಿ ಸ್ವಲ್ಪವಾದರೂ ಭರವಸೆ ಇಟ್ಟುಕೊಳ್ಳಿ. ವಿದ್ಯುತ್ ಉಪಕರಣಗಳ ಖರೀದಿ ಮಾಡುವ ಸಾಧ್ಯತೆ ಇದೆ. ಸಂಗಾತಿಯ ಜೊತೆ ಉತ್ತಮ ಸಮಯವನ್ನು ಕಳೆಯುತ್ತೀರಿ.


ಕುಂಭ: ಕುಟುಂಬದವರು ಬಯಸುವ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸುವ ಕಡೆ ಹೆಚ್ಚಿನ ಗಮನ ಹರಿಸಿ. ಕೃಷ್ಣ–ಸುಧಾಮನಂತಹ ಸ್ನೇಹಕ್ಕೆ ಇಲ್ಲದ ವಿಚಾರಗಳಿಗೆ ಜಗಳವೇಳುವ ಸಾಧ್ಯತೆಗಳಿವೆ.

ಮೀನ: ಮನೆ ಕಟ್ಟುವ ವಿಚಾರದಲ್ಲಿ ಮನೆಯ ಹಿರಿಯರೊಂದಿಗೆ ಗಂಭೀರವಾದ ಚರ್ಚೆ ಮಾಡುವುದು ಉಚಿತ. ಪ್ರಶಸ್ತವಾದ ಸಲಹೆ ಸಿಗುವುದು. ಸಂಸಾರದಲ್ಲಿ ಅಂತಃಕಲಹಗಳು ನಡೆದು, ಅಸಮಾಧಾನಕ್ಕೆ ಕಾರಣವಾಗುವಂತೆ ಆಗಲಿದೆ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ: ಹಿಂದಿನ ಅಂತ್ಯ 24,968; ಇಂದಿನ ಅಂತ್ಯ 25,090; ದಿನದ ಗರಿಷ್ಠ 25,111; 122

ಮೊಟ್ಟೆ ಧಾರಣೆ (ಎನ್‌ಇಸಿಸಿ): ಬೆಂಗಳೂರು 100 ಕ್ಕೆ ₹560, 12 ಕ್ಕೆ ₹75; ಮೈಸೂರು 100 ಕ್ಕೆ ₹565

ರಾಮನಗರ ರೇಷ್ಮೆಗೂಡು: ಮಿಶ್ರತಳಿ (ಮಿ.ಪ) ₹363-560; ದ್ವಿತಳಿ (ಬಿ.ವಿ) ₹412-691

ಎನ್.ಆರ್.ಪುರ ರಬ್ಬರ್ (ಪ್ರತಿ ಕೆಜಿಗೆ): ಆರ್‌ಎಸ್‌ಎಸ್-4 ₹207.50; ಆರ್‌ಎಸ್‌ಎಸ್-5 ₹201.50; ರಬ್ಬರ್ ಲಾಟ್ ₹185.50

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ): ಅರಸೀಕೆರೆ ₹26000-30000; ತಿಪಟೂರು ₹25500-28500

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ) (10 ಕೆ.ಜಿಗೆ): ಶೇಂಗಾ (ರಿಫೈನ್ಡ್) ₹1440 (1450); ಸೋಯಾ (ರಿಫೈನ್ಡ್) ₹1225 (1225); ಸೂರ್ಯಕಾಂತಿ (ರಿಫೈನ್ಡ್) ₹1370 (1355); ತಾಳೆಎಣ್ಣೆ ₹1200 (1195)

ಅಡಿಕೆ ಧಾರಣೆ

ಕಾರ್ಕಳ		ಚಾಲಿ	17989-37230	ರಾಶಿ	46099-46099
ಹೊಸದು	25000-48500	ಕೋಕ	7982-21711	ತಟ್ಟಿಬೆಟ್ಟೆ	29199-29199
ಹಳೆಯದು	30000-52500	ಕೆಂಪುಗೋಟು	15999-28100	**ಶಿರಸಿ**	
ಕುಮಟಾ		ರಾಶಿ	23989-57599	ಬೆಟ್ಟೆ	28699-37299
ಚಾಲಿ	38000-42398	ಸಿಪ್ಪೆಗೋಟು	7099-19270	ಬಿಳೇಗೋಟು	16910-36899
ಚಿಪ್ಪು	23599-26699	**ಶಿವಮೊಗ್ಗ**		ಚಾಲಿ	35899-43099
ಕೋಕ	7089-22099	ಬೆಟ್ಟೆ	53519-60200	ರಾಶಿ	41590-48008
ಫ್ಯಾಕ್ಟರಿ	6089-27269	ಗೊರಬಲು	16000-32169	**ಯಲ್ಲಾಪುರ**	
ಹೊಸಚಾಲಿ	34509-42303	ರಾಶಿ	46169-57501	ಬಿಳೇಗೋಟು	18559-29950
ಪುತ್ತೂರು		ಸರಕು	52069-85059	ಚಾಲಿ	32131-42500
ಕೋಕ	20000-27500	**ಸಿದ್ದಾಪುರ**		ಕೋಕ	10900-17809
ಹೊಸದು	26000-47500	ಬಿಳೇಗೋಟು	25619-28699	ಕೆಂಪುಗೋಟು	15609-26209
ಸಾಗರ		ಚಾಲಿ	32699-41000	ರಾಶಿ	44609-52299
ಬಿಳೇಗೋಟು	8102-26886	ಕೋಕ	18299-26669	ತಟ್ಟಿಬೆಟ್ಟೆ	28769-28769

ವಿಯೆಟ್ನಾಂ ಈಗ ಇನ್ನೂ ಹತ್ತಿರ

ಬೆಂಗಳೂರು–ಹೊ ಚಿ ಮಿನ್ ಸಿಟಿ ನಡುವೆ 'ವಿಯೆಟ್‌ಜೆಟ್ ಏರ್' ನೇರ ವಿಮಾನ

• ಪ್ರವೀಣ ಕುಲಕರ್ಣಿ



ಹೊ ಚಿ ಮಿನ್ ಸಿಟಿ (ವಿಯೆಟ್ನಾಂ): ಭಾರತ-ಚೀನಾ ನಾಗರಿಕತೆಗಳ ಸಂಗಮವಾಗಿರುವ ವಿಯೆಟ್ನಾಂನ ರೋಮಾಂಚನಕಾರಿ ಚರಿತ್ರೆ, ಜೀವನೋತ್ಸಾಹ ತುಂಬಿದ ಸಂಸ್ಕೃತಿ ಮತ್ತು ಹಸುರು ಹೊದ್ದ ಪ್ರಕೃತಿಯನ್ನು ಆಸ್ವಾದಿಸಲು ಹಾತೊರೆಯುವ ಭಾರತೀಯರಿಗಾಗಿ 'ವಿಯೆಟ್‌ಜೆಟ್ ಏರ್' ವಿಮಾನಯಾನ ಸಂಸ್ಥೆಯು ಅಗ್ಗದ ದರದಲ್ಲಿ ಪ್ರಯಾಣದ ಅವಕಾಶ ಕಲ್ಪಿಸಿದೆ.

ಭಾರತದ ಪ್ರಮುಖ ನಗರಗಳಿಂದ ವಿಯೆಟ್ನಾಂನ ಹನೋಯಿ, ಹೊ ಚಿ ಮಿನ್ ನಗರದಂತಹ ಪ್ರವಾಸಿ ತಾಣಗಳಿಗೆ ಸಂಪರ್ಕ ಕಲ್ಪಿಸಿರುವ 'ವಿಯೆಟ್‌ಜೆಟ್ ಏರ್', ಇತ್ತೀಚೆಗೆ ಬೆಂಗಳೂರು–ಹೊ ಚಿ ಮಿನ್ ಸಿಟಿ ನಡುವೆಯೂ ನೇರ ವಿಮಾನಯಾನ ಆರಂಭಿಸಿದೆ. ಎರಡೂ ನಗರಗಳ ಮಧ್ಯೆ ಸದ್ಯ ವಾರಕ್ಕೆ ಮೂರು ದಿನ (ಪ್ರತಿ ಸೋಮವಾರ, ಬುಧವಾರ ಮತ್ತು ಶುಕ್ರವಾರ) ವಿಮಾನ ಸಂಚಾರ ಲಭ್ಯವಿದೆ.

ಯುದ್ಧದಿಂದ ಕೆಂಪು ನೆಲವಾಗಿದ್ದ ವಿಯೆಟ್ನಾಂನಲ್ಲಿ ಈಗ ಹೇಗೆ ಹಸುರು ನಳನಳಿಸುತ್ತಿದೆ ಎನ್ನುವುದು ಪ್ರವಾಸಿ ಪ್ರಿಯರ ಕುತೂಹಲ. ಹೊ ಚಿ ಮಿನ್ ಸಿಟಿಯ ಆಸುಪಾಸಿನಲ್ಲಿಯೇ ಯುದ್ಧದ ಕುರುಹುಗಳನ್ನು ಯುದ್ಧಾನಂತರ ದೇಶದ ಒಡಲು ತುಂಬಿಸುತ್ತಿರುವ ಭತ್ತದ ಬಟ್ಟಲನ್ನೂ ನೋಡುವ ಸಲುವಾಗಿ ಅವಕಾಶ ಈ ನೇರ ವಿಮಾನಯಾನ ಸೌಲಭ್ಯದಿಂದ ಸಿಕ್ಕಂತಾಗಿದೆ. ಫ್ರೆಂಚ್ ವಸಾಹತು ಆಗಿದ್ದ ಈ ದೇಶದಲ್ಲಿ ಹೆಜ್ಜೆ ಹೆಜ್ಜೆಗೂ ಯುರೋಪ್ ಶೈಲಿಯ ಇಮಾರತುಗಳು ಕಣ್ಣಿಗೆ ಬೀಳುತ್ತವೆ. ವೈವಿಧ್ಯಮಯ ಹಣ್ಣು-ತರಕಾರಿ, ಸಮುದ್ರದ ಆಹಾರಕ್ಕೂ ಈ ದೇಶ ಹೆಸರುವಾಸಿ. ವಿಯೆಟ್ನಾಂ ಜನ ಏಕೆ ಅಷ್ಟೊಂದು ಸ್ಲಿಮ್ ಆಗಿದ್ದಾರೆ ಎಂಬ ಪ್ರಶ್ನೆಗೆ ಇಲ್ಲಿನ ನೋಟಗಳು ಉತ್ತರ ಹೇಳುತ್ತವೆ.

ಬೆಂಗಳೂರಿನ ಆಹ್ವಾನಿತ ಪತ್ರಕರ್ತರ ತಂಡದೊಂದಿಗೆ ಮಾತನಾಡಿದ 'ವಿಯೆಟ್‌ಜೆಟ್ ಏರ್' ಸಂಸ್ಥೆಯ ಅಂತರರಾಷ್ಟ್ರೀಯ ಸಂಪರ್ಕಾಧಿಕಾರಿ ಕೀನ್ ಡಿಯಂಗ್ (ಮಿ), 'ಭಾರತದ ಬಹುತೇಕ ಪ್ರಮುಖ ನಗರಗಳಿಗೆ ವಿಯೆಟ್ನಾಂ ಸಂಪರ್ಕ ಕಲ್ಪಿಸುವಲ್ಲಿ ಮಧ್ಯಮ ವರ್ಗದವರ ಜೇಬಿಗೆ ಹೊರೆಯಾಗದ ದರ ಮತ್ತು ನೇರ ಸಂಪರ್ಕ ನಮ್ಮ ಆದ್ಯತೆಗಳಾಗಿವೆ' ಎಂದು ಹೆಮ್ಮೆಯಿಂದ ಹೇಳಿಕೊಂಡರು. 'ಪ್ರವಾಸಿಗರು ಮತ್ತು ಉದ್ಯಮಿಗಳಿಗೆ ಅನುಕೂಲವಾಗುವಂತೆ ನಮ್ಮ ಸೌಲಭ್ಯ ಮತ್ತು ವೇಳಾಪಟ್ಟಿ ಇದೆ' ಎಂದು ಅವರು ಹೇಳಿದರು.

'ಬೆಂಗಳೂರಿಗಿಂತಲೂ ಮೊದಲು ನವದೆಹಲಿ, ಕೋಲ್ಕತ್ತ, ಮುಂಬೈ, ಅಹಮದಾಬಾದ್, ಕೊಚ್ಚಿಯಿಂದ ವಿಯೆಟ್ನಾಂನ ಹನೋಯಿ, ಹೊ ಚಿ ಮಿನ್ ಸಿಟಿ, ಡಾ ನಾಂಗ್ ನಗರಗಳಿಗೆ ವಿಮಾನಯಾನ ಆರಂಭಿಸಲಾಗಿದೆ. ಆ ಯಾನಗಳೆಲ್ಲ ಈಗ ಜನಪ್ರಿಯವಾಗಿವೆ' ಎಂದು ಅವರು ವಿವರಿಸಿದರು.

'ವಿಯೆಟ್‌ಜೆಟ್ ಏರ್'ನ ಬಹುಪಾಲು ಫ್ಲೈಟ್‌ಗಳು ಭಾರತೀಯರಿಂದ ಭರ್ತಿ ಎಂಬ ಗುಟ್ಟನ್ನೂ ಅವರು ಬಿಟ್ಟುಕೊಟ್ಟರು.

ಮಿತವ್ಯಯದ ವಿಮಾನಯಾನ ಕಾರ್ಯಾಚರಣೆಗೆ ಹೆಸರಾಗಿರುವ 'ವಿಯೆಟ್‌ಜೆಟ್ ಏರ್', ತನ್ನ ಕಡಿಮೆ ಪ್ರಯಾಣ ದರದಿಂದಲೇ ವಿಯೆಟ್ನಾಂನಲ್ಲಿ ಮತ್ತು ಏಷ್ಯಾದಲ್ಲಿ ಸಂಚಲನ ಮೂಡಿಸಿದೆ. ಸುರಕ್ಷಿತವಾದ ಸಂಸ್ಥೆಗಳ ಪಟ್ಟಿಯಲ್ಲೂ ಎತ್ತರದ ಸ್ಥಾನದಲ್ಲಿದೆ. ಭಾರತದಿಂದ ವಿಯೆಟ್ನಾಂಗೆ ಹೋಗುವ ಪ್ರವಾಸಿಗರಿಗಾಗಿ ವಾರಕ್ಕೆ 44 ರೌಂಡ್ ಟ್ರಿಪ್ ವಿಮಾನಗಳ ಸಂಚಾರ ಸೌಲಭ್ಯವನ್ನು ಕಲ್ಪಿಸಿದೆ ಎಂದು ಸಂಸ್ಥೆಯ ಅಧಿಕಾರಿಗಳು ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ತ್ರೈಮಾಸಿಕ ಫಲಿತಾಂಶ: ಷೇರುಪೇಟೆ ಸೂಚ್ಯಂಕಗಳ ಏರಿಕೆ

ಮುಂಬೈ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಐಸಿಐಸಿಐ ಬ್ಯಾಂಕ್ ಷೇರುಗಳ ಖರೀದಿ ಹೆಚ್ಚಳವು ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಏರಿಕೆ ಕಾಣಲು ನೆರವಾದವು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 442 ಅಂಶ ಏರಿಕೆಯಾಗಿ, 82,200ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 122 ಅಂಶ ಹೆಚ್ಚಳವಾಗಿ 25,090ಕ್ಕೆ ಕೊನೆಗೊಂಡಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಐಸಿಐಸಿಐ ಬ್ಯಾಂಕ್‌ನ ಜೂನ್ ತ್ರೈಮಾಸಿಕದ ಫಲಿತಾಂಶವು ಹೂಡಿಕೆದಾರರ ನಿರೀಕ್ಷೆಗಳಿಗೆ ಅನುಗುಣವಾಗಿ ಇದ್ದವು. ಇದರಿಂದ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡವು. ಅಲ್ಲದೆ, ಏಷ್ಯಾದ ಮಾರುಕಟ್ಟೆ ಸೂಚ್ಯಂಕಗಳು ಏರಿಕೆ ಕಂಡಿದ್ದು ಮತ್ತು ವಿದೇಶಿ ಬಂಡವಾಳದ ಒಳಹರಿವು ಸಹ ಸೂಚ್ಯಂಕಗಳ ಏರಿಕೆಗೆ ನೆರವಾದವು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಎಟರ್ನಲ್ ಷೇರಿನ ಮೌಲ್ಯ ಶೇ 5.38ರಷ್ಟು ಏರಿಕೆ ಕಂಡಿದೆ. ಐಸಿಐಸಿಐ ಬ್ಯಾಂಕ್ ಷೇರುಮೌಲ್ಯ ಶೇ 2.76ರಷ್ಟು ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಷೇರಿನ ಮೌಲ್ಯ ಶೇ 2.19ರಷ್ಟು ಹೆಚ್ಚಳವಾಗಿದೆ.

ಮಹೀಂದ್ರ ಆ್ಯಂಡ್ ಮಹೀಂದ್ರ, ಭಾರತ್ ಎಲೆಕ್ಟ್ರಾನಿಕ್ಸ್, ಕೋಟಕ್ ಮಹೀಂದ್ರ ಬ್ಯಾಂಕ್ ಮತ್ತು ಟಾಟಾ ಮೋಟರ್ಸ್ ಗಳಿಕೆ ಕಂಡಿವೆ. ಎಚ್‌ಸಿಎಲ್ ಟೆಕ್, ಹಿಂದುಸ್ತಾನ್ ಯೂನಿಲಿವರ್, ಟಿಸಿಎಸ್ ಮತ್ತು ಐಟಿಸಿ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಏಷ್ಯಾದ ಮಾರುಕಟ್ಟೆಯಲ್ಲಿ ದಕ್ಷಿಣ ಕೊರಿಯಾ, ಶಾಂಘೈ, ಹಾಂಗ್ ಕಾಂಗ್ ಸಕಾರಾತ್ಮಕ ವಹಿವಾಟು ನಡೆಸಿವೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಶುಕ್ರವಾರದ ವಹಿವಾಟಿನಲ್ಲಿ ₹374 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.



ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.48ರಷ್ಟು ಇಳಿಕೆಯಾಗಿದೆ. ಪ್ರತೀ ಬ್ಯಾರೆಲ್ ಬೆಲೆ 68.93 ಡಾಲರ್ ಆಗಿದೆ.

ತಂತ್ರಜ್ಞಾನ ಶೃಂಗಸಭೆ–2025 60 ದೇಶಗಳಿಗೆ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಂತ್ರಜ್ಞಾನ ಶೃಂಗಸಭೆ-25ರಲ್ಲಿ 60 ದೇಶಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ಮಾಹಿತಿ ತಂತ್ರಜ್ಞಾನ ಇಲಾಖೆಯ ಪ್ರಧಾನ ಕಾರ್ಯದರ್ಶಿ ಏಕರೂಪ್ ಕೌರ್ ಹೇಳಿದರು.

ಪಾಲುದಾರ ದೇಶಗಳು ಮತ್ತು ಅಂತರರಾಷ್ಟ್ರೀಯ ವಾಣಿಜ್ಯ ಅಧಿಯಾಗದ ಪ್ರತಿನಿಧಿಗಳ ಸಭೆಯಲ್ಲಿ ಮಾತನಾಡಿದ ಅವರು, 2024ರ ತಂತ್ರಜ್ಞಾನ ಶೃಂಗಸಭೆಯಲ್ಲಿ 45 ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಬಾರಿ ಹೆಚ್ಚು ದೇಶಗಳ ಪ್ರತಿನಿಧಿಗಳು ಭಾಗವಹಿಸಲು ಆಹ್ವಾನ ನೀಡಲಾಗಿದೆ. ಬೆಂಗಳೂರು ಹೊರವಲಯದಲ್ಲಿ ಉದಯೋನ್ಮುಖ ತಂತ್ರಜ್ಞಾನ ಸಮುಚ್ಚಯಗಳ ಸ್ಥಾಪನೆಗೆ ಪ್ರೋತ್ಸಾಹ ಮೂಲಸೌಕರ್ಯ ಅಭಿವೃದ್ಧಿ, ಪ್ರತಿಭೆಯ ಲಭ್ಯತೆ ಮತ್ತು ಉತ್ತಮ ಮಾರುಕಟ್ಟೆಗೆ ಉತ್ತೇಜನ ನೀಡುವ ಜತೆಗೆ, ಕ್ರಿಯಾತ್ಮಕ ಪರಿಸರ ವ್ಯವಸ್ಥೆ ರೂಪಿಸಲಾಗುವುದು ಎಂದರು.

ಯುಎಸ್-ಇಂಡಿಯಾ ಬಿಸಿನೆಸ್ ಕೌನ್ಸಿಲ್ ಜತೆ ಕರ್ನಾಟಕ ಸಹಯೋಗವನ್ನು ಹೆಚ್ಚಿಸಲಾಗಿದೆ. ಪಾಲುದಾರರಿರುವ ಯುಎಸ್‌ಐಬಿಸಿ ಸದಸ್ಯ ಕಂಪನಿಗಳು ಹಾಗೂ ಸರ್ಕಾರದ ನಡುವಿನ ಸಂವಹನ ಮಾರ್ಗಗಳು ರಾಜ್ಯದ ಉದ್ಯಮಗಳಿಗೆ ಅನುಕೂಲಕರ ವಾತಾವರಣ ನಿರ್ಮಿಸುತ್ತಿವೆ. ಕರ್ನಾಟಕ ಏಷ್ಯಾದ ತಂತ್ರಜ್ಞಾನದ ಹಬ್ ಆಗಿ ರೂಪುಗೊಳ್ಳುತ್ತಿದೆ ಎಂದು ಹೇಳಿದರು.

ವಿಶ್ವದರ್ಜೆ ಮೂಲಸೌಕರ್ಯ, ವಿಸ್ತಾರವಾದ ಪ್ರದರ್ಶನ ಸಭಾಂಗಣಗಳು ಮತ್ತು ಅತ್ಯಾಧುನಿಕ ಸಮ್ಮೇಳನ ಸೌಲಭ್ಯಗಳನ್ನು ಈ ಬಾರಿಯ ತಂತ್ರಜ್ಞಾನ ಶೃಂಗಸಭೆ ಒಳಗೊಂಡಿರುತ್ತದೆ. 20 ಸಾವಿರ ನವೋದ್ಯಮ ಕಂಪನಿಗಳ ಸಂಸ್ಥಾಪಕರು, ಒಂದು ಸಾವಿರ ಹೂಡಿಕೆದಾರರು, ವಿವಿಧ ಕಂಪನಿಗಳ 15 ಸಾವಿರ ಪ್ರತಿನಿಧಿಗಳು, ಒಂದು ಲಕ್ಷ ಜನರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಪರಿಶೀಲನಾ ಸಮಿತಿ ಶಿಫಾರಸು, ಹೊಸ ಮಸೂದೆಯಲ್ಲಿ ಸೇರಿಸಲು ಸಲಹೆ

ದಂಡ ಇಲ್ಲದೆ ಟಿಡಿಎಸ್ ಕ್ಲೇಮ್‌ಗೆ ಅವಕಾಶ

ನವದೆಹಲಿ (ಪಿಟಿಐ): ಧಾರ್ಮಿಕ ಹಾಗೂ ದತ್ತಿ ಟ್ರಸ್ಟ್‌ಗಳಿಗೆ ಅನಾಮಧೇಯವಾಗಿ ನೀಡುವ ದೇಣಿಗೆಗಳಿಗೆ ತೆರಿಗೆ ವಿನಾಯಿತಿ ನೀಡುವುದನ್ನು ಮುಂದುವರಿಸಬೇಕು ಎಂದು ಬಿಜೆಪಿ ಮುಖಂಡ ಬೈಜಯಂತ್ ಪಾಂಡಾ ನೇತೃತ್ವದ ಸಂಸತ್ತಿನ ಪರಿಶೀಲನಾ ಸಮಿತಿಯು ಶಿಫಾರಸು ಮಾಡಿದೆ.

ಹೊಸ ಆದಾಯ ತೆರಿಗೆ ಮಸೂದೆಯಲ್ಲಿ ಈ ಅಂಶವನ್ನು ಮುಂದುವರಿಸಬೇಕು ಎಂದು ಅದು ಹೇಳಿದೆ. ಈ ವಿನಾಯಿತಿಯನ್ನು ತೆಗೆದಲ್ಲಿ, ಲಾಭದ ಉದ್ದೇಶ ಇಲ್ಲದ ಸಂಸ್ಥೆಗಳ (ಎನ್‌ಪಿಒ) ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ ಎಂದು ಸಮಿತಿ ಹೇಳಿದೆ.

ಹೊಸ ಆದಾಯ ತೆರಿಗೆ ಮಸೂದೆಯನ್ನು ಸಮಿತಿಯು ಪರಿಶೀಲಿಸಿದೆ. ಟಿಡಿಎಸ್ ರೂಪದಲ್ಲಿ ಕಡಿತ ಆದ



ಮೊತ್ತವನ್ನು ಆದಾಯ ತೆರಿಗೆ ವಿವರ ಸಲ್ಲಿಸುವ ಕಡೆಯ ದಿನ ಕಳೆದ ನಂತರವೂ ಯಾವುದೇ ದಂಡ ಶುಲ್ಕ ಇಲ್ಲದೆ ಕ್ಲೇಮ್ ಮಾಡಿಕೊಳ್ಳಲು ತೆರಿಗೆದಾರರಿಗೆ ಅವಕಾಶ ಇರಬೇಕು ಎಂದು ಸಮಿತಿಯು ಸಲಹೆ ನೀಡಿದೆ.

ಹೊಸ 'ಆದಾಯ ತೆರಿಗೆ ಮಸೂದೆ–2025', ಆರು ದಶಕಗಳಷ್ಟು ಹಳೆಯದಾಗಿರುವ 'ಆದಾಯ ತೆರಿಗೆ ಕಾಯ್ದೆ–1961'ರ ಬದಲಿಗೆ ಜಾರಿಗೆ ಬರಲಿದೆ. ಪರಿಶೀಲನಾ ಸಮಿತಿಯ ವರದಿಯನ್ನು ಲೋಕಸಭೆಯಲ್ಲಿ ಸೋಮವಾರ ಮಂಡಿಸಲಾಯಿತು.

ಹೊಸ ಮಸೂದೆಯು, ಶುದ್ಧ ಧಾರ್ಮಿಕ ಟ್ರಸ್ಟ್‌ಗಳು ಪಡೆಯುವ ಅನಾಮಧೇಯ ದೇಣಿಗೆಗಳನ್ನು ತೆರಿಗೆ ವ್ಯಾಪ್ತಿಯಿಂದ ಹೊರಗೆ ಇರಿಸಿದೆ. ಆದರೆ ದತ್ತಿ ಕಾರ್ಯವನ್ನೂ ನಡೆಸುವ ಧಾರ್ಮಿಕ ಟ್ರಸ್ಟ್‌ಗಳು ಪಡೆಯುವ ಇಂತಹ ದೇಣಿಗೆಗಳಿಗೆ ತೆರಿಗೆ ಪಾವತಿಸಬೇಕು ಎಂದು ಮಸೂದೆಯು ಹೇಳುತ್ತದೆ.

ಎಲ್ಲ ನೋಂದಾಯಿತ ಎನ್‌ಪಿಒಗಳು ಪಡೆಯುವ ಅನಾಮಧೇಯ ದೇಣಿಗೆಗೆ ಶೇ 30ರಷ್ಟು ತೆರಿಗೆ ಇರಬೇಕು ಎಂದು ಮಸೂದೆಯಲ್ಲಿ ಉಲ್ಲೇಖಿಸಲಾಗಿದೆ. ಧಾರ್ಮಿಕ ಉದ್ದೇಶಕ್ಕೆ ಮಾತ್ರ ಸ್ಥಾಪಿಸಿರುವ ಎನ್‌ಪಿಒಗಳಿಗೆ ಇದರಿಂದ ವಿನಾಯಿತಿ ನೀಡಲಾಗಿದೆ.

ಸಂಸತ್ತಿನ ಪರಿಶೀಲನಾ ಸಮಿತಿ ನೀಡಿರುವ ಶಿಫಾರಸುಗಳು ಸಲಹಾ ಸ್ವರೂಪದ್ದಾಗಿರುತ್ತವೆ. ಈ ಶಿಫಾರಸುಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವು ಕೇಂದ್ರಕ್ಕೆ ಸರ್ಕಾರಕ್ಕೆ ಇರುತ್ತದೆ.

500 ಸೇವಾ ಕೇಂದ್ರ ಸ್ಥಾಪಿಸಲು ಮಾರುತಿ ನಿರ್ಧಾರ

ನವದೆಹಲಿ (ಪಿಟಿಐ): ದೇಶದ ಅತಿದೊಡ್ಡ ಕಾರು ತಯಾರಿಕಾ ಕಂಪನಿ ಮಾರುತಿ ಸುಜುಕಿ ಇಂಡಿಯಾ, ಪ್ರಸಕ್ತ ಆರ್ಥಿಕ ವರ್ಷದಲ್ಲಿ 500 ಹೆಚ್ಚುವರಿ ಸೇವಾ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧರಿಸಿದೆ.

2024–25ರ ಆರ್ಥಿಕ ವರ್ಷದಲ್ಲಿ 460 ಸೇವಾ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. ಇದೀಗ 500 ಹೊಸ ಸೇವಾ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಈ ಪೈಕಿ 91 ಕೇಂದ್ರಗಳನ್ನು ಈಗಾಗಲೇ ಸ್ಥಾಪಿಸಲಾಗಿದೆ ಎಂದು ಮಾರುತಿ ಸುಜುಕಿ ಇಂಡಿಯಾದ (ಎಂಎಸ್‌ಐ) ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಹಿಸಾಶಿ ಟಕೆಯುಚಿ ಹೇಳಿದ್ದಾರೆ.

ದೇಶದ 2,764 ನಗರಗಳಲ್ಲಿ ಕಂಪನಿಯು 5,500 ಸೇವಾ ಕೇಂದ್ರಗಳನ್ನು ಈಗಾಗಲೇ ಹೊಂದಿದೆ. ಇದಕ್ಕಾಗಿ ಕಂಪನಿಯ ಡೀಲರ್‌ಗಳ ಸಹಕಾರವನ್ನು ತೆಗೆದುಕೊಳ್ಳಲಾಗಿದೆ ಎಂದು ಸೋಮವಾರ ಹೇಳಿದ್ದಾರೆ.

ಕಂಪನಿಯು ಈಗ ವರ್ಷಕ್ಕೆ 3 ಕೋಟಿ ಗ್ರಾಹಕರಿಗೆ ಸೇವೆ ನೀಡುವ ಸಾಮರ್ಥ್ಯ ಹೊಂದಿದೆ. ಕಳೆದ ಆರ್ಥಿಕ ವರ್ಷದಲ್ಲಿ 2.7 ಕೋಟಿಗೂ ಹೆಚ್ಚು ಗ್ರಾಹಕರಿಗೆ ಸೇವೆ ನೀಡಲಾಗಿತ್ತು. ಇದು ಈವರೆಗಿನ ಅತ್ಯಧಿಕ ಸಂಖ್ಯೆ ಎಂದು ಹೇಳಿದ್ದಾರೆ.

ಪಾಣಿಪತ್‌ನಲ್ಲಿ ದೇಶದ ಅತಿದೊಡ್ಡ ಹಸಿರು ಜಲಜನಕ ಘಟಕ: ಎಲ್ ಆ್ಯಂಡ್ ಟಿ

ನವದೆಹಲಿ (ಪಿಟಿಐ): ಹರಿಯಾಣದ ಪಾಣಿಪತ್‌ನಲ್ಲಿರುವ ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನ ಸಂಸ್ಕರಣಾ ಘಟಕದ ಬಳಿ ದೇಶದ ಅತಿದೊಡ್ಡ ಹಸಿರು ಜಲಜನಕ (ಗ್ರೀನ್ ಹೈಡ್ರೋಜನ್) ಘಟಕವನ್ನು ಸ್ಥಾಪನೆ ಮಾಡಲಾಗುವುದು ಎಂದು ಎಲ್ ಆ್ಯಂಡ್ ಟಿ ಕಂಪನಿ ಸೋಮವಾರ ತಿಳಿಸಿದೆ.

ರಾಷ್ಟ್ರೀಯ ಹಸಿರು ಜಲಜನಕ ಮಿಷನ್‌ನ ಧ್ಯೇಯಕ್ಕೆ ಈ ಯೋಜನೆಯು ಪೂರಕವಾಗಿದೆ ಎಂದು ಕಂಪನಿ ಹೇಳಿದೆ. ಹಸಿರು ಜಲಜನಕ ಉತ್ಪಾದನೆ ಮತ್ತು ತಂತ್ರಜ್ಞಾನದಲ್ಲಿ ಭಾರತವನ್ನು ಜಾಗತಿಕ ತಾಣವಾಗಿ ರೂಪಿಸುವ ಗುರಿಯನ್ನು ಈ ಮಿಷನ್ ಹೊಂದಿದೆ. ಎಲ್ ಆ್ಯಂಡ್ ಟಿ ಕಂಪನಿಯ ಅಂಗಸಂಸ್ಥೆಯಾದ ಎಲ್ ಆ್ಯಂಡ್ ಟಿ ಎನರ್ಜಿ ಗ್ರೀನ್‌ಟೆಕ್ ಲಿಮಿಟೆಡ್ ಈ ಘಟಕವನ್ನು ನಿರ್ಮಾಣ ಮಾಡಲಿದೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್‌ಗೆ 25 ವರ್ಷದವರೆಗೆ ಇದು ವಾರ್ಷಿಕ 10 ಸಾವಿರ ಟನ್ ಹಸಿರು ಜಲಜನಕವನ್ನು ಪೂರೈಕೆ ಮಾಡಲಿದೆ.

ಬಿಜೆಪಿಯವರು ಪರಿಶುದ್ಧರೇ? ಏಕೆ ಇ.ಡಿ ದಾಳಿ ಆಗಲ್ಲ: ಡಿಕೆಶಿ

ಕನಕಪುರ (ರಾಮನಗರ): 'ಬಿಜೆಪಿ, ಜೆಡಿಎಸ್ ನಾಯಕರ ಮನೆ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಏಕೆ ದಾಳಿ ಮಾಡುವುದಿಲ್ಲ. ಬಿಜೆಪಿಯಲ್ಲಿರುವ ಎಲ್ಲರೂ ಪರಿಶುದ್ಧರೇ?' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದ್ದಾರೆ.

ಇ.ಡಿ ಅಧಿಕಾರಿಗಳಿಗೆ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಅವರಷ್ಟೇ ಕಾಣುತ್ತಾರಾ? ಎಂದು ಸೋಮವಾರ ತಾಲ್ಲೂಕಿನ ಕೋಡಿಹಳ್ಳಿಯಲ್ಲಿ ಪ್ರಶ್ನಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜಕೀಯ ಒತ್ತಡಗಳಿಗೆ ಮಣಿದು ಯಾರದೋ ಕೈಗೊಂಬೆಯಂತೆ ಇ.ಡಿ ಕೆಲಸ ಮಾಡಬಾರದು. ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ವಿರುದ್ಧ ತನಿಖೆಗೆ ಇ.ಡಿ, ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವ ಅಗತ್ಯ ಇರಲಿಲ್ಲ ಎಂದು ಪ್ರತಿಕ್ರಿಯಿಸಿದರು.

'ನನ್ನ ವಿರುದ್ಧ ಪ್ರಕರಣ ದಾಖಲಿಸಿ ತಿಹಾರ್ ಜೈಲಿಗೆ ಕಳಿಸಿದ್ದರು. ಬಳಿಕ, ಆ ಪ್ರಕರಣ ವಜಾ ಆಯಿತು. ಆ ನೋವು ಅನುಭವಿಸಿದವರಿಗೆ ಮಾತ್ರ ಗೊತ್ತು' ಎಂದರು.

ಸಂಕ್ಷಿಪ್ತ ಸುದ್ದಿ

ಮೂಲಸೌಕರ್ಯ ವಲಯದ ಪ್ರಗತಿ ಇಳಿಕೆ

ನವದೆಹಲಿ (ಪಿಟಿಐ): ದೇಶದ ಪ್ರಮುಖ ಎಂಟು ಮೂಲಸೌಕರ್ಯ ವಲಯಗಳ ಬೆಳವಣಿಗೆ ಜೂನ್ ತಿಂಗಳಿನಲ್ಲಿ ಶೇ 1.7ಕ್ಕೆ ಇಳಿಕೆಯಾಗಿದೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ.

ಇದೇ ವರ್ಷದ ಮೇ ತಿಂಗಳಲ್ಲಿ ಈ ವಲಯಗಳ ಬೆಳವಣಿಗೆಯು ಶೇ 1.2ರಷ್ಟಿತ್ತು. ಇದಕ್ಕೆ ಹೋಲಿಸಿದರೆ ಬೆಳವಣಿಗೆ ಸ್ವಲ್ಪ ಏರಿಕೆಯಾಗಿದೆ. ಆದರೆ, ಕಳೆದ ವರ್ಷದ ಜೂನ್ ತಿಂಗಳಿನಲ್ಲಿ ಬೆಳವಣಿಗೆ ಶೇ 5ರಷ್ಟಿದ್ದು, ಅದಕ್ಕೆ ಹೋಲಿಸಿದರೆ ಪ್ರಗತಿ ಇಳಿಕೆಯಾಗಿದೆ.

ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ರಸಗೊಬ್ಬರ ಮತ್ತು ವಿದ್ಯುತ್ ಉತ್ಪಾದನೆಯಲ್ಲಿ ಇಳಿಕೆಯಾಗಿದೆ. ಆದರೆ, ರಿಫೈನರಿ ಉತ್ಪನ್ನಗಳು (ಶೇ 3.4), ಉಕ್ಕು (ಶೇ 9.3) ಮತ್ತು ಸಿಮೆಂಟ್ ವಲಯದ ಉತ್ಪಾದನೆ ಶೇ 9.2 ಏರಿಕೆ ಕಂಡಿದೆ.

ಕಳೆದ ವರ್ಷದ ಜೂನ್ ತ್ರೈಮಾಸಿಕದಲ್ಲಿ ಈ ಎಂಟು ವಲಯಗಳ ಬೆಳವಣಿಗೆ ಶೇ 6.2ರಷ್ಟಿತ್ತು. ಈ ಬಾರಿ ಶೇ 1.3ರಷ್ಟಿದೆ. ಕಲ್ಲಿದ್ದಲು ಉತ್ಪಾದನೆಯಲ್ಲಿ ಶೇ 6.8ರಷ್ಟು ಇಳಿಕೆಯಾಗಿದೆ.

ಬೇಲೆಕೇರಿ ಬಂದರು ಅದಿರು ವಶ ಹೈಕೋರ್ಟ್ ಆದೇಶಕ್ಕೆ ತಡೆ

ನವದೆಹಲಿ: ಎರಡು ಕಂಪನಿಗಳಿಂದ ವಶಪಡಿಸಿಕೊಂಡಿದ್ದ 5663 ಟನ್ ಹಾಗೂ 4864 ಟನ್ ಕಬ್ಬಿಣದ ಅದಿರನ್ನು ಬಿಡುಗಡೆ ಮಾಡುವಂತೆ ಕರ್ನಾಟಕ ಹೈಕೋರ್ಟ್ 2024ರ ಜೂನ್ 11ರಂದು ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ತಡೆಯಾಜ್ಞೆ ನೀಡಿದೆ.

2012ರಲ್ಲಿ ಸುಪ್ರೀಂ ಕೋರ್ಟ್ ಆದೇಶದ ನಂತರ ಬೇಲೆಕೇರಿ ಬಂದರಿನಲ್ಲಿ ಅದಿರು ವಶಪಡಿಸಿಕೊಳ್ಳಲಾಗಿತ್ತು.

ಬೇಲೆಕೇರಿಯ ವಲಯ ಅರಣ್ಯಾಧಿಕಾರಿ ಸಲ್ಲಿಸಿದ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಮನೋಜ್ ಮಿಶ್ರಾ ಮತ್ತು ಉಜ್ವಲ್ ಭುಯಾನ್ ಅವರ ಪೀಠವು ರಾಜಮಹಲ್ ಸಿಲ್ಕ್ಸ್ ಮತ್ತು ಗಿಂಪೆಕ್ಸ್ ಲಿಮಿಟೆಡ್‌ಗೆ ನೋಟಿಸ್ ಜಾರಿ ಮಾಡಿದೆ. ರಾಜ್ಯದಲ್ಲಿ ಅಕ್ರಮ ಕಬ್ಬಿಣದ ಅದಿರು ಗಣಿಗಾರಿಕೆಗೆ ಸಂಬಂಧಿಸಿದಂತೆ 2012ರ ಸೆಪ್ಟೆಂಬರ್ 7ರಂದು ಸುಪ್ರೀಂ ಕೋರ್ಟ್ ನೀಡಿದ ಆದೇಶಕ್ಕೆ ಹೈಕೋರ್ಟ್‌ನ ಆದೇಶವು ಸಂಪೂರ್ಣವಾಗಿ ವಿರುದ್ಧವಾಗಿದೆ ಎಂದು ಹಿರಿಯ ವಕೀಲ ದೇವದತ್ತ ಕಾಮತ್ ಮತ್ತು ಹೆಚ್ಚುವರಿ ಅಡ್ವೊಕೇಟ್ ಜನರಲ್ ನಿಶಾಂತ್ ಪಾಟೀಲ ವಾದಿಸಿದರು.

'ಡಿಜಿಟಲ್ ಪುರಾವೆ ಆಧರಿಸಿ ನೋಟಿಸ್'

ಹಾವೇರಿ: 'ಫೋನ್ ಪೇ, ಗೂಗಲ್ ಪೇ ಮತ್ತು ಇತರೆ ಇ–ವ್ಯಾಲೆಟ್ ಮೂಲಕ ವ್ಯಾಪಾರಿಗಳು ನಡೆಸುವ ಹಣಕಾಸಿನ ವ್ಯವಹಾರಕ್ಕೆ ಡಿಜಿಟಲ್ ಪುರಾವೆ ಇರುತ್ತದೆ' ಎಂದು ಜವಳಿ, ಕಬ್ಬು ಅಭಿವೃದ್ಧಿ ಸಚಿವ ಶಿವಾನಂದ ಪಾಟೀಲ ಹೇಳಿದರು.

'ವಾಣಿಜ್ಯ ತೆರಿಗೆ ಅಧಿಕಾರಿಗಳು, ಡಿಜಿಟಲ್ ಪುರಾವೆ ಇಟ್ಟುಕೊಂಡು ವ್ಯಾಪಾರಿಗಳಿಗೆ ನೋಟಿಸ್ ಕೊಟ್ಟಿದ್ದಾರೆ' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು. 'ನೋಟಿಸ್ ಕೊಟ್ಟ ಮಾತ್ರಕ್ಕೆ ವ್ಯಾಪಾರಿಗಳು ಹೆದರಬೇಕಿಲ್ಲ. ಜಿಎಸ್‌ಟಿಯಿಂದ ವಿನಾಯಿತಿ ಪಡೆದ ವಸ್ತುಗಳಿದ್ದರೆ, ಕಚೇರಿಗೆ ತೆರಳಿ ಸ್ಪಷ್ಟನೆ ನೀಡಲು ಅವಕಾಶವಿದೆ' ಎಂದರು.



ಬಾಂಗ್ಲಾದೇಶ ವಾಯುಪಡೆಯ ತರಬೇತಿ ವಿಮಾನ ಸೋಮವಾರ ಢಾಕಾ ಸಮೀಪದ ಶಾಲಾ ಕಟ್ಟಡಕ್ಕೆ ಅಪ್ಪಳಿಸಿದ್ದು, ಅಗ್ನಿಶಾಮಕ ದಳ ಮತ್ತು ಪೊಲೀಸರು ರಕ್ಷಣಾ ಕಾರ್ಯ ನಿರ್ವಹಿಸಿದರು ಎಎಫ್‌ಪಿ ಚಿತ್ರ

ಶಾಲಾ ಕಟ್ಟಡಕ್ಕೆ ಅಪ್ಪಳಿಸಿದ ಬಾಂಗ್ಲಾ ವಾಯುಪಡೆಯ ವಿಮಾನ: 20 ಸಾವು

ಢಾಕಾ (ಪಿಟಿಐ): ಬಾಂಗ್ಲಾದೇಶ ವಾಯುಪಡೆಯ ತರಬೇತಿ ವಿಮಾನ ಸೋಮವಾರ ಮಧ್ಯಾಹ್ನ ಇಲ್ಲಿನ ಶಾಲಾ ಕಟ್ಟಡದ ಮೇಲೆ ಪತನಗೊಂಡಿದ್ದು, ಪೈಲಟ್ ಸೇರಿ 20 ಜನರು ಮೃತಪಟ್ಟಿದ್ದಾರೆ. ದುರಂತದಲ್ಲಿ 171 ಜನರು ಗಾಯಗೊಂಡಿದ್ದಾರೆ.

ಮೃತರಲ್ಲಿ ಬಹುತೇಕರು ಶಾಲಾ ಮಕ್ಕಳಾಗಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಮಧ್ಯಾಹ 1:06ಕ್ಕೆ ಟೇಕ್‌ಆಫ್ ಆದ ಎಫ್–7 ಬಿಜಿಐ ತರಬೇತಿ ವಿಮಾನವು, ಢಾಕಾ ಸಮೀಪದ ಉತ್ತರಾ ಪ್ರದೇಶದಲ್ಲಿನ ಮೈಲ್‌ಸ್ಟೋನ್ ಶಾಲೆ ಮತ್ತು ಕಾಲೇಜು ಆವರಣದಲ್ಲಿನ ಎರಡು ಮಹಡಿಯ ಕಟ್ಟಡಕ್ಕೆ ಅಪ್ಪಳಿಸಿದೆ ಎಂದು ಸರ್ಕಾರದ ಪ್ರಕಟಣೆ ತಿಳಿಸಿದೆ.

ವಿಮಾನವು 3 ಮತ್ತು 4ನೇ ತರಗತಿ ಕಟ್ಟಡಗಳ ಸಮೀಪ ಪತನಗೊಂಡಿದೆ ಎಂದು ಮೂಲಗಳು ತಿಳಿಸಿವೆ.

ಅಪಘಾತ ಸಂಭವಿಸಿದ ಕೂಡಲೇ ಭಾರಿ ಶಬ್ದದೊಂದಿಗೆ ದೊಡ್ಡ ಪ್ರಮಾಣದಲ್ಲಿ ಬೆಂಕಿ ಮತ್ತು ಹೊಗೆ ಕಾಣಿಸಿಕೊಂಡಿತು. ತಕ್ಷಣವೇ ಪೊಲೀಸರು, ಅಗ್ನಿಶಾಮಕ ದಳದವರು ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯದಲ್ಲಿ ತೊಡಗಿದರು. ವಾಯುಪಡೆಯ ಹೆಲಿಕಾಪ್ಟರ್ ಸಹ ರಕ್ಷಣಾ ಕಾರ್ಯಕ್ಕೆ ಸಾಥ್ ನೀಡಿತು ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಈ ದುರಂತದಲ್ಲಿ ಗಾಯಗೊಂಡವರನ್ನು ಸೇನಾ ಆಸ್ಪತ್ರೆ ಸೇರಿದಂತೆ ಸಮೀಪದ ಆಸ್ಪತ್ರೆಗಳಲ್ಲಿ ದಾಖಲಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ತನಿಖೆಗೆ ಆದೇಶ: ದೇಶ ಕಂಡ ಭೀಕರ ವಿಮಾನ ದುರಂತ ಇದಾಗಿದ್ದು, ಯಾಂತ್ರಿಕ ಕಾರಣದಿಂದ ಇದು ಸಂಭವಿಸಿದಂತಿದೆ. ದುರಂತಕ್ಕೆ ಕಾರಣ ತಿಳಿದುಕೊಳ್ಳಲು ಉನ್ನತ ಮಟ್ಟದ ತನಿಖಾ ಸಮಿತಿ ರಚಿಸಲಾಗಿದೆ ಎಂದು ಬಾಂಗ್ಲಾದೇಶ ವಾಯುಪಡೆ ತಿಳಿಸಿದೆ.

ಚಿರಸ್ಮರಣೆ



ಶ್ರೀಮತಿ ನಾಗಮ್ಮನವರು
(ದಿವಂಗತ ಶ್ರೀ ಜಿ. ರಾಮಕೃಷ್ಣಪ್ಪ ರೆಡ್ಡಿರವರ ಧರ್ಮಪತ್ನಿ)
ನಿಧನ: 22–07–2010

ನೀವು ನಮ್ಮನ್ನಗಲಿ ಇಂದಿಗೆ 15 ವರ್ಷಗಳಾದರೂ ನಿಮ್ಮ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ. ನಿಮ್ಮ ದಿವ್ಯಾತ್ಮಕ್ಕೆ ಶಾಂತಿಯನ್ನು ಬಯಸುವ

ಸೊಸೆ: ಕೆ.ಜೆ.ಯಶೋದಾ
ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು

ಇ.ಡಿ.ಗೆ 'ಸುಪ್ರೀಂ' ತಪರಾಕಿ

ಒಂದನೇ ಪುಟದಿಂದ...

'ಇ.ಡಿ ನಮಗೆ ಸಮನ್ಸ್ ನೀಡಿರುವುದನ್ನು ಹಾಗೂ ಇಸಿಐಆರ್ (ಎನ್‌ಫೋರ್ಸ್‌ಮೆಂಟ್ ಕೇಸ್ ಇನ್‌ಫಾರ್ಮೇಶನ್ ರಿಪೋರ್ಟ್) ದಾಖಲಿಸಿರುವುದನ್ನು ರದ್ದುಗೊಳಿಸಬೇಕು' ಎಂದು ಕೋರಿ ಪಾರ್ವತಿ ಮತ್ತು ಸುರೇಶ್ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಹೈಕೋರ್ಟ್, ಕಳೆದ ಮಾರ್ಚ್ ತಿಂಗಳಲ್ಲಿ ಸಮನ್ಸ್ ರದ್ದುಗೊಳಿಸಿತ್ತು.

'ಮುಡಾದ 14 ನಿವೇಶನಗಳನ್ನು ಪಾರ್ವತಿ ಅವರು 2024ರ ಅಕ್ಟೋಬರ್ 1ರಂದೇ ಹಿಂತಿರುಗಿಸಿದ್ದಾರೆ. ಅವರು ನಿವೇಶನಗಳಿಂದ ಪ್ರಯೋಜನ ಪಡೆಯುತ್ತಿಲ್ಲ. ಇದು ಇ.ಡಿ ತನಿಖಾ ವ್ಯಾಪ್ತಿಯಲ್ಲಿ ಇಲ್ಲ. ಅಪರಾಧದಿಂದ ಗಳಿಸಿದ ಸಂಪತ್ತಿದ್ದರೆ ಮಾತ್ರ ಇ.ಡಿ ತನಿಖೆ ನಡೆಸಬಹುದು. ಆದರೆ, ನಿವೇಶನಗಳನ್ನು ಮರಳಿಸಿದ ನಂತರ ಇ.ಡಿ ತನಿಖೆ ಆರಂಭಿಸಿದೆ' ಎಂದು ಪಾರ್ವತಿಯವರ ಪರ ವಕೀಲರು ಪ್ರತಿಪಾದಿಸಿದ್ದರು.

'ಲೋಕಾಯುಕ್ತ ಪೊಲೀಸರ ತನಿಖಾ ವ್ಯಾಪ್ತಿಯಲ್ಲಿ ಇ.ಡಿ ಪ್ರವೇಶಿಸಿದೆ. ಈಗಾಗಲೇ, ಲೋಕಾಯುಕ್ತ ಪೊಲೀಸರು ತನಿಖೆಯಲ್ಲಿ ಯಾವುದೇ ಅಕ್ರಮ ಕಂಡುಬಂದಿಲ್ಲ ಎಂದು 'ಬಿ' ರಿಪೋರ್ಟ್ ಸಲ್ಲಿಸಿದ್ದಾರೆ. ಆದ್ದರಿಂದ, ಇ.ಡಿ ದಾಖಲಿಸಿರುವ ಪ್ರಕರಣ ರದ್ದುಗೊಳಿಸಬೇಕು' ಎಂದು ಕೋರಿದ್ದರು.

'ಸಿದ್ದರಾಮಯ್ಯನವರ ಪತ್ನಿ ಪಾರ್ವತಿ ಅವರಿಗೆ 14 ನಿವೇಶನ ಹಂಚಿಕೆ ಮಾಡಿರುವಲ್ಲಿ ಯಾವುದೇ ಅಪರಾಧ ಅಥವಾ ಅಕ್ರಮ ಗಳಿಕೆಗೆ ಕಾರಣವಾದ ಅಂಶಗಳಿಲ್ಲ. ಸುರೇಶ್ ಅವರು 2023ರ ಜೂನ್‌ನಲ್ಲಿ ನಗರಾಭಿವೃದ್ಧಿ ಮಂತ್ರಿಯಾಗಿದ್ದಾರೆ. ಈ ಅಪರಾಧ ಆರೋಪದಲ್ಲಿ ಅವರು ಭಾಗಿಯಾಗಿಲ್ಲ. ಅಷ್ಟಕ್ಕೂ ಮುಡಾ ಮಾಜಿ ಆಯುಕ್ತ ಡಿ.ಬಿ.ನಟೇಶ್ ಅವರಿಗೆ ಇ.ಡಿ ಜಾರಿ ಮಾಡಿದ್ದ ಸಮನ್ಸ್ ಅನ್ನು ಬೇರೊಂದು ಪ್ರಕರಣದಲ್ಲಿ ಇದೇ ಹೈಕೋರ್ಟ್‌ನ ಏಕಸದಸ್ಯ ನ್ಯಾಯಪೀಠ ಈಗಾಗಲೇ ವಜಾ ಮಾಡಿದೆ' ಎಂಬ ಅಂಶವನ್ನು ಬೈರತಿ ಪರ ವಕೀಲರು ನ್ಯಾಯಪೀಠದ ಗಮನಕ್ಕೆ ತಂದಿದ್ದರು.

> ಹಾದಿಬೀದಿಯಲ್ಲಿ ಸಿದ್ದರಾಮಯ್ಯ ಅವರ ವಿರುದ್ಧ ಟೀಕೆ ಮಾಡುತ್ತಿದ್ದ ಬಿಜೆಪಿ, ಜೆಡಿಎಸ್‌ನವರು ಈಗ ಕ್ಷಮೆ ಕೇಳಬೇಕು. ಮೋದಿಯವರ ಕೈಗೊಂಬೆಯಾಗಿ ಸಿಬಿಐ, ಇಡಿ ಕೆಲಸ ಮಾಡುತ್ತಿರುವುದು ಮತ್ತೊಮ್ಮೆ ಸಾಬೀತಾಗಿದೆ
> **ಶಿವರಾಜ ತಂಗಡಗಿ,** ಕನ್ನಡ ಮತ್ತು ಸಂಸ್ಕೃತಿ ಸಚಿವ

> ಕಳಂಕರಹಿತ, ಸಿದ್ಧಾಂತದ ರಾಜಕಾರಣ ಮಾಡಿಕೊಂಡು ಬಂದಿರುವ ಸಿದ್ದರಾಮಯ್ಯ ಅವರನ್ನು ರಾಜಕೀಯವಾಗಿ ಹಣಿಯಲು ಇ.ಡಿಯನ್ನು ದುರ್ಬಳಕೆ ಮಾಡಿದ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಕ್ತ ಪಾಠ ಕಲಿಸಿದೆ
> **ಬಿ. ಝೆಡ್. ಜಮೀರ್ ಅಹಮದ್ ಖಾನ್,** ವಸತಿ ಸಚಿವ

> ಆಧಾರವಿಲ್ಲದ ಆರೋಪಗಳನ್ನು ಮಾಡಿ ಜನರ ದಿಕ್ಕು ತಪ್ಪಿಸುವುದೇ ಬಿಜೆಪಿ, ಜೆಡಿಎಸ್ ಉದ್ಯೋಗ. ಸುಳ್ಳು ಕೇಸಿನಲ್ಲಿ ಸಿದ್ದರಾಮಯ್ಯ ಮತ್ತು ಅವರ ಕುಟುಂಬವನ್ನು ಎಳೆದು ತರುವ ಆ ಪಕ್ಷಗಳ ಪ್ರಯತ್ನ ವಿಫಲವಾಗಿದೆ
> **ಸಲೀಂ ಅಹ್ಮದ್,** ವಿಧಾನ ಪರಿಷತ್ ಸರ್ಕಾರಿ ಮುಖ್ಯ ಸಚೇತಕ

'ಮೋದಿ, ಶಾ ಪಾಪ ತೊಳೆದುಕೊಳ್ಳಲಿ'

ಒಂದನೇ ಪುಟದಿಂದ...

'ಈ ವಿಷಯದಲ್ಲಿ ನನ್ನ ಮನದಾಳದ ಮಾತನ್ನೇ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಗವಾಯಿಯವರು ಹೇಳಿದ್ದಾರೆ. 'ರಾಜಕೀಯ ಸಮರಕ್ಕೆ ಮತದಾರರನ್ನು ಬಳಸಿಕೊಳ್ಳಬೇಕೇ ಹೊರತು, ಇದಕ್ಕಾಗಿ ಜಾರಿ ನಿರ್ದೇಶನಾಲಯದಂಥ ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಳಕೆ ಮಾಡಬಾರದು' ಎಂಬ ಅವರ ಮಾತುಗಳು ಸಂವಿಧಾನದ ಮೇಲೆ ನಂಬಿಕೆ ಇಟ್ಟಿರುವ ಪ್ರತಿಯೊಬ್ಬ ಪ್ರಜ್ಞಾವಂತ ಭಾರತೀಯನ ಅಭಿಪ್ರಾಯವಾಗಿದೆ' ಎಂದಿದ್ದಾರೆ.

'ರಾಜಕೀಯವಾಗಿ ನನ್ನನ್ನು ಎದುರಿಸಲಾಗದ ಬಿಜೆಪಿ ಮತ್ತು ಅದರ ಸಂಗಾತಿಗಳು ಸಿಬಿಐ ಮತ್ತು ಇಡಿಯನ್ನು ದುರ್ಬಳಕೆ ಮಾಡಿಕೊಂಡು ನನ್ನ ಪತ್ನಿಯ ವಿರುದ್ಧ ಸುಳ್ಳು ಪ್ರಕರಣವನ್ನು ಸೃಷ್ಟಿಸಿ, ನೀಡಿರುವ ಕಿರುಕುಳ ಅತ್ಯಂತ ಹೇಯವಾದುದು. ಇದರಿಂದ ನಾನು ಮತ್ತು ನನ್ನ ಕುಟುಂಬ ಅನುಭವಿಸಿದ ಮಾನಸಿಕವಾದ ಕಿರುಕುಳವನ್ನು ನಾನೆಂದೂ ಮರೆಯಲಾರೆ' ಎಂದಿದ್ದಾರೆ.

'ನನ್ನ ಸುದೀರ್ಘ ರಾಜಕೀಯ ಜೀವನದಲ್ಲಿ ನಾನು ಸದಾ ಸಂವಿಧಾನ ಮತ್ತು ನೆಲದ ಕಾನೂನಿಗೆ ತಲೆಬಾಗುತ್ತಾ ಬಂದವನು. ಈ ನಂಬಿಕೆಯನ್ನು ಸುಪ್ರೀಂ ಕೋರ್ಟ್ ಉಳಿಸಿ, ಕಾಪಾಡಿದೆ' ಎಂದಿದ್ದಾರೆ.

'ಸುಪ್ರೀಂ ಕೋರ್ಟ್ ಕೈಗೊಂಡ ಕ್ರಮವು, ಕೇಂದ್ರ ಸರ್ಕಾರದ ಕಪಾಳಕ್ಕೆ ನ್ಯಾಯದಂಡ ಬಾರಿಸಿರುವ ತಪರಾಕಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

'ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ಮತ್ತು ನನ್ನ ಕುಟುಂಬದ ವಿರುದ್ಧ ಕಪೋಲಕಲ್ಪಿತ ಆರೋಪಗಳನ್ನು ಮಾಡುತ್ತಾ ಬಂದಿರುವ ರಾಜ್ಯದ ಬಿಜೆಪಿ ಮತ್ತು ಜೆಡಿಎಸ್ ನಾಯಕರಲ್ಲಿ ಕಿಂಚಿತ್ತಾದರೂ ಮಾನ-ಮರ್ಯಾದೆ ಉಳಿದುಕೊಂಡಿದ್ದರೆ ಅವರೆಲ್ಲರೂ ತಕ್ಷಣ ತಮ್ಮ ತಪ್ಪಿಗಾಗಿ ಸಾರ್ವಜನಿಕವಾಗಿ ಕ್ಷಮೆ ಯಾಚಿಸಬೇಕು' ಎಂದು ಆಗ್ರಹಿಸಿದ್ದಾರೆ.

ಅಶೋಕ, ಬಿವೈವಿ ಮುಖಕ್ಕೆ ಮಂಗಳಾರತಿ: ಬೈರತಿ ಸುರೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುಳ್ಳು ಆರೋಪಗಳನ್ನು ಮಾಡಿ ಮುಖ್ಯಮಂತ್ರಿಯವರ ವೈಯಕ್ತಿಕ ತೇಜೋವಧೆ ಮಾಡಲು ಬಿಜೆಪಿ, ಜೆಡಿಎಸ್ ನಾಯಕರು ಷಡ್ಯಂತ್ರ ರೂಪಿಸಿದ್ದರು. ಆ ಮೂಲಕ, ಅವರ ಮುಖಕ್ಕೆ ಮಸಿ ಬಳಿಯಲು ಯತ್ನಿಸಿದ್ದರು. ಅವರ ಪೊಳ್ಳು ಆರೋಪಗಳಿಗೆ ತಕ್ಕ ಶಾಸ್ತಿಯಾಗಿದೆ' ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ ಪ್ರತಿಕ್ರಿಯಿಸಿದರು.

'ಕಪಟ ನಾಟಕದ ಪಾದಯಾತ್ರೆ ಮಾಡಿ ಮುಖಕ್ಕೆ ಮಂಗಳಾರತಿ ಮಾಡಿಸಿಕೊಂಡಿರುವ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಲಿ' ಎಂದೂ ಅವರು ಆಗ್ರಹಿಸಿದರು.

'ವಿರೋಧ ಪಕ್ಷಗಳು ಎಷ್ಟೇ ಟೀಕೆ, ಆರೋಪಗಳನ್ನು ಮಾಡಿದರೂ, ದೇಶದ ನ್ಯಾಯಾಂಗ ಮತ್ತು ಸಂವಿಧಾನದ ಮೇಲೆ ನಂಬಿಕೆ ಇಟ್ಟವರು ನಾವು. ಆ ನಂಬಿಕೆ ನ್ಯಾಯಪರ ಆದೇಶ ಬರುವಂತೆ ಮಾಡಿದೆ. ಈ ಪ್ರಕರಣದಲ್ಲಿ ಇ.ಡಿಯನ್ನು ದುರುದ್ದೇಶದಿಂದ ಬಳಕೆ ಮಾಡಿಕೊಳ್ಳಲಾಗಿದೆ. ಇದೇ ಕಾರಣದಿಂದ ನಮ್ಮದೇನೂ ತಪ್ಪಿಲ್ಲ ಎಂಬುದನ್ನು ಅರಿತಿದ್ದ ಕರ್ನಾಟಕ ಹೈಕೋರ್ಟ್ ಈ ಹಿಂದೆ ಇ.ಡಿ ಸಲ್ಲಿಸಿದ್ದ ಅರ್ಜಿಯನ್ನು ವಜಾ ಮಾಡಿತ್ತು' ಎಂದರು.

ಪ್ರಜಾ ವಾಣಿ
ಪ್ರಜಾಪ್ಲಸ್
ಮನರಂಜನೆ | ಜಾಹೀರಾತು | ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ
ಮಂಗಳವಾರ • ಜುಲೈ 22, 2025

ಕಿರಣ್‌ರಾಜ್‌ಗೆ ಹೃತಿಕಾ ಜೋಡಿ


ಕಿರಣ್ ರಾಜ್

ಗುರುತೇಜ್ ಶೆಟ್ಟಿ ನಿರ್ದೇಶನದ, 'ಕನ್ನಡತಿ' ಖ್ಯಾತಿಯ ಕಿರಣ್ ರಾಜ್ ನಾಯಕರಾಗಿ ನಟಿಸುತ್ತಿರುವ 'ಜಾಕಿ-42' ಸಿನಿಮಾದ ನಾಯಕಿಯಾಗಿ ಹೃತಿಕಾ ಶ್ರೀನಿವಾಸ್ ಆಯ್ಕೆಯಾಗಿದ್ದಾರೆ.

ಚಿತ್ರದಲ್ಲಿ ಮಾಡರ್ನ್ ಹುಡುಗಿಯಾಗಿ ಕಾಣಿಸಿಕೊಳ್ಳಲಿರುವ ಹೃತಿಕಾ ಪಾತ್ರಕ್ಕೆ ಎರಡು ಶೇಡ್‌ಗಳಿವೆ ಎಂದು ಚಿತ್ರತಂಡ ತಿಳಿಸಿದೆ. 'ಆರಾಮ್ ಅರವಿಂದ ಸ್ವಾಮಿ', 'ಔಟ್ ಆಫ್ ಸಿಲಬಸ್', ಯೋಗರಾಜ್ ಭಟ್ ಸಿನಿಮಾಸ್ ಹಾಗೂ ರವಿ ಶಾಮನೂರು ನಿರ್ಮಾಣದ 'ಉಡಾಳ' ಚಿತ್ರದಲ್ಲಿ ನಾಯಕಿಯಾಗಿ ಅಭಿನಯಿಸಿರುವ ಹೃತಿಕಾ, ಸದ್ಯ ತೆಲುಗು ಚಿತ್ರವೊಂದರ ಚಿತ್ರೀಕರಣದಲ್ಲಿ ತೊಡಗಿಸಿಕೊಂಡಿದ್ದಾರೆ. ಅವರು ಸದ್ಯದಲ್ಲೇ 'ಜಾಕಿ-42' ಚಿತ್ರತಂಡ ಸೇರಿಕೊಳ್ಳಲಿದ್ದಾರೆ.

'ಜಾಕಿ-42' ಸಿನಿಮಾದ ಕಥೆ ಕುದುರೆ ರೇಸ್ ಹಿನ್ನೆಲೆಯಲ್ಲಿ ಸಾಗುತ್ತದೆ. ಗೋಲ್ಡನ್ ಗೇಟ್ ಸ್ಟುಡಿಯೊಸ್ ಬ್ಯಾನರ್‌ನಲ್ಲಿ ಭಾರತಿ ಸತ್ಯನಾರಾಯಣ ಈ ಚಿತ್ರ ನಿರ್ಮಿಸುತ್ತಿದ್ದಾರೆ. ತೆಲುಗು ಹಾಗೂ ತಮಿಳಿನ ಜನಪ್ರಿಯ ಚಿತ್ರಗಳಿಗೆ ಸಂಗೀತ ನೀಡಿರುವ ವಿನೋದ್ ಯಜಮಾನಿ ಈ ಸಿನಿಮಾಗೆ ಸಂಗೀತ ನೀಡುತ್ತಿದ್ದಾರೆ. ರಾಘವೇಂದ್ರ ಬಿ. ಕೋಲಾರ್, ಉಮೇಶ್ ಆರ್. ಬಿ., ಸತೀಶ್ ಪೆರ್ಡೂರು ತಂತ್ರಜ್ಞರ ತಂಡದಲ್ಲಿ ಕೆಲಸ ಮಾಡುತ್ತಿದ್ದಾರೆ. ಕನ್ನಡ, ತಮಿಳು ಹಾಗೂ ತೆಲುಗಿನ ಹೆಸರಾಂತ ಕಲಾವಿದರು ತಾರಾಗಣದಲ್ಲಿರಲಿದ್ದಾರೆ. ಈಗಾಗಲೇ ಕುದುರೆ ರೇಸ್‌ನ ಚಿತ್ರೀಕರಣ ಬೆಂಗಳೂರಿನಲ್ಲಿ ನಡೆದಿದೆ. ಸದ್ಯದಲ್ಲೇ ಚಿತ್ರದ ಟೀಸರ್ ಬಿಡುಗಡೆಯಾಗಲಿದೆ ಎಂದು ನಿರ್ದೇಶಕ ಗುರುತೇಜ್ ಶೆಟ್ಟಿ ತಿಳಿಸಿದ್ದಾರೆ.


ಹೃತಿಕಾ



ಕಾಂತಾರಕ್ಕಾಗಿ ಹೊಸ ಲೋಕವೇ ಸೃಷ್ಟಿ

ಈ ವರ್ಷದ ಬಹುನಿರೀಕ್ಷಿತ ಸಿನಿಮಾಗಳಲ್ಲಿ ಒಂದಾದ ನಟ ರಿಷಬ್ ಶೆಟ್ಟಿ ನಟಿಸಿ ನಿರ್ದೇಶಿಸಿರುವ 'ಕಾಂತಾರ' ಸಿನಿಮಾದ ಪ್ರೀಕ್ವೆಲ್‌ನ ಶೂಟಿಂಗ್ ಪೂರ್ಣಗೊಂಡಿದೆ. ಈ ವಿಷಯವನ್ನು ವಿಡಿಯೊವೊಂದರ ಮುಖಾಂತರ ಈ ಚಿತ್ರದ ನಿರ್ಮಾಣ ಸಂಸ್ಥೆ ಹೊಂಬಾಳೆ ಫಿಲ್ಮ್ಸ್ ಅಧಿಕೃತವಾಗಿ ತಿಳಿಸಿದೆ.

ಸಿನಿಮಾದ ಚಿತ್ರೀಕರಣಕ್ಕಾಗಿ ಚಿತ್ರತಂಡ ಹಾಕಿದ ಶ್ರಮ ಮತ್ತು ಇಡೀ ಸಿನಿಮಾದ ಅದ್ದೂರಿತನವನ್ನು ಈ ವಿಡಿಯೊ ತಿಳಿಸಿದೆ. ಸಿನಿಮಾಗಾಗಿ ಹೊಂಬಾಳೆ ಫಿಲ್ಮ್ಸ್ ನೂರಾರು ಕೋಟಿ ವ್ಯಯಿಸಿದೆ. ಅ.2ರಂದು 'ಕಾಂತಾರ ಒಂದು ದಂತಕಥೆ ಅಧ್ಯಾಯ 1' ಬಿಡುಗಡೆಯಾಗುತ್ತಿದ್ದು, ಈ ವಿಡಿಯೊ ಮುಖಾಂತರ 'ಕಾಂತಾರ' ಪ್ರೀಕ್ವೆಲ್‌ನ ಕುತೂಹಲವನ್ನು ರಿಷಬ್ ಶೆಟ್ಟಿ ತಣಿಸಿದ್ದಾರೆ. ಇತ್ತೀಚೆಗೆ ಸಿನಿಮಾದಲ್ಲಿನ ರಿಷಬ್ ಶೆಟ್ಟಿ ಪಾತ್ರದ ಪೋಸ್ಟರ್ ಬಿಡುಗಡೆಗೊಂಡಿತ್ತು.

ಕದಂಬರ ಆಳ್ವಿಕೆಯ ಕಾಲದಲ್ಲಿ ಹುಟ್ಟಿದ ದಂತಕಥೆಯ ಕಥಾಹಂದರ ಹೊಂದಿರುವ ಈ ಸಿನಿಮಾ ಹೀಗಿರಲಿದೆ ಎನ್ನುವ ಸಣ್ಣ ಸುಳಿವನ್ನು ಈ ವಿಡಿಯೊ ಮೂಲಕ ಬಿಚ್ಚಿಡಲಾಗಿದೆ. ಸಿನಿಮಾಗಾಗಿ ಒಂದು ಹೊಸ ಲೋಕವನ್ನೇ ರಿಷಬ್ ಸೃಷ್ಟಿಸಿದ್ದಾರೆ. ವಿಡಿಯೊದಲ್ಲಿ ಆ ಊರಿನ ತುಣುಕುಗಳನ್ನು ತೋರಿಸಿದ್ದಾರೆ. ತನ್ನ ಕನಸು ಸಿನಿಮಾವಾಗಿ ರೂಪುಗೊಂಡ ಬಗೆಯನ್ನು ಇದರಲ್ಲಿ ವಿವರಿಸಿದ್ದಾರೆ.

ಕುಂದಾಪುರ ಬಳಿ 25 ಎಕರೆ ಪ್ರದೇಶದಲ್ಲಿ ಬೃಹತ್ ಸೆಟ್ ಹಾಕಿ ಈ ಸಿನಿಮಾದ ಕಾಲ್ಪನಿಕ ಊರನ್ನು ಸೃಷ್ಟಿಸಲಾಗಿತ್ತು. ಬಹುತೇಕ ಕಾಡಿನಲ್ಲೇ ಈ ಚಿತ್ರದ ಚಿತ್ರೀಕರಣ ನಡೆದಿದೆ. ಸಾವಿರಾರು ಜೂನಿಯರ್ ಆರ್ಟಿಸ್ಟ್‌ಗಳು ಇದರಲ್ಲಿ ಭಾಗಿಯಾಗಿದ್ದಾರೆ. ಕೃತಕವಾಗಿ ಸೃಷ್ಟಿಸಿದ ದೇವಸ್ಥಾನ, ಕಾಡಿನಲ್ಲಿ ವಾಸಿಸುವ ಜನರ ನಂಬಿಕೆ, ಆಚರಣೆ, ಹಳ್ಳಿಯ ಸಂತೆ, ಕೋಟೆ, ಸಾವಿರಾರು ಸೈನಿಕರು, ಯುದ್ಧ, ಬೃಹತ್ ಹಡಗು ಹೀಗೆ ಕನ್ನಡ ಚಿತ್ರರಂಗದಲ್ಲಿ ಹಿಂದೆಂದೂ ಕಾಣಸಿಗದ ಬೃಹತ್ ಲೋಕವನ್ನೇ ಇಲ್ಲಿ ಸೃಷ್ಟಿಸಲಾಗಿದೆ.



ಈ ಸಿನಿಮಾಗಾಗಿ ಹತ್ತು ಕೆ.ಜಿ. ಏರಿಸಿಕೊಂಡು, ಎಂಟು ಕೆ.ಜಿ. ಇಳಿಸಿಕೊಂಡಿದ್ದರು ರಿಷಬ್. ಸಿನಿಮಾದಲ್ಲಿ ಹೆಚ್ಚಿನ ಪ್ರಮಾಣದ ಆ್ಯಕ್ಷನ್ಸ್ ಇದ್ದು, ತಮ್ಮ ಪಾತ್ರಕ್ಕಾಗಿ ರಿಷಬ್ ಭರ್ಜರಿಯಾಗಿಯೇ ತಯಾರಾಗಿದ್ದರು. ಇದರ ತುಣುಕುಗಳೂ ಇಲ್ಲಿವೆ. ಕಳರಿಪಯಟ್ಟು ತರಬೇತಿ, ಜಿಮ್‌ನಲ್ಲಿ ಕಸರತ್ತು ನಡೆಸುತ್ತಿರುವ ರಿಷಬ್ ತಮ್ಮ ಪಾತ್ರಕ್ಕಾಗಿ ತಯಾರಾದ ಬಗೆಯನ್ನು ತೋರಿಸಲಾಗಿದೆ. ಬೇರೆ ಯಾವ ಕಲಾವಿದರಿದ್ದಾರೆ ಎನ್ನುವ ಗುಟ್ಟು ಇಲ್ಲಿ ಬಿಟ್ಟುಕೊಟ್ಟಿಲ್ಲ. ದೈವದ ಮೇಲಿನ ತಮ್ಮ ನಂಬಿಕೆಯನ್ನು ರಿಷಬ್ ಇಲ್ಲಿ ಪ್ರಕಟಿಸಿದ್ದಾರೆ. ದೈವದ ಆಶೀರ್ವಾದವೂ ರಿಷಬ್‌ಗೆ ದೊರಕಿದೆ.


ಚಿತ್ರೀಕರಣದ ಸಂದರ್ಭದಲ್ಲಿ ಎದುರಾದ ಸಮಸ್ಯೆಗಳು, ಅವಘಡಗಳನ್ನು ಉಲ್ಲೇಖಿಸುತ್ತಾ, ತಾನು ನಂಬಿದ ದೈವ ಕೈಬಿಡಲಿಲ್ಲ ಎನ್ನುವುದನ್ನು ರಿಷಬ್ ಉಲ್ಲೇಖಿಸಿದ್ದಾರೆ. ಚಿತ್ರೀಕರಣದ ವೇಳೆ ಸೆಟ್‌ಗೆ ಬೆಂಕಿ ಬಿದ್ದ ಘಟನೆಯನ್ನು ಇಲ್ಲಿ ತೋರಿಸಲಾಗಿದೆ. ಕ್ರೇನ್‌ಗಳನ್ನು ಬಳಸಿ ನಡೆಸಿದ ಸಾಹಸ ದೃಶ್ಯಗಳ ಚಿತ್ರೀಕರಣದ ಗ್ಲಿಮ್ಸ್ ಇಲ್ಲಿದೆ. ತೆಲುಗಿನ ಹಿಟ್ ಸಿನಿಮಾ 'ಆರ್‌ಆರ್‌ಆರ್'ನ ಆ್ಯಕ್ಷನ್ ನಿರ್ದೇಶಕರಾಗಿದ್ದ ಟೊಡರ್ ಲ್ಯಾಜರೋವ್ ಜೊತೆಗೂಡಿ ರಿಷಬ್ ಸಾಹಸ ಸನ್ನಿವೇಶಗಳನ್ನು ರೂಪಿಸುತ್ತಿರುವುದೂ ಸೆರೆಯಾಗಿದೆ. ಚಿತ್ರದಲ್ಲಿ ವಸ್ತ್ರವಿನ್ಯಾಸಕಿಯಾಗಿ ರಿಷಬ್ ಅವರ ಪತ್ನಿ ಪ್ರಗತಿ ರಿಷಬ್ ಶೆಟ್ಟಿ ಅವರೇ ಕಾರ್ಯನಿರ್ವಹಿಸಿದ್ದಾರೆ.

ಮುಖ್ಯವಾಗಿ ಚಿತ್ರದ ಛಾಯಾಚಿತ್ರಗ್ರಾಹಕ ಅರವಿಂದ್ ಕಶ್ಯಪ್ ಇಡೀ ಸಿನಿಮಾವನ್ನು ಹೇಗೆ ಸೆರೆಹಿಡಿದಿದ್ದಾರೆ ಎನ್ನುವುದರ ಸಣ್ಣ ಝಲಕ್ ಈ ವಿಡಿಯೊ ಮುಖಾಂತರ ಬಹಿರಂಗವಾಗಿದೆ. ಸಂಗೀತ ನಿರ್ದೇಶಕ ಬಿ. ಅಜನೀಶ್ ಲೋಕನಾಥ್, ಪ್ರೊಡಕ್ಷನ್ ಡಿಸೈನರ್ ವಿನೇಶ್ ಬಂಗ್ಲನ್ ಇಡೀ ಸಿನಿಮಾಗೆ ಅದ್ಭುತ ದೃಶ್ಯ ಮತ್ತು ಭಾವನಾತ್ಮಕ ಸ್ಪರ್ಶ ನೀಡಿದ್ದಾರೆ. ಭಾರತದ ಗಡಿ ದಾಟಿ ಹೆಜ್ಜೆ ಇಡಲಿರುವ ಈ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಸಾವಿರ ಕೋಟಿ ರೂಪಾಯಿ ಕ್ಲಬ್ ಸೇರುವುದು ನಿಶ್ಚಿತ.

3000ಕ್ಕೂ ಹೆಚ್ಚು ಜೂನಿಯರ್ ಕಲಾವಿದರು ಈ ಸಿನಿಮಾದ ಶೂಟಿಂಗ್‌ನಲ್ಲಿ ಭಾಗವಹಿಸಿದ್ದರು. ಆಸ್ಕರ್ ಪ್ರಶಸ್ತಿಯನ್ನು ಗಮನದಲ್ಲಿಟ್ಟುಕೊಂಡೇ ಈ ಸಿನಿಮಾ ತಯಾರಾಗಿದೆ. ಚಿತ್ರವು ಕನ್ನಡ, ಹಿಂದಿ, ತೆಲುಗು, ಮಲಯಾಳ, ತಮಿಳು, ಬೆಂಗಾಲಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ತೆರೆ ಕಾಣಲಿದೆ. ಪ್ರೀಕ್ವೆಲ್ ಅನ್ನು ಈಗಾಗಲೇ ಪ್ರೈಮ್ ವಿಡಿಯೊ ದೊಡ್ಡ ಮೊತ್ತಕ್ಕೆ ಖರೀದಿಸಿದೆ.

'ಇದು ಕೇವಲ ಸಿನಿಮಾವಲ್ಲ, ಇದೊಂದು ಶಕ್ತಿ'

ವಿಡಿಯೊಗೆ ನೀಡಿದ ಹಿನ್ನೆಲೆ ಧ್ವನಿಯಲ್ಲೇ ತಮ್ಮ ಮನಸ್ಸಿನ ಮಾತನ್ನು ಆಡಿರುವ ರಿಷಬ್ ಶೆಟ್ಟಿ, 'ನನ್ನದೊಂದು ಕನಸು. ನಮ್ಮ ಮಣ್ಣಿನ ಕಥೆಯನ್ನು ಇಡೀ ಪ್ರಪಂಚಕ್ಕೆ ಹೇಳಬೇಕು. ನಮ್ಮ ಊರು, ನಮ್ಮ ಜನ, ನಮ್ಮ ನಂಬಿಕೆಗಳು. ನಾನು ಈ ಕನಸಿನ ಬೆನ್ನುಹತ್ತಲು ಆರಂಭಿಸಿದಾಗ ಸಾವಿರಾರು ಜನ ನನ್ನ ಬೆನ್ನಿಗೆ ನಿಂತರು. ಮೂರು ವರ್ಷಗಳ ಪರಿಶ್ರಮ. ಇನ್ನೂರೈವತ್ತು ದಿನಗಳ ಚಿತ್ರೀಕರಣ. ಎಷ್ಟೇ ಕಷ್ಟಗಳು ಬಂದರೂ ನಾನು ನಂಬಿದ ದೈವ ನನ್ನ ಕೈಬಿಡಲಿಲ್ಲ. ನನ್ನ ಇಡೀ ತಂಡ, ನನ್ನ ನಿರ್ಮಾಪಕರು ಬೆನ್ನೆಲುಬಾಗಿ ನಿಂತರು. ಪ್ರತಿ ದಿನ ಸೆಟ್‌ನಲ್ಲಿ ಸಾವಿರಾರು ಜನರನ್ನು ನೋಡುತ್ತಿರುವಾಗ ನನ್ನನ್ನು ಕಾಡುತ್ತಿದ್ದ ವಿಷಯ ಒಂದೇ. ಇದು ಕೇವಲ ಸಿನಿಮಾವಲ್ಲ. ಇದೊಂದು ಶಕ್ತಿ' ಎಂದಿದ್ದಾರೆ.



ಚಿಟಿಕೆ ಸುದ್ದಿ

27ರಂದು ಚೆಸ್ ಟೂರ್ನಿ



ಬೆಂಗಳೂರು: ಚಾಂಪಿಯನ್ಸ್ ಚೆಸ್ ಅಕಾಡೆಮಿಯು ಇದೇ 27ರಂದು ರಾಜರಾಜೇಶ್ವರಿನಗರದ ಕೃಷ್ಣಾ ಗಾರ್ಡನ್‌ನಲ್ಲಿ ಚೆಸ್ ಟೂರ್ನಿಯನ್ನು ಆಯೋಜಿಸಿದೆ. 16 ವರ್ಷದೊಳಗಿನವರ ಮತ್ತು 10 ವರ್ಷದೊಳಗಿನವರ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ.

ಸ್ಪರ್ಧಿಗಳು ಜುಲೈ 25ರ (ಶುಕ್ರವಾರ) ಒಳಗೆ ಹೆಸರು ನೋಂದಾಯಿಸಿಕೊಳ್ಳಬೇಕು. ವಿವರಗಳಿಗೆ ಬಾಲಕೃಷ್ಣ ಪ್ರಭು (ಮೊ: 98454 66416) ಅವರನ್ನು ಸಂಪರ್ಕಿಸಬಹುದು. www.championschessacademy.com ಮೂಲಕವೂ ನೋಂದಾಯಿಸಬಹುದು.

ಡಬ್ಲ್ಯುಸಿಎಲ್: ಭಾರತ-ಪಾಕ್ ಪಂದ್ಯ ರದ್ದು

ಬರ್ಮಿಂಗ್‌ಹ್ಯಾಮ್ (ಪಿಟಿಐ): ವಿಶ್ವ ಲೆಜೆಂಡ್ಸ್ ಚಾಂಪಿಯನ್‌ಷಿಪ್ (ಡಬ್ಲ್ಯುಸಿಎಲ್) ಟೂರ್ನಿಯಲ್ಲಿ ಭಾನುವಾರ ನಡೆಯಬೇಕಿದ್ದ ಭಾರತ– ಪಾಕಿಸ್ತಾನ ನಡುವಿನ ಪಂದ್ಯವನ್ನು ರದ್ದುಗೊಳಿಸಲಾಗಿದೆ.

ಭಾರತ ಲೆಜೆಂಡ್ಸ್ ತಂಡದ ಕೆಲ ಆಟಗಾರರು ಪಾಕಿಸ್ತಾನದ ಜೊತೆಗೆ ಆಡಲು ಹಿಂದೇಟು ಹಾಕಿದ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಡಬ್ಲ್ಯುಸಿಎಲ್ ಆಯೋಜಕರು ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ.

ಪಹಲ್ಗಾಮ್ ದಾಳಿ ಹಾಗೂ ಇತ್ತೀಚೆಗೆ ಉಭಯ ದೇಶಗಳ ನಡುವೆ ಬಿಕ್ಕಟ್ಟು ಉಂಟಾಗಿರುವ ಹಿನ್ನೆಲೆಯಲ್ಲಿ ಶಿಖರ್ ಧವನ್ ಸೇರಿದಂತೆ ಭಾರತ ತಂಡದ ಆಟಗಾರರು ಪಾಕ್ ಜೊತೆ ಪಂದ್ಯವಾಡಲು ನಿರಾಕರಿಸಿದ್ದರು.

ಜಪಾನ್‌ಗೆ ಮಣಿದ ಭಾರತ ಮಿಶ್ರ ತಂಡ

ಸೊಲೊ (ಇಂಡೊನೇಷ್ಯಾ) (ಪಿಟಿಐ): ಬ್ಯಾಡ್ಮಿಂಟನ್ ಏಷ್ಯಾ ಜೂನಿಯರ್ ಮಿಶ್ರ ತಂಡ ಚಾಂಪಿಯನ್‌ಷಿಪ್‌ನಲ್ಲಿ ಕ್ವಾರ್ಟರ್‌ಫೈನಲ್‌ನಲ್ಲಿ ಭಾರತ ತಂಡ ಸೋಮವಾರ ವೀರೋಚಿತ ಹೋರಾಟ ನೀಡಿದರೂ ಅಂತಿಮವಾಗಿ ಜಪಾನ್ ಎದುರು 104–110 ರಿಂದ ಸೋಲೊಪ್ಪಿಕೊಂಡಿತು.

ರಿಲೇ ಸ್ಕೋರಿಂಗ್ ಮಾದರಿಯಲ್ಲಿ ನಡೆಯುವ ಈ ಪಂದ್ಯದ ಬಹುತೇಕ ಸಮಯ ಭಾರತ ಮುನ್ನಡೆಯಲ್ಲಿತ್ತು. ಆದರೆ, 2023ರ ಚಾಂಪಿಯನ್ ತಂಡವಾದ ಜಪಾನ್ ಕೊನೆಯ ಐದು ಪಂದ್ಯಗಳನ್ನು ಸತತವಾಗಿ ಜಯಿಸಿ ಮುನ್ನಡೆ ಸಾಧಿಸುವಲ್ಲಿ ಯಶಸ್ವಿಯಾಯಿತು.

ಭಾರತ 'ಡಿ' ಗುಂಪಿನಲ್ಲಿ ಅಗ್ರಸ್ಥಾನ ಗಳಿಸಿ ಕ್ವಾರ್ಟರ್‌ಫೈನಲ್‌ಗೆ ಅರ್ಹತೆ ಪಡೆದಿತ್ತು. ಜುಲೈ 23 ರಿಂದ ವೈಯಕ್ತಿಕ ಚಾಂಪಿಯನ್‌ಷಿಪ್ ನಡೆಯಲಿದೆ.

ಸೆಮಿಗೆ ಮುನ್ನಡೆದ ದಿವ್ಯಾ ದೇಶಮುಖ್

ಚೆಸ್ ಮಹಿಳಾ ವಿಶ್ವಕಪ್: ನಾಲ್ಕರ ಘಟ್ಟಕ್ಕೆ ಭಾರತದ ಇಬ್ಬರು ಆಟಗಾರ್ತಿಯರು

ಬಟುಮಿ (ಪಿಟಿಐ): ಭಾರತದ ಇಂಟರ್‌ನ್ಯಾಷನಲ್ ಮಾಸ್ಟರ್ ದಿವ್ಯಾ ದೇಶಮುಖ್ ಅವರು ರ್‍ಯಾಪಿಡ್ ಟೈಬ್ರೇಕರ್‌ನಲ್ಲಿ ಸ್ವದೇಶದ ಗ್ರ್ಯಾಂಡ್‌ಮಾಸ್ಟರ್ ದ್ರೋಣವಲ್ಲಿ ಹಾರಿಕಾ ಅವರನ್ನು ಅಚ್ಚರಿ ರೀತಿಯಲ್ಲಿ 2–0 ಯಿಂದ ಸೋಲಿಸಿ ಫಿಡೆ ಮಹಿಳಾ ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ಗೆ ಮುನ್ನಡೆದರು.

ಇವರಿಬ್ಬರ ನಡುವಣ ಎರಡೂ ಕ್ಲಾಸಿಕಲ್ ಪಂದ್ಯಗಳು 'ಡ್ರಾ' ಆಗಿದ್ದರಿಂದ ಸೋಮವಾರ ನಿಯಮದಂತೆ ಅಲ್ಪಾವಧಿಯ ಟೈಬ್ರೇಕ್ ಪಂದ್ಯಗಳನ್ನು ಆಡಿಸಲಾಯಿತು. ದಿವ್ಯಾ ಎರಡೂ ಆಟಗಳಲ್ಲಿ ಅನುಭವಿ ಆಟಗಾರ್ತಿಯ ಎದುರು ಜಯಗಳಿಸಿದರು. ಭಾರತದ ಅಗ್ರ ಆಟಗಾರ್ತಿ ಕೋನೇರು ಹಂಪಿ ಕ್ವಾರ್ಟರ್‌ಫೈನಲ್‌ನಲ್ಲಿ ಚೀನಾದ ಯುಕ್ಸಿನ್ ಸಾಂಗ್ ಅವರನ್ನು 1.5–0.5 ರಿಂದ ಸೋಲಿಸಿ ಭಾನುವಾರವೇ ಅಂತಿಮ ನಾಲ್ಕರ ಸುತ್ತು ತಲುಪಿದ್ದರು.

ಇದರಿಂದ ಸೆಮಿಫೈನಲ್‌ನಲ್ಲಿ ಭಾರತದ ಮತ್ತು ಚೀನಾದ ತಲಾ ಇಬ್ಬರು ಸೆಮಿಫೈನಲ್ ತಲುಪಿದಂತಾಗಿದೆ.

ವಿಶ್ವಕಪ್‌ನಲ್ಲಿ ಮೊದಲ ಮೂರು ಸ್ಥಾನ ಪಡೆದವರು ಮುಂದಿನ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಆಡುವ ಅವಕಾಶ ಪಡೆಯಲಿದ್ದಾರೆ. ಕ್ಯಾಂಡಿಡೇಟ್ಸ್ ಟೂರ್ನಿಯ ವಿಜೇತ ಆಟಗಾರ್ತಿಯು ಹಾಲಿ ವಿಶ್ವ ಚಾಂಪಿಯನ್‌ಗೆ (ಈಗ ಚೀನಾದ ಜು ವೆನ್ಜುನ್ ಅವರಿಗೆ) ಚಾಲೆಂಜರ್ ಆಗಲಿದ್ದಾರೆ.


ದಿವ್ಯಾ ದೇಶಮುಖ್

ನಾಲ್ಕನೇ ಶ್ರೇಯಾಂಕದ ಹಂಪಿ, ಸೆಮಿಫೈನಲ್‌ನಲ್ಲಿ ಚೀನಾದ ಗ್ರ್ಯಾಂಡ್ ಮಾಸ್ಟರ್, ಅಗ್ರ ಶ್ರೇಯಾಂಕದ ಟಿಂಗ್ಜೀ ಲೀ ಅವರನ್ನು ಎದುರಿಸಲಿದ್ದಾರೆ. ನಾಗ್ಪುರದ 19 ವರ್ಷ ವಯಸ್ಸಿನ ದಿವ್ಯಾ ಇನ್ನೊಂದು ಸೆಮಿಫೈನಲ್‌ನಲ್ಲಿ ಮೂರನೇ ಶ್ರೇಯಾಂಕದ ತಾನ್ ಝೊಂಗ್ವಿ ಅವರ ವಿರುದ್ಧ ಸೆಣಸಾಡಲಿದ್ದಾರೆ.

ಚೆಸ್ ವಿಶ್ವಕಪ್‌ಗೆ ಭಾರತ ಆತಿಥ್ಯ

ನವದೆಹಲಿ (ಪಿಟಿಐ): ಭಾರತವು ಈ ವರ್ಷದ ಚೆಸ್ ವಿಶ್ವಕಪ್ ಟೂರ್ನಿಯ ಆತಿಥ್ಯ ವಹಿಸಲಿದೆ. ಅಕ್ಟೋಬರ್ 30 ರಿಂದ ನವೆಂಬರ್ 27ರವರೆಗೆ ನಿಗದಿಯಾಗಿರುವ ಈ ಟೂರ್ನಿಯ ನಡೆಯುವ ಸ್ಥಳವನ್ನು ಸದ್ಯದಲ್ಲೇ ನಿರ್ಧರಿಸಲಾಗುವುದು ಎಂದು ವಿಶ್ವ ಚೆಸ್ ಸಂಸ್ಥೆಯಾದ 'ಫಿಡೆ' ಸೋಮವಾರ ಪ್ರಕಟಿಸಿದೆ.

ಈ ಟೂರ್ನಿಯಲ್ಲಿ 206 ಆಟಗಾರರು ಭಾಗವಹಿಸುತ್ತಿದ್ದು, ಪ್ರತಿಷ್ಠಿತ ಪ್ರಶಸ್ತಿಯ ಜೊತೆಗೆ ಮೊದಲ ಮೂರು ಸ್ಥಾನ ಪಡೆದವರು 2026ರ ಫಿಡೆ ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹತೆ ಪಡೆಯಲಿದ್ದಾರೆ.

ಟೂರ್ನಿಯು ನಾಕೌಟ್ ಮಾದರಿಯಲ್ಲಿ ನಡೆಯಲಿದ್ದು, ಸೋಲುವ ಆಟಗಾರ ಹೊರಬೀಳಲಿದ್ದಾರೆ. ಟೂರ್ನಿಯ ವಿವಿಧ ಮಾದರಿಗಳಲ್ಲಿ ನಡೆದಿದ್ದು, 2021ರಿಂದ ಸಿಂಗಲ್ ಎಲಿಮಿನೇಷನ್ ಮಾದರಿ ಅನುಸರಿಲಾಗುತ್ತಿದೆ. ಪ್ರತಿಯೊಂದು ಸುತ್ತು ಮೂರು ದಿನ ನಡೆಯಲಿದ್ದು, ಎರಡು ದಿನ ಒಂದೊಂದು ಕ್ಲಾಸಿಕಲ್ ಮಾದರಿಯ ಪಂದ್ಯಗಳು ನಡೆಯಲಿವೆ. ಸ್ಕೋರ್ ಸಮನಾದ ಪಕ್ಷದಲ್ಲಿ ಮೂರನೇ ದಿನವನ್ನು ಟೈಬ್ರೇಕ್ ಪಂದ್ಯಗಳಿಗೆ ಮೀಸಲಿಡಲಾಗಿದೆ ಎಂದು ಫಿಡೆ ತಿಳಿಸಿದೆ.

ಭಾರತ 2002ರಲ್ಲಿ ಕೊನೆಯ ಬಾರಿ ಚೆಸ್ ವಿಶ್ವಕಪ್‌ನ ಆತಿಥ್ಯ ವಹಿಸಿದ್ದಾಗ ಹೈದರಾಬಾದಿನಲ್ಲಿ ಟೂರ್ನಿ ನಡೆದಿತ್ತು. ವಿಶ್ವನಾಥನ್ ಆನಂದ್ ಆ ವರ್ಷ ಪ್ರಶಸ್ತಿ ಗೆದ್ದುಕೊಂಡಿದ್ದರು.

ಅಗ್ರ 50 ಮಂದಿ ಆಟಗಾರರು ಮೊದಲ ಸುತ್ತಿನಲ್ಲಿ ಬೈ ಪಡೆದಿದ್ದಾರೆ. ಇಲ್ಲಿಂದ ಮೊದಲ ಮೂರು ಸ್ಥಾನ ಪಡೆದವರು ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಪಡೆಯಲಿದ್ದಾರೆ. ಕ್ಯಾಂಡಿಡೇಟ್ಸ್ ಟೂರ್ನಿಯ ವಿಜೇತರು ವಿಶ್ವ ಚಾಂಪಿಯನ್‌ಗೆ ಚಾಲೆಂಜರ್ ಆಗಲಿದ್ದಾರೆ.

ಹಾಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್, 2023ರ ರನ್ನರ್ ಅಪ್ ಪ್ರಜ್ಞಾನಂದ, ವಿಶ್ವದ ಐದನೇ ಕ್ರಮಾಂಕದ ಆಟಗಾರ ಅರ್ಜುನ್ ಇರಿಗೇಶಿ ಸೇರಿದಂತೆ ದೇಶದ ಅಗ್ರ ಆಟಗಾರರು ಕಣಕ್ಕಿಳಿಯುವರು. ಈ ಹಿಂದಿನ ಆವೃತ್ತಿಯ ಚಾಂಪಿಯನ್, ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಸಹ ಕಣಕ್ಕಿಳಿಯಲಿದ್ದಾರೆ.

ಅರೋನಿಯನ್‌ಗೆ ಫ್ರೀಸ್ಟೈಲ್ ಚೆಸ್ ಕಿರೀಟ

ಲಾಸ್ ವೇಗಸ್ (ಪಿಟಿಐ): ಅಮೆರಿಕದ ಲೆವೋನ್ ಅರೋನಿಯನ್ ಅವರು ಆತಂಕದ ಕ್ಷಣಗಳನ್ನು ಕಂಡರೂ, ಸ್ವದೇಶದ ಹ್ಯಾನ್ಸ್ ನೀಮನ್ ಅವರನ್ನು ಸೋಲಿಸಿ, ಭಾನುವಾರ ಮುಕ್ತಾಯಗೊಂಡ ಫ್ರೀಸ್ಟೈಲ್ ಚೆಸ್ ಗ್ರ್ಯಾನ್‌ಸ್ಲಾಮ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಭಾರತದ ಅರ್ಜುನ್ ಇರಿಗೇಶಿ ಟೂರ್ನಿಯಲ್ಲಿ ಆರನೇ ಸ್ಥಾನ ಪಡೆದರೆ, ಪ್ರಜ್ಞಾನಂದ ಅವರು ಏಳನೇ ಸ್ಥಾನ ಗಳಿಸಿದರು.

ಅರೋನಿಯನ್ 1.5–0.5 ರಿಂದ ನೀಮನ್ ವಿರುದ್ಧ ಜಯಗಳಿಸಿ ಪ್ರಶಸ್ತಿ ಜೊತೆ ₹1.72 ಕೋಟಿ ಬಹುಮಾನ ಮೊತ್ತ ಜೇಬಿಗಿಳಿಸಿಕೊಂಡರು.

ವಿಶ್ವದ ಅಗ್ರ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ (ನಾರ್ವೆ) ಪ್ಲೇ ಆಫ್ ಪಂದ್ಯದಲ್ಲಿ 1.5–0.5 ರಿಂದ ಅಮೆರಿಕದ ಹಿಕಾರು ನಕಾಮುರ ಅವರನ್ನು ಮಣಿಸಿ ಮೂರನೇ ಸ್ಥಾನ ಪಡೆದರು. ಐದು ಮತ್ತು ಆರನೇ ಸ್ಥಾನ ನಿರ್ಧಾರಕ್ಕೆ ನಡೆದ ಪಂದ್ಯದಲ್ಲಿ ಅರ್ಜುನ್ 0–2 ರಿಂದ ಅಮೆರಿಕದ ಫ್ಯಾಬಿಯಾನೊ ಕರುವಾನ ಅವರಿಗೆ ಮಣಿದರು. ಅರ್ಜುನ್ ₹34.5 ಲಕ್ಷ ಬಹುಮಾನ ತಮ್ಮದಾಗಿಸಿಕೊಂಡರು.


ಅರೋನಿಯನ್ 'ಎಕ್ಸ್' ಚಿತ್ರ

ಏಳು– ಎಂಟನೇ ಸ್ಥಾನ ನಿರ್ಧರಿಸಲು ನಡೆದ ಪಂದ್ಯದಲ್ಲಿ ಪ್ರಜ್ಞಾನಂದ ಅವರು 1.5–0.5 ರಿಂದ ಅಮೆರಿಕದ ವೆಸ್ಲಿ ಸೊ ಅವರನ್ನು ಸೋಲಿಸಿದರು. ಪ್ರಜ್ಞಾನಂದ ಅವರು ಸುಮಾರು ₹26 ಲಕ್ಷ ಬಹುಮಾನ ಪಡೆದರು.

ಅರ್ಜುನ್ ಮತ್ತು ಪ್ರಜ್ಞಾನಂದ ಅವರು ಇಲ್ಲಿಂದ ಸೌದಿ ಅರೇಬಿಯಾದ ರಿಯಾದ್‌ಗೆ ತೆರಳುವರು. ಅಲ್ಲಿ ಕೆಲವೇ ದಿನಗಳಲ್ಲಿ ಇ-ಸ್ಪೋರ್ಟ್ಸ್ ವಿಶ್ವಕಪ್ ನಡೆಯಲಿದೆ. ಈ ಟೂರ್ನಿಯ ನಂತರ ಅರ್ಜುನ್ ಅವರು ಆಗಸ್ಟ್‌ನಲ್ಲಿ ನಡೆಯಲಿರುವ ಚೆನ್ನೈ ಗ್ರ್ಯಾಂಡ್ ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಆಡುವರು. ಪ್ರಜ್ಞಾನಂದ ಅವರು ಅಮೆರಿಕದಲ್ಲಿ ನಡೆಯಲಿರುವ ಗ್ರ್ಯಾಂಡ್ ಚೆಸ್ ಟೂರ್‌ನ ಎರಡು ಟೂರ್ನಿಗಳಲ್ಲಿ ಆಡಲಿದ್ದಾರೆ.

ಚೀನಾ ಓಪನ್ ಇಂದಿನಿಂದ

ಚಾಂಗ್‌ಝೌ (ಪಿಟಿಐ): ಭಾರತದ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ, ಮಂಗಳವಾರ ಆರಂಭವಾಗುವ ಚೀನಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡುವ ವಿಶ್ವಾಸದಲ್ಲಿದ್ದಾರೆ.

ಆ.25ರಿಂದ 31ರವರೆಗೆ ಪ್ಯಾರಿಸ್‌ನಲ್ಲಿ ನಡೆಯಲಿರುವ ವಿಶ್ವ ಚಾಂಪಿಯನ್‌ಷಿಪ್‌ನ ಪೂರ್ವಾಭ್ಯಾಸಕ್ಕೆ ಈ ಟೂರ್ನಿಯು ವೇದಿಕೆಯಾಗಿದೆ. ಸಾತ್ವಿಕ್–ಚಿರಾಗ್ ಅವರು ಜಪಾನ್‌ನ ಕೀನ್ಯಾ ಮಿತ್ಸುಹಾಶಿ ಮತ್ತು ಹಿರೋಕಿ ಒಕಮುರಾ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ. ಒಟ್ಟು ₹17.25 ಕೋಟಿ ಬಹುಮಾನ ಮೊತ್ತವನ್ನು ಒಳಗೊಂಡಿರುವ ಈ ಟೂರ್ನಿಯ ಸಿಂಗಲ್ಸ್‌ನಲ್ಲಿ ಭಾರತದ ತಾರೆಯರಾದ ಲಕ್ಷ್ಯ ಸೇನ್, ಎಚ್.ಎಸ್.ಪ್ರಣಯ್ ಮತ್ತು ಪಿ.ವಿ.ಸಿಂಧು ಕಣಕ್ಕೆ ಇಳಿಯಲಿದ್ದಾರೆ.

ಯುವ ಕ್ರಿಕೆಟ್: ಏಕಾಂಶ್ ಶತಕ

ಚೆಮ್ಸ್‌ಫೋರ್ಡ್ (ಬ್ರಿಟನ್) (ಪಿಟಿಐ): ಏಕಾಂಶ್ ಸಿಂಗ್ ಅವರ ಶತಕದ (117ರನ್; 155 ಎ, 4x14, 3x6) ನೆರವಿನಿಂದ ಇಂಗ್ಲೆಂಡ್ ಯುವ ತಂಡವು (19 ವರ್ಷದೊಳಗಿನವರ) ಭಾರತದ ಎದುರಿನ ಮೊದಲ 'ಟೆಸ್ಟ್'ನ ಪ್ರಥಮ ಇನಿಂಗ್ಸ್‌ನಲ್ಲಿ ಗೌರವದ ಮೊತ್ತ ದಾಖಲಿಸಿತು.

ಮಳೆಯಿಂದಾಗಿ ಎರಡನೇ ದಿನದಾಟದಲ್ಲಿ ಕೇವಲ 28.3 ಓವರ್‌ಗಳ ಆಟ ನಡೆಯಿತು. ಇಂಗ್ಲೆಂಡ್ ತಂಡ 81.3 ಓವರ್‌ಗಳಲ್ಲಿ 309 ರನ್‌ಗಳಿಗೆ ಆಲೌಟ್ ಆಯಿತು. ಇನಿಂಗ್ಸ್ ಆರಂಭಿಸಿದ ಭಾರತ, ದಿನದಂತ್ಯಕ್ಕೆ ಒಂದು ವಿಕೆಟ್ ನಷ್ಟಕ್ಕೆ 51ರನ್ ಗಳಿಸಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್ ಯುವ ತಂಡ: 81.3 ಓವರ್‌ಗಳಲ್ಲಿ 309(ಏಕಾಂಶ್ ಸಿಂಗ್ 117, ಜೇಮ್ಸ್ ಮಿಂಟೊ 46; ನಮನ್ ಪುಷ್ಪಕ್ 4ಕ್ಕೆ76) ಭಾರತ ಯುವ ತಂಡ: 9 ಓವರ್‌ಗಳಲ್ಲಿ 1 ವಿಕೆಟ್‌ಗೆ 51(ಆಯುಶ್ ಮ್ಹಾತ್ರೆ ಔಟಾಗದೇ 24; ಅಲೆಕ್ಸ್ ಗ್ರೀನ್ 1ಕ್ಕೆ34)

ಜಾಗತಿಕ ವಿವಿ ಕ್ರೀಡಾಕೂಟ: ಮಿಶ್ರ ಬ್ಯಾಡ್ಮಿಂಟನ್ ತಂಡಕ್ಕೆ ಕಂಚು

ಆಡಳಿತಾತ್ಮಕ ಲೋಪ: 6 ಮಂದಿಗೆ ನಿರ್ಬಂಧ

ನವದೆಹಲಿ (ಪಿಟಿಐ): ಜರ್ಮನಿಯಲ್ಲಿ ನಡೆಯುತ್ತಿರುವ ವಿಶ್ವ ಯೂನಿವರ್ಸಿಟಿ ಕ್ರೀಡಾಕೂಟದಲ್ಲಿ ಕಂಚಿನ ಪದಕ ಗೆದ್ದ ಭಾರತದ ಮಿಶ್ರ ಬ್ಯಾಡ್ಮಿಂಟನ್ ತಂಡದಲ್ಲಿದ್ದ 12 ಆಟಗಾರರಲ್ಲಿ ಆರು ಮಂದಿಯ ಮೇಲೆ ಆಡಳಿತಾತ್ಮಕ ಲೋಪಗಳಿಂದ ನಿರ್ಬಂಧ ಹೇರಲಾಗಿದೆ.

ಈ ಕೂಟದಲ್ಲಿ ಭಾರತವನ್ನು ಪ್ರತಿನಿಧಿಸಲು ಹನ್ನೆರಡು ಬ್ಯಾಡ್ಮಿಂಟನ್ ಆಟಗಾರರನ್ನು ಆಯ್ಕೆ ಮಾಡಿ ಕಳುಹಿಸಲಾಗಿತ್ತು. ಆದರೆ, ಜುಲೈ 16ರಂದು ನಡೆದ ಮ್ಯಾನೇಜರ್‌ಗಳ ಸಭೆಯಲ್ಲಿ ಅಧಿಕಾರಿಗಳು ಈ ಎಲ್ಲಾ 12 ಆಟಗಾರರ ಮಾಹಿತಿ ಸರಿಯಾಗಿ ಸಲ್ಲಿಸದ ಕಾರಣ, ಕೇವಲ ಆರು ಮಂದಿಗೆ ಮಾತ್ರ ಸ್ಪರ್ಧಿಸಲು ಅವಕಾಶ ನೀಡಲಾಗಿದೆ.

'ಇದು ಕೇವಲ ಲೋಪವಲ್ಲ. ಇದರಿಂದ ಆಟಗಾರರ ವೃತ್ತಿಜೀವನವನ್ನೇ ಹಾಳು ಮಾಡಿದಂತಾಗಿದೆ. ಇದಕ್ಕೆ ಉತ್ತರದಾಯಿತ್ವ ಇರಬೇಕು ಮತ್ತು ನಮ್ಮ ಮಾತನ್ನೂ ಆಲಿಸುವ ಅವಕಾಶ ನೀಡಬೇಕು. ನಾವು ಸ್ಪರ್ಧೆಯಲ್ಲಿ ಭಾಗವಹಿಸುವ ಹಕ್ಕನ್ನು ಕಳೆದುಕೊಂಡಿದ್ದೇವೆ' ಎಂದು ನಿರ್ಬಂಧಕ್ಕೆ ಒಳಗಾದ ಆಟಗಾರ್ತಿಯರಲ್ಲಿ ಒಬ್ಬರಾದ ಅಲಿಶಾ ಖಾನ್ ಅವರು ಇನ್‌ಸ್ಟಾಗ್ರಾಂನಲ್ಲಿ ಆಕ್ರೋಶ ಹೊರಹಾಕಿದ್ದಾರೆ.

ದೇಶದಲ್ಲಿ ವಿಶ್ವವಿದ್ಯಾಲಯ ಮಟ್ಟದ ಕ್ರೀಡೆಗಳಿಗೆ ನೋಡಲ್ ಸಂಸ್ಥೆಯಾಗಿರುವ ಭಾರತದ ವಿಶ್ವವಿದ್ಯಾಲಯಗಳ ಸಂಘ (ಎಐಯು) ಆಡಳಿತಾತ್ಮಕ ಲೋಪ ಒಪ್ಪಿಕೊಂಡಿದೆ ಎಂದು ಮೂಲಗಳು ತಿಳಿಸಿವೆ.

'ಈ ಬಗ್ಗೆ ನಮಗೆ ಮಾಹಿತಿ ಬಂದಿದ್ದು, ತನಿಖೆ ಮಾಡಲಾಗುತ್ತಿದೆ' ಎಂದು ಎಐಯು ಕಾರ್ಯದರ್ಶಿ ಡಾ.ಪಂಕಜ್ ಮಿತ್ತಲ್ ಪಿಟಿಐಗೆ ತಿಳಿಸಿದರು. ಆದರೆ ಹೆಚ್ಚಿನ ಮಾಹಿತಿ ನೀಡಲು ನೀಡಲು ನಿರಾಕರಿಸಿದರು.


ಜರ್ಮನಿಯಲ್ಲಿ ನಡೆದ ವಿಶ್ವ ಯೂನಿವರ್ಸಿಟಿ ಕ್ರೀಡಾಕೂಟದಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಬ್ಯಾಡ್ಮಿಂಟನ್ ಸ್ಪರ್ಧಿಗಳು ಇನ್‌ಸ್ಟಾಗ್ರಾಮ್ ಚಿತ್ರ

ಈ ಕೂಟಕ್ಕೆ ಭುವನೇಶ್ವರದ ಕಳಿಂಗ ಕೈಗಾರಿಕಾ ತಾಂತ್ರಿಕ ಸಂಸ್ಥೆಯಲ್ಲಿ ನಡೆದ ಆಯ್ಕೆ ಟ್ರಯಲ್ಸ್ ವೇಳೆಯೇ ವ್ಯವಸ್ಥಿತವಾಗಿ ಅಕ್ರಮ ನಡೆದಿದೆ ಎಂದು ಮೂಲಗಳು ತಿಳಿಸಿವೆ. ಮ್ಯಾನೇಜರ್‌ಗಳ ಸಭೆಯಲ್ಲಿ 12 ಮಂದಿಯ ಹೆಸರುಗಳನ್ನು ಓದಲಾಗಿದೆ. ಆದರೆ ಈ ವೇಳೆ ಎಚ್ಚರಿಕೆ ವಹಿಸಲಾಗಿರಲಿಲ್ಲ. ಇದರಲ್ಲಿ ಗಾಯಾಳುಗಳು, ಅಲಭ್ಯರಾದವರ ಹೆಸರುಗಳು ಸೇರಿದ್ದವು ಎಂದು ಹೇಳಿವೆ.

ಸನೀತ್ ದಯಾನಂದ್, ಸತೀಶ್ ಕುಮಾರ್ ಕರುಣಾಕರನ್, ದೇವಿಕಾ ಸಿಹಾಗ್, ತಸ್ನಿಮ್ ಮಿರ್, ವರ್ಷಿಣಿ ವಿಶ್ವನಾಥ್ ಮತ್ತು ವೈಷ್ಣವಿ ಖಡ್ಕೇಕರ್ ಅವರು ಮಿಶ್ರ ತಂಡದಲ್ಲಿ ಸ್ಪರ್ಧಿಸಿದ ಆರು ಆಟಗಾರರು. ರೋಹನ್ ಕುಮಾರ್, ದರ್ಶನ್ ಪೂಜಾರಿ, ಅದಿತಿ ಭಟ್, ಅಭಿನಾಶ್ ಮೊಹಾಂತಿ, ವಿರಾಜ್ ಕೆ. ಮತ್ತು ಅಲಿಶಾ ಖಾನ್ ಅವರು 12 ಮಂದಿಯ ತಂಡದಲ್ಲಿದ್ದರು. ಆದರೆ, ಅವರಿಗೆ ಆಡಲು ಸಾಧ್ಯವಾಗಲಿಲ್ಲ.

ಭಾರತ ಮಿಶ್ರ ತಂಡವು ಗುಂಪು ಹಂತದಲ್ಲಿ ಮಕಾವು ವಿರುದ್ಧ ಗೆದ್ದರೆ, ಹಾಂಗ್‌ಕಾಂಗ್ ವಿರುದ್ಧ ಸೋತಿತ್ತು. ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಅಮೆರಿಕ ವಿರುದ್ಧ; ಕ್ವಾರ್ಟರ್ ಫೈನಲ್‌ನಲ್ಲಿ ಮಲೇಷ್ಯಾ ವಿರುದ್ಧ ಗೆಲುವು ಸಾಧಿಸಿತ್ತು. ಆದರೆ, ಸೆಮಿಫೈನಲ್‌ನಲ್ಲಿ ಚೀನಾ ತೈಪೆ ವಿರುದ್ಧ ಸೋತು ಕಂಚಿನ ಪದಕ ತನ್ನದಾಗಿಸಿಕೊಂಡಿತ್ತು.

ದ್ವಿಸ್ತರ ಟೆಸ್ಟ್ ಕ್ರಿಕೆಟ್ ಪರಿಶೀಲನೆಗೆ ಸಮಿತಿ

ಲಂಡನ್ (ಪಿಟಿಐ): ಟೆಸ್ಟ್ ಕ್ರಿಕೆಟ್‌ನಲ್ಲಿ ದ್ವಿಸ್ತರ ವ್ಯವಸ್ಥೆ ರೂಪಿಸುವುದಕ್ಕೆ ಸಂಬಂಧಿಸಿ ಸಾಧ್ಯತೆ ಪರಿಶೀಲಿಸಲು ಐಸಿಸಿಯು ತನ್ನ ಸಿಇಒ ಸಂಜೋಗ್ ಗುಪ್ತಾ ನೇತೃತ್ವದಲ್ಲಿ ಎಂಟು ಮಂದಿ ಸದಸ್ಯರ ಸಮಿತಿಯನ್ನು ರಚಿಸಿದೆ.

ಸಿಂಗಪುರದಲ್ಲಿ ನಡೆದ ಐಸಿಸಿಯ ವಾರ್ಷಿಕ ಮಹಾಸಭೆಯಲ್ಲಿ ಈ ಸಮಿತಿ ರಚಿಸಲಾಯಿತು. ಜಯ್ ಶಾ ಅಧ್ಯಕ್ಷತೆಯ ಐಸಿಸಿಗೆ ಈ ತಿಂಗಳ ಆರಂಭದಲ್ಲಿ ಗುಪ್ತಾ ಸಿಇಒ ಆಗಿ ನೇಮಕಗೊಂಡಿದ್ದರು.

ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ ಚೀಫ್ ಎಕ್ಸಿಕ್ಯೂಟಿವ್ ರಿಚರ್ಡ್ ಗೌಲ್ಡ್, ಕ್ರಿಕೆಟ್ ಆಸ್ಟ್ರೇಲಿಯಾ ಚೀಫ್ ಎಕ್ಸಿಕ್ಯೂಟಿವ್ ಟಾಡ್ ಗ್ರೀನ್‌ಬರ್ಗ್ ಅವರು ಸಮಿತಿ ಸದಸ್ಯರಲ್ಲಿ ಒಳಗೊಂಡಿದ್ದಾರೆ ಎಂದು 'ಗಾರ್ಡಿಯನ್' ವರದಿ ತಿಳಿಸಿದೆ. 2027 ರಿಂದ 2029ರ ಅವಧಿಯ ವಿಶ್ವ ಚಾಂಪಿ ಯನ್‌ಷಿಪ್‌ಗೆ ಪ್ರಬಲ ತಂಡಗಳನ್ನು ಒಂದು ಕಡೆ, ಕೆಳಕ್ರಮಾಂಕದ ತಂಡ ಗಳನ್ನು ಇನ್ನೊಂದು ಕಡೆ ವಿಭಜಿಸಲು ಐಸಿಸಿ ಮುಂದಾಗಿದೆ. ಸಿಎ ಮತ್ತು ಇಸಿಬಿ ಮುಖ್ಯಸ್ಥರನ್ನು ಸದಸ್ಯರನ್ನಾಗಿ ನೇಮಕ ಮಾಡಿರುವ ಕ್ರಮ, ಈ ಎರಡು ತಂಡಗಳು ದ್ವಿಸ್ತರದ ಪ್ರಬಲ ಪ್ರತಿಪಾದಕ ಎನ್ನುವುದನ್ನು ಸೂಚಿಸುವಂತಿದೆ.

ಸಿಎಲ್ ಟಿ20: 10 ವರ್ಷಗಳ ದೀರ್ಘ ಅವಧಿಯ ನಂತರ ಕ್ಲಬ್‌ಗಳನ್ನು ಒಳಗೊಳ್ಳುವ ಚಾಂಪಿಯನ್ಸ್ ಲೀಗ್ ಟಿ20 (ಸಿಎಲ್‌ಟಿ20) ಟೂರ್ನಿಗೆ ಮರುಜೀವ ನೀಡಲು ಐಸಿಸಿ ಪರಿಶೀಲಿಸುತ್ತಿದೆ. ಭಾರತ, ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ಇದಕ್ಕೆ ಪುನಶ್ಚೇತನ ನೀಡಲು ಆಸಕ್ತಿ ವಹಿಸಿವೆ ಎನ್ನಲಾಗಿದೆ.

ನೆಟ್ಸ್‌ನಲ್ಲಿ ಗಮನ ಸೆಳೆದ ಕಂಬೋಜ್

ಮ್ಯಾಂಚೆಸ್ಟರ್‌ನಲ್ಲಿ ನಾಳೆಯಿಂದ ನಾಲ್ಕನೇ ಟೆಸ್ಟ್ ● ಯುವ ವೇಗಿ ಪದಾರ್ಪಣೆ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಮ್ಯಾಂಚೆಸ್ಟರ್: ಭಾರತ ತಂಡಕ್ಕೆ ಹೊಸದಾಗಿ ಸೇರ್ಪಡೆಗೊಂಡಿರುವ ಮಧ್ಯಮ ವೇಗದ ಬೌಲರ್ ಅನ್ಷುಲ್ ಕಂಬೋಜ್ ಅವರು ಸೋಮವಾರ ಓಲ್ಡ್ ಟ್ರಾಫರ್ಡ್‌ನಲ್ಲಿ ನಡೆದ ಭಾರತ ತಂಡದ ಅಭ್ಯಾಸದ ವೇಳೆ ಗಮನ ಸೆಳೆದರು. ಇದರಿಂದ ಇಂಗ್ಲೆಂಡ್ ವಿರುದ್ಧ ಬುಧವಾರ ಆರಂಭವಾಗುವ ನಾಲ್ಕನೇ ಟೆಸ್ಟ್‌ಗೆ ಅವರು ಪದಾರ್ಪಣೆ ಮಾಡುವ ಸಾಧ್ಯತೆ ಬಲವಾಗಿದೆ.

ಭಾರತ ತಂಡದ ಪ್ರವಾಸಕ್ಕೆ ಮೊದಲು, ಇಂಗ್ಲೆಂಡ್ ಪ್ರವಾಸ ಮಾಡಿದ್ದ ಭಾರತ 'ಎ' ತಂಡದಲ್ಲಿ ಹರಿಯಾಣದ ಬೌಲರ್ ಪ್ರಭಾವಶಾಲಿ ನಿರ್ವಹಣೆ ತೋರಿದ್ದರು. ಭಾನುವಾರ ಅವರನ್ನು ಸೀನಿಯರ್ ತಂಡಕ್ಕೆ ಸೇರ್ಪಡೆ ಮಾಡಲಾಯಿತು.

24 ವರ್ಷ ವಯಸ್ಸಿನ ಕಂಬೋಜ್ ಬೌಲಿಂಗ್ ಮಾಡುವುದನ್ನು ತಂಡದ ಹೆಡ್ ಕೋಚ್ ಗೌತಮ್ ಗಂಭೀರ್, ಬೌಲಿಂಗ್ ಕೋಚ್ ಮಾರ್ನೆ ಮಾರ್ಕೆಲ್ ಮತ್ತು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಲಕ್ಷ್ಯವಿಟ್ಟು ಗಮನಿಸಿದರು. ಭಾರತದ ಅಗ್ರ ಮತ್ತು ಮಧ್ಯಮ ಕ್ರಮಾಂಕದ ಬೌಲರ್‌ಗಳನ್ನು ತಮ್ಮ ವೇಗ ಮತ್ತು ಸ್ವಿಂಗ್‌ನಿಂದ ಪದೇ ಪದೇ ಪರೀಕ್ಷೆಗೆ ಒಳಪಡಿಸುವ ಮೂಲಕ ಕಂಬೋಜ್ ತಮ್ಮ ಪ್ರತಿಭೆಯ ಸುಳುಹುಗಳನ್ನು ನೀಡಿದರು. ಅವರ ಕೆಲವು ಎಸೆತಗಳು ಬ್ಯಾಟನ್ನು ವಂಚಿಸಿದ್ದು, ಮಾರ್ಕೆಲ್ ಅವರ ಕುತೂಹಲ ಕೆರಳಿಸಿತು.

ತೊಡೆಯ ನೋವಿನಿಂದ ಆಕಾಶ್ ದೀಪ್ ಮತ್ತು ಗಾಯಾಳು ಅರ್ಷದೀಪ್ ನೆಟ್ಸ್‌ನಲ್ಲಿ ಇರಲಿಲ್ಲ. ಉಳಿದ ಬೌಲರ್‌ಗಳು ಸರದಿಯಂತೆ ಬೌಲಿಂಗ್ ಮಾಡಿದರು. ಲಾಹ್ಲಿಯಲ್ಲಿ (ಹರಿಯಾಣ) ಕಳೆದ ವರ್ಷ ಕೇರಳ ವಿರುದ್ಧ ರಣಜಿ ಟ್ರೋಫಿ ಪಂದ್ಯದ ಇನಿಂಗ್ಸ್ ಒಂದರಲ್ಲಿ ಎಲ್ಲ ವಿಕೆಟ್‌ಗಳನ್ನು (49ಕ್ಕೆ10) ಕಬಳಿಸಿ ಸುದ್ದಿ ಮಾಡಿದ್ದ ಕಂಬೋಜ್ ಅವರಿಗೇ ತಂಡ ಹೆಚ್ಚು ಒತ್ತು ಕೊಟ್ಟಂತೆ ಕಾಣಿಸಿತು. ಬೌಲಿಂಗ್ ನಂತರ ಪ್ಯಾಡ್ ಕಟ್ಟಿ ಕೆಲಕಾಲ ಬ್ಯಾಟಿಂಗ್ ನಡೆಸಿದರು. ಕರ್ನಾಟಕದ ವೇಗಿ ಪ್ರಸಿದ್ಧ ಕೃಷ್ಣ ಅವರಿಗೆ ಈ ಅವಕಾಶ ಸಿಗಲಿಲ್ಲ. ಮೊಹಮ್ಮದ್ ಸಿರಾಜ್ ಬ್ಯಾಟಿಂಗ್‌ನಿಂದ ವಿನಾಯಿತಿ ಕೇಳಿದ್ದರು.

ತಾಲೀಮು ನಡೆಸಲು ಇನ್ನೊಂದು ದಿನ ಉಳಿದಿದ್ದರೂ, ಕಂಬೋಜ್ ಅವರು ಜಸ್‌ಪ್ರೀತ್ ಬೂಮ್ರಾ ಮತ್ತು ಸಿರಾಜ್ ಜೊತೆ ನಾಲ್ಕನೇ ಟೆಸ್ಟ್‌ನಲ್ಲಿ ದಾಳಿಗೆ ಇಳಿಯಬಹುದು ಎಂಬುದು ಮೇಲ್ನೋಟಕ್ಕೆ ಕಾಣುತ್ತಿದೆ. ಆಕಾಶ್ ದೀಪ್ ಫಿಟ್ನೆಸ್ ಟೆಸ್ಟ್‌ನಲ್ಲಿ ತೇರ್ಗಡೆಯಾಗಿಲ್ಲ ಎಂಬ ಮಾತು ಕೇಳಿಬರುತ್ತಿದೆ. ಇದರಿಂದ ಪ್ರಸಿದ್ಧ ಕೃಷ್ಣ ಅವರಿಗೆ ಅನ್ಯಾಯವಾದ ಭಾವನೆ ಮೂಡಲೂಬಹುದು.

ಎರಡನೇ ಟೆಸ್ಟ್‌ನಲ್ಲಿ ನೀಡಿದ ಉತ್ತಮ ಪ್ರದರ್ಶನದ ಪರಿಣಾಮ ಆಕಾಶ್ ದೀಪ್ ತಂಡದಲ್ಲಿ ಸ್ಥಾನ ಉಳಿಸಿಕೊಂಡಿದ್ದರು. ಬೂಮ್ರಾ ತಂಡಕ್ಕೆ ಮರಳಿದಾಗ ಪ್ರಸಿದ್ಧ ಅವರನ್ನು ಕೈಬಿಡಲಾಯಿತು. ಹೆಡಿಂಗ್ಲೆ ಮತ್ತು ಎಜ್‌ಬಾಸ್ಟನ್‌ನಲ್ಲಿ ಪ್ರಸಿದ್ಧ ಅತಿಯಾಗಿ ಶಾರ್ಟ್ ಎಸೆತಗಳನ್ನು ಪ್ರಯೋಗಿಸಿದ್ದರಿಂದ ಟೀಕೆಗೆ ಒಳಗಾಗಿದ್ದರು.

ಬೂಮ್ರಾ ಕಣಕ್ಕೆ: ಖಚಿತಪಡಿಸಿದ ಸಿರಾಜ್

ಮ್ಯಾಂಚೆಸ್ಟರ್ (ಪಿಟಿಐ): ಓಲ್ಡ್ ಟ್ರಾಫರ್ಡ್‌ನಲ್ಲಿ ಇದೇ 23ರಿಂದ ನಡೆಯಲಿರುವ ನಾಲ್ಕನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಜಸ್‌ಪ್ರೀತ್ ಬೂಮ್ರಾ ಆಡಲಿದ್ದಾರೆ ಎಂದು ಭಾರತ ತಂಡದ ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಸೋಮವಾರ ಖಚಿತಪಡಿಸಿದರು.

ಬೂಮ್ರಾ ಅವರು ಐದು ಟೆಸ್ಟ್‌ಗಳ ಸರಣಿಯಲ್ಲಿ ಮೂರರಲ್ಲಿ ಮಾತ್ರ ಆಡುತ್ತಾರೆ ಎಂದು ಸರಣಿಯ ಆರಂಭದಲ್ಲಿ ಹೆಡ್ ಕೋಚ್ ಗೌತಮ್ ಗಂಭೀರ್ ತಿಳಿಸಿದ್ದರು. ಕಾರ್ಯಭಾರದ ಒತ್ತಡ ಕಡಿಮೆ ಮಾಡುವ ಭಾಗವಾಗಿ ಅವರು ಎರಡನೇ ಟೆಸ್ಟ್‌ನಲ್ಲಿ ಆಡಿರಲಿಲ್ಲ.

ಸೋಮವಾರ ಇಲ್ಲಿ ತಂಡದ ತಾಲೀಮು ನಡೆದ ನಂತರ ಸಿರಾಜ್ ಮಾಧ್ಯಮದವರ ಜತೆ ಮಾತನಾಡಿದರು. 'ನನಗೆ ಗೊತ್ತಿರುವಂತೆ ಜಸ್ಸಿ ಭಾಯ್ ಇಲ್ಲಿ ಆಡಲಿದ್ದಾರೆ' ಎಂದು ಅವರು ಹೇಳಿದರು. ಗಾಯದ ಸಮಸ್ಯೆಗಳಿಂದ ನಮ್ಮ ಸಂಯೋಜನೆ ಬದಲಾಗುತ್ತಿದೆ ಎಂದೂ ತಿಳಿಸಿದರು.


ದಣಿದಿಲ್ಲ: ಈ ಸರಣಿಯ ಎಲ್ಲಾ ಟೆಸ್ಟ್‌ಗಳಲ್ಲಿ ಬೌಲಿಂಗ್ ಮಾಡಿರುವ 31 ವರ್ಷ ವಯಸ್ಸಿನ ಸಿರಾಜ್ ಅವರು, ಕಾರ್ಯಭಾರದ ಬಗ್ಗೆ ತಾವು ತಲೆಕೆಡಿಸಿಕೊಂಡಿಲ್ಲ ಎಂದರು. ಅವರು ಈ ಸರಣಿಯಲ್ಲಿ 109 ಓವರುಗಳನ್ನು ಮಾಡಿದ್ದಾರೆ.





ಯುವ ವೇಗಿ ಅನ್ಷುಲ್ ಕಂಬೋಜ್ (ಎಡಚಿತ್ರ) ಹಾಗೂ ಜಸ್‌ಪ್ರೀತ್ ಬೂಮ್ರಾ ಅವರು ಸೋಮವಾರ ಓಲ್ಡ್ ಟ್ರಾಫರ್ಡ್ ಕ್ರೀಡಾಂಗಣದಲ್ಲಿ ಬೌಲಿಂಗ್ ಅಭ್ಯಾಸ ನಡೆಸಿದರು. ಕೆ.ಎಲ್‌. ರಾಹುಲ್ ಈ ವೇಳೆ ಗಮನಿಸಿದರು ಪಿಟಿಐ ಚಿತ್ರಗಳು

ಸರಣಿಯಿಂದ ನಿತೀಶ್ ರೆಡ್ಡಿ ನಿರ್ಗಮನ



ನಿತೀಶ್ ರೆಡ್ಡಿ

ಮ್ಯಾಂಚೆಸ್ಟರ್ (ಪಿಟಿಐ): ಎಡ ಮೊಣಕಾಲಿನ ನೋವಿನಿಂದಾಗಿ ಭಾರತದ ತಂಡದ ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಅವರು ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಿಂದ ಹೊರ ಬಿದ್ದಿದ್ದಾರೆ. ಎಡಗೈ ವೇಗಿ ಅರ್ಷದೀಪ್ ಸಿಂಗ್ ಸಹ ಗಾಯಾಳಾಗಿದ್ದು ನಾಲ್ಕನೇ ಟೆಸ್ಟ್ ಆಯ್ಕೆಗೆ ಲಭ್ಯರಿಲ್ಲ ಎಂದು ಬಿಸಿಸಿಐ ಸೋಮವಾರ ತಿಳಿಸಿದೆ.

ನಿತೀಶ್ ಅವರು ಎರಡು ಮತ್ತು ಮೂರನೇ ಟೆಸ್ಟ್‌ನಲ್ಲಿ ಆಡಿದ್ದರು. ಭಾನುವಾರ ಜಿಮ್‌ನಲ್ಲಿ ಅಭ್ಯಾಸದ ವೇಳೆ ಅವರಿಗೆ ಈ ನೋವು ಕಾಣಿಸಿದೆ. ಸ್ಕ್ಯಾನ್ ನಂತರ ಅಸ್ಥಿರಜ್ಜುವಿಗೆ ಹಾನಿಯಾಗಿರುವುದು ಪತ್ತೆಯಾಗಿದೆ. 'ಅವರು ತವರಿಗೆ ಮರಳಲಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.

ಹೋದ ವಾರ ಬೆಕೆನ್‌ಹ್ಯಾಮ್‌ನಲ್ಲಿ ನೆಟ್ಸ್‌ನಲ್ಲಿ ಬೌಲಿಂಗ್ ಮಾಡುವಾಗ ಅರ್ಷದೀಪ್ ಅವರ ಎಡಗೈ ಹೆಬ್ಬೆರಳಿಗೆ ನೋವು ಕಾಣಿಸಿಕೊಂಡಿತ್ತು. ಅವರು ಪ್ರವಾಸದಲ್ಲಿ ಇದುವರೆಗೆ ಒಂದೂ ಟೆಸ್ಟ್ ಆಡಿಲ್ಲ. ಬಿಸಿಸಿಐ ವೈದ್ಯಕೀಯ ತಂಡ ಅವರ ಗಾಯದ ಮೇಲೆ ನಿಗಾ ಇಟ್ಟಿದೆ.

ಆ್ಯಂಡರ್ಸನ್–ತೆಂಡೂಲ್ಕರ್ ಟ್ರೋಫಿ ಐದು ಟೆಸ್ಟ್‌ಗಳ ಸರಣಿಯಲ್ಲಿ ಇಂಗ್ಲೆಂಡ್ ತಂಡವು 2–1 ಮುನ್ನಡೆ ಪಡೆದಿದೆ.

ನಾಲ್ಕನೇ ಟೆಸ್ಟ್‌ಗೆ ಭಾರತ ತಂಡ: ಶುಭಮನ್ ಗಿಲ್ (ನಾಯಕ), ರಿಷಭ್ ಪಂತ್ (ಉಪನಾಯಕ– ವಿಕೆಟ್ ಕೀಪರ್), ಯಶಸ್ವಿ ಜೈಸ್ವಾಲ್, ಕೆ.ಎಲ್.ರಾಹುಲ್, ಸಾಯಿ ಸುದರ್ಶನ್, ಅಭಿಮನ್ಯು ಈಶ್ವರನ್, ಕರುಣ್ ನಾಯರ್, ರವೀಂದ್ರ ಜಡೇಜ, ಧ್ರುವ್ ಜುರೇಲ್ (ವಿಕೆಟ್ ಕೀಪರ್), ವಾಷಿಂಗ್ಟನ್ ಸುಂದರ್, ಶಾರ್ದೂಲ್ ಠಾಕೂರ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್, ಪ್ರಸಿದ್ಧ ಕೃಷ್ಣ, ಆಕಾಶ್ ದೀಪ್, ಕುಲದೀಪ್ ಯಾದವ್, ಅನ್ಷುಲ್ ಕಂಬೋಜ್.

ಓಲ್ಡ್ ಟ್ರಾಫರ್ಡ್ ಸ್ಟ್ಯಾಂಡ್‌ಗಳಿಗೆ ಫರೂಖ್, ಲಾಯ್ಡ್ ಹೆಸರು

ಮ್ಯಾಂಚೆಸ್ಟರ್ (ಪಿಟಿಐ): ಇಲ್ಲಿನ ಹೆಗ್ಗುರುತಾದ ಓಲ್ಡ್ ಟ್ರಾಫರ್ಡ್ ಕ್ರೀಡಾಂಗಣದ ಸ್ಟ್ಯಾಂಡ್‌ಗಳಿಗೆ ಭಾರತ ತಂಡದ ಮಾಜಿ ವಿಕೆಟ್ ಕೀಪರ್ ಫರೂಖ್ ಎಂಜಿನಿಯರ್ ಮತ್ತು ವೆಸ್ಟ್ ಇಂಡೀಸ್‌ನ ದಿಗ್ಗಜ ಬ್ಯಾಟರ್ ಕ್ಲೈವ್ ಲಾಯ್ಡ್ ಅವರ ಹೆಸರಿಟ್ಟು ಗೌರವಿಸಲು ಲ್ಯಾಂಕೇಶೈರ್ ಕೌಂಟಿ ತೀರ್ಮಾನಿಸಿದೆ.

ಬುಧವಾರ ಆರಂಭವಾಗುವ ಭಾರತ ಮತ್ತು ಇಂಗ್ಲೆಂಡ್ ತಂಡಗಳ ನಡುವೆ ನಾಲ್ಕನೇ ಟೆಸ್ಟ್ ಸಂದರ್ಭದಲ್ಲಿ, ಈ ದಿಗ್ಗಜರ ಹೆಸರನ್ನಿಡಲಾಗುವುದು. ಇವರಿಬ್ಬರು ಕ್ಲಬ್‌ಗೆ ನೀಡಿದ ಕಾಣಿಕೆ ಗುರುತಿಸಿ ಈ ಗೌರವ ಸಲ್ಲಿಸಲಾಗುತ್ತಿದೆ. ಸುಮಾರು ಒಂದು ದಶಕ ಕಾಲ ಎಂಜಿನಿಯರ್ ಅವರು ಲ್ಯಾಂಕೇಶೈರ್‌ಗೆ ಆಡಿದ್ದರು. ಲಾಯ್ಡ್ ಅವರು ಎರಡು ದಶಕಗಳ ಕಾಲ ಈ ಕ್ಲಬ್ ಪ್ರತಿನಿಧಿಸಿದ್ದರು.

87 ವರ್ಷ ವಯಸ್ಸಿನ ಎಂಜಿನಿಯರ್, 1968 ರಿಂದ 1976ರ ಅವಧಿಯಲ್ಲಿ ಕ್ಲಬ್ ಪರ 175 ಪಂದ್ಯಗಳನ್ನು ಆಡಿದ್ದು, 5942 ರನ್, 429 ಕ್ಯಾಚ್ ಹಿಡಿದಿದ್ದಾರೆ. 35 ಸ್ಟಂಪಿಂಗ್‌ಗಳನ್ನು ಮಾಡಿದ್ದಾರೆ. ಅವರು ತಂಡಕ್ಕೆ ಸೇರ್ಪಡೆಯಾಗುವ 15 ವರ್ಷಗಳ ಮೊದಲ ಈ ಕ್ಲಬ್ ಯಾವುದೇ ಪ್ರಮುಖ ಪ್ರಶಸ್ತಿ ಗೆದ್ದಿರಲಿಲ್ಲ. ಆದರೆ ಅವರ ಆಟದ ಬಲದಿಂದ1970 ರಿಂದ 1975ರ ಅಧಿಯಲ್ಲಿ ತಂಡ ನಾಲ್ಕು ಬಾರಿ ಜಿಲೈಟ್ ಕಪ್ ಗೆದ್ದುಕೊಂಡಿತು.

ಮುಂಬೈನ ಬ್ರೆಬೋರ್ನ್ ಸ್ಟೇಡಿಯಂನಲ್ಲಿ ಎಂಜಿನಿಯರ್ ಅವರು ದೀರ್ಘ ಕಾಲ ಆಡಿದ್ದರೂ ಅಲ್ಲಿ ಅವರ ಹೆಸರಿನ ಸ್ಟ್ಯಾಂಡ್ ಇಲ್ಲ ಎಂಬುದು ಕುತೂಹಲದ ಸಂಗತಿ. ನಿವೃತ್ತಿಯ ನಂತರ ಎಂಜಿನಿಯರ್ ಅವರು ಮ್ಯಾಂಚೆಸ್ಟರ್‌ನಲ್ಲೇ ನೆಲೆಸಿದ್ದಾರೆ.

ಖಾಸಗಿ ಭೇಟಿಗಾಗಿ ಇಲ್ಲಿಗೆ ಬಂದಿರುವ ಭಾರತ ತಂಡದ ಮಾಜಿ ನಾಯಕ ದಿಲೀಪ್ ವೆಂಗಸರ್ಕರ್ ಅವರೂ ನಾಮಕರಣ ಸಂದರ್ಭದಲ್ಲಿ ಹಾಜರಿರುವ ಸಾಧ್ಯತೆಯಿದೆ.

ಮಹಿಳಾ ಕ್ರಿಕೆಟ್: ಏಕದಿನ ಸರಣಿ ಯಾರ ಮಡಿಲಿಗೆ?

ಚೆಸ್ಟರ್ ಲಿ ಸ್ಟ್ರೀಟ್ (ಬ್ರಿಟನ್) (ಪಿಟಿಐ): ಇಂಗ್ಲೆಂಡ್ ವಿರುದ್ಧ ಏಕದಿನ ಕ್ರಿಕೆಟ್ ಸರಣಿಯಲ್ಲಿ ಸಮಬಲ ಸಾಧಿಸಿರುವ ಭಾರತದ ವನಿತೆಯರು, ಮಂಗಳವಾರ ನಡೆಯುವ ನಿರ್ಣಾಯಕ ಪಂದ್ಯದಲ್ಲಿ ಉತ್ತಮ ಪ್ರದರ್ಶನ ತೋರುವ ಛಲದಲ್ಲಿದ್ದಾರೆ.

ಸರಣಿಯ ಮೊದಲ ಪಂದ್ಯವನ್ನು (ಸೌತಾಂಪ್ಟನ್) ಹರ್ಮನ್‌ಪ್ರೀತ್ ಕೌರ್ ಬಳಗವು ನಾಲ್ಕು ವಿಕೆಟ್‌ಗಳಿಂದ ಗೆದ್ದು ಶುಭಾರಂಭ ಮಾಡಿತ್ತು. ಆದರೆ, ಲಾರ್ಡ್ಸ್‌ನಲ್ಲಿ ನಡೆದ ಎರಡನೇ ಪಂದ್ಯವನ್ನು ಆತಿಥೇಯ ತಂಡವು ಡಿಎಲ್‌ಎಸ್ ಆಧಾರದಲ್ಲಿ ಎಂಟು ವಿಕೆಟ್‌ಗಳಿಂದ ಜಯಿಸಿತ್ತು. ಇದರಿಂದ ಮೂರು ಪಂದ್ಯಗಳ ಸರಣಿಯು 1–1 ಸಮಬಲಗೊಂಡಿದೆ.

ಉತ್ತಮ ಲಯದಲ್ಲಿದ್ದ ಭಾರತ ತಂಡವು ಎರಡನೇ ಪಂದ್ಯವನ್ನು ಗೆದ್ದು, ಸರಣಿ ವಶಮಾಡಿಕೊಳ್ಳುವ ನಿರೀಕ್ಷೆಯಿತ್ತು. ಪಂದ್ಯಕ್ಕೆ ಮಳೆ ಅಡಚಣೆ ಉಂಟು ಮಾಡಿದ್ದರಿಂದ ಓವರ್‌ಗಳನ್ನು ಕಡಿತಗೊಳಿಸಲಾಗಿತ್ತು. ವಿವೇಚನಾರಹಿತ ಹೊಡೆತಗಳ ಆಯ್ಕೆಯಿಂದಾಗಿ ಬ್ಯಾಟರ್‌ಗಳು ಎಡವಿದರು. ಹೀಗಾಗಿ, ನಿಗದಿತ 29 ಓವರ್‌ಗಳಲ್ಲಿ ಎಂಟು ವಿಕೆಟ್‌ಗೆ 143 ರನ್ ಗಳಿಸಲಷ್ಟೇ ಶಕ್ತವಾಯಿತು. ಇಂಗ್ಲೆಂಡ್‌ನ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ತಂಡವನ್ನು ಗೆಲುವಿನ ದಡ ಸೇರಿಸಿದ್ದರು.

ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ಬಲಿಷ್ಠವಾಗಿರುವ ಭಾರತ ತಂಡವು ಇದೀಗ ನಿರ್ಣಾಯಕ ಪಂದ್ಯದಲ್ಲಿ ಹಿಂದಿನ ತಪ್ಪುಗಳನ್ನು ತಿದ್ದಿಕೊಂಡು, ಸರಣಿ ವಶಪಡಿಸಿಕೊಳ್ಳುವತ್ತ ಚಿತ್ತ ಹರಿಸಿದೆ.

ಪಂದ್ಯ ಆರಂಭ: ಸಂಜೆ 5.30